ಸಂಪುಟ ೧೫
ಸಂಚಿಕೆ ೧-೨

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ – ರಾಜ್ಯೋತ್ಸವ
ಸಂಯುಕ್ತ ಸಂಚಿಕೆ

ತ್ರೈಮಾಸಿಕ ಪತ್ರಿಕೆ
ಅಗಸ್ಟ ಮತ್ತು ನವಂಬರ, ೧೯೮೨

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ" ಯು ಸೃಜನ, ವಿಮರ್ಶನ, ಸಂಶೋಧನ ಸಾಹಿ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನದ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, **"ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋತ್ಸವ ಸಂಚಿಕೆ

೩. ಸಂಕ್ರಮಣ ಸಂಚಿಕೆ   ೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ ೪-೦೦ ಮಾತ್ರ)

ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೫ ಸಂಚಿಕೆ : ೧ ಮತ್ತು ೨

ಪ್ರಧಾನ ಸಂಪಾದಕರು

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಹಾಯಕ ಸಂಪಾದಕರು

ಡಾ. ಎಂ. ಬಿ. ಕೊಟ್ರಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೫ ಸಂಚಿಕೆ : ೧-೨

ಅಗಸ್ಟ ಮತ್ತು ನವಂಬರ, ೧೯೮೨

ಸ್ವಾತಂತ್ರ್ಯೋತ್ಸವ ಹಾಗೂ ರಾಜ್ಯೋತ್ಸವ ಸಂಯುಕ್ತ ಸಂಚಿಕೆ

ಪ್ರಕಾಶಕರು :

ಎಸ್. ಬಿ. ನಾಯಕ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸೋಮಶೇಖರ ಅಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್, ಧಾರವಾಡ

ಪರಿವಿಡಿ

ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯದ ಧೃತಿ-ಧೋರಣೆ

ಎಸ್. ಎಂ. ವೃಷಭೇಂದ್ರಸ್ವಾಮಿ

ಆಧುನಿಕ ಕನ್ನಡ ಕಾವ್ಯಪ್ರಪಂಚದ ಕೆಲವೇ ಪ್ರತಿಭಾನ್ವಿತ ಕವಿಗಳಲ್ಲೊಬ್ಬರು ಶ್ರೀ ಗೋಪಾಲಕೃಷ್ಣ ಅಡಿಗ. ಕನ್ನಡ ಭಾಷೆ-ಸಾಹಿತ್ಯಗಳ ಪರಂಪರೆಯ ಪ್ರಭಾವವನ್ನು ಅರಗಿಸಿಕೊಂಡು, ಪಾಶ್ಚಾತ್ಯ ಕಾವ್ಯಪ್ರಭಾವಗಳಿಗೆ ಎದೆದೆರೆದು ಸಮಕಾಲೀನ ಬದುಕಿನ ಚಾಲೇಂಜುಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಿ, ವಿನೂತನ ಕಾವ್ಯತಂತ್ರ, ಜೀವಂತವಾದ ಭಾಷಾಶೈಲಿ, ವಿಶಿಷ್ಟವಾದ ಜೀವನದೃಷ್ಟಿಗಳ ಕ್ರಾಂತಿಕಾವ್ಯವನ್ನು ನಿರ್ಮಿಸಿದ ಕವಿ ಶ್ರೀ ಅಡಿಗ. ನವೋದಯ ಕಾವ್ಯದ ಅಧ್ವರ್ಯುಗಳಾದ ಬಿ. ಎಂ. ಶ್ರೀ, ಕುವೆಂಪು, ಬೇಂದ್ರೆ, ಪುತಿನ ಅವರ ಕಾವ್ಯದ (ಅಲ್ಲಿಯೂ ಹೊಸತನದ ಎಳೆಗಳಿವೆ) ಅನುಸರಣೆ, ಅನುಕರಣೆಗಳಲ್ಲಿಯೇ ಕನ್ನಡ ಕಾವ್ಯ ಪರ್ಯವಸಾನಗೊಳ್ಳುವ 'ದುರಂತ'ವನ್ನು ನಿವಾರಿಸಿದ ಕವಿ ಶ್ರೀ ಅಡಿಗರು. ನವ್ಯವೆಂಬ ಹೊಸಕಾವ್ಯದ ನೇತಾರರೂ ಅಹುದು. ಅದರ ವೈಶಿಷ್ಟ್ಯ ಹಾಗೂ ಸಾಧ್ಯತೆಗಳ ಸಮರ್ಥ ಪ್ರತಿನಿಧಿಯೂ ಅಹುದು. ಆಳವಾದ ಚಿಂತನೆ, ಸಮಕಾಲೀನ ಬದುಕಿನ ಸಮಸ್ಯೆಗಳ ಆಳ-ಅಗಲಗಳನ್ನು ಗಂಭೀರವಾಗಿ ಗಮನಿಸುವ ಸಮಕಾಲೀನ ಪ್ರಜ್ಞೆ, ಒಡೆದ ಕನ್ನಡಿಯಾದ ಇಂದಿನ ಮಾನವತೆಯ ವಿಫಲತೆ, ಹಲವು ಮುಖವಾಡಗಳ ಬದುಕು, ಆದರ್ಶಹೀನ ನಡೆ, ತೋರಿಕೆಯ ನಡೆಗಳ ವಿರುದ್ಧ ಬಂಡೆದ್ದು ಅಂಥ ವಿಹ್ವಲದುರಂತದಿಂದ ಮಾನವನ್ನು ಉಳಿಸಲು, ಸಮಾಜವನ್ನು ಬದಲಿಸಲು ಕತ್ತಿ ಹಿರಿದ, ಕ್ರಾಂತಿಕಹಳೆಯನ್ನೂದಿ, ಹೊಸ ಜನಾಂಗವನ್ನು ಈ ಹೋರಾಟಕ್ಕೆ ಅಣಿಗೊಳಿಸಿದ ಅತ್ಯಂತ ಪ್ರಭಾವಶಾಲಿ ಕವಿ ಶ್ರೀ ಗೋಪಾಲಕೃಷ್ಣ ಅಡಿಗರು. ಅವರ ಕಾವ್ಯಧೋರಣೆಗಳ ಬಗೆಗೆ ಏನೇ ವಾದ-ವಿವಾದ, ಚರ್ಚೆ-ಪ್ರತಿಚರ್ಚೆ ನಡೆದರೂ, ಅಂತ್ಯದಲ್ಲಿ ಉಳಿವುದು ಅವರದೇ ಆದ 'ಕಾವ್ಯ', ವೈಯಕ್ತಿಕ ಪ್ರತಿಭೆ ನಿರ್ಮಿಸಿದ ನಿತ್ಯನೂತನ ಕಾವ್ಯ-ವಿನೂತನ ಶಿಲ್ಪ, ಸ್ವತಂತ್ರ ಹಾಗೂ ಸಮರ್ಥ ಅಭಿವ್ಯಕ್ತಿ, ರೂಪಕ ಪರಂಪರೆ, ಪ್ರತಿಮೆಗಳ ಸಾಲು-ಸಾಲು ಖಂಡನೆ-ಮಂಡನೆಗಳ ಚಿಂತನಶೀಲತೆ, ಕನ್ನಡ ಭಾಷೆಯ ಸಾಧ್ಯತೆಗಳನ್ನೆಲ್ಲ ರೂಪಿಸಿಕೊಂಡು, ಕಾವ್ಯನಿರ್ಮಿಸಿದ ಭಾಷಾಸಾಮರ್ಥ್ಯ ಇಂದಿಗೂ, ಎಂದಿಗೂ 'ನವ್ಯ'ವೇ ಆಗಿನಿಲ್ಲುವಂಥ ಸಮರ್ಥಕಾವ್ಯ ಶ್ರೀ ಅಡಿಗರದು. ಭಾವಾವೇಶಗಳನ್ನು ಬದಿಗೊತ್ತಿ ಗಂಭೀರವಾದ ಪರೀಕ್ಷೆಗಳೊಳಗಾಗಿಸುವ ವಿಮರ್ಶೆ ಇಂದು ಅವಶ್ಯಕವಾಗಿದೆ. ನವ್ಯಕಾವ್ಯದ ಒಡಲಿನಿಂದಲೇ ಮೂಡಿಬರುತ್ತಿರುವ ನೂತನ ಕಾವ್ಯ

ಮಾರ್ಗದ ಗತಿ-ಸ್ಥಿತಿಗಳನ್ನು ಚಿಂತಿಸಬೇಕಾದ ಇಂದಿನ ಕಾವ್ಯಪರಿಸರದಲ್ಲಂತೂ, ಅಡಿಗರ ಕಾವ್ಯ ಒಟ್ಟಿನಲ್ಲಿ ನವ್ಯಸಾಹಿತ್ಯದ ಮೌಲ್ಯಮಾಪನವಾಗಬೇಕು. ಅದರ ಸೋಲು-ಗೆಲವುಗಳ ನೀರು-ಗೊಬ್ಬರಗಳ ಸಾರದಿಂದ ಇತ್ತೀಚಿನ ಹೊಸಕಾವ್ಯ "ಜನಕಾವ್ಯ" ತನ್ನ ದಿಕ್ಕನ್ನು ಗುರುತಿಸಿಕೊಳ್ಳಬೇಕಾಗಿದೆ. ಅಡಿಗರಂಥ ಇನ್ನೊಬ್ಬ ನೇತಾರಚೇತನದ ಕವಿ ಮೂಡಿ ಬರಬೇಕಾದ ಅವಶ್ಯಕತೆ ಇರುವ ಇಂದಿನ ಕನ್ನಡ ಕಾವ್ಯ ಪರಿಸರದಲ್ಲಂತೂ ಅಡಿಗರ ಕಾವ್ಯ ವಿಶ್ಲೇಷಣೆ ಅತ್ಯಗತ್ಯವಾಗಿದೆ. 'ಪರಾಕು'ಗಳ ಕಾಲ ಹಿಂದಾಗಿದೆ, ಗುಂಪುಗಾರಿಕೆಯ ವಿಮರ್ಶೆ ಹಳತಾಗಿದೆ. ಕವಿಪ್ರತಿಭೆಯ, ಕಾವ್ಯ ಸಾಮರ್ಥ್ಯದ ಪ್ರಭಾವಗಳ ಸೋಲು-ಸಿದ್ಧಿಗಳ ನಿಕಷ ಪರೀಕ್ಷೆ ಇಂದಿನ ಅವಶ್ಯಕತೆ, ಹೊಸಕಾವ್ಯದ ಕ್ಷೇಮದೃಷ್ಟಿಯಿಂದಲಂತೂ ಇದು ಅತ್ಯಾವಶ್ಯಕ.

ಸಮರ್ಥಕಾವ್ಯ ಒಡಲನೂಲಿನಿಂದ ರಚಿತವಾದ ಜೇಡನ ಬಲೆ, ವ್ಯಕ್ತಿತ್ವಾಂಶಗಳ ಮುದ್ರೆ, ಪರಿಸರದ ಪ್ರೇರಣೆ-ಪ್ರತಿಬಂಧಗಳ ಸುಳುಹು-ಹೊಳವು, ವ್ಯಕ್ತಿಜೀವನ ದೃಷ್ಟಿ ಪ್ರಭಾವಗಳ ಸಮನ್ವಯ ಸಂಗಮ-ಈ ಕಾವ್ಯ.

ದಕ್ಷಿಣ ಕನ್ನಡ ಜಿಲ್ಲೆಯ 'ಮೊಗೇರಿ' ಎಂಬ ಹಳ್ಳಿಯ ಪುರೋಹಿತರ ಮನೆಯಲ್ಲಿ ಹುಟ್ಟಿ ಬೆಳೆದ ಅಡಿಗರ ಬಾಲ್ಯ ಕಾಡು, ಕಡಲು ನೀಲ ಆಕಾಶಗಳ ನಿತ್ಯನೂತನ ಪ್ರಭಾವಗಳಿಗೆ ಒಳಗಾದದ್ದು. ವ್ಯವಸಾಯ ವೃತ್ತಿ, ಮಣ್ಣಿನ ಕೆಲಸಗಳು, ದೈವ ಭಕ್ತಿ, ಅಜ್ಜ-ಅಜ್ಜಿಯರ ಕನ್ನಡ ಕಾವ್ಯವಾಚನ ಪ್ರಭಾವ, ಮುಖ್ಯವಾಗಿ ಯಕ್ಷಗಾನ, ತಾಳಮದ್ದಲೆಗಳ ಮಧ್ಯದಲ್ಲಿ ಬೆಳೆದು ಬಂದಿತು ಈ ಕಿರಿಯ ಚೇತನ. ಪೌರಾಣಿಕ ಪ್ರಜ್ಞೆ, ಪ್ರಕೃತಿಮೀಮಾಂಸೆ ತಾಳ-ಲಯ ವಿನ್ಯಾಸ, ರೂಪಕ ಹಾಗೂ ಕಾವ್ಯ ಪ್ರತಿಮೆಗಳ ವಿಲಾಸಗಳ ಅಡಿಗರ ಕಾವ್ಯದ ವಿಶಿಷ್ಟಾಂಶಗಳಿಗೆ ಈ ಬಾಲ್ಯದ ಪರಿಸರ ಸಂಸ್ಕಾರ ನೀಡಿತು. ಆಧುನಿಕ ಶಿಕ್ಷಣ - ವಿಶಾಲ ಸಮಾಜದ ನಿಕಟ ಸಂಪರ್ಕ, ಪ್ರಸಿದ್ಧ ಕನ್ನಡ-ಇಂಗ್ಲಿಷ್ ಕವಿಗಳ ಪ್ರಭಾವ, ಪಂಪ, ರನ್ನ, ಕುಮಾರವ್ಯಾಸ, ಕಾಳಿದಾಸ, ಎಲಿಯಟ್, ಈಟ್ಸ, ಅಡೆನ್ನರ ಕಾವ್ಯ-ಜೀವನ-ಕಲೆಗಳ ನಿಕಟ ಪರಿಚಯ ಮೂಡಿ, ಹಳ್ಳಿಯ ಹುಡುಗ ಗೋಪಾಲಕೃಷ್ಣರನ್ನು 'ನವ್ಯಕವಿ ಅಡಿಗರ'ನ್ನಾಗಿಸಿದುವು. ಸ್ವಾತಂತ್ರ್ಯದ ಹೋರಾಟ, ನಾಡು-ನುಡಿಗಳ ಸಾರ್ವತ್ರಿಕ ಎಚ್ಚರ, ಸಾಂಸ್ಕೃತಿಕ ಶೈಥಿಲ್ಯದ ಕರಾಳಚಿತ್ರ, ವಿಶ್ವದ ರಾಷ್ಟ್ರಗಳ 'ಇಸಂ'ಗಳ ತಾಕಲಾಟಗಳು ಅಡಿಗರ ವ್ಯಕ್ತಿತ್ವವನ್ನು ಅರಳಿಸಿ, ಕಾವ್ಯಮಾರ್ಗವನ್ನು ಕುದುರಿಸಿದುವು. ಶ್ರೀ ಅಡಿಗರು ವೃತ್ತಿಯಿಂದ ಇಂಗ್ಲಿಷ್ ಸಾಹಿತ್ಯದ ಪ್ರಾಧ್ಯಾಪಕರು, ಪ್ರವೃತ್ತಿಯಿಂದ ಹೊಸಗನ್ನಡ ಕವಿ. ಅಂತರ್ಮುಖಿಯಾಗಿರುವ ಮನೋಭಾವ, ಬದುಕಿಗೆ ತೆರೆದ ಹೃದಯ, ತಾತ್ವಿಕ ಚಿಂತನೆಗಳಿಗೊಳಗಾದ ಸ್ವಭಾವ, ಹೊಸಹಾದಿಯನ್ನು ಹಿಡಿದು ನಡೆವ ಆಕಾಂಕ್ಷೆ, ಪ್ರತಿರೋಧಗಳನ್ನು ಮೆಟ್ಟಿನಿಲ್ಲಬಲ್ಲ ಧೀರತನ, ತರುಣರನ್ನು ಆಕರ್ಷಿಸಬಲ್ಲ ಆತ್ಮೀಯತೆ - ಅಡಿಗರ ವ್ಯಕ್ತಿತ್ವದ ಮುಖ್ಯಾಂಶಗಳು. ನವೋದಯ ಮಾರ್ಗದಲ್ಲಿ ನಡೆದು, ತೃಪ್ತಿಯಾಗದೆ, ಸ್ವತಂತ್ರ ಕಾವ್ಯಧೋರಣೆಗಳನ್ನು ರೂಪಿಸಿ

ಕೊಂಡು, ನವ್ಯಕಾವ್ಯ ಮಾರ್ಗದ ಸಿದ್ಧಾಂತಗಳನ್ನು ಪ್ರತಿಪಾದಿಸಿ, ಸಮರ್ಥಕಾವ್ಯ ನಿರ್ಮಿಸಿದ ಅಡಿಗರ ವ್ಯಕ್ತಿತ್ವದ ಹುಡುಕಾಟ, ಕಾವ್ಯಸೃಷ್ಟಿಯ ಸಾಧ್ಯತೆಗಳು ಪರಿಸರದ ಬದುಕಿಗೆ ಸಮರ್ಥ ಪ್ರಸ್ಪಂದನ, ಕಲಾಶಿಲ್ಪದ ಪರಿಣತಿಯ ನಡೆದು ಬಂದ ದಾರಿಯ ಹೆಜ್ಜೆ ಗುರುತುಗಳು ಶ್ರೀ ಅಡಿಗರ ಕಾವ್ಯಸಮಗ್ರದಲ್ಲಿ ಸ್ಪಷ್ಟವಾಗಿ ಮೂಡಿವೆ. ಪ್ರಯೋಗಶೀಲತೆಯ ಕುರುಹುಗಳು ಸಂಘರ್ಷಕ್ಕೊಳಗಾಗಿ ತನ್ನ ದಾರಿಯನ್ನು ಹುಡುಕಾಡಿಕೊಂಡ ಪ್ರಯತ್ನಗಳು, 'ಭೂಮಿಗೀತ' 'ಗೊಂದಲಪುರ' ವರ್ಧಮಾನ, ಕೂಪ ಮಂಡೂಕ, ಅಜ್ಜನೆಟ್ಟಾಲ ಮುಂತಾದ ನವ್ಯ ಕಾವ್ಯಶಿಖರ ಗಳನ್ನು ಸೃಷ್ಟಿಸಿದ ಕಲಾವಂತಿಕೆಯ 'ಪರಿಣತಸಿದ್ಧಿಗಳು' ಅಡಿಗರ ಸಮಗ್ರ ಕಾವ್ಯದ ಪರಿಶೀಲನೆ-ವಿಶ್ಲೇಷಣೆಗಳಲ್ಲಿ ಸುವಿದಿತ. ಅಡಿಗರ ಕಾವ್ಯದ ಬಗೆಗೆ ಬಂದಿರುವ ವಿಮರ್ಶೆಯ ಪ್ರಯತ್ನಗಳು ಸ್ವಾಗತಾರ್ಹ. ಅಡಿಗರ ಕಾವ್ಯದ ಸಮಗ್ರ ಹಾಗೂ ವಾಸ್ತವಿಕ ವಿಮರ್ಶೆ ಇನ್ನೂ ಬರಬೇಕಾಗಿದೆ. ವಾದ-ವಿವಾದಗಳಿಂದ ಅಡಿಗರನ್ನು ಮುಕ್ತಗೊಳಿಸಿ, ಅವರ ಕಾವ್ಯಪ್ರತಿಭೆಯ ವೈಭವ-ವೈವಿಧ್ಯ ಹಾಗೂ ಪ್ರಭಾವ ಗಳನ್ನು ಗುರುತಿಸಬೇಕಾಗಿದೆ.

'ಭಾವತರಂಗ' ಅಡಿಗರ ಪ್ರಥಮ ಕವನ ಸಂಕಲನ. ಮೊದಲ ಹಂತದಲ್ಲಿಯೇ ಪ್ರತಿಭೆಯ ಕಿಡಿಗಳನ್ನು ಸಿಡಿಸಿ, ಭರವಸೆಯನ್ನು ಮೂಡಿಸಬಲ್ಲ, ಕವಿಗಳು ಬಹಳ ವಿಲ್ಲ. ಅನ್ಯರೊರದುದನೆ, ಬರೆದುದನೆ ಒಪ್ಪದೆ ಹೊಸಹಾದಿ – ಹೊಸಬಾಳಿನ ಚಿತ್ರಣದ ಚಿತ್ರವಿದೆ ಇಲ್ಲಿ.

ಕಲ್ಲಾಗು ಕಲ್ಲಾಗು । ಬಾಳ ಬಿರುಗಾಳಿಯಲಿ

ಅಲ್ಲಾಡದೆಯೆ ನಿಲ್ಲು ನಿಲ್ಲು ಜೀವ' — ಎಂಬ ಆತ್ಮಚಿಂತನೆಯ ಹಂಬಲ ಮೂಡಿದೆ ಅಲ್ಲಿ. 'ನಿನಗೆ ನೀರೇ ಗೆಳೆಯ' ನೆಂಬುದನ್ನು ನಂಬಿ ಜೀವನ 'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ' 'ಯಾವ ಲೀಲೆಗೋ ಯಾರೊ ಏನೋ ಗುರಿಯಿರದೆ ಬಿಟ್ಟಬಾಣ'ವೆಂದು ಭಾವಿಸಿ ಪರಂಪರೆಯ ಬಂಧನ ಗಳಿಂದ ಬಿಡುಗಡೆ ಪಡೆದು ಮನದ ಭಾವ ತರಂಗಗಳನ್ನು, ನವೋದಯ ಮಾರ್ಗದಲ್ಲಿ ಚಿತ್ರಿಸಿರುವರು. ಆತ್ಮಗೀತಾತ್ಮಕ ಅಭಿವ್ಯಕ್ತಿಯಾದ 'ಒಳಕೋಟೆ' ಅನೇಕ ದೃಷ್ಟಿ ಗಳಿಂದ ಒಂದು ಸುಂದರ ರಸಕಾವ್ಯ. ಮುಂದೆ ಅನೇಕ ಕವಿಗಳನ್ನು ಇದು ಆಕರ್ಷಿಸಿತು. ಶ್ರೀ ಶಿವರುದ್ರಪ್ಪ, ಶ್ರೀ ಕಣವಿ, ಶ್ರೀ ಹಿಮನಾ-ಮುಂತಾದವರು ಅದರಿಂದ ಪ್ರಭಾವಿತರಾದರು. 'ಕಟ್ಟುವೆವು ನಾವು' ಎಂಬ ಎರಡನೆಯ ಸಂಗ್ರಹದಲ್ಲಿ ಕವಿ ಅಡಿಗರ 'ದನಿ' ಧೀರವಾಗಿದೆ; ಕಾವ್ಯ ಮುನ್ನಡೆದಿದೆ. ವ್ಯಕ್ತಿಗತ-ಭಾವ-ಚಿಂತನೆ ಹಿಂದಾಗಿ, ನಾಡು-ನುಡಿ-ದೇಶ-ಜನಾಂಗಗಳತ್ತ ಕವಿಯ ಮನಸ್ಸು ಹರಿದಿದೆ.

'ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು
ಇಂದು ಬಾಳಿದು ಕೂಳಕಾಳಗವು
ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕ್ಕೆ'

ಎಂದು ವಿಚಾರ ಮಾಡುವ ಕವಿ, ಪ್ರತಿರೋಧಗಳ, ದೌರ್ಬಲ್ಯಗಳ ಮಸಣದ ಮೇಲೆ ಹೊಸನಾಡನ್ನು ಕಟ್ಟುವ ಹಂಬಲ ತೋರಿರುವರು. 'ಮೋಹನ ಮುರಲಿ' 'ಸುಲಿಗೆ ಎಂಬ ಯಾಗ' 'ಏಳುವುದೆಂದೀ ಜನಪದ' 'ಸಮಾಜಭೈರವ' 'ಮುಂತಾದ ಕವನ ಗಳಲ್ಲಿ ಅಡಿಗರ 'ಗಟ್ಟಿದನಿ, ಗಂಡುದನಿ' ಕೇಳಿಸುತ್ತಿದೆ. ನಿಧಾನವಾಗಿ ಅಡಿಗರ ಕಾವ್ಯ ವೈಶಿಷ್ಟ್ಯ ಹಾಗೂ ದೃಷ್ಟಿ ವೈಶಾಲ್ಯದ 'ಕಟ್ಟುವಿಕೆ' ಇಲ್ಲಿ ಕಾಣುತ್ತಿದೆ.

'ನಡೆದು ಬಂದ ದಾರಿ'ಯಲ್ಲಿ 'ಕೃಷ್ಣ, ಬುದ್ಧ, ಅಲ್ಲಮ'ರು ಹೊಸಹಾದಿ ಹಿಡಿದುದನ್ನು ಸಮರ್ಥವಾಗಿ ಚಿತ್ರಿಸಿರುವರು. ಅದು ಅಡಿಗರ ವ್ಯಕ್ತಿತ್ವದ ಹಾಗೂ ಕಾವ್ಯದ ಒಂದು ಪ್ರಮುಖ ಧೋರಣೆಯಾಯಿತು. ಭೂಮಿತಾಯಿ ಹಾಗೂ ಮಾನವ ಮಕ್ಕಳ ಸಂಬಂಧಗಳನ್ನು ಕೆಣಕಿನೋಡುವ, ವಿಡಂಬಿಸುವ ಪ್ರಮುಖಗೀತ 'ಭೂಮಿತಾಯಿ'— ಇದೇ ಮುಂದೆ ಬಂದ ಭೂಮಿಗೀತದ ಭ್ರೂಣ, ಬದುಕಿನ ವೈಫಲ್ಯ.

ಬೆಂಕಿಕೊಡ ತನ್ನರಂಥ

ಬರಡು, ಕೊರಡು–ಪಾಪ–ಅಷ್ಟೆ" ಎಂಬ ಕವನದಲ್ಲಿಯೂ ನನ್ನ ಅವತಾರ. ದಲ್ಲಿ ಎಂದಿಗೂ ಹಾಗೆಯೇ ಉಳಿವ, ಮಹಾತ್ಮರು ಬಂದು ಹೋದರೂ 'ಧೂರ್ತ' ರಾಗಿಯೇ ಉಳಿವ ಈ 'ಮಂದಿ'ಯನ್ನು ವಿಡಂಬಿಸಿದ್ದಾರೆ. ಇಲ್ಲಿ ಮೂಡಿದೆ ಅಡಿಗರ ಕಾವ್ಯದ ಮೂಲನೆಲೆ. ಇನ್ನು ಮುಂದಿನ ಕಾವ್ಯದಲ್ಲೆಲ್ಲ ಅಡಿಗರೋ ಅಡಿಗರು. ಅವರದೇ ಹಾದಿ, ಅವರದೇ ಗುರಿ, ಅವರದೇ ವಿಧಾನ. ೧೯೫೨-೫೪ರಲ್ಲಿ ಬಂದ 'ಚಂಡೆಮದ್ದಳೆ'ಯ ಕವನಗಳೆಲ್ಲ ಅಡಿಗರ ನವ್ಯಕಾವ್ಯದ ನಿಖರ ನಿಲುಮೆಯ ಪ್ರತೀಕ ಗಳು. 'ಹಿಮಗಿರಿಯ ಕಂದರ' ದಲ್ಲಿ ಬದುಕಿನ 'ವಿಫಲತೆ' ಗೊಂದಲಪುರದಲ್ಲಿ ಮಾನವನ ಒಳ–ಹೊರಗಿನ ಗೊಂದಲ–ಗೋಜು–ಗೊಡ್ಡುಗಳ ತೀವ್ರ ವಿಡಂಬನೆ, 'ಭೂಮಿಗೀತ'ದಲ್ಲಿನ ಮಾನವಸಂಸ್ಕೃತಿಯ ವೈಫಲ್ಯ. 'ಹೆಳವನ ಹೆಗಲಮೇಲೆ ಕುರುಡ ಕೂತಿದ್ದಾನೆ, ದಾರಿಸಾಗುವುದೆಂತೋ ನೋಡಬೇಕು'— ಎಂದು ಪ್ರಶ್ನಿಸಿ ಗೊಂದಲಪುರದಲ್ಲಿ ಆಧುನಿಕ ಗಲಿ–ಬಿಲಿಯಲ್ಲಿ ಗುರಿಯಿಲ್ಲದೆ, ಬದುಕುವ ದರ್ಪ–ದೌರ್ಜನ್ಯಗಳ ವಿಡಂಬನೆ, ಕಟಕಿ, ಪ್ರತಿಮೆ, ಪ್ರತೀಕಗಳ ಅತ್ಯಂತ ಭಾವಪೂರ್ಣ ಭಾಷೆಯಲ್ಲಿ ಒಡಮೂಡಿದೆ. ಯಕ್ಷಗಾನ ತಂತ್ರ ಸಿದ್ಧಿಸಿದೆ.

ಮೂವತ್ತು ಕೋಟಿ ದೇಗುಲ ಶೂನ್ಯ, ಶೂನ್ಯಗರ್ಭಗುಡಿ
ಭಗ್ನ ವಿಗ್ರಹ ಸ್ತಬ್ಧ ದೀಪನಾಡಿ,
ಬಿದ್ದವನು ಬಿದ್ದ ಎದ್ದವನು ಎದ್ದ
ಪಂಥಕಟ್ಟಿ ಗೆದ್ದವನೊಬ್ಬ ಗೆದ್ದ.

ಕಾಲಬಲವಿಲ್ಲದ ಶಿಖಂಡಿ ನರಪೇತಲ ಗೊರಸು ತುಳಿತಕ್ಕೆ ಸಿಕ್ಕಿಬಿದ್ದ ! ನೆಂದು ವರ್ಣಿಸಿ ಅವನ ತಲೆಯ ಮೇಲೆ ಗರಗಸವನ್ನಿಟ್ಟು ಕೊಯ್ಯುತ್ತಿದ್ದ ಗರಗರಾ... ಗರಗರಾ...

ಹರಿ... ಹರೀ, ಹರ...ಹರಾ ಎಂಬ ವಿಕಟ ವಿಹ್ವಲ ಅಹವಾಲದ ಕೊನೆಯಲ್ಲಿ 'ರಕ್ಷಮಾಂ ಪುರುಷೋತ್ತಮ' ಎಂದು ಉದ್ಗರಿಸಿರುವುದು ಅರ್ಥಪೂರ್ಣವಾಗಿದೆ. ಬದುಕಿನ ಈ 'ಗೊಂದಲ' ಪುರುಷೋತ್ತಮತ್ವ (ಅಂದರೆ ನಾರಾಯಣನೂ ಅಹುದು, ಮಾನವ ಮಹಾದೇವನೂ ಅಹುದು) ದಿಂದ ಬದಲಾಗಬಲ್ಲದೆಂಬ ಆಶಾವಾದದ 'ಧ್ವನಿ' ಬಿಂಬಿತವಾಗಿದೆ. ಎಲಿಯಟ್‌ನ ಧೃತಿ–ಧೋರಣೆಗಳು ಇಲ್ಲಿ ಪ್ರತಿಧ್ವನಿಗೊಡುತ್ತಿವೆ.

'ಶರದ್‌ಗೀತ' 'ವರ್ಧಮಾನ' ಕೂಪಮಂಡೂಕ' 'ಅಜ್ಜನೆಟ್ಟಾಲ'–ಮುಂತಾದ ಕವಿತೆಗಳಲ್ಲಿ ಅಡಿಗ ಕಾವ್ಯದ ಪರಿಣತಿ, ಶಿಲ್ಪ–ತಂತ್ರಗಳ ಪರಿಣತಿ, ಭಾಷಾಪ್ರಯೋಗದ ಸಿದ್ಧಿ, ರೂಪಕ, ಪ್ರತಿಮೆ, ಪ್ರತೀಕಗಳ ಅನನ್ಯತೆ ಮೂಡಿದೆ. ಕನ್ನಡ ಭಾಷಾ–ಸಾಹಿತ್ಯಗಳ ಪರಂಪರೆಯನ್ನು, ಭಾರತೀಯ ಪುರಾಣ, ಉಪನಿಷತ್ ತತ್ವಜ್ಞಾನ, ಸಮಾಜ ಶಾಸ್ತ್ರ ಜ್ಞಾನವನ್ನು, ಇಂದಿನ ವಿಜ್ಞಾನ ಒಡ್ಡಿದ ಸವಾಲುಗಳನ್ನೂ ಅಡಿಗರ ಈ ಕೃತಿಗಳು ಸಮರ್ಥವಾಗಿ ಚಿತ್ರಿಸಿವೆ. ಅಥವಾ ಇಲ್ಲಿ ಸಮಕಾಲೀನ ಪ್ರತಿಭಾನ್ವಿತ ಕವಿ ಅಡಿಗರ ಸರ್ವಶಕ್ತಿ ಸಂಪೂರ್ಣ ಅಭಿವ್ಯಕ್ತಿಯನ್ನು ಪಡೆದಿದೆ. ಸ್ವತಃ ಅಡಿಗರೇ ಈಗ 'ಹೊಸಹಾದಿ'ಯನ್ನು ಹುಡುಕಿಕೊಳ್ಳಬೇಕಾದಂಥ ಪರಿಸ್ಥಿತಿ ಒದಗಿದೆ. ಎಂದರೆ, ನವ್ಯಕಾವ್ಯದ ಸಾಧ್ಯತೆಗಳನ್ನೆಲ್ಲ ಅಡಿಗರು ಬರಿದುಗೈದಿದ್ದಾರೆ. ಆ ಮಾರ್ಗದಲ್ಲಿಯೇ ಬಂದ ಅಡಿಗರ ಇತ್ತೀಚಿನ ಕವನಗಳಲ್ಲಿ 'ಹೊಸತನ' ಹಳೆಯತನವೇ ಆಗಿದೆ. ಕಾರಣ, ಈ ನವ್ಯದ ಅನುಯಾಯಿಗಳು ಅಥವಾ ಕಿರುಪ್ರತಿಭೆಗಳು ಅನಿವಾರ್ಯವಾಗಿ ಈಗ ಹೊಸಹಾದಿ ಹುಡುಕಲೇಬೇಕಾಗಿದೆ.

ಆಲದ ಬುಡದ ಗುಂಡಿಯಲ್ಲಿ ಬರಿಮಣ್ಣುಂಟು
ಒಳಗೆ ಹೊಕ್ಕಳಿನಿಂದ ನೆತ್ತಿವರೆಗೆ
ನೆಳಲಾಗಿ ಉಂಟು ಸಾವಿರದ ಕಂಭದ ಬಸದಿ;
ಹೊರಗೆ ತರುವ ಪವಾಡ ಕಾದುಕುಳಿತೆ.

ಈ ನೂತನ 'ಪವಾಡ'ಕ್ಕಾಗಿ ಮಾನವತೆ ಕಾದುಕುಳಿತಂತೆ, ಇಂದು ಕನ್ನಡ ಕಾವ್ಯವೂ ನವ್ಯಕಾವ್ಯದ ನೆರಳು ಬಿಟ್ಟು, ಬಿಳಲುಗಳನ್ನು ನೆಲದಾಳಕ್ಕೆ ಚಾಚಿ, ಹೊಸ ಜೀವನದ ಹೊಸ ಚಿಗುರಿನ ಕಾವ್ಯ ತರಬೇಕಾಗಿದೆ. ಅಡಿಗೋತ್ತರ ಕಾವ್ಯ 'ಗೊಂದಲಪುರ' ವಾಗದೆ, ಮಂಡೂಕಯ್ಯಗಳ ತುತ್ತಾಗದೆ, ನಿಜವಾದ 'ಭೂಮಿಗೀತ' 'ಬಾಳಗೀತ' ವಾಗಬೇಕಾಗಿದೆ. 'ಜನಕಾವ್ಯ'ವೆಂಬ ಬಂಡಾಯ ಕಾವ್ಯ ಪ್ರತಿಭಟನೆ– ಅಸಹನೆ ಮಾತ್ರವಾಗದೆ ಜನತೆಯ ಬದುಕಿನಲ್ಲಿ ಕ್ರಾಂತಿಮೂಡಿಸುವ ನಿಜವಾದ 'ಕಾವ್ಯ'ವಾಗಿ ಬರಬೇಕಾಗಿದೆ.

ಆಧುನಿಕ ಕನ್ನಡ ಕಾವ್ಯಕ್ಕೆ ಶ್ರೀ ಗೋಪಾಲಕೃಷ್ಣ ಅಡಿಗರ ಕೊಡುಗೆ ಅತ್ಯಂತ ಗಮನಾರ್ಹವಾದುದು. ಕನ್ನಡ ಕಾವ್ಯಪರಂಪರೆಗೆ ಹೊಸಪ್ರವಾಹವಾಗಿ ಬಂದರೂ,

ಪ್ರಭಾವಿಯಾಗಿ ನಿಂದರು. ನವ್ಯತೆ ಎಂಬುದು ಕಥೆ ಕಾದಂಬರಿಗಳಲ್ಲೂ ಪ್ರವಹಿಸಿ, ಒಂದು ಪಂಥವೇ ಆಯಿತು. ಆದರೆ, ಇಷ್ಟು ಬೇಗ ಅದು ಹಿಂದೇಟು ಹಾಕುವುದೆಂದು ನಂಬಿರಲಿಲ್ಲ. ಕಿರಿಯ ತಲೆಮಾರಿನ ಕವಿಗಳು–ಅದರಲ್ಲೂ ಮುಖ್ಯವಾಗಿ ಜಾನಪದ ಹಾಗೂ ಕೆಳವರ್ಗದ ಕೂಲಿ ಕುಂಬಳಿಯುವರ ಒಡಲ ಬೆಂಕಿಯಾಗಿ, ನಿಜವಾದ ಗ್ರಾಮೀಣ ಭಾಷೆಯನ್ನು ಬಳಸಿಕೊಂಡು 'ಜನಕಾವ್ಯ' ವನ್ನು ರೂಪಿಸುವ ಹಂಚಿಕೆಯಲ್ಲಿದ್ದಾರೆ. ಶ್ರೀ ಅಡಿಗರ ಕಾವ್ಯ ಅತ್ಯಂತ ವಿಶಿಷ್ಟವಾದುದು. ಅನನುಕರಣೀಯವಾದುದು. ಮೂಲಸತ್ವಗುಂದದಂತೆ ಇತರ ಭಾಷೆಗಳಿಗೆ ಅನುವಾದಿಸುವುದೂ ಸಾಧ್ಯವಿಲ್ಲ. ಅಡಿಗರ ಕಾವ್ಯ ಹೊಸ ರೂಪಕ, ಪ್ರತಿಮೆ, ಪ್ರತೀಕಗಳನ್ನು 'ಪ್ರಸ್ಥಾಪಿಸಿ' ಕನ್ನಡ ಕಾವ್ಯಕ್ಕೆ ನೂತನ ಆಯಾಮವನ್ನೂ ಒದಗಿಸಿತು. ಅವರ ಭಾಷಾ ಪ್ರಯೋಗ– ಧ್ವನಿಪರಂಪರೆಯ ಪದ– ಪದಪುಂಜ ಪ್ರಯೋಗ ಅವರದೇ ಆಗಿದೆ. ಪರಂಪರೆಯಾಗಿ ಉಳಿಯುತ್ತದೆ. ಸಮಕಾಲೀನ ಬದುಕನ್ನು ಚಿತ್ರಿಸುವಲ್ಲಿ, ಕಾವ್ಯ ರಚನೆಯಲ್ಲಿ ಸ್ವಾತಂತ್ರ್ಯವನ್ನು ರೂಪಿಸುವಲ್ಲಿ ತರುಣಚೇತನಗಳನ್ನು ನವ್ಯಕಾವ್ಯ ಕೃಷಿಗೆ ಅಳವಡಿಸುವಲ್ಲಿ ಅಡಿಗರ ಕಾವ್ಯ– ಮಣ್ಣಿನ ವಾಸನೆಯ ಕಾವ್ಯ– ವಿಶೇಷ ಪ್ರಭಾವಶಾಲಿಯಾಗಿದೆ. ಕಾವ್ಯಕಲೆಯ ದೃಷ್ಟಿಯಿಂದ ಸಿದ್ಧಿಯನ್ನು ಪಡೆದರೂ ಅದು ಶ್ರೀಸಾಮಾನ್ಯನಿಗೆ ಕಂದಕವೇ ಆಯಿತು. ಅನೇಕ ಕಡೆ ಒಗಟಿನ ಕಾವ್ಯವೇ ಆಗಿದೆ. 'ನಾನೇರುವೆತ್ತರಕ್ಕೆ ನೀನೂ ಕೂಡಾ ಏರಿ' ಬಾರೆಂಬ ಕವಿಗಳ ಆಹ್ವಾನ ವಿಮರ್ಶಕರಿಗೆ ಮಾತ್ರವಲ್ಲ, ಕನ್ನಡ ಸಹೃದಯ ಲೋಕಕ್ಕೆ, ಕವಿ–ಕಾವ್ಯ ಪರಂಪರೆಗೆ ಬಂಡಾಯ ಕಾವ್ಯಕ್ಕೆ ಇದು ಎಚ್ಚರಿಕೆಯ ಕರೆಗಂಟೆ.

ಕೊಲರಿಜ್‌ನ ದೃಷ್ಟಿಯಲ್ಲಿ ಇಮ್ಯಾಜಿನೇಶನ್

ಎಂ. ಬಿ. ಕೊಟ್ರಶೆಟ್ಟಿ

ಪ್ಲೇಟೋ ಅನುಕರಣ (Imitation) ಸಿದ್ಧಾಂತದ ಹಿನ್ನೆಲೆಯಲ್ಲಿ ಕಲಾನಿರ್ಮಾಣವನ್ನು ವಿವರಿಸಿದಂದಿನಿಂದ, ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ಈ ವಿಷಯವಾಗಿ ವ್ಯಾಪಕ ಆಲೋಚನೆಗೆ ಪ್ರಾರಂಭವಾಯಿತು. ಆದರ್ಶ ಸತ್ಯದ ಆವಿಷ್ಕಾರಕ್ಕಾಗಿ ಮಾನವನು ಜ್ಞಾನಮಾರ್ಗವನ್ನು ಅನುಸರಿಸಬೇಕೆಂಬುದೇ ಪ್ಲೇಟೋನ ವಿಚಾರ ಧಾರೆಯ ಪ್ರಧಾನ ಆಶಯವಾಗಿದೆ. ಕಲಾವಿದನ ಅನ್ವೇಷಣೆಯಲ್ಲಿ ಬುದ್ಧಿಗಿಂತಲೂ ಭಾವನೆಗಳಿಗೆ ಪ್ರಾಶಸ್ತ್ಯವಿರುತ್ತದೆ. ಕಾಲಸೃಷ್ಟಿಯೆಲ್ಲ ಕಾಲ್ಪನಿಕ ಹಾಗೂ ಭಾವಾತ್ಮಕವಾದುದರಿಂದ ಆದರ್ಶ ರಾಜ್ಯದ ಪ್ರಜೆಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಅದರಿಂದ ವಿಪರೀತ ಪರಿಣಾಮ ಉಂಟಾಗುತ್ತದೆ. ಕಲೆಗಳು ಆದರ್ಶ ಸತ್ಯದ ನಕಲಿನ ನಕಲು (Copy of the Copy twice removed from reality)ಗಳಾದುದರಿಂದ ಅವುಗಳನ್ನು ಬಹಿಷ್ಕರಿಸಬೇಕೆಂದು ಪ್ರತಿಪಾದಿಸುತ್ತಾನೆ. ಅವನ ಶಿಷ್ಯನಾದ ಅರಿಸ್ಟಾಟಲ್ ಕಲೆಯ ಅನುಕರಣ ಸ್ವರೂಪವನ್ನು ಒಪ್ಪಿಕೊಂಡಿದ್ದರೂ ಅದಕ್ಕೆ ನವೀನ ಅರ್ಥವನ್ನು ಕೊಟ್ಟಿದ್ದಾನೆ. ಅವನ ದೃಷ್ಟಿಯಲ್ಲಿ ಅನುಕರಣೆ ಎಂಬುದು ಕೇವಲ ನಕಲು ಕ್ರಿಯೆಯಲ್ಲ. ಮಾನವ ಪ್ರತಿಭೆಯ ಆನಂದದಾಯಕ ಹಾಗೂ ಸೃಷ್ಟ್ಯಾತ್ಮಕ ಪ್ರಕ್ರಿಯೆಯೆಂದು ವರ್ಣಿಸಿ ಅದರ ಅರ್ಥವ್ಯಾಪ್ತಿಯನ್ನು ಹಿಗ್ಗಲಿಸಿದ್ದಾನೆ. ಕಲೆಯನ್ನು ವಾಸ್ತವಿಕತೆಗಿಂತಲೂ ಸಂಭಾವ್ಯತೆಯ ಹಿನ್ನೆಲೆಯಲ್ಲಿ ಅರ್ಥೈಸಬೇಕೆನ್ನುವದು ಅವನ ಪ್ರತಿಪಾದನೆಯ ಮುಖ್ಯಾಂಶವಾಗಿದೆ. ಕಾವ್ಯವು ಚರಿತ್ರೆಗಿಂತ ಹೆಚ್ಚು ತಾತ್ವಿಕವಾದುದು, ಏಕೆಂದರೆ ಚರಿತ್ರೆಯಲ್ಲಿ ನಡೆದ ಸಂಗತಿಗಳಿಗೆ ಪ್ರಾಧಾನ್ಯವಿದ್ದರೆ, ಕಾವ್ಯವು ಕಾಲ–ದೇಶ ವ್ಯಕ್ತಿ ವೈಚಿತ್ರ್ಯಗಳನ್ನು ಮೀರಿದ ಸರ್ವಕಾಲ ಸಂಭಾವ್ಯತೆಯುಳ್ಳ ಸತ್ಯವನ್ನು ಪ್ರತಿಕರಿಸುತ್ತದೆ. ಕಾವ್ಯವು ಸಂಪೂರ್ಣವಾಗಿ ಪ್ರಕೃತಿಯ ಅನುಕರಣವಲ್ಲ: ಪ್ರಕೃತಿ ಸಾಧಿಸದೇ ಇದ್ದ ಆದರ್ಶ ಪ್ರತಿಮೆಗಳನ್ನು ರೂಪಿಸಲು ಸಮರ್ಥವಾಗುತ್ತದೆ. ಪ್ರಕೃತಿಯಲ್ಲಿನ ಕೊರತೆಗಳ ಪೂರಣವೇ ಕಲೆಯ ಆದರ್ಶವೆಂದು ಅವನು ಸಾರುತ್ತಾನೆ.

೧೮ನೆಯ ಶತಮಾನದಲ್ಲಿ ಪಾಶ್ಚಾತ್ಯ ಜೀವನಧೋರಣೆಯಲ್ಲಿ ತೋರಿದ ಮಹತ್ತರ ಪರಿವರ್ತನೆಯಿಂದ ಸಾಹಿತ್ಯ ಮತ್ತು ವಿಮರ್ಶೆಗಳೆರಡೂ ಪ್ರಭಾವಿತವಾದವು. ಅಲ್ಲಿಯವರೆಗೆ ಗ್ರೀಕ್ ಹಾಗೂ ರೋಮನ್ ಮಾದರಿಗಳ ಅನುಕರಣದಿಂದಲೇ ತೃಪ್ತಿ

ಗೊಳ್ಳುತ್ತಲಿದ್ದ ಪಾಶ್ಚಾತ್ಯರ ಅಭಿಜಾತ (Classical) ದೃಷ್ಟಿಕೋನವನ್ನು ಪ್ರತಿಭಟಿಸುವ ರೋಮ್ಯಾಂಟಿಕ್ ಧೋರಣೆಯು ಪ್ರಚುರಗೊಂಡಿತು. ಇದರ ಪರಿಣಾಮವೆಂದರೆ, ಸಾಹಿತ್ಯ ವಿಮರ್ಶೆಯಲ್ಲಿ ಸಾರ್ವಭೌಮತ್ವ ಪಡೆದ 'ಇಮಿಟೇಶನ್'ಕ್ಕೆ ಪ್ರತಿಯಾಗಿ 'ಇಮ್ಯಾಜಿನೇಶನ್' ಪರಿಕಲ್ಪನೆ ಬಳಕೆಗೆ ಬಂದಿತು. ಬ್ಲೇಕ್, ಶೆಲ್ಲೀ, ವರ್ಡ್ಸ್ವರ್ತ್, ಕೊಲರಿಜ್ ಮೊದಲಾದವರು 'ಇಮ್ಯಾಜಿನೇಶನ್' ಎನ್ನುವದೇ 'ಕಲಾನಿರ್ಮಿತಿಯ ಮೂಲತತ್ವ' ಎಂದು ಪ್ರತಿಪಾದಿಸಿದರು. ಸ್ವತಃ ಕವಿಯೂ, ಶ್ರೇಷ್ಠ ವಿಮರ್ಶಕನೂ ಆದ ಕೊಲರಿಜ್ ತನ್ನ ವಿಮರ್ಶೆಯ ಕೃತಿ'Biographia Literaria'ದಲ್ಲಿ ಇಮ್ಯಾಜಿನೇಶನ್ ಕುರಿತು ದೀರ್ಘವಾಗಿ ಆಲೋಚನೆಗೈಯ್ದಿದ್ದಾನೆ. ಕಲಾಸೃಷ್ಟಿಯ ಮೂಲವನ್ನೇ ಸ್ಪರ್ಶಿಸುವ ಇಮ್ಯಾಜಿನೇಶನ್ ಸಿದ್ಧಾಂತವನ್ನು ಕುರಿತು ಇಷ್ಟೊಂದು ವ್ಯಾಪಕವಾಗಿ ಆಲೋಚಿಸಿದವರು ಆಂಗ್ಲ ವಿಮರ್ಶಕರಲ್ಲಿ ಅತಿ ವಿರಳ. ಕೊಲರಿಜ್‌ನ ವಿಚಾರಗಳು ಅಭ್ಯಾಸಯೋಗ್ಯವಾಗಿರುವದರಿಂದ ಅವುಗಳ ವಿಶ್ಲೇಷಣೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಭಾರತೀಯ ಕಾವ್ಯಮೀಮಾಂಸೆಯಲ್ಲಿ 'ಪ್ರತಿಭೆ' ಎಂದು ಯಾವುದನ್ನು ಗುರುತಿಸಿದರೋ ಆ ಮೂಲಶಕ್ತಿಯನ್ನು 'genius' ಎಂದು ೧೮ನೆಯ ಶತಮಾನದ ಪಾಶ್ಚಾತ್ಯರು ಕರೆದಿದ್ದಾರೆ. ಕೊಲರಿಜ್ ಇದನ್ನು 'ಇಮ್ಯಾಜಿನೇಶನ್' ಎಂದು ಹೆಸರಿಸಿದ್ದಾನೆ. 'ಇಮ್ಯಾಜಿನೇಶನ್' ಕಲಾವಿದನಿಗಿರುವ ಒಂದು ವಿಶೇಷವಾದ ದೃಷ್ಟಿ ಅಥವಾ ಶಕ್ತಿಯೆಂದು ಅವನು ಪರಿಭಾವಿಸಿದ್ದಾನೆ. ಇಂದ್ರಿಯಗೋಚರವಾದ ತೋರಿಕೆಯ ಜಗತ್ತಿನ ಹಿಂದಿರುವ ಸತ್ಯದ ನಿಜಸ್ವರೂಪವನ್ನು ಅರಸುವ ದರ್ಶನ (Vision)ವಿದಾದುದರಿಂದ ಕಲಾವಿದನಿಗೆ 'ದಾರ್ಶನಿಕ' (Visionary) ಎಂಬ ಹೆಸರು ಪ್ರಾಪ್ತವಾಗಿದೆ. ಕೊಲರಿಜ್‌ನ ದೃಷ್ಟಿಯಲ್ಲಿ ಇಮ್ಯಾಜಿನೇಶನ್ ಎನ್ನುವದು ಮಾನವ ಸಹಜವಾದ ಸೃಷ್ಟಿಶಕ್ತಿ; ಮಾನವನ ಬುದ್ಧಿಶಕ್ತಿಗೆ ಭಿನ್ನವಾದ ಅಂತರ್ದೃಷ್ಟಿ (Intuition) ಇಲ್ಲವೇ ಪ್ರತಿಭಾದೃಷ್ಟಿ (An eye of the mind) ಎಂದು ಪರಿಗಣಿತವಾಗಿದೆ.

ಇಮ್ಯಾಜಿನೇಶನ್ ಹಾಗೂ ಫ್ಯಾನ್ಸಿ : ಇಮ್ಯಾಜಿನೇಶನ್ ಮತ್ತು ಫ್ಯಾನ್ಸಿ ಎಂಬ ಪದಗಳು ಪಾಶ್ಚಾತ್ಯ ವಿಮರ್ಶೆಯಲ್ಲಿ ಬಹುಕಾಲದಿಂದಲೂ ಬಳಕೆಯಲ್ಲಿದ್ದವು. ಕಿನ್ನರ ಕಥೆಗಳ ಅದ್ಭುತರಮ್ಯತೆಯನ್ನು ವಿವರಿಸುವ ಸಂದರ್ಭದಲ್ಲಿ ಇವುಗಳ ಪ್ರಯೋಗವಾಗುತ್ತಿತ್ತು. ಅನೇಕ ಸಂದರ್ಭಗಳಲ್ಲಿ ಇವು ಸಮಾನಾರ್ಥಕಗಳಾಗಿ ಬಳಕೆಗೊಂಡರೂ ೧೮ನೆಯ ಶತಮಾನದಲ್ಲಿ ಇಮ್ಯಾಜಿನೇಶನ್ ಹೆಚ್ಚು ಸವಿರಾದ ಹಾಗೂ ಗೌರವಪೂರ್ಣವಾದ ಅರ್ಥವನ್ನು ಪಡೆಯಿತು. ಇಂದ್ರಿಯಾನುಭವಗಳ ಮುಖಾಂತರ ಸಂವೇದನೆಯ ಕೇಂದ್ರವಾದ ಮನಸ್ಸಿನಲ್ಲಿ ವಸ್ತುಗಳ ಪ್ರತಿಮೆಗಳನ್ನು ಸೃಷ್ಟಿಸುವ ಶಕ್ತಿಗೆ 'ಇಮ್ಯಾಜಿನೇಶನ್' ಎಂಬ ಸಾಮಾನ್ಯವಾದ ಹೆಸರಿದೆ. ಈ ಪ್ರತಿಮಾ ನಿರ್ಮಾಣವು ಒಂದು ಸೃಷ್ಟ್ಯಾತ್ಮಕ ಕ್ರಿಯೆ. ಮನಸ್ಸಿನಲ್ಲಿ ಮೂಡಿದ

ಪ್ರತಿಮೆಗಳನ್ನು ಸಂಯೋಜಿಸಿ ಅಭಿವ್ಯಕ್ತಿಗೆ ತರುವ ಕೆಲಸ 'ಫ್ಯಾನ್ಸಿ'(ಚಿತ್ರಕ ಶಕ್ತಿ)ಯೆಂದು 'ವಿಲಿಯಂ ಟೇಲರ್' ವಿವರಿಸಿದ್ದಾನೆ.[1]

ತತ್ವಜ್ಞಾನಿಯಾದ ಹಾಬ್ಸ ಇಮ್ಯಾಜಿನೇಶನ್ ಮತ್ತು ಫ್ಯಾನ್ಸಿ ಇವುಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವದಿಲ್ಲ. ವಸ್ತುಗಳು ಎದುರಿಗೆ ಬಂದಾಗ ಇಂದ್ರಿಯಗಳಲ್ಲಿ ಒಂದು ವಿಧವಾದ ಸ್ಪಂದನ (Vibration) ಉಂಟಾಗುವದೆಂದೂ, ನಮ್ಮ ಜಾಗೃತ ಇಲ್ಲವೇ ಸ್ವಪ್ನಾವಸ್ಥೆಯಲ್ಲಿ ಉಂಟಾಗುವ ಇಂದ್ರಿಯ ಸ್ಪಂದನೆಗಳನ್ನೇ ಗ್ರೀಕರು ಫ್ಯಾನ್ಸಿ ಎಂದು ಹೆಸರಿಸಿದ್ದಾರೆ. ವಸ್ತುಗಳನ್ನು ಇಂದ್ರಿಯಗಳಿಂದ ದೂರವಿರಿಸಿದಾಗ ಅವುಗಳ ಅಸ್ಪಷ್ಟ ಪ್ರತಿಮೆ ಮನಸ್ಸಿನಲ್ಲಿ ಮೂಡಿನಿಲ್ಲುತ್ತವೆ. ಇದಕ್ಕೆ ಲ್ಯಾಟಿನ್ ವಿದ್ವಾಂಸರು 'ಇಮ್ಯಾಜಿನೇಶನ್' ಎಂದು ಹೆಸರಿಸಿದ್ದಾರೆ. ನಶಿಸಿ ಹೋಗುತ್ತಿರುವ ಹಳೆಯ ವಸ್ತು ಪ್ರತಿರೂಪಗಳನ್ನು ಸ್ಮರಣೆಯಲ್ಲಿ ಹಿಡಿದಿಡುವ ಶಕ್ತಿಗೆ 'Memory' ಎಂಬ ಪದವನ್ನು ಬಳಸಿದ್ದಾರೆ. ಹೀಗಾಗಿ ಇಮ್ಯಾಜಿನೇಶನ್, ಫ್ಯಾನ್ಸಿ ಹಾಗೂ memory ಈ ಮೂರೂ ಒಂದೇ[2] ಇಮ್ಯಾಜಿನೇಶನ್ ಎಂಬುದನ್ನು ನಾವು 'ಅಳಿಯುತ್ತಿರುವ ಇಂದ್ರಿಯ ಪ್ರಜ್ಞೆ' (Decaying sense) ಎಂದು ಕರೆಯಬಹುದಾಗಿದೆ. ಇದು ಹಾಬ್ಸನ ಒಟ್ಟು ಅಭಿಪ್ರಾಯವಾಗಿದೆ.

ಜಾನ್ ರಸ್ಕಿನ್ ವಸ್ತುವಿನ ಬಾಹ್ಯರೂಪವನ್ನು ಸ್ಪಷ್ಟವಾಗಿ, ಕಣ್ಣು ಕೋರೈಸುವಂತೆ ಚಿತ್ರಿಸಿಕೊಡುವ ಶಕ್ತಿಯನ್ನು ಫ್ಯಾನ್ಸಿ ಎಂದೂ, ಅದರ ಅಂತರಂಗದ ಅವ್ಯಕ್ತ ಹಾಗೂ ಅಸ್ಪಷ್ಟ ರಹಸ್ಯವನ್ನು ರೂಪಿಸುವ ಶಕ್ತಿಯನ್ನು ಇಮ್ಯಾಜಿನೇಶನ್ ಎಂದೂ ಕರೆಯುತ್ತಾರೆ.[3] ಚಾರ್ಲ್ಸ್‌ಲ್ಯಾಂಬ್‌ನು ಅಸ್ಪಷ್ಟ ಹಾಗೂ ಅವ್ಯಕ್ತ ವಿಚಾರಗಳಿಗೆ ವ್ಯಕ್ತರೂಪವನ್ನು ಕೊಟ್ಟು, ಅಂತರಂಗದ ಪ್ರತಿಮೆಗಳನ್ನು ಸಂಯೋಜನೆಗೊಳಿಸುವ ಶಕ್ತಿ ಇಮ್ಯಾಜಿನೇಶನ್‌ಗೆ ಇದೆಯೆಂದು ವಿವರಿಸುತ್ತಾನೆ.

Imagination draws all things to one. It makes things animate or inanimate, beings with their attributes, subjects with their accessories, take one colour and serve one effect.

ವರ್ಡ್ಸ್‌ವರ್ತನು ಇದನ್ನು ವಸ್ತುವಿನ ಆಕೃತಿ ಹಾಗೂ ವರ್ಣಗಳನ್ನು ಪರಿವರ್ತಿಸಿ ತೋರುವ ಕಲಾವಿದನ ಬೌದ್ಧಿಕ ಲೆನ್ಸ್: ನಾಟಕದ ವಿವಿಧ ಪಾತ್ರಗಳನ್ನು ಸಜ್ಜುಗೊಳಿಸುವ, ವೇಷ ತೋರಿಸುವ ವ್ಯಕ್ತಿ: ಭಿನ್ನ ಸ್ವಭಾವ ಹಾಗೂ ಪ್ರತ್ಯೇಕವಾದ ಎರಡು ರಾಸಾಯನಿಕ ದ್ರವ್ಯಗಳನ್ನು ಒಂದುಗೂಡಿಸಿ, ನವೀನವಸ್ತುವನ್ನು ರೂಪಿ

---

1. Literary Criticism : A short History, Page 386.
2. Quoted— Literary Criticism— A short history— page 254.
3. The fancy sees outside, and is able to give a portrait of the outside, clear, brilliant and full of details. The imagination sees the heart and inner nature and makes them felt, but is often obscure, mysterious and interrupted in its giving of outer details.

ಸುವ ರಾಸಾಯನಿಕ ಪ್ರಕಿಯೆ ಎಂದು ಮುಂತಾಗಿ ಹೋಲಿಕೆಗಳ ಮೂಲಕ ಅದರ ನವನಿರ್ಮಾಣ ಶಕ್ತಿಯನ್ನು ಹೊಗಳಿದ್ದಾನೆ. ಕಾಲಾಭಿವ್ಯಕ್ತಿಯನ್ನು ಕುರಿತು ಹೇಳುತ್ತ ಅದರಲ್ಲಿ ಇಮ್ಯಾಜಿನೇಶನ್ ಹಾಗೂ ಫ್ಯಾನ್ಸಿಗಳೆರಡೂ ಪಾಲುಗೊಳ್ಳುತ್ತವೆ. ಇವು ಗಳಲ್ಲಿರುವ ವ್ಯತ್ಯಾಸವೆಂದರೆ— ಒಂದು ಶ್ರೇಷ್ಠ ಹಾಗೂ ಗಂಭೀರವಾದರೆ, ಇನ್ನೊಂದು ಲಘುವಾದ ಕೆಳಮಟ್ಟದ ಶಕ್ತಿ[4]. ಆದರೆ ಎರಡೂ ಸೃಷ್ಟ್ಯಾತ್ಮಕವಾದವು ಗಳೇ ಎಂದು ಹೇಳಿದುದನ್ನು ಕೊಲರಿಜ್ ಅಲ್ಲಗಳೆಯುತ್ತಾನೆ[5].

ಕಾವ್ಯಕೃತಿಯಲ್ಲಿ ಇವೆರಡೂ ಬೆರೆತುಕೊಂಡಿರಬಹುದು. ಆದರೆ ಇಡೀ ಕಲ್ಪನಾ ಸೃಷ್ಟಿಯ ಹಿಂದಿರುವ ಮೂಲತತ್ವ(Seminal Principle)ವೆಂದರೆ ಇಮ್ಯಾಜಿನೇ ಶನ್ ಒಂದೇ. ಸೃಷ್ಟಿ ಪ್ರಕ್ರಿಯೆಯಲ್ಲಿ ಫ್ಯಾನ್ಸಿಯ ಕೆಲಸವು ಅಷ್ಟೊಂದು ಮಹತ್ವ ದ್ದಲ್ಲ ಹೊಸ ಪ್ರತಿಮೆಗಳನ್ನು ನಿರ್ಮಿಸುವ ಶಕ್ತಿ ಅದಕ್ಕಿಲ್ಲ. **The fancy is indeed no other than a mode of memory.** ಎಂದರೆ ಕಲ್ಪನೆಯಿಂದ ನಿರ್ಮಿತವಾದ ಸಿದ್ಧಪ್ರತಿಮೆಗಳನ್ನು ನೆನಪಿಗೆ ತಂದುಕೊಡುವ ಒಂದು ಬಗೆಯ ಸ್ಮರಣೆ ಮಾತ್ರ. ಇಮ್ಯಾಜಿನೇಶನ್ ಸೃಷ್ಟಿ–ಪುನಃ ಸೃಷ್ಟಿ ಕ್ರಿಯೆಯಲ್ಲಿ ನಿರಂತರ ತೊಡ ಗಿರುವ ಜೀವಂತಶಕ್ತಿ. ಪ್ರತಿಮೆಗಳನ್ನು ಸೃಷ್ಟಿಸುವ, ಪರಿವರ್ತಿಸುವ, ಸಂಯೋಜಿ ಸುವ ಕಾರ್ಯವೆಲ್ಲ ಅದರಿಂದಲೇ ನಡೆಯುತ್ತದೆಂದು ವಿವರಿಸಿದ್ದಾನೆ.

ಅಸೋಸಿಯೇಶನ್ ಮತ್ತು ಇಮ್ಯಾಜಿನೇಶನ್

ಕೊಲರಿಜ್‌ನು ಪಾಶ್ಚಾತ್ಯ ತತ್ವಜ್ಞಾನದಲ್ಲಿ ಬಹುಕಾಲದಿಂದಲೂ ಪ್ರಚಲಿತ ವಿದ್ದ ಅಸೋಸಿಯೇಶನ್ ತತ್ವದಿಂದ ಪ್ರಭಾವಿತನಾಗಿದ್ದಾನೆ. ಅರಿಸ್ಟಾಟಲ್ ಹೆಕಾರ್ಟಸ್, ಹಾಬ್ಸ್, ಹಾರ್ಟ್ಲೆ ಮುಂತಾದವರು ಈ ಸಿದ್ಧಾಂತದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಭೌತಿಕ ವಸ್ತುಗಳ ಹಿಂದೆ ಗುರುತ್ವಾಕರ್ಷಣ ತತ್ವವಿದ್ದಂತೆ ಮಾನವನ ಮನಸ್ಸಿನ ಪ್ರಭಾವಗಳನ್ನು ಸಮನ್ವಯಗೊಳಿಸುವ ತತ್ವವೇ ಈ ಅಸೋಸಿಯೇಶನ್. ಜ್ಞಾನ ಸಾಧನೆಯಲ್ಲಿ ತೊಡಗುವ ಮಾನವನ ಮನೋ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಇದರ ರೂಪುರೇಷೆಗಳನ್ನು ವಿವರಿಸಿದ್ದಾರೆ. ವ್ಯಕ್ತಿಯ ವಿಚಾರಗಳ ಸೂಕ್ಷ್ಮತೆಯನ್ನು ವಿವರಿಸಲು ಅವನ ಹಿಂದಿನ ಹಾಗೂ ಇಂದಿನ ಅನುಭವ ಗಳನ್ನು ಪರಿಗಣಿಸಿ ಒಟ್ಟು ಭಾವನಾತ್ಮಕ ಪ್ರತಿಕ್ರಿಯೆ (emotional response) ಯನ್ನು ಪರಿಶೀಲಿಸಬೇಕಾಗುತ್ತದೆ. ಪರಿಭಾವನೆಗೆ ಒಳಗಾದ ವಸ್ತುವು ಅಂತಹ

4. To aggregate and to associate, to evoke and to combine belong as well to imagination as to fancy.
5. ......fancy and imagination were two distinct and widely different faculties, instead of being, according to general belief either two names with one meaning or to farthest the lower and higher degree of one and the same power. "Biographic Literaria". Chapter–4. page–45,

ಇನ್ನೂ ಅನೇಕ ವಸ್ತು ವಿಚಾರಗಳಿಂದ ಪ್ರಭಾವಿತವಾಗಿರುತ್ತದೆಯೆಂಬ ವ್ಯಕ್ತಿನಿಷ್ಠ ನೆಲೆಯನ್ನು ೧೮ನೆಯ ಶತಮಾನದ ಮನಶ್ಶಾಸ್ತ್ರವು ಸಮರ್ಥವಾಗಿ ಪ್ರತಿಪಾದಿಸಿತ್ತು. ಇದರಿಂದ ಮಾನವ ವ್ಯಕ್ತಿತ್ವದ ತಾರ್ಕಿಕ ಇಲ್ಲವೇ ವಿಚಾರಾತ್ಮಕ ದೃಷ್ಟಿಗಿಂತಲೂ ಅವನ ಇಡೀ ವ್ಯಕ್ತಿತ್ವಕ್ಕೆ ಅಸೋಸಿಯೇಶನ್ ತತ್ವವು ಒಳಪಡುತ್ತದೆಂಬ ವಿಚಾರವು ಸ್ಪಷ್ಟವಾಯಿತು. ಇದರ ಪ್ರಮುಖ ಪ್ರತಿಪಾದಕನಾದ ಹಾರ್ಟ್ಲೆನ 'ದಿ ಟ್ರೇನ್ ಆಫ್ ಆಯ್‌ಡಿಯಾಸ್' ಎಂದರೆ ಒಂದು ವಿಚಾರವು ತತ್-ಸದೃಶ ವಿಚಾರಗಳನ್ನು ಸ್ವಾಭಾವಿಕವಾಗಿ ಹುಟ್ಟಿಸುತ್ತ ಹೋಗುತ್ತದೆ, ಎಂಬುದನ್ನು ಕೋಲರಿಜ್ ಅಲ್ಲಗಳೆಯುತ್ತಾನೆ. ವಿಚಾರ ಸರಪಳಿ ಯಾಂತ್ರಿಕವಾಗಿ ಬೆಳೆಯಲಾರದು ಎಂಬುದು ಅವನ ಅಭಿಪ್ರಾಯ. ಅವುಗಳ ಹಿನ್ನೆಲೆಯಲ್ಲಿ ಭಾವನೆ ಸಂವೇದನೆಗಳ ರೂಪದ ಆತ್ಮಶಕ್ತಿ (soul power) ಇರಲೇಬೇಕೆಂದೂ, ಯಾಂತ್ರಿಕವಾದ ಅಸೋಸಿಯೇಶನ್ ತತ್ವಕ್ಕೆ ಬದಲಾಗಿ ಆತ್ಮದ ಸಂವೇದನಾತ್ಮಕ ಅಂಶಗಳನ್ನೊಳಗೊಂಡ ಇಮ್ಯಾಜಿನೇಶನ್ ಹೆಚ್ಚು ಅರ್ಥಪೂರ್ಣವಾದುದೆಂದೂ ಸಾರುತ್ತಾನೆ.

Association depends in a much greater degree on the occurance of resembling states of feeling than the train of ideas.

I almost think that ideas never recall ideas as far as they are ideas, any more than leaves in a forest create each others motion. The breeze is through then– it is or state of feeling.

ಕೋಲರಿಜ್ 'ಬಯಾಗ್ರಫಿಯಾ ಲಿಟರರಿಯಾ'ದ–೫ರಿಂದ ೯ರವರೆಗಿನ ಅಧ್ಯಾಯಗಳಲ್ಲಿ ಅಸೋಸಿಯೇಶನ್ ತತ್ವದ ಹುಟ್ಟು ಹಾಗೂ ಸ್ವರೂಪಗಳನ್ನು ಕುರಿತು ವಿಚಾರ ವಿಮರ್ಶೆ ಮಾಡಿದ್ದಾನೆ. ಅದರಲ್ಲಿ ಲೋಪದೋಷಗಳು ಕಂಡು ಬಂದಾಗ ತನ್ನ ಸುಸಂಬದ್ಧವಾದ ಇಮ್ಯಾಜಿನೇಶನ್ ಪರಿಕಲ್ಪನೆಯ ಪ್ರತಿಪಾದನೆಗೆ ತೊಡಗಿದ್ದಾನೆ. ಇಮ್ಯಾಜಿನೇಶನ್ ಮನಸ್ಸಿನ ಸ್ವಾಭಾವಿಕ ಜ್ಞಾನ ಗ್ರಹಣ ಕ್ರಿಯೆ; ಇಂದ್ರಿಯಾನುಭವಗಳಿಂದ ಬಿಡಿಬಿಡಿಯಾಗಿ ರೂಪಗೊಳ್ಳುವ ಪ್ರತಿಮೆಗಳನ್ನು ಒಂದುಗೂಡಿಸಿ ಪುನಃ ಸೃಷ್ಟಿಸುವ ಕೆಲಸವನ್ನೂ ಮಾಡುವದರಿಂದ ತನ್ನ ಸಿದ್ಧಾಂತವನ್ನು ಅವನು ಸಂಯೋಜನ ಕಲ್ಪನೆ (esemplastic imagination) ಎಂದು ಹೆಸರಿಸಿದ್ದು ಅರ್ಥಪೂರ್ಣವಾಗಿದೆ.

ಕೋಲರಿಜ್‌ನ 'ಸಂಯೋಜಕ ಕಲ್ಪನೆ'ಯ ಸ್ವರೂಪ

ಮಾನವ ಪ್ರತಿಭೆಯ ಸಮಸ್ತ ಸೃಷ್ಟ್ಯಾತ್ಮಕ ಶಕ್ತಿಗಳನ್ನು ಕೋಲರಿಜ್ ಇಮ್ಯಾಜಿನೇಶನ್ ಸಿದ್ಧಾಂತದಲ್ಲಿ ಸಮೀಕರಿಸಿದ್ದಾನೆ. ಅದರಲ್ಲಿ ಮೂಲಕಲ್ಪನೆ (Primary imagination) ಮತ್ತು ಕಲಾತ್ಮಕ ಕಲ್ಪನೆ (Poetic or secondary imagination) ಎಂದು ಎರಡು ಪ್ರಕಾರಗಳನ್ನು ಪರಿಕಲ್ಪಿಸಿದ್ದಾನೆ.

The imagination then, I consider either primary or secondary. The primary imagination I hold to be the living power and prime agent of all human perception, as a repetition in the finite mind of the eternal act of creation in the infinite I Am. The secondary imagination, I consider to be as an echo of the former, co-existing with the conscious will, and yet still as identical with the primary imagination— in the kind of its agency and only differing in degree and mode of its operation. It dissolves, difuses, dissipates in order to recreate; or where this process is rendered impossible, yet still at all events it struggles to idealize and unify. It is essentially vital, even all objects (as objects) are essentially fixed and dead.[6]

ಮೇಲಿನ ಅವತರಣಿಕೆಯಲ್ಲಿ ಇಮ್ಯಾಜಿನೇಶನ್ ತತ್ವದ ಸ್ವರೂಪ ಹಾಗೂ ಪ್ರಕಾರಗಳ ವಿವರಣೆಯನ್ನು ನೀಡಿದ್ದಾನೆ. ಸೃಷ್ಟಶೀಲ ಕಲ್ಪನೆಯಲ್ಲಿ ಎರಡು ಹಂತಗಳನ್ನು ಪರಿಕಲ್ಪಿಸಿದ್ದಾನೆ. ದಿನನಿತ್ಯದ ಅನುಭವಕ್ಕೆ ಬರುವ ವಸ್ತುಗಳ ಜ್ಞಾನವನ್ನು ಕೊಡುವ ಶಕ್ತಿಯನ್ನು ಮೂಲಕಲ್ಪನೆ (Primary imagination) ಎಂದು ಹೆಸರಿಸುತ್ತಾರೆ. ಇದನ್ನು ಪಂಚೇಂದ್ರಿಯಗಳ ಮುಖಾಂತರ ಮನಸ್ಸಿನಲ್ಲಿ ವಸ್ತು ಪ್ರತಿಮೆಗಳನ್ನು ಮೂಡಿಸುವ ಮೂಲಭೂತವಾದ ಸೃಷ್ಟ್ಯಾತ್ಮಕ ಪ್ರಕ್ರಿಯೆ ಎಂದು ವರ್ಣಿಸಿದ್ದಾರೆ. ಮನಸ್ಸಿನ ಜಾಗೃತ ಹಾಗೂ ಅಜಾಗೃತ ವಲಯಗಳಲ್ಲಿ ಬಿಡಿ ಬಿಡಿಯಾಗಿ ಹರಡಿಕೊಂಡಿರುವ ಅನುಭವಗಳಿಗೆ ತಕ್ಕ ಪ್ರತಿಮೆಗಳನ್ನು ರೂಪಿಸಿ ಕೊಡುವದೇ ಇದರ ಮುಖ್ಯ ಕೆಲಸ. ಇದು ಕೇವಲ ಇಂದ್ರಿಯಾನುಭವಕ್ಕೆ ಸೀಮಿತವಾಗದೇ ದೈವೀ ಸೃಷ್ಟಿಯ ಅಮೂರ್ತ ವಿಚಾರಗಳನ್ನು ಮೂರ್ತಗೊಳಿಸುವ ಕೆಲಸವನ್ನು ಮಾಡುತ್ತದೆ. It is interpretation of divine nature than our own ಎಂದರೆ ಅಂತರಾಳದಲ್ಲಿ ಹುದುಗಿದ ದೈವೀ ಪ್ರಜ್ಞೆಯ ಅನುಭವವನ್ನು ಮೂರ್ತಿಗೊಳಿಸುತ್ತದೆ ಎಂಬ ಮಾತುಗಳು ಗಮನಾರ್ಹವಾಗಿವೆ. ಇದು ಸಾಮಾನ್ಯರ ಮಾತಾಯಿತು. ಕಲಾವಿದನು ಬಳಸಿಕೊಳ್ಳುವ ಕಲ್ಪನೆಯ ಸ್ವರೂಪವೆಂತಹದು ? ಈ ಪ್ರಶ್ನೆಗೆ ಉತ್ತರವನ್ನು ಅವನ ಕಾವ್ಯಕಲ್ಪನೆ(Poetic or secondary imagination)ಯಲ್ಲಿ ಕಾಣಬಹುದಾಗಿದೆ. ಮೂಲಕಲ್ಪನೆಯಲ್ಲಿ ಬಿಡಿಬಿಡಿಯಾಗಿ ಸೃಷ್ಟಿಗೊಂಡ ಪ್ರತಿಮೆಗಳನ್ನು ಸಂಯೋಜಿಸಿ ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುವ ಇದು ಮೂಲಕಲ್ಪನೆಗಿಂತಲೂ ಹೆಚ್ಚು ಪ್ರಭಾವಿಯಾದ ಶಕ್ತಿ. ಪ್ರಕೃತಿಯು ಪ್ರತಿಮೆಗಳಲ್ಲಿ ಹಂಚಿಹೋಗಿರುವ ಎಲ್ಲ ಬೆಳಕಿನ ಸೆಳಕುಗಳನ್ನು 'ಫೋಕಸ್' ಮಾಡುವ ಸಾಮರ್ಥ್ಯವು ಕಲಾವಿದನ ಪ್ರತಿಭೆಗೆ ಇರುತ್ತದೆ. ಪ್ರಜ್ಞೆಯ ಆಳದಲ್ಲಿ ಹುದುಗಿದ ಪ್ರತಿಮೆಗಳು ಹಾಗೂ ಅಸ್ಪಷ್ಟ ಅಮೂರ್ತ ಪರಿಕಲ್ಪನೆಗಳನ್ನು ಸ್ಫುಟ

6. Biographia Literaria- Edited by Earnest Rhys- page 159-60.

ಗೊಳಿಸಿ, ಸಮನ್ವಯಗೊಳಿಸಿ ವ್ಯವಸ್ಥಿತವಾದ ಕಲಾಕೃತಿಯೊಂದರ ನಿರ್ಮಾಣಕ್ಕೆ ಇದು ಪ್ರೇರಕವಾಗುತ್ತದೆ. ಕಾಂಟ್‌ನು ದೇವರು, ಜಗತ್ತು, ಆತ್ಮಸೌಂದರ್ಯ ಮೊದಲಾದ ಅಮೂರ್ತ ವಿಚಾರಗಳನ್ನು ಕೇವಲ ಗೃಹಿಕೆ (Hypothesis) ಎಂದು ಕರೆದರೆ ಇವಕ್ಕೆ ಸಾಂಕೇತಿಕ ಅಭಿವ್ಯಕ್ತಿ ನೀಡುವ ಕ್ರಿಯೆ ಕಾವ್ಯಕಲ್ಪನೆಗೆ ಸಾಧ್ಯವಾಗುತ್ತದೆಂಬುದು ಕೊಲರಿಜ್‌ನ ಅಭಿಮತವಾಗಿದೆ. ಕಾವ್ಯಕಲ್ಪನೆಯು ಸೃಷ್ಟಿಸುತ್ತಲೇ ಅವುಗಳನ್ನು ಅರಿಯುತ್ತದೆ ಎನ್ನುತ್ತಾನೆ. ಕಲಾವಿದನು ಬಾಹ್ಯ ಜಗತ್ತಿನ ಅನುಭವಗಳನ್ನು ಇಂದ್ರಿಯಗಳ ಮೂಲಕವೇ ಪಡೆಯಬೇಕು. ಎಲ್ಲ ಲಲಿತ ಕಲೆಗಳು ಬಾಹ್ಯ ಜಗತ್ತಿನ ಅನುಭವಗಳಿಗೆ ಸಂಬಂಧಪಡುತ್ತವೆ. ಆದರೆ ಕಲಾಸೃಷ್ಟಿಗೆ ಪ್ರಚೋದನೆ ನೀಡುವ ಸಂವೇದನೆಯ ದೈತ್ಯ ಶಕ್ತಿಯೊಂದು ಹಿನ್ನೆಲೆಯಲ್ಲಿ ಇರಲೇಬೇಕು. "ಮಂಜಿನಿಂದ ಆಚ್ಛಾದಿತವಾದ ಕಿಟಕಿಯ ಸರಳುಗಳಲ್ಲಿ ಹರಿದು ಬರುವ ಚಂದ್ರ ಕಿರಣಗಳನ್ನು ನೋಡುತ್ತಿರುವಂತೆ ನನ್ನ ಮನಸ್ಸಿನಲ್ಲಿಯೇ ಇದ್ದ ಅವ್ಯಕ್ತ ಸತ್ಯವೊಂದಕ್ಕೆ ಅಭಿವ್ಯಕ್ತಿ ನೀಡುವ ಸಾಂಕೇತಿಕ ಭಾಷೆಯ ಶೋಧಕ್ಕಾಗಿ ತಡಕಾಡುತ್ತೇನೆ. ನನ್ನಲ್ಲಿಯೇ ಹುದುಗಿದ ಯಾವುದೋ ಒಂದು ಮರೆತು ಹೋದ ಸತ್ಯದ ಅಸ್ಪಷ್ಟ ಅನಿಸಿಕೆ ಮೂಡಿನಿಲ್ಲುತ್ತದೆ .... "ಕೊಲರಿಜ್‌ನ ಈ ಮಾತುಗಳು ಹಾಗೂ ಕೆಳಗಿನ ಅವತರಣಿಕೆಗಳು ಕವಿಯ ಭವಿಷ್ಯ ಕಲ್ಪನೆ(Prophetic imagination)ಯ ವಿಚಾರವನ್ನು ಸ್ಪಷ್ಟಪಡಿಸುತ್ತವೆ.

O lady we receive but what we give
And in our life alone does Nature live :
Ours is her wedding-garment, ours her shroud
Oh from the soul itself must issueforth
A light, a glary, a fair luminous cloud Enveloping the Earth—
And from the soul itself must there be sent
A sweet and potent voice, of its own birth,
Of all sweet sounds the life and element

Heard melodies are sweet but those Unheard are sweeter still—

ಮೇಲಿನ ಅವತರಣಿಕೆಗಳಲ್ಲಿ ಕೊಲರಿಜ್‌ನ ವಿಚಾರಗಳಿಗೆ ಪುಷ್ಟಿ ದೊರೆಯುತ್ತದೆ. ಕಾವ್ಯಕಲ್ಪನೆಯಲ್ಲಿ ಭಾವನೆ, ಚಿಂತನೆ, ಸಂಸ್ಕೃತಿಯಲ್ಲಿ ಅಡಗಿದ ಪ್ರಾಚ್ಯ ಪ್ರತೀಕ (Archeatycal images) ಗಳೆಲ್ಲವೂ ಪರಿವರ್ತನೆಗೊಂಡು ಹೊಸದಾಗಿ ಸಂಯೋಗಗೊಳ್ಳುತ್ತವೆ. ಈ ಸಂಯೋಗ ಕ್ರಿಯೆಯೇ ಕಲಾಸೃಷ್ಟಿಯ ಮೂಲಭೂತವಾದ ಅಂಗ. ಕಲಾಸೃಷ್ಟಿಯಲ್ಲಿ ಪ್ರತ್ಯೇಕ ಪ್ರತಿಮೆ ಪ್ರತೀಕಗಳ ಸೃಜನಕ್ರಿಯೆ ಎಷ್ಟು ಪ್ರಮುಖವೋ ಅಷ್ಟೇ ಅವೆಲ್ಲವನ್ನೂ ಸಂಯೋಜಿಸುವ ಕ್ರಿಯೆಯೂ ಮಹತ್ವದ್ದು ಎಂದು ಭಾವಿಸಿ, ಕೊಲರಿಜ್ ತನ್ನ ಸಿದ್ಧಾಂತಕ್ಕೆ ಸಂಯೋಜಕ ಕಲ್ಪನೆ

(Esemplastic imagination) ಎಂಬ ಸಾರ್ಥಕ ಹೆಸರನ್ನಿತ್ತಿದ್ದಾನೆ. ಕಲಾ ಸೃಷ್ಟಿ ಪ್ರಕ್ರಿಯೆ(creative process)ಯ ಸಾಮರ್ಥ್ಯವನ್ನು ಸ್ಪಷ್ಟಪಡಿಸುವದೇ ಕೊಲರಿಜ್‌ನ ಇಮ್ಯಾಜಿನೇಶನ್ ಸಿದ್ಧಾಂತದ ಪ್ರಧಾನ ಆಶಯವಾಗಿದೆ. ಪ್ರಖ್ಯಾತ ಆಧುನಿಕ ವಿಮರ್ಶಕನಾದ ಟಿ.ಎಸ್. ಎಲಿಯಟ್‌ನ ಕೆಳಗಿನ ಮಾತುಗಳು ಕೊಲರಿಜ್‌ನ ವಿಚಾರಗಳನ್ನು ಸಮರ್ಥಿಸುತ್ತವೆ,

It is not the greatness, the intensity of the emotions, the components, but the intensity of the artistic process, the pressure so to speak under which the fusion takes place, that counts.

ಕೊಲರಿಜ್‌ನ ಕಲ್ಪನಾಸಿದ್ಧಾಂತವು ಮನಸ್ಸಿನ ಸಮಗ್ರ ಶಕ್ತಿಗಳನ್ನು, ಎಂದರೆ– ಬುದ್ಧಿ, ಸಂಕಲ್ಪ, ಜ್ಞಾನಗ್ರಹಣಕ್ಕೆ ಅವಶ್ಯಕವಾದ ಇಂದ್ರಿಯ ಶಕ್ತಿಗಳು, ಭಾವನೆಗಳು, ಸಂವೇದನೆಗಳು– ಇವೆಲ್ಲವನ್ನೂ ಒಳಗೊಳ್ಳುತ್ತದೆ. ಕಲಾವಿದನು ತನ್ನ ಸೃಷ್ಟ್ಯಾತ್ಮಕ ಶಕ್ತಿಯ ಅತ್ಯುನ್ನತ ಸ್ತರದಲ್ಲಿ ಇವನ್ನು ಸಂಯೋಗಗೊಳಿಸುತ್ತಾನೆ. ಜಗತ್ತಿನ ಸಮಗ್ರತೆಯ ಮೇಲೆ ತನ್ನ ವ್ಯಕ್ತಿತ್ವದ ಸಮಗ್ರತೆಯನ್ನು ಪ್ರತಿಷ್ಠಾಪಿಸುವದೇ ಕಲಾವಿದನ ಆದರ್ಶವಾಗಿರುತ್ತದೆ ಎಂಬ ಕೊಲರಿಜ್‌ನ ವಿಚಾರ ಮನನೀಯವಾಗಿದೆ.

ವರ್ಡ್ಸ್‌ವರ್ತನ ಕಾವ್ಯದಿಂದ ಪಡೆದ ಸ್ಫೂರ್ತಿ, ಪ್ರೇರಣೆ

ವರ್ಡ್ಸ್‌ವರ್ತನ ಕಾವ್ಯದ ಅಧ್ಯಯನದಿಂದಲೇ ತನ್ನ ಕಲ್ಪನಾ ಸಿದ್ಧಾಂತಕ್ಕೆ ಸ್ಫೂರ್ತಿ ಪ್ರೇರಣೆಗಳು ದೊರೆತವೆಂದು ಕೊಲರಿಜ್ ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡಿದ್ದಾನೆ. "ಅವನ ಕಾವ್ಯದಲ್ಲಿ ಉತ್ಕೃಷ್ಟ ಕಲ್ಪನಾಶಕ್ತಿಯ ಹೊಳವುಗಳಿವೆ. ಒತ್ತಾಯದ ವಿಚಾರ, ರಚನೆ, ಇಲ್ಲವೇ ಪ್ರತಿಮೆಗಳ ಗೊಂದಲ ಇವಾವವೂ ಅಲ್ಲಿ ಇಲ್ಲ. ಕವಿಗೆ ಬೇಕಾದ ಸಂವೇದನೆಯು, ನಿರಂತರ ಅಂತರ್ ಪ್ರವಾಹ (A continuous under-current of feeling) ವಿರುವದು ಅನುಭವಕ್ಕೆ ಬಂದಿತೆಂದು ಹೃದಯ ದುಂಬಿ ಹೇಳಿಕೊಂಡಿದ್ದಾನೆ. ತಾನು ಓದಿದ ಒಂದು ವರ್ಡ್ಸ್‌ವರ್ತನ ಹಸ್ತಪ್ರತಿಯ ಕವನದಲ್ಲಿ ಬುದ್ಧಿ ಹಾಗೂ ಹೃದಯ; ಪರಿಭಾವನೆಯ ಸತ್ಯ ಮತ್ತು ಪರಿಭಾವನೆಗೊಳಗಾದ ವಸ್ತುವನ್ನು ಪರಿವರ್ತಿಸುವ, ನವೀನವಾಗಿ ರೂಪಿಸುವ ಕಲ್ಪನಾಶಕ್ತಿ– ಅಂತೆಯೇ ವಸ್ತು–ಸನ್ನಿವೇಶಗಳು, ಅವುಗಳ ಹಿಂದಿರುವ ಆದರ್ಶ ಜಗತ್ತಿನ ವಾತಾವರಣ ಮತ್ತು ಧ್ವನಿಯನ್ನು ಪ್ರಸರಿಸುವ ಶಕ್ತಿ–ಇವೆಲ್ಲ ಆದರ್ಶ ರೂಪದಲ್ಲಿ, ಸಮನ್ವಯಗೊಂಡುದನ್ನು ಕಂಡುಕೊಳ್ಳುತ್ತಾನೆ. ಕಾವ್ಯವು ಕೇವಲ ವಿಚಾರಗಳನ್ನು ಸಮನ್ವಯಗೊಳಿಸುವ ಯಾಂತ್ರಿಕ ಕ್ರಿಯೆಯಲ್ಲ ಎಂಬ ಅರಿವನ್ನು ಪಡೆಯುತ್ತಾನೆ. ಮಾನವನ ಮನಸ್ಸಿನ ವಿಶ್ಲೇಷಣೆ ಮಾಡಿದರೆ, ಅದೊಂದು ಅನೇಕ ಪ್ರಭಾವಗಳು, ಪ್ರತಿಮೆಗಳು ಮತ್ತು ಅನಿಸಿಕೆಗಳ ಉಗ್ರಾಣವೆಂಬ ಸತ್ಯವು ಗಮನಕ್ಕೆ ಬರುತ್ತದೆ.

ತಮ್ಮ ಸ್ಮರಣೆಯಲ್ಲಿ ಮೃತರೂಪದಲ್ಲಿ ಕೂಡಿಬಿದ್ದ ಪ್ರತಿಮೆಗಳನ್ನು ಯಾಂತ್ರಿಕವಾಗಿ ಸಂಯೋಜನೆಗೊಳಿಸಿ ಕೃತಿ ರಚಿಸುವವರನ್ನು ಕೊಲರಿಜ್ 'ಫ್ಯಾನ್ಸಿಫುಲ್ ಕವಿ'ಗಳೆಂದು ಹೆಸರಿಸುತ್ತಾನೆ. ಇದಕ್ಕೆ ವಿರುದ್ಧವಾದ ಪದವೇ ಇಮ್ಯಾಜಿನೇಟಿವ್. ವರ್ಡ್ಸ್‌ವರ್ತ ಇಮ್ಯಾಜಿನೇಟಿವ್ ಕವಿಗಳ ಪಂಕ್ತಿಗೆ ಸೇರುತ್ತಾನೆ. ಅವನು ಇಂದ್ರಿಯಾನುಭವಗಳನ್ನು ತೀವ್ರವಾಗಿ ಸಂವೇದನೆಗೆ ಒಳಪಡಿಸುತ್ತಾನಾದ್ದರಿಂದ ಅವು ಸೌಂದರ್ಯರೂಪವನ್ನು ಪಡೆಯುತ್ತವೆ. ಅವನ ಕಾವ್ಯವನ್ನು ಓದಿದ ತತ್‌ಕ್ಷಣವೇ ನಮ್ಮ ಹೃದಯವು ಬಿಸಿಯಾಗುತ್ತದೆ. ಬುದ್ಧಿ ಅದನ್ನು ಅರಿತು ಅಪ್ಪಿಕೊಳ್ಳುತ್ತದೆ. ಕಾವ್ಯಾನುಭವದಲ್ಲಿ ಹೃದಯ ಹಾಗೂ ಬುದ್ಧಿಗಳೆರಡನ್ನೂ ಬೆಳಗುವ ಶಕ್ತಿ ಇರುತ್ತದೆ. ಇದು ಬುದ್ಧಿ ಹಾಗೂ ಭಾವನೆಗಳ ಭಿನ್ನಸ್ತರಗಳನ್ನು ಸಂಯೋಜಿಸುವ ಶಕ್ತಿ. ಇದನ್ನೇ ಕೊಲರಿಜ್ ಸಂಯೋಜಕ ಕಲ್ಪನೆ ಎಂದು ಕರೆದದ್ದು.

ರಮ್ಯ ಕಾವ್ಯದ ಧೋರಣೆಯನ್ನು ಒಪ್ಪಿಕೊಂಡ ಕೊಲರಿಜ್ ಸತ್ಯಶೋಧನೆಯಲ್ಲಿ ಕಾವ್ಯವು ತತ್ವಜ್ಞಾನಕ್ಕೆ ಸಮನಾದುದೆಂದು ಬಗೆದಿದ್ದಾನೆ. "No man is ever yet a great poet, without being a profound philosopher."

ಕೊಲರಿಜ್‌ನ ಈ ಹೇಳಿಕೆಯನ್ನು ಅತಿರಂಜಿತವೆಂದು ಎ. ಇ. ಪಾವೆಲ್ ಎಂಬ ವಿಮರ್ಶಕ ಅಭಿಪ್ರಾಯ ಪಟ್ಟಿದ್ದಾನೆ. ಕೊಲರಿಜ್ ತತ್ವಜ್ಞಾನದ ಗುರಿ ಸತ್ಯವಾದರೆ, ಕಾವ್ಯದ ಗುರಿ ರಸಾನುಭವ —ಎಂದು ಹೇಳಿದುದನ್ನು ಗಮನಿಸಬೇಕು. ಭಾವನೆ ಹಾಗೂ ವಿಚಾರಗಳಲ್ಲಿ ಏಕಕಾಲಕ್ಕೆ ಸಮನ್ವಯಗೊಳಿಸುವ ಶಕ್ತಿಯನ್ನು ಪಡೆದುದು ಮಾತ್ರ ಉತ್ತಮ ಕಾವ್ಯ ಎನ್ನುವದು ಅವನ ಅಚಲ ನಿಲುವೆಯಾಗಿದೆ.

ವರ್ಡ್ಸ್‌ವರ್ತನ ಕಾವ್ಯದ ವ್ಯಾಖ್ಯೆ "Emotions recollected in tranquility" ಎಂಬುದರಲ್ಲಿ Emotions ಕಾವ್ಯದ ವಸ್ತುವಾದರೆ ಪ್ರಶಾಂತ ಸ್ಮರಣೆ (tranquil recollection) ಎನ್ನುವದು ಕಾವ್ಯದ ರಚನಾಕ್ರಿಯೆ ಎಂದರೆ ಅಭಿವ್ಯಕ್ತಿಗೆ ಸಂಬಂಧಿಸಿದೆ.

"Images become proofs of original genius only so far as they are modified by predominent passion".

ಎಂಬ ಕೊಲರಿಜ್‌ನ ಹೇಳಿಕೆಯನ್ನು ಲಕ್ಷಿಸಿದರೆ ಅವರಿಬ್ಬರ ಕಾವ್ಯಧೋರಣೆಯಲ್ಲಿನ ವ್ಯತ್ಯಾಸವು ಸ್ಪಷ್ಟವಾಗುತ್ತದೆ. ಕಾವ್ಯ ರಚನೆಯ ಅಂತಃಸತ್ವವು ಭಾವನೆಗಳೇ ಆದುದರಿಂದ ಕಾವ್ಯದ ವ್ಯಾಖ್ಯೆ ಕೊಡುವಾಗ ಕೊಲರಿಜ್ ಭಾವನೆಗಳ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದದ್ದು ಗಮನಾರ್ಹವಾಗಿದೆ.

ಕಾಂಟ್ ಹಾಗೂ ಕೊಲರಿಜ್

ಕೊಲರಿಜ್‌ನ ಇಮ್ಯಾಜಿನೇಶನ್ ಸಿದ್ಧಾಂತದ ಮೇಲೆ ಕಾಂಟ್‌ನ "The critiqsue pure Reason" ದ ಅನೇಕ ವಿಚಾರಗಳು ಪ್ರಭಾವ ಬೀರಿವೆಯೆಂದು

ಹೇಳಲಾಗುತ್ತಿದೆ. ಕಾಂಟ್‌ನ ದೃಷ್ಟಿಯಲ್ಲಿ ಮಾನವ ಜ್ಞಾನಗ್ರಹಣ ಶಕ್ತಿಗಳು ಎರಡು : ತಿಳುವಳಿಕೆ (understanding) ಮತ್ತು ವಿಚಾರಶಕ್ತಿ (reason). ಕೊಲರಿಜ್‌ನ ಮೂಲ ಕಲ್ಪನೆ (Primary imagination) ಎಂಬುದು ತಿಳುವಳಿಕೆಗೆ ಹಾಗೂ ಕಾವ್ಯ ಕಲ್ಪನೆ (secondary imagination) ಎನ್ನುವದು ವಿಚಾರ ಶಕ್ತಿ ಎಂಬುದಕ್ಕೆ ಸಂವಾದಿಯಾಗಿವೆ. ಇವೆರಡು ಶಕ್ತಿಗಳನ್ನು ಸಂಯೋಗಿಸುವ ಆತ್ಮಶಕ್ತಿಯೊಂದು ಹಿನ್ನೆಲೆಯಲ್ಲಿ ಇದೆ ಎನ್ನುತ್ತಾನೆ ಕೊಲರಿಜ್. ಆತ್ಮದ ಅಸ್ತಿತ್ವವನ್ನು ಅಲ್ಲಗಳೆದರೆ ತಿಳುವಳಿಕೆ ಹಾಗೂ ವಿಚಾರಗಳು ನಿಜವಾದ ಜ್ಞಾನಕ್ಕೆ ಅನರ್ಹವಾಗಿರುತ್ತವೆಂಬುದು ಅವನ ವಿಚಾರ. ಮನಸ್ಸು ಹಾಗೂ ವಸ್ತುಗಳನ್ನು ಸಂಯೋಜನೆಗೊಳಿಸುವದು ಹೇಗೆ ಎನ್ನುವದೇ ತತ್ವಜ್ಞಾನದ ಮೂಲ ಸಮಸ್ಯೆ. ವಸ್ತು ಸತ್ಯವನ್ನು ಮೂಲವೆಂದು ಗ್ರಹಿಸಿದರೆ ಮನಸ್ಸನ್ನು ವಸ್ತುವಿನ ದೃಷ್ಟಿಯಲ್ಲಿ ವಿವರಿಸಬೇಕಾಗುತ್ತದೆ; ಮನಸ್ಸನ್ನು ಮೂಲವೆಂದು ಗ್ರಹಿಸಿದರೆ ವಸ್ತುವನ್ನು ಮನಸ್ಸಿನ ದೃಷ್ಟಿಯಲ್ಲಿ ವಿವರಿಸಬೇಕಾಗುತ್ತದೆ; ಜ್ಞಾತೃ–ಜ್ಞೇಯ ಇಲ್ಲವೇ ಮನಸ್ಸು-ವಸ್ತು ಇವುಗಳ ಗೊಂದಲವು ತತ್ವಜ್ಞಾನದ ಇತಿಹಾಸದಲ್ಲಿ ಅತ್ಯಂತ ಹಳೆಯದು. ಕೊಲರಿಜ್ ಜ್ಞಾತೃ–ಜ್ಞೇಯಗಳೆರಡನ್ನೂ ಒಳಗೊಳ್ಳುವ ಮಾನವಪ್ರಜ್ಞೆಯು imagination ಎಂದು ಗ್ರಹಿಸಿದ್ದಾನೆ.

'The consciousness of the self must include the subject and object, perceiver and the perceived, the knower the known the infinite and the finite, the mind is the matter'.

ಅಂತರಂಗವನ್ನು ಬಹಿರಂಗಗೊಳಿಸುವ ಪ್ರಕ್ರಿಯೆಯನ್ನು ಕೊಲರಿಜ್ ಇಮ್ಯಾಜಿನೇಶನ್ ಎಂದು ಕರೆಯುತ್ತಾನೆ ತಿಳುವಳಿಕೆ ಹಾಗೂ ವಿಚಾರಗಳಲ್ಲಿ ಒಂದು ಕ್ರಿಯಾತ್ಮಕ (active) ಇನ್ನೊಂದು ಕ್ರಿಯಾರಹಿತ (passive). ಇವು ಮಾನವ ಪ್ರಜ್ಞೆಯ ಎರಡು ಮಗ್ಗಲುಗಳು. ಅಂದರೆ ಪ್ರಜ್ಞೆ ಮತ್ತು ಉಪಪ್ರಜ್ಞೆ ಹಾಗೂ ಮನಸ್ಸಿನ ಅನೇಕ ಅಮೂರ್ತ ಕಲ್ಪನೆಗಳನ್ನು ಸಂಯೋಜಿಸುವ ಶಕ್ತಿಯನ್ನು ತತ್ವಜ್ಞಾನದ ಪರಿಭಾಷೆಯಲ್ಲಿ ಇಮ್ಯಾಜಿನೇಶನ್ ಎನ್ನಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಅವನ ಇಮ್ಯಾಜಿನೇಶನ್ ಪರಿಕಲ್ಪನೆಯಲ್ಲಿ ವ್ಯಕ್ತಿ ಪ್ರಜ್ಞೆ ಹಾಗೂ ಸಮಷ್ಟಿಪ್ರಜ್ಞೆ ಇವೆರಡೂ ಸಂಪೂರ್ಣವಾಗಿ ಬೆರೆತುಕೊಂಡಿರುತ್ತವೆ. ಆದ್ದರಿಂದ ಅವನು ಪ್ರತಿಭಾವಂತ ವ್ಯಕ್ತಿಯು ಪ್ರಕೃತಿಯಲ್ಲಿ ತನ್ನ ಪ್ರತಿಬಿಂಬವನ್ನೇ ಕಾಣುತ್ತಾನೆ ಎಂದು ಸಾರಿದ್ದಾನೆ.

ಬೆಡಗಿನ ವಚನಗಳು

ಬಿ. ವ್ಹಿ. ಮಲ್ಲಾಪುರ

೧

"ಕನ್ನಡದ ಉಪನಿಷತ್ತು." "ಕನ್ನಡಸಾಹಿತ್ಯದ ಜೀವರತ್ನ" "ಕನ್ನಡದ ಚೆಲ್ವು" "ಶರಣರ ಹೃದಯವಿದ್ರಾವಕಗೀತೆ" "ವಿಶ್ವಭಾರತಿಗೆ ಕನ್ನಡದ ವಿಶಿಷ್ಟ ಕೊಡುಗೆ"- ಮುಂತಾಗಿ, ವಿದ್ವಾಂಸರ ಹೊಗಳಿಕೆಗೆ ಪಾತ್ರವಾಗಿರುವ ವಚನಸಾಹಿತ್ಯ ಕನ್ನಡಿಗರ ಅಮೌಲ್ಯ ಆಸ್ತಿ. ಬದುಕು-ಬರಹಗಳ ಮಧ್ಯೆ ಬಿರುಕಿರದ ವಚನಕಾರರು, ಜನ ಪದರ ಆಡುನುಡಿಗೆ ಬಹಳ ಸಮೀಪವಿರುವ ಭಾಷೆಯನ್ನೇ ತಮ್ಮ ವಿವಿಧ ಬಗೆಯ ಅನುಭವಗಳ ಅಭಿವ್ಯಕ್ತಿಗೆ ದುಡಿಸಿಕೊಂಡಿರುವುದೂ ಒಂದು ವಿಶೇಷ.

ವಚನಸಾಹಿತ್ಯ, ಸಮೃದ್ಧವಾಗಿರುವಂತೆ ಸತ್ವಯುತವೂ ಆಗಿದೆ. ತಾತ್ವಿಕ ಹಿನ್ನೆಲೆಯಲ್ಲಿ ವಚನಗಳನ್ನು ಷಟ್‌ಸ್ಥಲಾನುಗುಣವಾಗಿಯೂ, ನೂರೊಂದು ಸ್ಥಲಾನು ಗುಣವಾಗಿಯೂ ಸಂಕಲಿಸಿರುವುದುಂಟು. ಬೇರೆ ರೀತಿಯಲ್ಲಿಯೂ ಅವನ್ನು ವಿಭಾಗಿಸ ಲಾಗಿದೆ. 'ಬೆಡಗಿನ ವಚನಗಳು' ವಚನ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ.

೨

'ಬೆಡಗು' ಶಬ್ದಕ್ಕೆ ರೂಢಿಯಲ್ಲಿ ಸೌಂದರ್ಯ, ಅದ್ಭುತ, ಒಯ್ಯಾರ, ಇತ್ಯಾದಿ ಅರ್ಥಗಳಿವೆ. 'ಕವಿರಾಜಮಾರ್ಗಕಾರ' ಪರಮಾಗಮಕೋವಿದನಾಗದೆ ಪೂರ್ವಕಾವ್ಯ ರಚನೆಗಳನ್ನು ಕಲಿಯದೆ, ಕವಿಕೃತಿಯಲ್ಲಿ ಅವನು ಪ್ರಯೋಗಿಸಿದ ಪದಗಳಲ್ಲಿ 'ಜಾಣು' 'ಬೆಡಂಗು' ಬರುವುದು ಸಾಧ್ಯವಿಲ್ಲ— ಎಂಬರ್ಥ ಬರುವಂತೆ ಹೇಳಿದ್ದಾನೆ. 'ಕೃತಿ ಯಲ್ಲಿ ಜಾಣ್' ಮತ್ತು 'ಪದಗಳಲ್ಲಿ ಬೆಡಂಗು'— ಎಂಬುದಕ್ಕೆ ಅವನು ವಿಶೇಷ ಅರ್ಥ ಕಲ್ಪಿಸಿರುವಂತೆ ತೋರುತ್ತದೆ. ಅವನ ಪ್ರಕಾರ 'ಬೆದಂಡೆಗಬ್ಬ' ಜಾತಿಜಾಣ್ ಮತ್ತು ಬೆಡಂಗಿನಿಂದ ಕೂಡಿರಬೇಕು. "ತಳಿರೊಳ್ ನೀನೆ ಬೆಡಂಗನಯ್" "ಇರಿವ ಬೆಡಂಗ" ಎಂಬ ಪಂಪ-ರನ್ನರ ಮಾತಿನಲ್ಲಿ ಬರುವ 'ಬೆಡಂಗ' ಶಬ್ದಕ್ಕೆ ಸುಂದರ ಮತ್ತು ಅದ್ಭುತ ಅರ್ಥಗಳಿವೆ.

'ಅತಿಶಯ ವರ್ಣಕ್ರಮಂ ಒಂದು ತೆರಂ ಅದರ ರಚನೆಯೊಂದು ತೆರಂ, ಅರ್ಥಂ ಒಂದು ತೆರಂ ಬೆಡಗುಂ ಬೇರೊಂದು ತೆರಂ ನುಡಿಗೆ' ಎಂಬ ಪೊನ್ನನ 'ಶಾಂತಿ ಪುರಾಣ'ದ ಮಾತು 'ಬೆಡಗು' ಶಬ್ದಕ್ಕೆ ಇನ್ನೊಂದು ವಿಶಿಷ್ಟ ಅರ್ಥವಿರುವುದನ್ನು

ಸೂಚಿಸುವಂತೆ ತೋರುತ್ತದೆ. ಇಲ್ಲಿ ಅರ್ಥ ಒಂದು ತೆರನಾದರೆ ಬೆಡಗು ಬೇರೊಂದು ತೆರ ಎಂಬ ಮಾತು ಗಮನೀಯ. ಶಬ್ದದ ವಾಚ್ಯಾರ್ಥ ಒಂದು ತೆರನಾಗಿದ್ದರೆ ಅದರಿಂದ ಧ್ವನಿಸುವ ಬೇರೊಂದರ್ಥವನ್ನೇ ಅವನು ಬೆಡಗೆಂದು ಕರೆದಿದ್ದಾನೆ. ಬೆಡಗಿನ ಅರ್ಥವನ್ನು ಈ ರೀತಿ ಗ್ರಹಿಸಿದ ಪೊನ್ನ ಅದನ್ನು ತನ್ನ 'ಭುವನೈಕರಾಮಾಭ್ಯುದಯ'ದಲ್ಲಿ ಸಾಧಿಸಿರಬೇಕು. ಆ ಕೃತಿ ಸಿಕ್ಕಿಲ್ಲ. ನಯಸೇನ, ರುದ್ರಭಟ್ಟರು ಆ ಕೃತಿಯನ್ನು ಓದಿ ತಿಳಿದವರಾಗಿರಬೇಕು. ಆದುದರಿಂದಲೇ ಅವರು ತಮ್ಮ ಕೃತಿಗಳಲ್ಲಿ ಪೊನ್ನನ ಬೆಡಂಗು ಸನ್ನಿದವಾಗಿರಲಿ ಎಂದು ಬಯಸಿದ್ದಾರೆ.

ಪೌರಾಣಿಕ ಅಥವಾ ಲೌಕಿಕ ಕಥೆಯೊಂದರಲ್ಲಿ ತಮ್ಮ ಕಾಲದ ರಾಜಕೀಯ ಧ್ವನಿ ಹುದುಗಿರುವಂತೆ ಕೃತಿ ರಚಿಸಿದ ಉದಾಹರಣೆಗಳು ಕನ್ನಡದಲ್ಲಿವೆ. ಪಂಪ-ರನ್ನರು ಅದನ್ನು ಬಾಯಿಬಿಟ್ಟು ಹೇಳಿದ್ದಾರೆ. ಆಂಡಯ್ಯ ಹಾಗೆ ಹೇಳದೆ 'ಬನವಾಸಿಯ ಕದಂಬದೊರೆ ಕಾಮದೇವ ಮತ್ತು ಹೊಯ್ಸಳ ವೀರಬಲ್ಲಾಳರಿಗೆ ಹಾನುಗಲ್ ಕೋಟೆಗಾಗಿ ನಡೆದ ಕಾಳಗದ ಐತಿಹಾಸಿಕ ಘಟನೆ' ತನ್ನ 'ಕಬ್ಬಿಗರಕಾವ'ದಲ್ಲಿ ಧ್ವನಿಸುವಂತೆ ಮಾಡಿದ್ದಾನೆಂದು ವಿದ್ವಾಂಸರ ಅಭಿಪ್ರಾಯ. 'ಭುವನೈಕರಾಮಾಭ್ಯುದಯ'ದಲ್ಲೂ ಪೊನ್ನ, ರಾಷ್ಟ್ರಕೂಟ ಮೂರನೆಯ ಕೃಷ್ಣನು ರಾಜಾದಿತ್ಯ ಚೋಳನನ್ನು ಯುದ್ಧದಲ್ಲಿ ಸೋಲಿಸಿದ ಐತಿಹಾಸಿಕ ಘಟನೆ, ತನ್ನ ಕೃತಿಯಲ್ಲಿ ಧ್ವನಿಸುವಂತೆ ಬರೆದಿರುವ ಸಾಧ್ಯತೆಯಿದೆ. ಅಂತೂ 'ಕಾವ್ಯದಲ್ಲಿ ಕಥೆಯ ನೇರವಾದ ಅರ್ಥದೊಂದಿಗೆ ಆ ಕಾಲದ ರಾಜಕೀಯ ಚರಿತ್ರೆ ಅಥವಾ ಒಂದು ಘಟನೆ ಧ್ವನಿಸುವಂತೆ ಹೇಳುವ ಕೌಶಲವನ್ನು' ಒಂದು ದೃಷ್ಟಿಯಿಂದ ಬೆಡಗೆಂದು ಕರೆಯಬಹುದು. ಕವಿರಾಜಮಾರ್ಗಕಾರ ಇದನ್ನೇ 'ಜಾಣ್' ಎಂದು ಕರೆದು, ಪದಗಳು ಧ್ವನಿಸುವ ಬೇರೊಂದರ್ಥವನ್ನು ಬೆಡಗೆಂದು ಕರೆದಿರುವಂತೆ ಕಾಣುತ್ತದೆ.

"ಬಾಳಿಗೆ ಕಡಗು ಸೂಳೆಗೆ ಬೆಡಗು" "ಬೆಡಗು ಮಾಡುವಾಕಿ ಮಡಗಿ ಬೀಳದೆ ಇರಳು" ಇತ್ಯಾದಿಗಳಲ್ಲಿ 'ಬೆಡಗು' ಶಬ್ದಕ್ಕೆ ಒಯ್ಯಾರ, ಒನಪು ಅರ್ಥವಿದೆ. ಜಾತಿಯಲ್ಲಿಯ ಉಪಜಾತಿಯನ್ನು ಸೂಚಿಸಲು 'ಬೆಡಗು' ಶಬ್ದ ಪ್ರಯೋಗವಾಗುತ್ತದೆ. ಕುರುಬರಲ್ಲಿ 'ಅರಿಣೆ ಬೆಡಗು, ಬಾಸಿಂಗದ ಬೆಡಗು' ಇರುವುದನ್ನು ಕೇಳಿದ್ದೇನೆ.

೩

ವೀರಶೈವ ಕೃತಿಗಳಲ್ಲಿ 'ಬೆಡಗು' ಶಬ್ದಕ್ಕಿರುವ ಅರ್ಥವನ್ನು ಪರಿಶೀಲಿಸಬೇಕು. "ಇಳೆಯನಾಧಾರವ ಮಾಡಿ......ಆಕಾಶವನು ಗಳನೆ ಮುಚ್ಚಿದ ಬೆಡಗಿಗೆ ಅನು ಬೇಡಿಕೊಂಬೆ ರಾಮನಾಥಾ" (ಜೇಡರ ದಾಸಿಮಯ್ಯ). "ಬಯಲ ಬಣ್ಣವ ಮಾಡಿ ಸ್ವಯವ ನಿಲವಮಾಡಿ ಸುಳಿವಾತನ ಬೆಡಗ ಬಲ್ಲರಾರೈ ರಾಮನಾಥಾ" (ಜೇಡರ ದಾಸಿಮಯ್ಯ), "ನುಡಿಗೆಡೆಯಿಲ್ಲದೆ ನಿಂದ ನಿರವಯ ಘನತೇಜ ಇದ್ದೂ ಇಲ್ಲದಿಪ್ಪ ಬೆಡಗಿನ ಭೇದವ ನಿಮ್ಮಲ್ಲಿಯೆ ಕಂಡೆನಯ್ಯಾ ಸೌರಾಷ್ಟ್ರ ಸೋಮೇಶ್ವರ" (ಆದಯ್ಯ). "ಮೃಡನೊಳೇ

ಕಾರ್ಥವಹ ಬೆಡಗಿನುಪಾಯಮುಂ" (ದೀಕ್ಷಾಬೋಧೆ), "ಮುನ್ನೇಸಿರದಲಿದ್ದನೆ ಬಳಿಕ ಲೀಗಲಿ ಶರೀರವನು ಸಡಿಲಿಸಿದನೆ ?" ಎಂದು ಪ್ರಭುದೇವ ಅಜಗಣ್ಣನನ್ನು ಕುರಿತು ಆಡಿದ ಮಾತಿಗೆ, ಮುಕ್ತಾಯಕ್ಕ "ಬೆಡಗನಾಡದಿರಯ್ಯ" ಎನ್ನುತ್ತಾಳೆ (ಪ್ರಭುಲಿಂಗ ಲೀಲೆ). "ಶಿವಭಕ್ತಿಯ ಬೆಡಗನು ಏಕಾಂತದಲಿ ನಿಮಗೆ ಒಡಬಡಿಸಿ ಹೇಳುವೆನು" (ಪ್ರಭುಲಿಂಗಲೀಲೆ) —ಇಲ್ಲೆಲ್ಲ 'ಬೆಡಗು' ಶಬ್ದಕ್ಕೆ ಅದ್ಭುತ, ರಹಸ್ಯ ಅರ್ಥಗಳಿವೆ." "ನುಡಿದ ಮಾತ್ರದಲಿರದು ಧರ್ಮದ ಬೆಡಗು ತಾನದು ಬೇರೆ" ಎಂಬ ಕುಮಾರ ವ್ಯಾಸನ ಮಾತಿನಲ್ಲೂ ಬೆಡಗು ಶಬ್ದಕ್ಕೆ ರಹಸ್ಯ ಎಂಬ ಅರ್ಥವಿದೆ.

"ಮಾತಿನ ಮರೆಯ ಬೆಡಗಿನ ಸಂದಿಯಲಿ ಶಿವಕಾಮತತ್ವದ್ವಂದ್ವವಿಪ್ಪುದನರಿಯದೆ" ಎಂದು ಪ್ರಭುಲಿಂಗಲೀಲೆಯಲ್ಲಿ ಮತ್ತೊಂದೆಡೆ ಬರುವ ಮಾತು 'ಬೆಡಗು' ಶಬ್ದಕ್ಕೆ ವ್ಯಾಖ್ಯಾನದಂತಿದೆ. ಮಾತೊಂದರಲ್ಲಿ ಶಿವಕಾಮತತ್ವಗಳೆರಡನ್ನೂ ಮರೆ ಮಾಡಿ ಎಂದರೆ ಒಂದು ಮಾತಿನಿಂದ ಆಧ್ಯಾತ್ಮಿಕ ಮತ್ತು ಲೌಕಿಕ ಅರ್ಥಗಳೆರಡೂ ಸ್ಫುರಿಸುವ ರೀತಿಯಲ್ಲಿ ಹೇಳುವ ಜಾಣ್ಮೆಯೇ ಬೆಡಗು. ವಾಚ್ಯಾರ್ಥದಿಂದ ಆಧ್ಯಾತ್ಮವು ವ್ಯಂಗ್ಯವಾಗುವಂತೆ ಬರೆದ ವಚನಗಳನ್ನೇ ಬೆಡಗಿನ ವಚನಗಳೆಂದು ಕರೆಯಬಹುದು.

೪

ಬೆಡಗಿನ ವಚನಗಳಲ್ಲಿ ಬಳಕೆಗೊಂಡ ಪದಗಳ ವಾಚ್ಯಾರ್ಥ ಒಂದಾದರೆ ಅವು ಸಂಕೇತಿಸುವ ಅಂತರಾರ್ಥ ಬೇರೆಯಾಗಿರುತ್ತದೆ, ಅದು ಆಧ್ಯಾತ್ಮಿಕವಾಗಿರುತ್ತದೆ.

"ಕೋಡಗದ ಚೇಷ್ಟೆ ಉಡುಗಿ, ಹಾವಿನ ಹಲ್ಲು ಮುರಿದು
ಆಡಿಸುವ ಜೋಗಿಯ ನಾಮ ನಷ್ಟವಾಗಿ,
ಸದಾಶಿವಮೂರ್ತಿ ಲಿಂಗದ ಇರುವು ನಿರಾಳವಾಯಿತ್ತು"

ಅರಿವಿನ ಮಾರಿತಂದೆಯ ಈ ವಚನದಲ್ಲಿ ಕೋಡಗ, ಚೇಷ್ಟೆ, ಹಾವು, ಹಲ್ಲು, ಜೋಗಿ ಇತ್ಯಾದಿ ಶಬ್ದಗಳಿಗಿರುವ ವಾಚ್ಯಾರ್ಥ ಎಲ್ಲರಿಗೂ ವಿದಿತವೇ. ಈ ವಾಚ್ಯಾರ್ಥವನ್ನೇ ಹಿಡಿದು ವಚನವನ್ನು ಅರ್ಥಯಿಸಲು ಹೊರಟರೆ ಅದೊಂದು ಒಂದಕ್ಕೊಂದು ಸಂಬಂಧವಿಲ್ಲದ ವಾಕ್ಯಗಳ ಕಂತೆಯೆನ್ನಿಸಬಹುದು. ಆದರೆ ಆ ಪದಗಳು ಸಂಕೇತಿಸುವ ಅರ್ಥದ ಬೆಂಬಳಿವಿಡಿದು ನಡೆದಾಗ ಅದರಿಂದ ಮಹಾತತ್ವವೊಂದರ ಆವಿಷ್ಕಾರವಾಗುವುದನ್ನು ಕಾಣುತ್ತೇವೆ: ಇಲ್ಲಿ ಕೋಡಗ ಮನಸ್ಸಿಗೆ ಸಂಕೇತವಾಗಿ ಬಂದಿದೆ. ಹಾಗೆಯೇ ಚೇಷ್ಟೆ, ಹಾವು, ಹಲ್ಲು, ಆಡಿಸುವ ಜೋಗಿ, ನಾಮ ಇವು ಅನುಕ್ರಮವಾಗಿ ವಿಕಾರತೆ, ಸಂಸಾರವಶನಾದ ಜೀವ, ಸಂಕಲ್ಪ–ವಿಕಲ್ಪಗಳು, ದೇಹ ಮತ್ತು ಅಂಗಗುಣಗಳನ್ನು ಸಂಕೇತಿಸುತ್ತವೆ. ಈಗ ಈ ವಚನದ ಅರ್ಥ ಹೀಗಾಗುತ್ತದೆ : "ಮನಸ್ಸಿನ ವಿಕಾರತೆ ಉಡುಗಿದಾಗ ಜೀವನ ಸಂಕಲ್ಪ-ವಿಕಲ್ಪಗಳೂ ಇಲ್ಲವಾಗುತ್ತವೆ. ಹಾಗಾದಾಗ ಜೀವ ಮತ್ತು ಮನಸ್ಸುಗಳೆರಡಕ್ಕೂ ಆಶ್ರಯಸ್ಥಾನವಾಗಿದ್ದ ದೇಹದ

ಗುಣಗಳು ನಷ್ಟವಾಗುತ್ತವೆ. ಅಂಗಗುಣಗಳು ನಷ್ಟವಾದಾಗ ದೇಹ, ಲಿಂಗದೇವನ ನಿವಾಸವಾಗಿ ಪರಿಣಮಿಸುತ್ತದೆ." ಅಂಗಗುಣಗಳು ಅಳಿದು ಲಿಂಗಗುಣಗಳಳವಡುವ ಸಾಧಕನ ಸ್ಥಿತಿಯನ್ನು ಈ ವಚನ ಚೆನ್ನಾಗಿ ಸಂಕೇತಿಸುತ್ತದೆ. ಆದುದರಿಂದಲೇ ವಿದ್ವಾಂಸರು ಬೆಡಗಿನ ವಚನಗಳನ್ನು ಅವುಗಳ ತಂತ್ರವನ್ನು ಕುರಿತು "ಬೆಡಗಿನ ವಚನಗಳಲ್ಲಿ ಪದದ ತೋರಿಕೆಯ ಅರ್ಥವೇ ಒಂದಾದರೆ ಅವು ವಚನದಲ್ಲಿ ಪ್ರತಿಮಿಸುವ ಅರ್ಥವೇ ಇನ್ನೊಂದು, ಉಂಟುಮಾಡುವ ಅನುಭವವೇ ಬೇರೊಂದು." "ಪ್ರಕೃತಿಗೆ ಸಮಾಜಕ್ಕೆ ಸಂಪ್ರದಾಯಕ್ಕೆ ವಿರುದ್ಧವೆಂಬಂಥ ಗೌಣವಾದ ಅರ್ಥಬರುವ ಮಾತು ಗಳನ್ನಾಡಿ, ಅದಕ್ಕೆ ಬಳಸಿರುವ ಪದಗಳಿಗೆ ಬೇರೆ ಒಂದು ಮುಖ್ಯವಾದ ಅಂತ ರಾರ್ಥವು ಬರುವಂತಾಗಿಸುವುದೇ ಅವುಗಳ ಮುಖ್ಯತಂತ್ರ" ಎಂದು ಹೇಳಿರುವುದನ್ನು ಗಮನಿಸಬೇಕು. ಆದರೆ ಬೆಡಗಿನ ವಚನಗಳಲ್ಲಿ ಪದಗಳು "ಪ್ರತಿಮಿಸುವ ಅರ್ಥ", ಇಲ್ಲವೆ ಅವುಗಳಿಂದ ಬರುವ "ಮುಖ್ಯವಾದ ಅಂತರಾರ್ಥ" ಆಧ್ಯಾತ್ಮಿಕವಾಗಿರುತ್ತ ದೆಂಬುದನ್ನು ಮರೆಯಲಾಗದು.

ಬೆಡಗಿನ ವಚನಗಳಲ್ಲಿ ಬರುವ ಶಬ್ದಗಳ ಸಂಕೇತಾರ್ಥ ಹೆಚ್ಚಾಗಿ ನಿಯತವಾಗಿರು ತ್ತದೆ. ಆ ಶಬ್ದಗಳು ಸಂಕೇತಿಸುವ ಉಪಮೇಯಕ್ಕೂ ಅದರಲ್ಲಿರುವ ಉಪಮಾನಕ್ಕೂ ಯಾವ ಸಮಾನ ಧರ್ಮವೂ ಇರುವದಿಲ್ಲವೆಂದು ಭಾವಿಸಲಾಗದು. ಮೇಲಿನ ವಚನ ದಲ್ಲಿ ಕೋಡಗ ಮನಸ್ಸಿಗೆ ಸಂಕೇತವಾಗಿ ಬಂದಿದೆ. ಒಂದೆಡೆ ನಿಲ್ಲದೆ ಅತ್ತಿತ್ತ ಲಂಘಿ ಸುವುದೇ ಕೋಡಗದ ಸಹಜಗುಣ. ಮನಸ್ಸು ಕೂಡ ಹಾಗೆಯೇ ನಾನಾ ಕಡೆಗೆ ಹರಿಯುತ್ತಿರುತ್ತದೆ. ಹಾವು ವಿಷದಿಂದ ಕೂಡಿದ್ದರೆ ಸಂಸಾರವಶನಾದ ಜೀವ ವಿಷಯಲಾಲಸೆಯಿಂದ ಕೂಡಿಕೊಂಡಿರುತ್ತಾನೆ. ಹೀಗೆಯೇ ಮುಂದಿನ ಉಪಮೇಯ ಉಪಮಾನಗಳಲ್ಲಿರುವ ಸಾಮಾನ್ಯ ಗುಣಧರ್ಮವನ್ನು ಬಹುಮಟ್ಟಿಗೆ ಕಂಡುಹಿಡಿ ಯಲು ಸಾಧ್ಯವಿದೆ. ಬೇರೆ ಕೆಲವು ವಚನಗಳಲ್ಲಿ ಅರಗು ದೇಹಕ್ಕೆ ಸಂಕೇತವಾಗಿ ಬರುತ್ತದೆ. ಅರಗು ಒಂದು ಪ್ರಾಣಿಯ ಮಲದಿಂದಾಗಿರುತ್ತದೆ. ದೇಹವೂ ಮಲ ತ್ರಯಗಳಿಂದ ಕೂಡಿರುತ್ತದೆ. ಆದುದರಿಂದ ಅರಗು ಎಂದರೆ ದೇಹ. ಭೂಮಧ್ಯ ದಲ್ಲಿ ಮೇರುಪರ್ವತವಿರುವಂತೆ ದೇಹಮಧ್ಯದಲ್ಲಿ ಮೂಲಾಹಂಕಾರವಿದೆ. ಆದುದ ರಿಂದ ಮೇರು ಎಂದರೆ ಮೂಲಾಹಂಕಾರ. ಇದೇ ರೀತಿ ಕೋಳಿ ಎಂದರೆ ಸತ್ವಗುಣ, ಉರಿ ಎಂದರೆ ಜ್ಞಾನ— ಹೀಗೆ ಅರ್ಥಗಳಿರುವುದು ಕಂಡು ಬರುತ್ತದೆ. ಎಲ್ಲ ಸಂದರ್ಭಗಳಲ್ಲೂ ಈ ಬಗೆಯ ಸಮಾನಧರ್ಮ ಸುಲಭವಾಗಿ ಗೋಚರವಾಗುವುದಿಲ್ಲ. 'ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ' ಎಂಬ ಅಕ್ಕಮಹಾದೇವಿಯ ಬೆಡಗಿನ ವಚನದಲ್ಲಿ ಬರುವ 'ಕಾಲಿಲ್ಲದ ಹೆಂಡತಿ'ಗೆ ಲೌಕಿಕ ಆಚರಣೆಯಿಲ್ಲದ ಶರಣ ಸತಿ ಎಂದೂ 'ತಲೆಯಿಲ್ಲದ ಗಂಡ'ನಿಗೆ ಲೌಕಿಕ ಬಂಧನವಿಲ್ಲದ ಲಿಂಗಪತಿ ಎಂದೂ ಅರ್ಥಯಿಸಬೇಕಾಗುತ್ತದೆ. ಇದು ಬಹುಜನರಿಗೆ ಕಷ್ಟದಾಯಕವೇ.

೫

ಬೆಡಗಿನ ಮಾತುಗಳು ವೇದಸಾಹಿತ್ಯದಲ್ಲಿಯೇ ಗೋಚರಿಸುತ್ತವೆ. "ದ್ವಾಸು ಪರ್ಣಾ ಸಯುಜಾ ಸಖಾಯಾ" ಎಂಬ ಶ್ಲೋಕವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. "ಒಂದು ಮರದಲ್ಲಿ ಎರಡು ಹಕ್ಕಿಗಳಿವೆ. ಒಂದು ಸಿಹಿಯಾದ ಹಣ್ಣನ್ನು ತಿನ್ನುತ್ತದೆ. ಮತ್ತೊಂದು ಸುಮ್ಮನೆ ನೋಡುತ್ತಿದೆ" ಎಂಬರ್ಥ ಕೊಡುವ ಈ ಶ್ಲೋಕದಲ್ಲಿ ಹಣ್ಣು ತಿನ್ನುವ ಹಕ್ಕಿಯು ಕರ್ಮನಿರತ ಜೀವಾತ್ಮವನ್ನೂ, ಸುಮ್ಮ ನಿರುವ ಹಕ್ಕಿ ನಿರ್ಲಿಪ್ತ ಪರಮಾತ್ಮನನ್ನೂ ಸಂಕೇತಿಸುತ್ತವೆ. ಇದರಿಂದ ಬೆಡಗಿನ ಮಾತುಗಳ ಪ್ರಯೋಗ ಬಹಳ ಪ್ರಾಚೀನವೆಂದು ಹೇಳಬಹುದು.

ಜನಪದರ ಒಗಟುಗಳಲ್ಲಿಯೂ ಇಂತಹ ಚಮತ್ಕಾರದ ಮಾತುಗಳು ಕಂಡುಬರುತ್ತವೆ. ಇಲ್ಲಿಯೂ ಉಪಮಾನದ ಮೂಲಕ ಉದ್ದೇಶಿತ ಉಪಮೇಯವನ್ನು ಗ್ರಹಿಸುವ ತಂತ್ರವನ್ನು ಕಾಣುತ್ತೇವೆ. ನಿಜವಾಗಿಯೂ ಈ ಒಗಟುಗಳು ನಮ್ಮ ಬುದ್ಧಿ ಶಕ್ತಿಗೊಂದು ಒರೆಗಲ್ಲೇ ಸರಿ. ಇಲ್ಲಿಯೂ ಪದಗಳು ಸೂಚಿಸುವ ವಾಚ್ಯಾರ್ಥ ಒಂದಾದರೆ ಅವುಗಳ ವ್ಯಂಜನಾರ್ಥವೇ ಬೇರೆಯಾಗಿರುತ್ತದೆ.

ತೊಟ್ಟುಂಟು ಮುಳ್ಳಿಲ್ಲ, ಸುತ್ತಲೆಲೆಯಿಲ್ಲ,
ಮುಟ್ಟಿದರೆ ಮೃದುವುಂಟು ಹಣ್ಣು ತಾನಲ್ಲ
ನೆಟ್ಟನೆ ಮೆಲಬಹುದು ಕೊಯ್ಯಲಳವಲ್ಲ
ಸೃಷ್ಟಿಯೊಳು ಈ ಬೆಡಗ ಶಿವತಾನೆ ಬಲ್ಲ.

ಇದರಲ್ಲಿ ಬರುವ ಹಣ್ಣು, ತೊಟ್ಟು, ಮೃದು, ಮೆಲ್ಲು ಇತ್ಯಾದಿ ಶಬ್ದಗಳ ಬೆನ್ನುಹತ್ತಿ ನಮ್ಮ ಬುದ್ಧಿ ಯಾವುದೋ ಒಂದು ಹಣ್ಣಿರಬೇಕೆಂದು ಊಹಿಸುತ್ತದೆ. ಕೆಲಹೊತ್ತು ಸರ್ಕಸ್ ನಡೆದನಂತರ ಇಡೀ ಒಗಟು ತಾಯಿಯ ಮೊಲೆಯನ್ನು ಸೂಚಿಸುತ್ತದೆಂಬುದು ಹೊಳೆದಾಗ ಅದನ್ನು ರಚಿಸಿದವನ ಬುದ್ಧಿ ಚಮತ್ಕಾರಕ್ಕೆ ತಲೆದೂಗುತ್ತೇವೆ. ಇಂತಹ ಬೌದ್ಧಿಕ ವ್ಯಾಯಾಮಕ್ಕೆ ಆಸ್ಪದ ಕೊಡುವ ಅನೇಕ ಒಗಟುಗಳು ಜನಸಾಮಾನ್ಯರ ಕಮ್ಮಟದಲ್ಲಿ ಸಿದ್ಧಗೊಳ್ಳುತ್ತಲೆ ಇರುತ್ತವೆ; ಚಲಾವಣೆಯಲ್ಲೂ ಬರುತ್ತವೆ. ಬುದ್ಧಿಯನ್ನು ಚಕಿತಗೊಳಿಸುವ ಇಂತಹ ಚಮತ್ಕಾರಪೂರ್ಣ ಒಗಟುಗಳ ಮುಖ್ಯ ಉದ್ದೇಶ ಸಾಮಾನ್ಯವಾಗಿ ಚಿತ್ತಾಹ್ಲಾದ. ಒಗಟುಗಳನ್ನು ಹಾಕುವುದು ಅವುಗಳನ್ನು ಒಡೆಯುವುದು ಇಂದೂ ಜೀವಂತವಾಗಿದೆ ಹಳ್ಳಿಗರಲ್ಲಿ.

ಒಗಟು ಮತ್ತು ಬೆಡಗಿನ ವಚನಗಳಲ್ಲಿ ಬಳಕೆಯಾಗಿರುವ ತಂತ್ರ ಒಂದೇ. ಎರಡರಲ್ಲೂ ಬುದ್ಧಿ-ಕ್ರಿಯಾಶೀಲ. ಆದುದರಿಂದಲೇ ಬೆಡಗಿನ ವಚನಗಳಿಗೆ ಒಗಟುಗಳೇ ಮೂಲವೆಂದು ಕೆಲವರು ಅನುಮಾನಿಸುತ್ತಾರೆ. ಶ್ರೀ ಸಾಮಾನ್ಯರ ನಿಕಟ ಸಂಪರ್ಕ ಪಡೆದಿರುವ ವಚನಕಾರರು ಅವರ ಆಡುನುಡಿಯಿಂದ ಹಲವಾರು ಗಾದೆಗಳನ್ನು ಪಡೆನುಡಿಗಳನ್ನು ತಮ್ಮ ವಚನಗಳಲ್ಲಿ ಬಳಸಿರುವುದನ್ನು ನೋಡಿದರೆ ಅವರ

ಅನುಮಾನ ಸರಿಯೆನಿಸುತ್ತದೆ. ವೇದಸಾಹಿತ್ಯದಲ್ಲಿ ಈ ಬಗೆಯ ರಚನೆ ಕಂಡುಬರುತ್ತಿರುವುದರಿಂದ ಅದೇ ಬೆಡಗಿನ ವಚನಗಳಿಗೆ ಪ್ರೇರಣೆ ನೀಡಿರಬೇಕೆಂಬ ವಾದವೂ ಇದೆ. ಆದರೆ ವೇದಗಳ ಕಾಲದಲ್ಲೂ ಶ್ರೀಸಾಮಾನ್ಯರಿದ್ದರು. ಅವರೂ ಒಗಟುಗಳನ್ನು ರಚಿಸುತ್ತಿರಬೇಕು. ಅದರ ಪ್ರಭಾವದಿಂದಾಗಿ ವೇದಗಳಲ್ಲಿ ಅಂತಹ ರಚನೆ ಏಕೆ ತಲೆದೋರಿರಬಾರದು ? ಎಂಬ ಪ್ರತಿವಾದವೂ ಇದೆ. ಜನಸಾಮಾನ್ಯರ ಮಾತು-ಗೀತಗಳ ಸತ್ವಸೌಂದರ್ಯಕ್ಕೆ, ಅವುಗಳ ರೀತಿಗೆ, ಹಾಗೂ ಸಂವಹನಶಕ್ತಿಗೆ ಮಾರುಹೋದ ವಚನಕಾರರು ಅವರು ಕಟ್ಟುತ್ತಿದ್ದ ಒಗಟುಗಳಿಂದಲೂ ಪ್ರೇರಣೆ ಪಡೆದಿರುವ ಸಾಧ್ಯತೆ ಇದೆ.

ರಚನಾ ವಿಧಾನ ಮತ್ತು ಚಮತ್ಕಾರ ಪ್ರದರ್ಶನಗಳ ದೃಷ್ಟಿಯಿಂದ ಒಗಟು ಮತ್ತು ಬೆಡಗಿನ ವಚನಗಳಲ್ಲಿ ಸಾಮ್ಯತೆಯಿದೆ. ಆದರೆ ಒಗಟುಗಳಲ್ಲಿ ಬರುವ ಪದಗಳು ಸಾಮಾನ್ಯವಾಗಿ ಲೌಕಿಕ ಇಲ್ಲವೆ ಸಾಮಾಜಿಕ ವಸ್ತುವಿಚಾರವನ್ನು, ಸಂಕೇತಿಸಿದರೆ ಬೆಡಗಿನ ವಚನಗಳಲ್ಲಿ ಬರುವ ಪದಗಳು ವ್ಯಂಜಿಸುವುದು ಯಾವಾಗಲೂ ಆಧ್ಯಾತ್ಮಿಕ ವಿಷಯ ವಿಚಾರವನ್ನು. ಒಗಟುಗಳ ರಚನೆ ಬುದ್ಧಿವಂತ ಜನಸಾಮಾನ್ಯರಿಂದ ನಡೆದರೆ, ಬೆಡಗಿನ ವಚನಗಳ ರಚನೆ ಶಿವಾನುಭವಿಗಳಾದ ಶರಣರಿಂದ ನಡೆದಿದೆ. ಒಗಟುಗಳ ರಚನೆಯ ಮುಖ್ಯ ಉದ್ದೇಶ ಬಹುಮಟ್ಟಿಗೆ ಬುದ್ಧಿವಂತಿಕೆಯ ಪ್ರದರ್ಶನ ಮತ್ತು ಜನಮನರಂಜನೆ. ಕೆಲವು ಒಗಟುಗಳಲ್ಲಿ ತಾತ್ವಿಕ ಧ್ವನಿ ಇರಬಹುದು. ಅಂಥವುಗಳ ರಚನೆಗೆ ಬೆಡಗಿನ ವಚನಗಳೇ ಪ್ರಭಾವ ಬೀರಿರಬೇಕು. ಒಗಟುಗಳಲ್ಲಿ ಬುದ್ಧಿಗೆ ಪ್ರಾಧಾನ್ಯ, ಬೆಡಗಿನ ವಚನಗಳಲ್ಲಿ ಬುದ್ಧಿ ಅನುಭಾವಗಳೆರಡಕ್ಕೂ ಪ್ರಾಧಾನ್ಯ. ಒಗಟುಗಳು ಹೆಚ್ಚಾಗಿ ಸವಾಲಿನ ರೂಪದಲ್ಲಿರುತ್ತವೆ. ಬೆಡಗಿನ ವಚನಗಳು ಲಿಂಗಾಂಗ ಸಾಮರಸ್ಯದ ಮಹೋನ್ನತ ಧ್ಯೇಯವನ್ನಿರಿಸಿಕೊಂಡು ಷಟ್‌ಸ್ಥಲಮಾರ್ಗಾವಲಂಬಿಯಾದ ಸಾಧಕನ ಸಿದ್ಧಿಯ ವಿವಿಧ ಹಂತಗಳನ್ನು ಸೂಚಿಸುವ ವಿವರಣೆಯ ರೂಪದಲ್ಲಿರುತ್ತವೆ. ಬೇರೊಬ್ಬರು ಒಡೆಯಲು ಹಾಕಿದ ಸವಾಲುಗಳಲ್ಲವು. ಸ್ವಂತ ಆಧ್ಯಾತ್ಮಿಕ ಅನುಭವಗಳ ವಿವರಣೆಗಾಗಿ ಬಳಸಿದ ಒಂದು ವಿಶಿಷ್ಟ ವಿಧಾನ ಅವುಗಳಲ್ಲಿದೆ.

ಶ್ರೀಸಾಮಾನ್ಯನಿಗೂ ಅರ್ಥವಾಗಬೇಕೆಂಬ ಉದ್ದೇಶದಿಂದ, ಸಹಜತೆ ಸರಳತೆಗಳನ್ನು ಮೈಗೂಡಿಸಿಕೊಂಡಿರುವ ವಚನಗಳ ರಚನೆಗೆ ತೊಡಗಿದ ಶರಣರು ಕ್ಲಿಷ್ಟವಾದ ಬೆಡಗಿನ ವಚನಗಳ ರಚನೆಗೆ ಏಕೆ ತೊಡಗಿದರೆಂಬ ಪ್ರಶ್ನೆ ಏಳುವುದು ಸಹಜ. ಶಿವಯೋಗ, ಲಿಂಗಾನುಸಂಧಾನದಂತಹ ಆತ್ಮಾನುಭವದ ವಿಷಯ ಸಂತೆಯ ಮಾತಾಗದೆ ಪಾತ್ರನಾದವನಿಗೆ ಮಾತ್ರ ತಿಳಿಯಬೇಕೆಂದು ಅವರು ಆ ತಂತ್ರ ಬಳಸಿರಬೇಕು. ಲಿಂಗಾಂಗ ಸಾಮರಸ್ಯಸ್ಥಿತಿಯನ್ನು ಮುಟ್ಟಿದ ಅನುಭಾವಿಯ ಜ್ಯೋತಿರ್ಲಿಂಗದಂತಹ ಮಾತು ಸಹಜವಾಗಿಯೇ ಆ ರೀತಿ ಹೊರಹೊಮ್ಮಿರಬಹುದಾದ ಸಾಧ್ಯತೆಯೂ ಇದೆ. ಈಗ ಅಂತಹ ಒಂದೆರಡು ವಚನಗಳ ಆಧ್ಯಾತ್ಮಿಕ ತಿರುಳನ್ನೂ,

ಅವುಗಳಿಂದ ಅವತರಣಗೊಳ್ಳುವ ಅಲೌಕಿಕ ತತ್ವದ ಬೆಡಗನ್ನೂ ಪರಿಶೀಲಿಸಬಹುದು.

ರವಿಯು ಶಶಿ ನುಂಗಿ, ಉಕ್ಕಿನ ಘಟ್ಟಿಯು ಮೃತ್ತಿಕೆಯು ಚೇಣ
ಕಡಿಯಿತ್ತು,
ಕಪ್ಪೆಯು ವಿಷ ತಾಗಿ ಹಾವು ಸತ್ತಿತ್ತು,
ಏಣಾಂಕಧರ ಸೋಮೇಶ್ವರಲಿಂಗವನರಿತು.

(ಬಿಬ್ಬಿ ಬಾಚಯ್ಯ)

ಸೂರ್ಯನನ್ನು ಚಂದ್ರ ನುಂಗಿದ, ಉಕ್ಕಿನಿಂದಾದ ಘಟ್ಟಿಯನ್ನು ಮಣ್ಣಿನ ಚೇಣ ಛೇದಿಸಿತು, ಕಪ್ಪೆಯು ವಿಷ ತಾಗಿ ಹಾವು ಸತ್ತಿತು. ಎಂತಹ ವಿರೋಧಾಭಾಸ! ಎಂತಹ ಅಸಾಂಗತ್ಯ! ಅಸಾಂಗತ್ಯದಲ್ಲಿ ಸಾಂಗತ್ಯವನ್ನು ಗರ್ಭೀಕರಿಸುವುದೇ ಬೆಡಗು. ಇಲ್ಲಿ ರವಿ. ಶಶಿ. ಉಕ್ಕಿನಘಟ್ಟಿ ಮೃತ್ತಿಕೆಯು ಚೇಣ ಇತ್ಯಾದಿಗಳಿಗೆಲ್ಲ ಸಾಂಕೇತಿಕ ಅರ್ಥವಿದೆ. 'ರವಿ' ಎಂದರೆ ಸೂರ್ಯಸ್ವರೂಪನಾದ ಲಿಂಗ, 'ಶಶಿ' ಎಂದರೆ ಶಾಂತಿ ಸ್ವರೂಪನಾದ ಶರಣ, 'ರವಿಯು ಶಶಿ ನುಂಗಿ' ಎಂದರೆ ಶಾಂತಿಸ್ವರೂಪನಾದ ಶರಣನು ಸೂರ್ಯಸ್ವರೂಪನಾದ ಲಿಂಗವನ್ನು ಅವಗ್ರಹಿಸಿದನು ಎಂದರ್ಥ. ಅದನ್ನೇ ಬೇರೊಂದು ರೀತಿಯಲ್ಲಿ, ಶರಣನು ಷಡಂಗಗಳಲ್ಲಿ ಷಡ್ಲಿಂಗಗಳ ಸಂಬಂಧ ಪಡೆದನು ಎಂದೂ ಹೇಳಬಹುದು. ಆಗ ಏನಾಯಿತು? ಮಣ್ಣಿನಂತೆ ದುರ್ಬಲವಾಗಿದ್ದ ಜ್ಞಾನವೆಂಬ ಚೇಣಕ್ಕೂ ಅಜ್ಞಾನವೆಂಬ ಉಕ್ಕಿನಗಟ್ಟಿಯನ್ನು ಭೇದಿಸುವ ಶಕ್ತಿಬಂದಿತು. ಅರ್ಥಾತ್ ಅಜ್ಞಾನದ ಕಾಳಿಕೆಯಳಿದು ಜೀವ ಪರಿಶುದ್ಧನಾದನು, ಪರಮಶಾಂತಿಯನ್ನು ಪಡೆದನು. ಮುಂದೇನಾಯಿತು? ಆ ಪರಮಶಾಂತಿಯಿಂದುದಯವಾದ ಚಿದಮೃತರಸದಿಂದ, 'ನಾನು ಬೇರೆ ಶಿವನು ಬೇರೆ' ಎಂಬ ಜೀವನ ಭೇದಭಾವವೆಂಬ ಶಂಕಾವಿಷವು ಇಲ್ಲವಾಗಿ 'ನಾನೇ ಲಿಂಗ' ಎಂಬ ಭಾವ ಮೂಡಿತು. ಅಂಗನಿಗೆ ಲಿಂಗಸಂಬಂಧ ಉಂಟಾದಾಗ ಅಂತರಂಗ ಪ್ರಪಂಚದಲ್ಲಿ ನಡೆಯುವ ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಈ ವಚನ ಅರ್ಥವತ್ತಾಗಿ ಧ್ವನಿಸುತ್ತದೆ.

ಜಲದ ಸಿಂಹಾಸನದಲಷ್ಟಮ ಬೆಟ್ಟ
ಕುಲಗಿರಿಗಳೆರಡು ಮತ್ತಿಕ್ಕೆಲದಲ್ಲಿ,
ನೆಲೆಯರಿಯರು ಬ್ರಹ್ಮ[ದ], ಕುಲವರಿಯರು ಯೋಗ[ದ]
ಹೊಲಬುಗೆಟ್ಟರು, ಯೋಗಸಿದ್ಧರೆಲ್ಲ
ಈರಾರನೊಂದೆಂದು ಹಿಡಿದಾತ
ನಿಷ್ಕಲಯೋಗಿ ತಾ ಕಪಿಲಸಿದ್ಧಮಲ್ಲಿನಾಥ.

(ಸಿದ್ಧರಾಮ)

ದೇಹಪೀಠದಲ್ಲಿ ಅಷ್ಟಮದಗಳೆಂಬ ಎಂಟು ಬೆಟ್ಟಗಳು, ಅಹಂಕಾರ ಮಮಕಾರಗಳೆಂಬ ಎರಡು ಕುಲಗಿರಿಗಳು. ಇಂತಹ ದೇಹಧಾರಿಗಳಾದ ಜೀವರು, ಎಂಟು ಪ್ರಕಾರದ ಮದ ಮತ್ತು ಅಹಂಕಾರ ಮಮಕಾರಗಳಿಂದ ಕೂಡಿಕೊಂಡು ತಾವೇ ಬ್ರಹ್ಮಸ್ವರೂಪ

ರೆಂಬ ನಿಜದ ನೆಲೆಯನ್ನು ಅರಿಯದಾಗಿದ್ದಾರೆ. ತಾವೇ ಲಿಂಗಕುಲದವರೆಂಬುದನ್ನು ತಿಳಿಯದೆ ಅಜ್ಞಾನವಶರಾಗಿ ಅಷ್ಟಾಂಗಯೋಗದಲ್ಲಿ ನಿರತರಾಗಿದ್ದಾರೆ. ಈ ಆರು ಎಂದರೆ ಆರು ಲಿಂಗಸ್ಥಲ. ಇವು ಒಂದೇ, ಎಂದರೆ ಒಂದೇ ಪರಬ್ರಹ್ಮಸ್ವರೂಪವಾದ ಇಷ್ಟಲಿಂಗದಿಂದಾಗಿವೆ ಎಂದು ತಿಳಿದು, ಆ ಇಷ್ಟಲಿಂಗವನ್ನು ಹಿಡಿದರೆ ಅವನೇ ನಿಷ್ಕಲಯೋಗಿಯಾಗುತ್ತಾನೆ– ಇಷ್ಟಲಿಂಗದ ಮೂಲಕ ಷಟ್‌ಸ್ಥಲಾಚರಣೆಯ ರಹಸ್ಯವನ್ನು ನಿರೂಪಿಸುವ ಸಿದ್ಧನ ವಚನವಿದು.

೬

ಬೆಡಗಿನ ವಚನಗಳೆಂದು ಇವನ್ನು ವಚನಕಾರರೇ ಕರೆದರೆ? ಬೇರಾರಾದರೂ ಕರೆದರೆ? ಬೇರೆ ಯಾರಾದರೂ ಕರೆದಿದ್ದರೆ ಅವರು ಯಾರು? ತಿಳಿಯದು. ಸಾಮಾನ್ಯವಾಗಿ ಎಲ್ಲ ವಚನಕಾರರು ಕೆಲವಾದರೂ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಪ್ರಭುವಿನ ವಚನಗಳಲ್ಲಿ ಅವುಗಳ ಸಂಖ್ಯೆ ಹೆಚ್ಚು. ಕಬ್ಬಿಣದ ಕಡಲೆಗಳಂತಿರುವ ಈ ವಚನಗಳನ್ನು ಟೀಕೆಯ ಅಥವಾ ವ್ಯಾಖ್ಯಾನದ ಸಹಾಯವಿಲ್ಲದೆ ಅರ್ಥಯಿಸುವುದು ಸಾಮಾನ್ಯರಿಗೆ ಸಾಧ್ಯವಿಲ್ಲ. ಆದುದರಿಂದಲೇ ಕೆಲವರು ಆ ದಿಶೆಯಲ್ಲಿ ಕಾರ್ಯ ಮಾಡಿದ್ದಾರೆ. 'ಪ್ರಭುದೇವರ ಷಟ್‌ಸ್ಥಲದ ಟೀಕಿನ ವಚನಗಳು' ಗ್ರಂಥದಲ್ಲಿ ಮಹಾಲಿಂಗನು ಎಲ್ಲ ವಚನಗಳಿಗೂ ಟೀಕೆಯನ್ನು ಬರೆದಿದ್ದು ಅವುಗಳಲ್ಲಿ ಬೆಡಗಿನ ವಚನಗಳೂ ಇವೆ. ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸ ಚಾರಿತ್ರ'ದಲ್ಲಿ ಕೆಲವು ಬೆಡಗಿನ ವಚನಗಳಿಗೆ ಟೀಕೆ ಇದೆ. "ಎಲ್ಲ ಪುರಾತನರ ಬೆಡಗಿನ ವಚನಗಳು" ಎಂಬ ಓಲೆಗರಿಯ ಹಲವಾರು ಪ್ರತಿಗಳಿವೆ. ಅವು ಎಲ್ಲ ಶರಣರ ಕೇವಲ ಬೆಡಗಿನ ವಚನಗಳನ್ನೊಳಗೊಂಡ ಕಟ್ಟುಗಳು. ಸಿಂಗಳದ ಸಿದ್ಧಬಸವರಾಜದೇವನು ಆ ವಚನಗಳಿಗೆ ವ್ಯಾಖ್ಯಾನ ಬರೆದಿದ್ದಾನೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಸಿಂಗಳದ ಸಿದ್ಧಬಸವರಾಜದೇವರ ವ್ಯಾಖ್ಯಾನವನ್ನೊಳಗೊಂಡ 'ಸಕಲ ಪುರಾತನರ ಬೆಡಗಿನ ವಚನಗಳು' ಗ್ರಂಥವನ್ನು ೧೯೭೮ ರಲ್ಲಿ ಪ್ರಕಟಿಸಿದೆ. ಅದರ ಸಂಪಾದಕರು ಡಾ. ಎಂ. ಎಸ್. ಸುಂಕಾಪುರ. 'ಬೆಡಗಿನ ವಚನಗಳು' (ಟೀಕುಸಹಿತ) ಎಂಬ ಗ್ರಂಥವನ್ನು ಎಂ. ಜೀವನ ಅವರು ಸಂಪಾದಿಸಿದ್ದಾರೆ. ರಾಯಚೂರ ಜಿಲ್ಲೆಯ ಸಂತೆಕಲ್ಲೂರು ಗ್ರಾಮದ ಘನಮಠ ಶಿವಯೋಗಿಗಳ ಗದ್ದುಗೆಯ ಪರಿಚಾರಕರಿಂದ ದೊರೆತ ಕೈಬರೆಹದ ಪ್ರತಿಯೇ ಅವರಿಗೆ ಆಧಾರ. ಇದೂ ಕೂಡ ಸಿಂಗಳದ ಸಿದ್ಧಬಸವರಾಜದೇವರ ಟೀಕೆಯನ್ನೊಳಗೊಂಡಿದೆ. ಶಾಸ್ತ್ರಶುದ್ಧರೀತಿಯಲ್ಲಿ ಇಂಥ ಗ್ರಂಥಗಳು ಸಂಪಾದನೆಗೊಂಡು ಪ್ರಕಟವಾದಷ್ಟೂ ಅಭ್ಯಾಸಿಗಳಿಗೆ ಉಪಯುಕ್ತ.

ಬೈಲೊರಷ್ಯನ್ ಕಾದಂಬರಿಕಾರ: ಇವಾನ್ ಶಮ್ಯಾಕಿನ್

ಬಾದ್ದಣ್ಣ ಹಿಂಗಮಿರೆ

ಇವಾನ್ ಶಮ್ಯಾಕಿನ್ ಎರಡನೆಯ ಮಹಾಯುದ್ಧದ ಬೆಂಕಿ ಹೊತ್ತಿ ಉರಿಯುತ್ತಿದ್ದ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿ, ಬೈಲೊ-ರಷ್ಯನ್ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಕಲ್ಪಿಸಿಕೊಡಲು ಕಾರಣರಾದರು. ಈ ಸಂದರ್ಭದಲ್ಲಿ ಕಾಣಿಸಿಕೊಂಡ ಸಾಹಿತಿಗಳಿಗೆ ಇಂಥದೇ ವಸ್ತು-ವಿಷಯಗಳ ಕುರಿತು ಸಾಹಿತ್ಯ ರಚಿಸಬೇಕೆಂಬ ಪ್ರಶ್ನೆಯೇ ಇರಲಿಲ್ಲ. ಸ್ವಂತ ಬದುಕಿನ ಜ್ವಲಂತ ಅನುಭವಗಳೇ ಇವರ ಸಾಹಿತ್ಯ ರಚನೆಗೆ ಪ್ರಚೋದನೆಯನ್ನು ಒದಗಿಸಿದವು. ಆದರೆ, ಯುದ್ಧದಲ್ಲಿ ತಾವು ಅನುಭವಿಸಿದ್ದೆಲ್ಲವನ್ನೂ ಇದ್ದಕ್ಕಿದ್ದಹಾಗೆ ಪ್ರಕಟಿಸುವುದು ಅಷ್ಟೊಂದು ಸುಲಭ-ಸಾಧ್ಯವಾಗಿರಲಿಲ್ಲ. ಅತ್ಯಂತ ಅರ್ಥವತ್ತಾದ ಅನುಭವವನ್ನು ಹಿಡಿದು, ಕಲಾತ್ಮಕವಾಗುವಂತೆ ಚಿತ್ರಿಸುವುದರ ಕಡೆಗೆ ಸಾಹಿತಿ ಗಮನಕೊಡುವುದು ಅವಶ್ಯವಾಗಿತ್ತು. ಇಲ್ಲದಿದ್ದರೆ ಅವೆಲ್ಲ ಯುದ್ಧದ ವರದಿಯಾಗಿ ಬಿಡುತ್ತಿದ್ದವು. ಅಭಿವ್ಯಕ್ತಿಯ ತೆಕ್ಕೆಗೊಗ್ಗುವ ಮಹತ್ವದ ಅನುಭವಗಳಿಗೆ ಬಾಯಿಕೊಡುವುದು ಜರೂರಿಯಾಗಿತ್ತು. ಅದರೊಂದಿಗೆ ತಮ್ಮ ಹಾಗೂ ಮಿತ್ರರ ಮತ್ತು ದೇಶದಲ್ಲಿನ ಅಂಖಿಡ ಚಟುವಟಿಕೆಗಳನ್ನು ಭವಿಷ್ಯವನ್ನು ಗಮನಿಸುವುದೂ ಅಷ್ಟೇ ಮಹತ್ವದ್ದಾಗಿತ್ತು. ೧೯೪೫ ರಲ್ಲಿ ಜರ್ಮನಿಗೆ ಸೋಲುಂಟಾದ ತರುವಾಯ ಮದ್ದು-ಗುಂಡು ಸುರಿಸುವ ಶಾಖೆಯ ಮುಖ್ಯಾಧಿಕಾರಿ ಹುದ್ದೆ ವಹಿಸಿದ್ದ ಇವಾನ್ ಶಮ್ಯಾಕಿನ್ ಯುದ್ಧಭೂಮಿಯಿಂದ ಮನೆಗೆ ಮರಳಿದರು. ಅವರು ತಮ್ಮ ಸೈನಿಕ ಬ್ಯಾಗಿನಲ್ಲಿ ಯುದ್ಧಾನುಭವವುಳ್ಳ ಕೆಲವು ಕತೆಗಳನ್ನು ತಂದಿದ್ದರು. 'ಅಪರಾಧಿಗೆ ಶಿಕ್ಷೆ' ಕತೆ, ಪ್ರತಿದಿನ ನಡೆಯುತ್ತಿದ್ದ ಯುದ್ಧದ ವರ್ಣನೆ ಹಾಗೂ ಅಲ್ಲಿ ಸಂಭವಿಸಿದ ನೈಜಘಟನೆಗಳ ಅರ್ಥವನ್ನು ತೆರೆದು ತೋರುವಲ್ಲಿ ಯಶಸ್ವಿಯಾಯಿತು. ಈ ಕತೆಗಳು ಕಲಾತ್ಮಕವಾಗಿಲ್ಲದಿದ್ದರೂ ಮುಂದೆ ಬೆಳೆಯಬಲ್ಲ ತರುಣ ಬರಹಗಾರನ ಉಜ್ವಲಭವಿಷ್ಯವನ್ನು ನಿರ್ದೇಶಿಸಿದವು. ಈ ಕತೆಗಳು ಅರ್ಥಪೂರ್ಣವಾದ ಕೆಲವು ಸಮಸ್ಯೆಗಳನ್ನು ಎತ್ತಿದ್ದಲ್ಲದೆ, ವಿಶಿಷ್ಟ ಮಾನವೀಯ ದೃಷ್ಟಿಕೋನವನ್ನು ಪ್ರಕಟಪಡಿಸಿದವು. 'ಅಪರಾಧಕ್ಕೆ ಶಿಕ್ಷೆ' ಕತೆಯ ನಾಯಕ, ನಾಝಿ ಜರ್ಮನಿಯ ಭೂಮಿಯನ್ನು ಪ್ರವೇಶಿಸಿ ಸೋವಿಯತ್ ಜನತೆಗಾದ ವಿನಾಶದ ವಿರುದ್ಧ ರೊಚ್ಚಿಗೆದ್ದು, ನಾಝಿ-ಜರ್ಮನಿಯ ಜನ ಸಮುದಾಯವನ್ನು ಕೊಲ್ಲುವದಕ್ಕೆ ಹಿಂದುಮುಂದು ನೋಡುವುದಿಲ್ಲ. ಬೈಲೊರಷ್ಯನ್ ಭೂಮಿಯನ್ನು ಪ್ರವೇಶಿಸಿದ, ಜರ್ಮನಿಯ ಗಲ್ಲಿಗೇರಿಸುವ

ತಂಡದವರ ವಿರುದ್ಧ ಪ್ರತಿಸೇಡನ್ನು ತೀರಿಸಿಕೊಳ್ಳುವ ಚಿತ್ರ 'ಸೇಡು' ಕತೆಯ ಕಥಾವಸ್ತು. ಕಥಾನಾಯಕ ಕುಟುಂಬದವರನ್ನೆಲ್ಲ ನಾಝಿಜರ್ಮನಿಗಳು ಕೊಂದು ಹಾಕಿದ್ದೊಂದೇ ಈ ಸೇಡಿನ ಕಾರಣವಾಗಿಲ್ಲ. ಬೈಲೊರಷ್ಯನ್ ಭೂಮಿಯ ಅಭಿಮಾನ ಹಾಗೂ ಕೆಚ್ಚು ಇದಕ್ಕೆ ಪ್ರಚೋದಕವಾಗಿರುವುದು ಗಮನಾರ್ಹವಾಗಿ ಕಥಾನಾಯಕನ ಸೇಡಿಗೆ ಬಲಿಯಾಗುವವರು ವಂಚಕರು, ಹಾಗೂ ಯುದ್ಧದಲ್ಲಿ ಅಪರಾಧ ಮಾಡಿದವರು ಮಾತ್ರ.

ಶಮ್ಯಾಕಿನ ಕತೆಗಳು, ಯುದ್ಧದ ಶರತ್ತು, ನೀತಿನಿಯಮಗಳು ನ್ಯಾಯವಾದ ಯುದ್ಧದತ್ತ ವಾಲಿರುತ್ತವಲ್ಲದೆ ಮಾನವೀಯ ಮೌಲ್ಯಗಳ ಶೋಧನೆಯಲ್ಲಿಯೂ ತೊಡಗಿರುತ್ತವೆ. ಶಮ್ಯಾಕಿನ್ ಕತೆಗಳು. ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುವ ಜನತೆಯ ಧ್ವನಿಯಾಗಿ ಅರ್ಥಪೂರ್ಣವೆನ್ನಿಸುತ್ತವೆ. ಅನಂತರ ರಚಿತವಾದ ಅವರ ಕತೆಗಳಲ್ಲಿಯೂ ಇದೇ ಧೋರಣೆ ಪ್ರಾಮುಖ್ಯತೆ ಪಡೆದಿದೆ.

ಶಮ್ಯಾಕಿನ್ ಕತೆಗಳ ನಾಯಕರು ವೈರಿಗಳೊಂದಿಗೆ ಜೀವದ ಹಂಗುದೊರೆದು ಹೋರಾಡುತ್ತಾರೆ: ನಿಜವಾದ ಮಾನವೀಯ ಮೌಲ್ಯಗಳನ್ನು ರಕ್ಷಿಸಲು ಹೆಣಗುತ್ತಾರೆ. ಅವರ ದೇಶಾಭಿಮಾನ ಎಣೆಯಿಲ್ಲದ್ದು. ದಾಸ್ಯಶೃಂಖಲೆಯಿಂದ ಮಾನವತೆಯನ್ನು ಮುಕ್ತಮಾಡುವ ತತ್ವಕ್ಕೆ ಬದ್ಧವಾಗಿರುವ ಸೋವಿಯತ್ ಜನತೆಯ ಹೋರಾಟದಲ್ಲಿ ಬೈಲೊ-ರಷ್ಯನ ಜನ ತೋರಿದ ನಿಷ್ಠೆ, ತ್ಯಾಗ, ಬಲಿದಾನಗಳು ಶಮ್ಯಾಕಿನ್ ಕತೆಗಳ ಮೂಲಸ್ರೋತವಾಗಿವೆ. ಯುದ್ಧದ ಬೇಗೆ ಹೊತ್ತಿಕೊಂಡಿದ್ದಾಗ ಬರೆದ ಸಾಹಿತ್ಯ ಒಂದು ರೀತಿಯಾದರೆ, ಯುದ್ಧಾದನಂತರ ಬರೆದ ಸಾಹಿತ್ಯ ಇನ್ನೊಂದು ರೀತಿಯಿಂದ ಅರ್ಥವತ್ತಾಗಿರುತ್ತದೆ. ಯುದ್ಧ ಮುಗಿದು ಹದಿನೈದು ವರ್ಷಗಳ ತರುವಾಯ ಇವಾನ್ ಶಮ್ಯಾಕಿನ್ ಮತ್ತೆ ಯುದ್ಧ ಕಾಲದ ಅವಿಸ್ಮರಣೀಯ ಘಟನೆಗಳನ್ನು ಸ್ಮರಿಸಿಕೊಂಡು 'ಕಷ್ಟದಿಂದ ಪಡೆದ ಸುಖ' ಎಂಬ ಹೆಸರಿನ ಐದು ಭಾಗದ ಕಾದಂಬರಿ ರಚನೆಗೆ ತೊಡಗಿದ್ದುಂಟು. ಈ ಕಾದಂಬರಿ ಮಾಲಿಕೆಯ ಮೊದಲಭಾಗ 'ಬೆಂಕಿ ಮತ್ತು ಹಿಮ'. ಇದರಲ್ಲಿ ಯುದ್ಧದ ಅನುಭವಕ್ಕೆ ಅಭಿವ್ಯಕ್ತಿ ದೊರಕಿದ್ದರೂ ಅದು ಆ ತಲೆಮಾರಿನ ಜನಾಂಗದ ಮನೋವೈಜ್ಞಾನಿಕ ಅಧ್ಯಯನವೆಂಬಂತೆ ಮೂಡಿಬಂದಿರುವ ಕೃತಿ. ಸಹಾಯಕ ಸೈನ್ಯಕ್ಕೆ ಸಂಬಂಧಿಸಿದ ಮಹತ್ವದ ಘಟನೆಗಳ ಮೇಲೆ ಕೇಂದ್ರೀಕೃತವಾಗಿರುವ ಕಥೆ ಇಲ್ಲಿದೆ.

ಶಮ್ಯಾಕಿನ್ ಯುದ್ಧದ ಬೇಗೆಯಿಂದ ಉಧ್ವಸ್ತಗೊಂಡ ಬೈಲೊ-ರಷ್ಯಕ್ಕೆ ಮರಳಿದ ಮೇಲೆ ಹಳ್ಳಿಯೊಂದರಲ್ಲಿ ಶಾಲಾ ಶಿಕ್ಷಕರಾಗಿ ನೆಲೆಸಿದರು. ಹಳ್ಳಿಯ ಚುನಾವಣೆಯಲ್ಲಿ ಪಕ್ಷದ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಜನತೆಯ ಕಷ್ಟ-ಸುಖಗಳಲ್ಲಿ ಭಾಗಿಯಾದರು. ಯುದ್ಧ ಕಾಲದಲ್ಲಿ ವೈರಿಗಳ ಜತೆ ಹೋರಾಡುತ್ತಿದ್ದ ಸಹಾಯಕ ಸೈನ್ಯ ಶಿಬಿರದಲ್ಲಿ ತಕ್ಕ ಶಿಸ್ತು ಇಲ್ಲದ್ದನ್ನು ಕಣ್ಣಾರೆ ಕಂಡ ಸ್ವಾನುಭವಿ

ವನ್ನು ಬರೆಯುವುದು ಅವರಿಗೆ ಅನಿವಾರ್ಯವೆನಿಸಿತು. ಯುದ್ಧದ ಬೆಂಬೂದಿ ಹಾಗೂ ವಿನಾಶದಿಂದ ಪುನಃ ತಮ್ಮ ದೇಶವನ್ನು ಮೇಲೆತ್ತಬೇಕೆನ್ನುವ ಜನ ಸಮು ದಾಯದ ಆಶೆ ತೀವ್ರವಾಗಿದ್ದುದನ್ನು ಅವರು ಗುರ್ತಿಸಿದರು. ಈ ಹಿನ್ನೆಲೆಯಲ್ಲಿ ಸಾಹಿತಿ ಶಮ್ಯಾಕಿನ್ ಅವರಲ್ಲಿ ಮತ್ತೆ ಬರೆಯಬೇಕೆನ್ನುವ ಉತ್ಸಾಹ ಕುದುರಿದ್ದು ಸಹಜವೇ. ಆ ಸಂದರ್ಭಗಳಿಂದ ಶಮ್ಯಾಕಿನ್ ಅವರಿಗೆ ಮತ್ತೆ ನವೀನ ಪ್ರೇರಣೆ ದೊರೆಯಿತು. ಕೆಲವು ದಿನ ಕಳೆದುಹೋದ ಶಕ್ತಿ ಸಾಮರ್ಥ್ಯ ಹಾಗೂ ಕುತೂಹಲ ಗಳನ್ನು ಎಲ್ಲಿಂದ ಪಡೆಯಬೇಕು? ಎನ್ನುವ ಪ್ರಶ್ನೆ ಸಾಹಿತಿ ಶಮ್ಯಾಕಿನ್ ಅವರನ್ನು ಕಾಡಿತ್ತು. ಆದರೆ, ಹಳ್ಳಿಯಲ್ಲಿ ಸ್ಕೂಲ್ ಶಿಕ್ಷಕರೆಂದು ಕೆಲಸಮಾಡುತ್ತ, ಪಾರ್ಟಿಯ ಕಾರ್ಯದರ್ಶಿಯಾಗಿ, ಕಮ್ಯುನಿಷ್ಟ ಪಕ್ಷದ ತತ್ವಪ್ರಣಾಲಿಯನ್ನು ಬೋಧೆ ಮಾಡುತ್ತ ಅತ್ಯಂತ ಕಠಿಣತಮವಾದ ದಿನಗಳನ್ನು ಕಳೆಯಬೇಕಾಗಿತ್ತು. ಕೋಣೆಯಲ್ಲಿ ಮೇಣ ಬತ್ತಿ ಹಚ್ಚಿಕೊಂಡು ಬರೆಯಲು ಕೂತರೆ, ಹೊರಗೆ ಕಿಟಕಿಯ ಕಟ್ಟೆಯ ಮೇಲೆಲ್ಲ ಹಿಮ ಒಟ್ಟುತ್ತಿತ್ತು. ಟೇಬಲ್ಲನ್ನು ಸ್ವಲ್ಪಕೂಡ ಅಲುಗಾಡಿಸುವ ಹಾಗಿರಲಿಲ್ಲ. ಅದು ಅಲುಗಾಡಿದ್ದರೆ ಹಿಮದ ರಾಶಿಯೇ ಕಿಟಕಿಯೊಳಗಿಂದ ನುಗ್ಗಿ ಬರುವ ಭಯ ವಿತ್ತು. ಇಂಥ ವಿಷಮ ಸ್ಥಿತಿಯಲ್ಲಿಯೇ 'ಆಳವಾದ ಪ್ರವಾಹ' ಹೆಸರಿನ ಕಾದಂಬರಿಗೆ ಕಥಾವಸ್ತು ಹಾಗೂ ಸಾಮಗ್ರಿ ಸಿಕ್ಕಿತೆಂದು ಸ್ವತಃ ಲೇಖಕರೇ ಒಂದೆಡೆ ಹೇಳಿದ್ದಾರೆ. ಈ ಕಾದಂಬರಿ ತರುಣ ವಯಸ್ಸಿನ ಶಮ್ಯಾಕಿನ್ ಅವರಿಗೆ ಜನಪ್ರಿಯತೆಯನ್ನು ತಂದು ಕೊಟ್ಟಿತಲ್ಲದೆ ಸ್ಟೇಟ್ ಪುರಸ್ಕಾರವೂ ಲಭ್ಯವಾಯಿತು.

ನಾಝಿಗಳ ವಶದಲ್ಲಿದ್ದಾಗಿನ ಬೈಲೊ-ರಷ್ಯನ್ ಜನತೆಯ ಸುಖ-ದುಃಖದ ಕತೆ ಇಲ್ಲಿದೆ. ಜರ್ಮನಿ ಘೋಷಿಸಿದ 'ಹೊಸ ಆಜ್ಞೆ' ಯನ್ನು ಬೈಲೊ-ರಷ್ಯನ್ ರೈತರು ಉಲ್ಲಂಘಿಸಿದ್ದರಿಂದ, ನಾಝಿ ಜರ್ಮನಿಗಳ ಕಲ್ಪನೆ ತಲೆಕೆಳಗಾಯಿತು. ಈ ಕಾದಂಬರಿಯಲ್ಲಿ ಕಾರ್ಪ ಮಾಯೇವ್ಹಸ್ಕಿ ಎಂಬ ವೃದ್ಧರೈತನೊಬ್ಬ ತನ್ನ ಅಸ್ತಿತ್ವ ರಕ್ಷಣೆಗಾಗಿ ಹಾಗೂ ದೇಶಾಭಿಮಾನದಿಂದ —ಪ್ರೇರಿತನಾಗಿ ನಾಝಿಗಳ ವಿರುದ್ಧ ಸಿಡಿದೆದ್ದು ನಿಂತದ್ದು ಅತ್ಯಂತ ಮಹತ್ವದ ಘಟನೆಯಾಗಿ ಗಮನ ಸೆಳೆಯುತ್ತದೆ. ಸಾಂಕೇತಿಕವಾಗಿರುವ ದೃಶ್ಯವೊಂದರಿಂದ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಪಾರ್ಟಿಸನ್ ಕ್ಯಾಂಪಿನಿಂದ ಮಾಯೇವ್ಹಸ್ಕಿ ಕುಟುಂಬ ತನ್ನೂರಿಗೆ ಮರಳುತ್ತದೆ. ಅಲ್ಲಿ ಮನೆ ಎನ್ನುವುದು ಇರಲಿಲ್ಲ. ಜರ್ಮನ್ನರು ಅದನ್ನು ಭಸ್ಮಗೊಳಿಸಿದ್ದರು. ಕುಟುಂಬದ ಮುಖ್ಯಸ್ಥನೆಂದು ಸೈನಿಕನೊಬ್ಬ ತನಗೆ ಕಾಣಿಕೆಯಾಗಿತ್ತಿದ್ದ ಗುದ್ದಲಿಯ ನ್ನೆತ್ತಿ ಬೂದಿಯ ರಾಶಿಯನ್ನು ಅಗಿಯುತ್ತಾನೆ. ಬೂದಿಯ ರಾಶಿಯೊಳಗಿಂದ ಮಣ್ಣನ್ನು ಹೊರತೆಗೆದು "ಬರ್ರಿ- ಮಕ್ಕಳೆ, ಕಟ್ಟುವ ಕೆಲಸಕ್ಕೆ ಸನ್ನದ್ಧರಾಗೋಣ" ಎಂದು ಮಾಯೇವ್ಹಸ್ಕಿ ನುಡಿದದ್ದು ಅತ್ಯಂತ ಸಾಂಕೇತಿಕತವೂ ಅರ್ಥಪೂರ್ಣವೂ ಆಗಿದೆ. ಯುದ್ಧ ವೃತ್ತಾಂತದ ಮುಕ್ತಾಯದ ಸೂಚನೆಯೂ ಇಲ್ಲಿದೆ. ಇದರೊಂದಿಗೆ ಜನಸಮುದಾಯದ ಶಕ್ತಿ, ಸಾಮರ್ಥ್ಯ ಹಾಗೂ ಶ್ರಮ ದೇಶವನ್ನು ಕಟ್ಟುವ ಕಾರ್ಯಕ್ಕೆ ವಿನಿಯೋಗವಾಗುತ್ತದೆ.

ಇವಾನ್ ಶಮ್ಯಾಕಿನ್ 'ಸುದೈವ' 'ಸ್ವಚ್ಛಂದ ಋತುಗಳು' 'ನಿಮ್ಮ ಅಂಗೈಯು ಲ್ಲೊಂದು ಹೃದಯ' ಮುಂತಾದ ಮೂರು ಕಾದಂಬರಿಗಳನ್ನು ರಚಿಸಿದ್ದಲ್ಲದೆ ಹಲವು ನಾಟಕಗಳನ್ನು ಕತೆಗಳನ್ನು ರಚಿಸಿದ್ದುಂಟು. ಬೈಲೊ-ರಷ್ಯದಲ್ಲಿ ಇವಾನ್ ಶಮ್ಯಾಕಿನ್ ಅತ್ಯಂತ ಶಕ್ತಿಶಾಲಿ ಹಾಗೂ ಸಾಮಾಜಿಕ ಕಾಳಜಿಯುಳ್ಳ ಸಾಹಿತಿಯೆಂದು ಖ್ಯಾತರಾಗಿದ್ದಾರೆ.

ಒಂದಾದ ಮೇಲೊಂದು ಪುಸ್ತಕ ರಚಿಸುವ ಸಾಮರ್ಥ್ಯ ಇವರಿಗಿದೆ. ನಗರ ಹಳ್ಳಿಗಳಲ್ಲೆಲ್ಲ ಸಂಚರಿಸುತ್ತ, ಹಲವು ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ. ಇವರು ಬೈಲೊ-ರಶ್ಯನ್ ಡೆಪ್ಯೂಟಿ ಮತ್ತು ಚೇರಮನ್ ಆಗಿರುವರಲ್ಲದೆ, ಬೈಲೊ-ರಷ್ಯನ್ ಸಾಹಿತಿಗಳ ಒಕ್ಕೂಟದ ನೇತಾರರಲ್ಲಿ ಒಬ್ಬರಾಗಿದ್ದಾರೆ. ಬೈಲೊ-ರಷ್ಯನ್ ಶಾಂತಿಕೂಟದ ಸದಸ್ಯರೂ ಆಗಿದ್ದಾರೆ. ಇವಲ್ಲದೆ ಕಾರ್ಮಿಕ ಸಂಘದ ಸಭೆಗಳಲ್ಲಿ, ವಾಚಕರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಹೀಗೆ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದ್ದರೂ ಇವರ ಬರವಣಿಗೆ ನಿರಾತಂಕವಾಗಿ ಸಾಗಿರುವುದು ಆಶ್ಚರ್ಯ ವೆನ್ನಿಸದಿರದು. ನಿತ್ಯ ಜೀವನದಲ್ಲಿ ಕಂಡದ್ದನ್ನು, ಕೇಳಿದ್ದನ್ನು ಮನಮುಟ್ಟುವಂತೆ ಚಿತ್ರಿಸಲು ವಿಶಿಷ್ಟಗುಣ ಇವರ ಶೈಲಿಗಿರುವುದರಿಂದ ಶಮ್ಯಾಕಿನ್ ಕೃತಿಗಳು ಅತ್ಯಂತ ಜನಪ್ರಿಯವಾಗಿವೆ.

ಕತೆಯನ್ನು ಚೆನ್ನಾಗಿ ಹೇಳಬಲ್ಲ ಪ್ರತಿಭೆ ಶಮ್ಯಾಕಿನ್‌ರಿಗಿದೆ. ಅವರ 'ಹಿಮಸಮಯ' ಕಾದಂಬರಿ ಇದಕ್ಕೊಂದು ನಿದರ್ಶನ. ಯುದ್ಧಕಾಲದ ವಿಶಿಷ್ಟ ವಾತಾವರಣವನ್ನು ಸೃಷ್ಟಿಸಿ, ಅಂದಿನ ಘಟನೆಗಳನ್ನು ಸಂಯೋಜಿಸಿ ಕತೆ ಹೇಳುವ ಕಲೆ ಶಮ್ಯಾಕಿನ್‌ರಿಗೆ ಸಾಧ್ಯವಾಗಿದೆ. 'ಹಿಮಸಮಯ' ಕಾದಂಬರಿಯನ್ನು ಓದುತ್ತ ಹೋದಂತೆ ಅಂದಿನ ಘಟನೆಗಳೆಲ್ಲವೂ ಚಿತ್ರಭಿತ್ತಿಯ ಮೇಲೆ ಮೂಡಿ ಚಲನಚಿತ್ರ ವೊಂದನ್ನು ನೋಡಿದ ಅನುಭವ ಉಂಟಾಗುತ್ತದೆ. ಬದುಕಿನ ಜಟಿಲ ಹಾಗೂ ಸಂಕೀರ್ಣ ವಿಷಯಗಳನ್ನು ಕಲಾತ್ಮಕವಾಗಿ ಚಿತ್ರಿಸಬಲ್ಲ ಕೌಶಲ್ಯ ಶಮ್ಯಾಕಿನ್‌ರಿಗೆ ಸಾಧ್ಯವಾಗಿದೆ. ಸಹಜವಾಗಿಯೆ ವಿಸ್ತೃತಗೊಳ್ಳಬಲ್ಲ ಕಥಾವಸ್ತುವನ್ನು ಶಮ್ಯಾಕಿನ್ ಆಯ್ದುಕೊಳ್ಳುತ್ತಾರೆ. ಘಟನೆಗಳೆಲ್ಲ ವಾಸ್ತವಿಕತೆಗೆ ಬದ್ಧವಾಗುತ್ತ, ವಿಶಿಷ್ಟ ಸಂದರ್ಭದಲ್ಲಿ ಬದುಕಿದ್ದ ಆಯಾ ಪಾತ್ರಗಳನ್ನು ವರ್ಣನೆ ಹಾಗೂ ವಿವರಗಳ ಮೂಲಕ ಜೀವಂತಗೊಳಿಸುತ್ತ ಪ್ರತ್ಯಕ್ಷೀಕರಿಸುತ್ತಾರೆ. ತನ್ನ ದೇಶದ ವಾಸ್ತವಿಕ ಸ್ಥಿತಿಗತಿಗಳಲ್ಲಿ ಆವಿರ್ಭವಿಸುವ ಶಮ್ಯಾಕಿನ್ ಅವರ' ಈ ಕೃತಿ ಮಾನವ ಜನಾಂಗಕ್ಕೆ ವಿಶಿಷ್ಟ ಸಂದೇಶವನ್ನು ನೀಡುವಲ್ಲಿ ಸಾರ್ಥಕವಾಗಿದೆ. ಒಂದು ದೃಷ್ಟಿಯಿಂದ 'ಹಿಮಸಮಯ' ಮಾನವೀಯ ಮೌಲ್ಯಗಳನ್ನು ಧ್ವನಿಸುವ ಅತ್ಯಂತ ಅರ್ಥಪೂರ್ಣ ಕಾದಂಬರಿಯಾಗಿದೆ.

'ಹಿಮಸಮಯ' ಹಲವು ಕತೆಗಳು ಹಾಗೂ ಘಟನೆಗಳಿಂದ ದಟ್ಟವಾಗಿ ಹೆಣೆಯಲ್ಪಟ್ಟಿರುವ, ಸಂಕೀರ್ಣ, ಅನುಭವಗಳನ್ನು ತೆರೆದುತೋರುವ ಕಾದಂಬರಿ.

ಇವರಲ್ಲಿ ಬರುವ ಪಾತ್ರಗಳು ಭಿನ್ನ ತಲೆಮಾರುಗಳಿಗೆ ಸಂಬಂಧಪಟ್ಟವುಗಳು. ತಲೆಮಾರಿನಿಂದ ತಲೆಮಾರಿಗೆ ಹರಿದುಬರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯದ ಸಂಕೀರ್ಣ ವಿಷಯಗಳು ಈ ಕಾದಂಬರಿಯುದ್ದಕ್ಕೂ ಹರಡಿಕೊಂಡಿವೆ. ಎರಡನೆಯ ಮಹಾಯುದ್ಧದ ನೈಜಅನುಭವದಿಂದ ಮೊದಲ್ಗೊಂಡ ಪಾತ್ರಗಳು ಅನಂತರದ, ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು ಹಾಗೂ ಸ್ವತಂತ್ರ ರಾಷ್ಟ್ರವನ್ನು ಕಟ್ಟಬೇಕೆನ್ನುವ ದೇಶನಿಷ್ಠ- ಈ ಎಲ್ಲ ವಿಷಯಗಳಿಗೆ ಇಲ್ಲಿ ಅಭಿವ್ಯಕ್ತಿ ದೊರಕಿದೆ. ಮನುಷ್ಯನನ್ನು ಬೇಟೆಯಾಡುತ್ತ ಬಂದ ಯುದ್ಧದ ಭೀಕರ ಪರಿಣಾಮಗಳನ್ನು ಕಣ್ಕಟ್ಟುವಂತೆ ಚಿತ್ರಿಸುವ ಕಾದಂಬರಿ 'ಹಿಮಸಮಯ'. ನಾಝಿಃಜರ್ಮನಿಗಳ ಕ್ರೌರ್ಯದ ವಿರುದ್ಧ ಸಿಡಿದೇಳುವ ಬೈಲೊ-ರಷ್ಯನ್ ಜನತೆಯ ಹೋರಾಟ ಅತ್ಯಂತ ಅರ್ಥಪೂರ್ಣವಾಗಿದ್ದು ಅದು ಅಖಂಡ ಮಾನವೀಯ ಮೌಲ್ಯಗಳನ್ನು ರಕ್ಷಿಸಲು ಬದ್ಧವಾಗಿರುವುದು. ಮನುಷ್ಯನಲ್ಲಿ ಕೆಲವು ದೌರ್ಬಲ್ಯಗಳಿರಬಹುದಾದರೂ ತನ್ನ ರಾಷ್ಟ್ರ, ಜನತೆ ಹಾಗೂ ಮಾನವೀಯತೆಯ ಹಿತಕ್ಕಾಗಿ ದುಡಿದು ಸಮಾಜದ ಋಣ ತೀರಿಸುವದು ಅತ್ಯಗತ್ಯವಾದದ್ದು.

ಈ ಕಾದಂಬರಿಯ ನಾಯಕ ಆಂತೊನ್ಯೂಕ್‌ನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅಂತೊನ್ಯೂಕನ ಯುದ್ಧಕಾಲದ ಅನುಭವಕ್ಕೆ ಇಲ್ಲಿ ಅಭಿವ್ಯಕ್ತಿ ದೊರಕಿದೆ. ಅಂತ್ಯೊನ್ಯೂಕ್ ಕತೆಯನ್ನು ಹೇಳುತ್ತ ಹೋದಂತೆಲ್ಲ ಗತಕಾಲದ ಘಟನೆ, ಸನ್ನಿವೇಶ ಸಂದರ್ಭಗಳು ಆಯಾ ವಾತಾವರಣವನ್ನು ಸೃಷ್ಟಿಸುತ್ತ, ಜೀವಂತವಾಗುತ್ತ, ಓದುಗನ ಮನಸ್ಸನ್ನು ಕಲಕುತ್ತವೆ. ಆಂತೊನ್ಯೂಕನ ಕತೆ ಬೈಲೊ- ರಷ್ಯನ್ನರ ಕಥೆಯಾಗಿ, ಸೋವಿಯತ್‌ದೇಶದ ಹೋರಾಟದ ಕಥೆಯಾಗಿ ಗಮನಸೆಳೆಯುತ್ತದೆ. ಯುದ್ಧಾಗ್ನಿಯಲ್ಲಿ ಬೆಂದು ಹೋದ ಮೌಲ್ಯಗಳನ್ನು ಶೋಧಿಸುವ ಹಾಗೂ ಪುನಃ ಸೃಷ್ಟಿಸುವ ಅಖಂಡಮಾನವತೆಯ ಕಥೆಯಾಗಿ, ಮಾರ್ಪಡುತ್ತದೆ. ಬೈಲೊ-ರಷ್ಯನ್ ಭೂಮಿಯನ್ನು, ಹಾಗೂ ಜನರ ವಿತ್ತ ಜೀವಿತಗಳನ್ನು ರಕ್ಷಿಸುವ ಹೊಣೆಯನ್ನು ಹೊತ್ತ, ಅಂತೊನ್ಯೂಕ್ ಸೈನ್ಯದ ತುಕಡಿಯು ಪ್ರಾಣದ ಹಂಗುದೊರೆದು ಹೋರಾಡುತ್ತದೆ. ನಾಝಿ ಜರ್ಮನಿಗಳ ಕ್ರೌರ್ಯಕ್ಕೆ ಬಲಿಯಾದ ಮೂವರು ಚಿಕ್ಕಮಕ್ಕಳ ಕರುಣಕಥೆ ಎಂಥವರ ಕರುಳನ್ನು ಮಿಡಿಯುತ್ತದೆ. ಯುದ್ಧದ ಭೀಕರ ಸಂದರ್ಭದಲ್ಲಿಯೂ ಅಂತೊನ್ಯೂಕ್ ತಾನೊಬ್ಬ ಸೈನಿಕನಾಗಿದ್ದರೂ ಅನಾಥೆಯಾಗಿ, ಗರ್ಭಿಣಿಯಾಗಿ ಯುದ್ಧದ ಕ್ಯಾಂಪಿಗೆ ಬಂದು ರಕ್ಷಣೆಯ ಭಿಕ್ಷೆಯನ್ನು ಯಾಚಿಸಿದ ನಾದ್ಯಾಳಿಗೆ (ನದೇಝ್ದಾ) ಅಭಯವನ್ನಿತ್ತು, ಆಶ್ರಯವನ್ನಿತ್ತದ್ದು ಇಡೀ ಕ್ಯಾಂಪಿನಲ್ಲಿ ಟೀಕೆಯ ವಿಷಯವಾಗುತ್ತದೆ. ಅಂತೊನ್ಯೂಕ್ ತನ್ನ ಕರ್ತವ್ಯಪಾಲನೆಯ ಜೊತೆಗೆ, ತಾನೊಬ್ಬ ಮಾನವ ಎನ್ನುವದನ್ನು ಮರೆತಿಲ್ಲ. ನಾದ್ಯಾಳೊಂದಿಗಿನ ಅಂತೊನ್ಯೂಕ್ ಪ್ರೇಮ ಮಾನವೀಯ ಮೌಲ್ಯದ ಇನ್ನೊಂದು ಮಗ್ಗಲನ್ನು ತೆರೆಯುತ್ತದೆ.

ಅಂತೊನ್ಯೂಕನಿಗೆ ಹೆಂಡತಿ, ಮಗ, ಹೆಣ್ಣುಮಕ್ಕಳಿಂದೊಡಗೂಡಿದ ಒಂದು ಕುಟುಂಬವೇ ಇದೆ. ಅವನ ಮೇಲೆ ಕುಟುಂಬದ ಜವಾಬ್ದಾರಿಯೂ ಇದೆ. ಯುದ್ಧ ಮುಗಿದ ಮೇಲೆ, ಕೆಲವು ವರ್ಷ ಮುಂಚಿತವಾಗಿ ಅಂತೊನ್ಯೂಕ್ ಅಧಿಕಾರದಿಂದ ನಿವೃತ್ತನಾಗಬೇಕಾಯಿತು. ಅವಧಿಗಿಂತ ಮುಂಚಿತವಾಗಿ ನಿವೃತ್ತಿಯಾದದ್ದರಿಂದ ಅಂತೊನ್ಯೂಕ್ ಬಗ್ಗೆ ಹಲವು ರೀತಿಯ ಅನುಮಾನ ಹುಟ್ಟಿಕೊಳ್ಳಲು ಅಸ್ಪದ ವಾಯಿತು. ನಿವೃತ್ತಿಯ ಬದುಕು ಅತ್ಯಂತ ಬೇಸರದಾಯಕವಾಗಿದ್ದರೂ, ಅಂತೊ ನ್ಯೂಕ್ ಅದನ್ನು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳುವದಿಲ್ಲ. ಆದರೆ, ಅದು ಅಂತೊನ್ಯೂಕ್‌ನನ್ನು ಅಂತರ್ಮುಖಿಯಾಗಿ ಚಿಂತಿಸುವಂತೆ, ಅವಕಾಶ ಮಾಡಿಕೊಟ್ಟಿತು. ಈ ಅವಧಿಯಲ್ಲಿ ಅಂತೊನ್ಯೂಕ್ ತನ್ನ ಬದುಕಿನಲ್ಲಿ ಸಂಭವಿಸಿದ, ಘಟನೆಗಳನ್ನು, ಸಂದರ್ಭಗಳನ್ನು, ರಾಜ್ಯಕೀಯವನ್ನು, ಸಮಾಜ ಹಾಗೂ ವ್ಯಕ್ತಿಗಳಲ್ಲಿನ ವಿಭಿನ್ನ ಸ್ತರಗಳನ್ನು ಪರಿಭಾವಿಸಲು, ಪರೀಕ್ಷಿಸಲು ಅನುವು ದೊರೆಯಿತೆನ್ನಬಹುದು. ಎಂದೊ ಕೈಮೀರಿ ಘಟಿಸಿದ ತಪ್ಪು-ಒಪ್ಪುಗಳನ್ನು ವಿಮರ್ಶಿಸಿ ನೋಡುವ ಅವಕಾಶ ಸಿಕ್ಕಿತೆನ್ನಬಹುದು. ತನ್ನನ್ನು ಸುತ್ತುವರಿದಿದ್ದ ಸ್ನೇಹಿತರು, ಅಧಿಕಾರಿಗಳು, ದೇಶಾಭಿಮಾನ, ಸ್ನೇಹ, ವಿಶ್ವಾಸ, ಸತ್ಯ ಯುವಮನಸ್ಸು-ಇತ್ಯಾದಿಗಳನ್ನು ಪರಾ ಮರ್ಶಿಸುತ್ತ, ನಾಯಕ ಅಂತೊನ್ಯೂಕ್ ಆತ್ಮಶೋಧನೆಗೆ ತೊಡಗಿದ್ದುದು ಕಾದಂಬ ರಿಯ ಉದ್ದಕ್ಕೂ ಗೋಚರಿಸುತ್ತದೆ. ಹೆಂಡತಿ ಜಲ್ಯಾಗೆ ಅಂತೊನ್ಯೂಕ್ ನಾದ್ಯಾರ ಪ್ರೇಮಕರಣದ ವಿಷಯ ಗೊತ್ತಾಗಿತ್ತು. ಅವಳು ಆ ವಿಷಯಕ್ಕೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ತನ್ನ ಕೌಟುಂಬಿಕ ಜೀವನಕ್ಕೆ ಬದ್ಧವಾಗಿದ್ದಳು. ನಾದ್ಯಾಳ ಮಗಳು 'ವಿಟಾ' ಸೈನಿಕ ಕ್ಯಾಂಪಿನಲ್ಲಿ ಹುಟ್ಟಿದವಳು. ಅಂತೊನ್ಯೂಕ್ ಮತ್ತು ಸ್ನೇಹಿತರು ಕ್ಯಾಂಪಿನಲ್ಲಿ ಹುಟ್ಟಿದ ಆ ಮಗುವಿಗೆ 'ವಿಟಾ' ಎಂದು ಹೆಸರಿಟ್ಟು ಸಂತೋಷಪಟ್ಟಿ ದ್ದರು. 'ವಿಟಾ' ಎಂದರೆ ಜೀವನ ಮತ್ತು ಆಶೆ-ಎಂಥರ್ಥ. ವಿಟಾ ಬೆಳೆದು ದೊಡ್ಡವಳಾಗಿ ಹಳ್ಳಿಯ ಸ್ಕೂಲಿನಲ್ಲಿ ಶಿಕ್ಷಕಿಯಾಗಿದ್ದಳು, ಅಂತೊನ್ಯೂಕ್ ತಾನು ನಿವೃತ್ತಿ ಹೊಂದಿದ ಮೇಲೊಮ್ಮೆ ನಾದ್ಯಾ ವಿಟಾ ನೆಲೆಸಿದ್ದ ಹಳ್ಳಿಗೆ ಹೋಗುತ್ತಾನೆ. ಈವರೆಗೆ ನಾದ್ಯಾ. ವಿಟಾಳಿಗೆ ಅಂತೊನ್ಯೂಕ್‌ನೆ ಆಕೆಯ ತಂದೆಯೆಂದು ಹೇಳುತ್ತ ಬಂದಿದ್ದಳು. ಆದರೆ ಆ ವಿಷಯಕ್ಕೆ ವಿಟಾಳ ಮನಸ್ಸಿನಲ್ಲಿ ಸಂದೇಹ ಸುಳಿಸುಳಿಯಾಗಿ ಎದ್ದು ಅವಳು ತನ್ನ ನಿಜವಾದ ತಂದೆ ಯಾರು ಎನ್ನುವ ಶೋಧನೆಗೆ ತೊಡಗಿದ್ದಳು. ಅಂತೊನ್ಯೂಕ್ ಮೊದಲಬಾರಿ ಹಳ್ಳಿಗೆ ಬಂದಾಗ ವಿಟಾ 'ನೀ ನನ್ನ ತಂದೆಯೆ ?' ಎಂದು ಕೇಳುವುದಕ್ಕೆ ಹಿಂದುಮುಂದೆ ನೋಡಲಿಲ್ಲ. ನಾದ್ಯಾಳಿಗೆ ಕೊಟ್ಟ ವಚನದಂತೆ ಅಂತೊನ್ಯೂಕ್ 'ಹೌದು' ಎನ್ನಬೇಕಾಯಿತು. ಅಂತೊನ್ಯೂಕ್‌ನಿಗೆ ಹೀಗೆ ಸುಳ್ಳುಹೇಳಿ ವಿಟಾಳನ್ನು ವಂಚಿಸಬೇಕೆಂಬ ಉದ್ದೇಶವಿರಲಿಲ್ಲ. ವಿಟಾಳ ತಂದೆ ಯಾರೆನ್ನುವುದು ಅಂತೊನ್ಯೂಕ್‌ನಿಗೆ ಚೆನ್ನಾಗಿ ಗೊತ್ತು. ಆದರೆ ಅದನ್ನು ಹೊರಗೆಡಹಿದರೆ ವಿಟಾ ದೇಶದ್ರೋಹಿಯೊಬ್ಬಳ ಮಗಳೆಂಬುದು ಬಹಿರಂಗಪಡುತ್ತಿತ್ತು. ನಾದ್ಯಾ ಈ ವರೆಗೆ

ಬಚ್ಚಿಟ್ಟ ರಹಸ್ಯ ಸ್ಫೋಟಗೊಳ್ಳುತ್ತದೆಂದು ಭಾವಿಸಿ, ಅಂತೊನ್ಯೂಕ್ ನಾದ್ಯಾಳ ಮಾತನ್ನು ಮನ್ನಿಸಿ, ಅವಳಿಗೆ ತಾನೇ ತಂದೆಯೆಂದು ಹೇಳುವುದು ಅನಿವಾರ್ಯ ವಾಗಿತ್ತು. ಮುಂದಿನದೆಲ್ಲವೂ ಆಂತೊನ್ಯೂಕ್ ಭಾವಿಸಿದಂತೆ ನಡೆಯಲ್ಲಿಲ್ಲ. ಆಂತೊ ನ್ಯೂಕ್ ಹೇಳಿಕೆಯಿಂದ ವಿಟಾಳ ಮನಸ್ಸಿನಲ್ಲಿ ಸಂಶಯ ಹಾಗೂ ಪ್ರತಿಭಟನೆಯ ಬಿರುಗಾಳಿಯೇ ಎದ್ದು ಅವಳು ಅವನನ್ನು ನಂಬದಾದಳು.

ತಂದೆ–ತಾಯಿ ಮಾಡಿದ ತಪ್ಪುಗಳನ್ನು ಅನುಕರಿಸುವಂತೆ ಅವಳ ವರ್ತನೆಗೆ ಪುಟವೇರಿತು. ಯಾವ ವಿಚಾರವೂ ಇಲ್ಲದೆ ಅವಳೊಬ್ಬ ಯುವಕನನ್ನು ಪ್ರೀತಿ ಸಿದಳು. ಅವಳೊಂದು ದಿನ, ತನ್ನ ಸುದೀರ್ಘ ಡೈರಿಯನ್ನು ಬರೆದಿಟ್ಟು, ಮನೆ ಬಿಟ್ಟು ಹೊರಟುಹೋದಳು. ನಾದ್ಯಾ–ಅಂತೊನ್ಯೂಕನಿಗೆ ತುರ್ತು ಸುದ್ದಿಯನ್ನು ಕಳುಹಿಸಿದಳು. ಆಂತೊನ್ಯೂಕ್ ವಿಟಾಳ ಸುದೀರ್ಘ ಡೈರಿಯನ್ನು ನೋಡಿ ಕಕ್ಕಾ ವಿಕ್ಕಿಯಾಗಿ ಅವಳ ಶೋಧನೆಗೆ ತೊಡಗಿದ. ಮನೆಯಿಂದ ಬಹುದೂರದಲ್ಲಿ ಆಸ್ಪತ್ರೆಯೊಂದರಲ್ಲಿ ವಿಟಾ ತೀವ್ರ ನ್ಯೂಮೋನಿಯಾದಿಂದ ಬಳಲುತ್ತಿದ್ದಳು. ಒಂದು ಸುಳ್ಳಿನಿಂದ ಇಷ್ಟೆಲ್ಲಾ ದುರಂತ ಘಟಿಸುತ್ತದೆಂದು ಆಂತೊನ್ಯೂಕ್ ಭಾವಿಸಿರಲಿಲ್ಲ. ಹಾಗೆ ಸುಳ್ಳು ಹೇಳಿದ್ದು, ಆಂತೊನ್ಯೂಕ್‌ನ ತಪ್ಪೂ ಆಗಿರಲಿಲ್ಲ. ಆಂತೊನ್ಯೂಕ್ ವಿಟಾಳನ್ನು ತನ್ನ ಸ್ವಂತದ ಮಗಳೆಂದೇ ಭಾವಿಸಿದ್ದನು. ಅವಳ ಮೇಲೆ ಅವನಿಗೆ ವಿಶೇಷವಾದ ಪ್ರೀತಿಯೂ ಇತ್ತು. ಆದರೆ ಭವಿಷ್ಯದ ಆಪತ್ತುಗಳನ್ನು ತಡೆಹಿಡಿಯು ವುದು ಆತನ ಕೈಯಲ್ಲಿರಲಿಲ್ಲ.

ಆಂತೊನ್ಯೂಕ್‌ನ ಯುದ್ಧಾನುಭವದ ಈ ಕಥನದಲ್ಲಿ ಭೂದ್ಯಕಾ ಕ್ಲೆಷ್ನೇವ್– ರಂಥ ಸ್ವಾರ್ಥ ಲೋಲುಪ ಪಾತ್ರಗಳೂ ಇವೆ. ಸ್ವಾರ್ಥಸಾಧನೆಗಾಗಿ ಇಂಥ ಪಾತ್ರ ಗಳು ಏನು ಬೇಕಾದದ್ದನ್ನು ಮಾಡಲೂ ಸಿದ್ಧ. . ಆಂತೊನ್ಯೂಕ್ ಇಂಥ ಜನರೊಂದಿ ಗಿದ್ದಾಗಲೂ ತನ್ನ ಮನಸ್ಸಿನ ಸ್ತಿಮಿತವನ್ನು ಕಳೆದುಕೊಳ್ಳುವದಿಲ್ಲ. ವಿಟಾಳ ಕತೆ ದುರಂತದ ಹಾದಿ ಹಿಡಿದಾಗ ಕೊನೆಯಲ್ಲಿ ಆಂತೊನ್ಯೂಕ್ ಪ್ರಕ್ಷುಬ್ಧನಾಗಿ ಬೂದ್ಯಕ್‌ಳ ಕಪಾಳಕ್ಕೆ ಹೊಡೆಯುತ್ತಾನೆ ಅಷ್ಟೆ. ಆಂತೊನ್ಯೂಕ್ ರೋಮ್ಯಾಂಟಿಕ್ ದೃಷ್ಟಿ ಕೋನವುಳ್ಳ ತಲೆಮಾರಿಗೆ ಸಂಬಂಧಪಟ್ಟ ಪಾತ್ರವಾಗಿದ್ದರೂ ಮುಂದಿನ ಜನಾಂಗದ ಭವಿಷ್ಯತ್ತನ್ನು ಕುರಿತು ಯೋಚಿಸುವ ಪ್ರಜ್ಞೆ ಅವನಲ್ಲಿದೆ. ತರುಣ ಜನಾಂಗ ತಮ್ಮ ಪೂರ್ವಜರ ಉನ್ನತ ಆದರ್ಶಗಳನ್ನು ಮಾತ್ರ ಸ್ವೀಕರಿಸಿ, ಬದುಕನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳಬೇಕೆಂಬ ನಿಲುವು ಆಂತೊನ್ಯೂಕ್‌ನದು.

ಇವಾನ್ ಶಮ್ಯಾಕಿನ್ ಈ ಕಾದಂಬರಿಯಲ್ಲಿಯೂ ಮುಂಚಿನಂತೆಯೇ: ತರುಣ ಜನಾಂಗದ ಭವಿತವ್ಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿರುವುದನ್ನು ಗಮನಿಸಬಹುದು. 'ನಿಮ್ಮ ಅಂಗೈಯಲ್ಲೊಂದು ಹೃದಯ. ಕೃತಿಯಲ್ಲಿ ಹಳೆ ಮತ್ತು ಹೊಸ ಜನಾಂಗಕ್ಕೆ ಸಂಬಂಧಪಟ್ಟ ವಿಷಯವೇ ಮುಖ್ಯವಾಗಿದೆ. ಹಳೆ ತಲೆಮಾರಿನವರು ತರುಣ

ಜನಾಂಗವನ್ನು ಸಂದೇಹದಿಂದ ನೋಡುವುದು ಹಾಗೂ ಅವರ ಮೇಲೆ ತಮ್ಮ ವಿಚಾರಗಳ ಒತ್ತಡವನ್ನು ಹೇರುವದು ಸರಿಯಲ್ಲ. ತರುಣ ಜನಾಂಗ ತಾನು ಹೊರಬೇಕಾಗಿರುವ ಜವಾಬ್ದಾರಿಗಳನ್ನು ಹೊರಲು ಸಿದ್ಧರಾಗುವುದು ಅಗತ್ಯವಾಗಿದೆ. ತಮ್ಮ ಸಮಸ್ಯೆಗಳು ಮತ್ತು ಜವಾಬ್ದಾರಿಗಳನ್ನು ತಾವು ಅರಿತುಕೊಳ್ಳುವುದರಿಂದ ಭವಿಷ್ಯತ್ತಿನ ಬದುಕು ಅರ್ಥಪಡೆಯುದೆಂಬ ವಿಚಾರ ಶಮ್ಯಾಕಿನ್ ಕಾದಂಬರಿಯ ಪ್ರಧಾನ ಸೂತ್ರವಾಗಿದೆ. ತರುಣರು ಯಥಾವತ್ತಾಗಿ, ತಾಯಿ–ತಂದೆಯರನ್ನು ಅನುಕರಿಸುವುದು ಸರಿಯಲ್ಲ. ಕಾಲಬದಲಾದಂತೆ ಬದುಕಿನ ಮೌಲ್ಯಗಳೂ ಬದಲಾಗುವುದರಿಂದ ಕಾಲಕ್ಕೆ ತಕ್ಕಂತೆ ಯುವಜನಾಂಗ ಪ್ರತಿಸ್ಪಂದಿಸುವುದು ಆಗತ್ಯವಾದದ್ದು, ತಾಯಿ–ತಂದೆಯರ ಉಪದೇಶದಿಂದ ಯುವಕರ ಸಮಸ್ಯೆಗಳು ಪರಿಹಾರಗೊಳ್ಳುವುದಿಲ್ಲ. ಬುದ್ಧಿವಂತಿಕೆ, ಯುಕ್ತಿಗಳಿಂದ ಅದನ್ನು ಸಾಧಿಸಬಹುದು. ಆಂತೊನ್ಯೂಕ್ ತನ್ನ ಮಗ ವಾಸಿಲ್ ಮತ್ತು ವಿಟಾರೊಂದಿಗೆ ನಡೆದುಕೊಂಡ ರೀತಿ ಅತ್ಯಂತ ಗಮನಾರ್ಹವಾಗಿದೆ. ನಾದ್ಯಾಳ ಮಾತಿನಂತೆ, ತಾನು ಅವಳ ತಂದೆ ಎಂದು ಹೇಳಿದ ಒಂದು ಸುಳ್ಳು ಬೆಳೆಯುತ್ತ ಹೋಗಿ ಅದೇ ಹೀಗೆ ದುರಂತವಾತಾವರಣವನ್ನು ಸೃಷ್ಟಿಸುತ್ತದೆಂಬುದು ಆಂತೊನ್ಯೂಕ್‌ನಿಗೆ ಹೊಳೆಯದೆ ಹೋಯಿತು. ತಾನದಕ್ಕೆ ಹೊಣೆಗಾರನಲ್ಲದಿದ್ದರೂ ಅದನ್ನು ಅವನು ಹೊರುವುದು ಅನಿವಾರ್ಯವಾಯಿತು.

ಪ್ರಾಮಾಣಿಕತೆಯಿಂದ ಪ್ರಾಮಾಣಿಕತೆ (ಹುಟ್ಟುವಂತೆ) ಸತ್ಯದಿಂದ ಸತ್ಯ ಹುಟ್ಟುತ್ತದೆಂದು ನಂಬಿದ್ದ ಆಂತೊನ್ಯೂಕ್ ಹಲವು ಬಾರಿ ಬದುಕಿನಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಬದುಕು ಅತ್ಯಂತ ಜಟಿಲವಾದದ್ದರಿಂದ ಎಲ್ಲವೂ ತಾನು ಭಾವಿಸಿದಂತೆ ಸಂಭವಿಸುವುದಿಲ್ಲವೆಂಬುದು ಆತನ ಗಮನಕ್ಕೆ ಬಂತು. ಇಂಥ ಅನುಭವವೇ ಆತನಿಗೆ ತನ್ನ ಶಕ್ತಿ, ಸಾಮರ್ಥ್ಯ ಸೋಲು–ಗೆಲವುಗಳನ್ನರಿಯಲು, ಆತ್ಮವಿಮರ್ಶೆ ಮಾಡಿಕೊಳ್ಳಲು ದಾರಿಮಾಡಿಕೊಟ್ಟಿತೆನ್ನಬಹುದು.

ಆಂತೊನ್ಯೂಕನ ಪಾತ್ರಸೃಷ್ಟಿಸುವಾಗ, ಲೇಖಕರು ಎಲ್ಲದರಲ್ಲಿಯೂ ಆಂತೊನ್ಯೂಕನದೇ ಆದರ್ಶವೆಂಬಂತೆ ಚಿತ್ರಿಸುವ ಗೊಡವೆಗೆ ಹೋಗಿಲ್ಲ. ಅವನೂ ಒಬ್ಬ ಮಾನವೀಯ ದೌರ್ಬಲ್ಯಗಳುಳ್ಳ ಮನುಷ್ಯನಾಗಿದ್ದು, ಟೊಳ್ಳು–ಆದರ್ಶಗಳಿಂದ ದೂರವಾಗಿದ್ದಾನೆ. ನಾದ್ಯಾಳೊಂದಿಗಿನ ಅವನ ಪ್ರೇಮವೇ ಇದಕ್ಕೆ ನಿದರ್ಶನ. ನಾದ್ಯಾಳ ಪಾತ್ರ ಈ ಕಾದಂಬರಿಯಲ್ಲಿ ಒಂದು ಸೆಳೆಮಿಂಚು ಇದ್ದಂತೆ. ತಣ್ಣಗೆ ಉರಿಯುವ ದೀಪದಂತೆ, ಅವಳ ಪಾತ್ರ ಉಜ್ವಲವಾಗಿ ಮೂಡಿ ಓದುಗರ ಗಮನ ಸೆಳೆಯುತ್ತದೆ. ಇವಾನ್ ಶಮ್ಯಾಕಿನ್ ಅವರ 'ಹಿಮಸಮಯ' ಮಾನವೀಯ ಮೌಲ್ಯಗಳನ್ನು ವ್ಯಕ್ತಿ ತೋರುವ ಅತ್ಯಂತ ಮಹತ್ವದ ಕಾದಂಬರಿಯಾಗಿದೆ.

●

ತಮಿಳು ಸಾಹಿತ್ಯದಲ್ಲಿ ಬಸವ ಪುರಾಣ

ಪಿ. ವಿ. ಕುಲಕರ್ಣಿ

ತಮಿಳು ಸಾಹಿತ್ಯದಲ್ಲಿ ಮುಖ್ಯವಾಗಿ ಬಸವಣ್ಣನ ಜೀವನ ಚರಿತ್ರೆಯನ್ನು ತಿಳಿಸುವ ಕಾವ್ಯಗಳು ಎರಡು. ೧. ವ(ಬ)ಸವ ಪುರಾಣ ೨. ಪ್ರಭುಲಿಂಗಲೀಲೆ. ಇವೆರಡೇ ಅಲ್ಲದೆ ವಸವ ಪುರಾಣ ಶತಕಮ್ ಎಂಬ ಮತ್ತೊಂದು ಕಿರುಕಾವ್ಯವೂ ಇದೆ. ಬಸವ ಪುರಾಣವನ್ನು ಬರೆದ ಕವಿಯ ಹೆಸರು ತಿಳಿದು ಬಂದಿಲ್ಲ. ಕವಿ ಕಾವ್ಯಾರಂಭದಲ್ಲಿ ಹೀಗೆ ಹೇಳಿದ್ದಾನೆ.

ಕುಲವು ಪಾಲಕ್ ಕುರುಕ್ಕಿಚ್ಚೋ ಮಿಾಸುರ್
ನುಲಗಿನ್ ಮುನ್ನ ಮುರೈತ್ತ ತೆಲುಂಗಿನ್ನೈ
ಯಿಲಗು ವೀಮ ಕವಿಗನ್ ನಡನ್ದರು
ನಲಬು ರಾಣನ್ ತಮಿಳಾ ನವಿಜ್ಬುವಾಮ್

"ಪಾಲ್ಕುರಿಕೆ ಸೋಮನಾಥ ಪಂಡಿತ ಮೊದಲು ತೆಲುಂಗಿನಲ್ಲಿ ಬಸವ ಪುರಾಣವನ್ನು ರಚಿಸಿದ. ಭೀಮಕವಿ ತೆಲುಗಿನಿಂದ ಕನ್ನಡಕ್ಕೆ ಭಾಷಾಂತರಿಸಿದ. ನಂತರ ಕನ್ನಡದಿಂದ ತಮಿಳಿಗೆ.

ಅರುಳಾಂಞ್ ಚೆನ್ನವಸವೇಶ ನಾದಿಯಾಮ್
ಪೊರುವಿಲ್ ಕಾಂಚಿ ಪುರಂಜೇರ್ ತಪೋದನರ್
ಮರುವುಂಞ್ ಚೆಂಜೊಲ್ ವಶವಶ ರಿದ್ಧೈಮುಜಿ‌ರ್
ಅರುವು ನಿಂಗಾ ತುರೈಯೆನಚ್ ಚಾಜ್ಬುವಾಮ್

"ಚೆನ್ನಬಸವಣ್ಣ ಮತ್ತು ಕಾಂಚೀಪುರದ ವೀರಶೈವ ಜಂಗಮರ ಆದೇಶದ ಮೇರೆಗೆ ಭಾಷಾಂತರಿಸಲಾಯಿತು."

ಕಾವ್ಯಾರಂಭದಲ್ಲಿ ತಿಳಿದು ಬಂದಿರುವ ಸಂಗತಿಯಿಂದ ಈ ಕಾವ್ಯವನ್ನು ೧೭ನೇ ಶತಮಾನದಲ್ಲಿ ಬರೆದು ಮುಗಿಸಿರಬಹುದೆಂದು ತಿಳಿಯಬಹುದು. ಸಂಪಾದಕರ ಮುನ್ನುಡಿಯಿಂದ ಬಸವ ಪುರಾಣವು ಸಂಸ್ಕೃತದಲ್ಲಿ ಶ್ರೀ ಶಂಕರಾರ್ಯ ವೀರಶೈವ ಎಂಬ ಪ್ರಸಿದ್ಧ ವಿದ್ವಾಂಸರಿಂದ ಬರೆಯಲ್ಪಟ್ಟಿರುವ ಸಂಗತಿ ತಿಳಿದುಬರುತ್ತದೆ.

ತಮಿಳಿನ ವಸವ ಪುರಾಣವನ್ನು ಸಂಪಾದಿಸಿದವರು ಸೇಲಂನ ಶ್ರೀ ನಾಗಿ ಚೆಟ್ಟಿಯಾರ್. ಅದರ ಕಾಲ ೧೯೩೧. ಇದು ದೀರ್ಘವಾದ ವ್ಯಾಖ್ಯಾನ, ಪದಶಃ

ಅರ್ಥ, ಅಡಿಟಿಪ್ಪಣಿಗಳೊಂದಿಗೆ ಪ್ರಕಟಗೊಂಡಿದೆ. ಬಸವ ಪುರಾಣದ ಶೈಲಿ ತಿಳಿಯದಾಗಿಯೂ, ಸುಲಭಗ್ರಾಹ್ಯವಾಗಿಯೂ ಇದೆ. ಈ ಕೃತಿಯು ಎಂಟು ಅಧ್ಯಾಯಗಳನ್ನೊಳಗೊಂಡಿದೆ. ಒಂದೊಂದು ಅಧ್ಯಾಯವನ್ನು ಚರುಕ್ಕಮ್ ಎಂಬ ಹೆಸರಿನಿಂದ ಕರೆಯಲಾಗಿದೆ. ಅವು ಯಾವುವೆಂದರೆ ೧. ಪಾಯಿರ ಚ್ಚರುಕ್ಕಂ ೨. ತಿರುಕ್ಕಯಿಲಾಯ ಚ್ಚರುಕ್ಕಮ್ ೩. ತಿರುವವತಾರ ಚ್ಚರುಕ್ಕಮ್ ೪. ಉಪದೇಶ ಚ್ಚರುಕ್ಕಮ್ ೫. ದಂಡನಾಯಕ ಚ್ಚರುಕ್ಕಮ್ ೬. ತಿರುವಿಳೈಯಾಡಲ್ ಚ್ಚರುಕ್ಕಮ್ ೭. ತಿರುಕ್ಕೂಟ ಚ್ಚರುಕ್ಕಮ್ ೮. ತಿರುವಾದು ಚ್ಚರುಕ್ಕಮ್.

ಪ್ರತಿಯೊಂದು ಚರುಕ್ಕವೂ ಅನೇಕ ಪುರಾಣಗಳಿಂದೊಡಗೂಡಿದೆ. ಅದರಲ್ಲಿ ಜಂಗಮರ ಹಾಗೂ ಬಸವಣ್ಣನ ಹಿರಿಮೆ, ಪವಾಡ ಶ್ರೇಷ್ಠತೆಗಳು ವ್ಯಕ್ತವಾಗಿವೆ.

ಪಾಯಿರ ಚ್ಚರುಕ್ಕಮ್ : ಇಲ್ಲಿ ಕೃತಿಕಾರ ತಮಿಳು ಕೃತಿ ರಚನೆಗೆ ಕಾರಣವನ್ನು ಹೇಳಿದ್ದಾನೆ. ಈ ಕೃತಿಯು ಮೂಲ ಮೊದಲಿಗೆ ತೆಲುಗಿನಲ್ಲಿದ್ದು ನಂತರ ಕನ್ನಡಕ್ಕೂ, ಕನ್ನಡದಿಂದ ಅದನ್ನು ತಮಿಳಿಗೆ ಭಾಷಾಂತರಿಸಿರುವುದಾಗಿ ತಿಳಿಯಪಡಿಸಿದ್ದಾನೆ. ಕೃತಿಯ ರಚನೆ ಸುಲಲಿತವಾಗಿ ಮುನ್ನಡೆಯಲು ಕವಿ ಹಲವಾರು ಶಿವಶರಣರನ್ನೂ, ತಮಿಳು ಸಮಯಾಚಾರ್ಯರಾದ ಅಪ್ಪರ್, ಸಂಬಂಧರ್, ಸುಂದರರ್ ಮತ್ತು ಮಾಣಿಕ್ಯವಾಚಿಗರನ್ನೂ, ದೇವತೆಗಳನ್ನೂ ಸ್ತುತಿಸಿದ್ದಾನೆ.

ತಿರುಕ್ಕಯಿಲಾಯಚ್ಚರುಕ್ಕಮ್ : ಇಲ್ಲಿ ಕೈಲಾಸಪರ್ವತ, ಶಿವ, ಪಾರ್ವತಿ ಶಿವ ಗಣಗಳು, ಶಿವನ ಒಡ್ಡೋಲಗ ಮುಂತಾದುದರ ವರ್ಣನೆಯಿದೆ. ನಾರದ ಮಹರ್ಷಿ ಬಂದು, ಶಿವನ ಮುಂದೆ ಭೂಲೋಕದಲ್ಲಿ ಜೈನಮತವು ಉಚ್ಛ್ರಾಯ ಸ್ಥಿತಿಯಲ್ಲಿದ್ದು ವೀರಶೈವಮತ ವರ್ಧನೆಗೆ ಕಂಟಕವಾಗಿದೆಯೆಂದೂ, ಭಕ್ತಿಮಾರ್ಗಕ್ಕೆ ಬಾಧಕವಾಗಿದೆಯೆಂದೂ ದೂರುತ್ತಾನೆ. ಅದಕ್ಕೆ ಪರಿಹಾರವನ್ನು ಸೂಚಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ಉತ್ತರವಾಗಿ ಶಿವನು ತನ್ನ ಅಂಶಸ್ವರೂಪಿಯಾದ ನಂದಿದೇವನನ್ನು ಭೂಲೋಕಕ್ಕೆ ಕಳಿಸುವುದಾಗಿ ಅಭಯ ನೀಡುತ್ತಾನೆ. ನಂದಿದೇವನ ಸದ್ಗುಣಗಳನ್ನೂ, ಶ್ರೇಷ್ಠತೆಯನ್ನೂ ಚರಿತೆಯನ್ನೂ ಶಿವನು ಕೊಂಡಾಡುತ್ತಾನೆ. ನಂತರ ಶಿವನು ನಂದಿ ದೇವನನ್ನು ಕರೆದು ಭೂಲೋಕಕ್ಕೆ ಹೋಗಿ ವೀರಶೈವ ಮತ ಸಂವರ್ಧನೆಯನ್ನು ಮಾಡಬೇಕೆಂದೂ, ಜೈನರ ಪ್ರಾಬಲ್ಯವನ್ನು ಕುಗ್ಗಿಸಬೇಕೆಂದೂ ಹೇಳುತ್ತಾನೆ. ಇವರಿಂದ ನಾರದ ತನ್ನ ಆಧ್ಯಾತ್ಮಿಕ ರಾಯಭಾರಿತ್ವ ಸಫಲವಾದುದನ್ನು ಕಂಡು ಸಂತೋಷಿಸುತ್ತಾನೆ.

ತಿರುಅವತಾರಚ್ಚರುಕ್ಕಮ್ : ಇಲ್ಲಿ ಬಸವಣ್ಣನ ಜನನವನ್ನು ಆಮೂಲಾಗ್ರವಾಗಿ ವಿವರಿಸಲಾಗಿದೆ. ಬಸವಣ್ಣನ ತಂದೆ ತಾಯಿಗಳು ಮಾದರಸ ಮಾದಲಾಂಬೆ. ಅವರು ಬ್ರಾಹ್ಮಣರು. ಇಂಗುಳಾಪುರಿಯಲ್ಲಿ ವಾಸಿಸುತ್ತಿದ್ದರು. ಮೊದಲಿಗೆ ಅವರಿಗೆ ಮಕ್ಕಳಿರಲಿಲ್ಲ. ಶಿವನ ಕರುಣೆಯಿಂದ ಮಾದಲಾಂಬೆ ಗರ್ಭ ತಳೆಯುತ್ತಾಳೆ. ಅವಳು

ಮೂರುವರುಷದವರೆಗೆ ಗರ್ಭವನ್ನು ಹೊತ್ತಿರುತ್ತಾಳೆ. ಅವಳ ಬೇಡಿಕೆಯ ಮೇರೆಗೆ ಶಿವನು ಅವಳ ಕಷ್ಟವನ್ನು ನಿವಾರಿಸುತ್ತಾನೆ. ಅವಳು ಗಂಡು ಮಗುವಿಗೆ ಜನ್ಮನೀಡುತ್ತಾಳೆ. ಇವನೇ ಕ್ರಿಯಾಸಂಪನ್ನನಾದ ಬಸವಣ್ಣ. ಮಗು ಜನನಕಾಲದಲ್ಲಿಯೇ ಕತ್ತಿನಲ್ಲಿ ಶಿವಲಿಂಗವನ್ನು ಧರಿಸಿರುತ್ತದೆ. ಮಗು ಹುಟ್ಟಿದ ಕೂಡಲೆ ಕೂಡಲಸಂಗಮನು ಪ್ರತ್ಯಕ್ಷನಾಗಿ, ತಾನೇ ಮಗುವಿಗೆ ಶಿವಲಿಂಗವನ್ನು ಕಟ್ಟಿರುವುದಾಗಿ ಹೇಳುತ್ತಾನೆ. ಮಗುವಿಗೆ ವಸವೇಶನೆಂದು ಹೆಸರಿಡುವಂತೆ ಹೇಳುತ್ತಾನೆ. ಅದರಂತೆ ಮಗುವಿಗೆ ಸುಂದರವಸವನ್ ಎಂದು ನಾಮಕರಣ ಮಾಡುತ್ತಾರೆ. ನಂತರ ಗುರುಸ್ವರೂಪಿಯಾದ ಶಿವ ಅದೃಶ್ಯನಾಗುತ್ತಾನೆ. ಅಲ್ಲಿ ನೆರೆದಿದ್ದ ಜನಸಮೂಹವೆಲ್ಲವೂ ಶಿವನ ದರ್ಶನಕ್ಕೆ, ನುಡಿಗೆ, ಮಗುವಿನ ಮಹಿಮೆಗೆ ಆಶ್ಚರ್ಯಚಕಿತರಾಗುತ್ತಾರೆ.

ಬಸವಣ್ಣನ ಎಂಟನೇ ವಯಸ್ಸಿನಲ್ಲಿ ಅವನ ಪಾಲಕರು ಉಪನಯನವನ್ನು ಮಾಡಲೆಂದಿರುತ್ತಾರೆ. ಆದರೆ ಬಾಲಕ ಬಸವಣ್ಣ ಉಪನಯನವನ್ನು ಧಿಕ್ಕರಿಸಿ ನುಡಿದು, ತನಗೆ ಆಗಲೇ ಶಿವಲಿಂಗಧಾರಣೆಯಾಗಿರುವುದನ್ನು ತೋರಿಸುತ್ತಾನೆ. ತಂದೆಗೂ ಮಗನಿಗೂ ಈ ವಿಷಯದಲ್ಲಿ ವಾದ ನಡೆಯುವುದು. ಮಾದಿರಾಜನು ಬ್ರಾಹ್ಮಣತ್ವದ ಹಿರಿಮೆಯನ್ನೂ, ಉಪನಯನದ ಶ್ರೇಷ್ಠತೆಯನ್ನೂ ವಿವರಿಸುತ್ತಾನೆ. ಬಸವಣ್ಣನಾದರೋ ವೀರಶೈವ ಮತವನ್ನೂ, ಭಕ್ತಿಮಾರ್ಗವನ್ನೂ ವಿವರಿಸಿ, ವೀರಶೈವ ಮತವೇ ಎಲ್ಲ ಮತಕ್ಕಿಂತಲೂ ಶ್ರೇಷ್ಠವೆಂದು ಹೇಳುತ್ತಾನೆ. ನಂತರ ತಾನು ಆಧ್ಯಾತ್ಮಿಕದ ಹಾದಿಯಲ್ಲಿ ನಡೆಯಲಿರುವುದಾಗಿಯೂ, ತಾನು ಯಾವುದೇ ಧಾರ್ಮಿಕ ಕಟ್ಟಳೆಗೆ ಒಳಗಾಗುವುದಿಲ್ಲವೆಂದೂ, ತನಗೆ ಶಿವಶರಣರೇ ನಿಜವಾದ ತಾಯಿತಂದೆಗಳೆಂದೂ ಹೇಳುತ್ತಾನೆ. ಹೀಗೆ ಹೇಳಿ ಒಡನೆಯೇ ತನ್ನ ಅಕ್ಕ ನಾಗಾಂಬೆಯೊಂದಿಗೆ ಹೊರಟು ಶಿವಶರಣರನ್ನು ಸೇರಿ ಪ್ರತ್ಯೇಕವಾಗಿ ಜೀವಿಸತೊಡಗುತ್ತಾನೆ.

ಉಪದೇಶ ಚ್ಚರುಕ್ಕಮ್ : ಬಲದೇವ ಬಸವಣ್ಣನ ಸೋದರಮಾವ. ಅವನು ಬಿಜ್ಜಳ ರಾಜನಲ್ಲಿ ದಂಡನಾಯಕರ ಪ್ರಮುಖನಾಗಿರುತ್ತಾನೆ. ಬಲದೇವನು ತನ್ನ ಅಳಿಯನ ಧೈರ್ಯಕ್ಕೆ, ಸದ್ಗುಣಗಳಿಗೆ ಸಂತೋಷಪಡುತ್ತಾನೆ. ಅವನನ್ನು ಕಲ್ಯಾಣಕ್ಕೆ ಕರೆತಂದು ಮದುವೆಗೆ ಒಪ್ಪಿಸುತ್ತಾನೆ. ಬಸವಣ್ಣನಾದರೋ ಮೊದಲಿನಿಂದಲೂ ಭಕ್ತಿಮಾರ್ಗಕ್ಕೆ ತನ್ನ ದೇಹವನ್ನು ಮುಡಿಪಾಗಿಡಬೇಕೆಂದಿದ್ದರೂ, ಶಿವನ ಅಪ್ಪಣೆಯ ಮೇರೆಗೆ ಮದುವೆಗೆ ಒಪ್ಪಿಕೊಳ್ಳುತ್ತಾನೆ. ಬಲದೇವನ ಮಗಳಾದ ಗಂಗಾಂಬೆಯನ್ನು ಮದುವೆಯಾಗುತ್ತಾನೆ. ಮದುವೆಯಾದ ತಕ್ಷಣ ಹೆಂಡತಿ, ಅಕ್ಕನ ಸಮೇತ ಕಲ್ಯಾಣಕ್ಕೆ ನೂರು ಮೈಲಿ ದೂರದಲ್ಲಿದ್ದ ಕೂಡಲಸಂಗಮಕ್ಕೆ ತೆರಳುತ್ತಾನೆ. ಕೂಡಲಸಂಗಮದಲ್ಲಿ ಶಿವನು ಜಂಗಮರೂಪಿನಲ್ಲಿ ಬಸವಣ್ಣನಿಗೆ ದರ್ಶನ ನೀಡಿ, ವೀರಶೈವತತ್ವಗಳನ್ನು ಉಪದೇಶಮಾಡಿ ಅಂತರ್ಧಾನವಾಗುತ್ತಾನೆ. ಬಸವಣ್ಣನು ಕೆಲವು ದಿನ ಕೂಡಲಸಂಗಮದಲ್ಲಿಯೇ ಇರುತ್ತಾನೆ.

ದಂಡನಾಯಕ ಚ್ಚರುಕ್ಕಮ್ : ಈ ಚ್ಚರುಕ್ಕಮ್‌ನಲ್ಲಿ ಬಿಜ್ಜಳನು, ಬಲದೇವನ ಮೃತಿಯಿಂದ ತೆರವಾದ ಸ್ಥಾನವನ್ನು ತುಂಬಬೇಕೆಂದು ಬಸವಣ್ಣನಿಗೆ ಹೇಳಿ ಕಳುಹಿಸುತ್ತಾನೆ. ಮೊದಲಿಗೆ ಬಸವಣ್ಣ ರಾಜಕೀಯ ಗೊಂದಲ ಬೇಡವೆಂದು ನಿರಾಕರಿಸುತ್ತಾನೆ. ಕೂಡಲ ಸಂಗಮನು ಪ್ರತ್ಯಕ್ಷನಾಗಿ, ಭಕ್ತಿಮಾರ್ಗದ ಪ್ರಚಾರ ಕ್ಕೋಸ್ಕರವಾದರೂ ರಾಜನ ಆಹ್ವಾನವನ್ನು ಮನ್ನಿಸೆಂದು ಹೇಳುತ್ತಾನೆ. ಬಸವಣ್ಣನು ಶಿವನ ಆದೇಶದ ಮೇರೆಗೆ ಕಲ್ಯಾಣಪಟ್ಟಣಕ್ಕೆ ಬಂದು ಮುಖ್ಯಮಂತ್ರಿ ಯಾಗಿಯೂ, ದಂಡನಾಯಕರ ಮುಖ್ಯಸ್ಥನಾಗಿಯೂ ಸ್ಥಾನವನ್ನಲಂಕರಿಸುತ್ತಾನೆ. ಅದೇ ಸಮಯದಲ್ಲಿ ಸಭೆಯಲ್ಲಿ ತಾಳೆಪತ್ರವೊಂದು ಆಕಾಶದಿಂದ ರಾಜನ ಸಿಂಹಾಸನದ ಹತ್ತಿರ ಬಂದು ಬೀಳುತ್ತದೆ. ಆಸ್ಥಾನದಲ್ಲಿದ್ದ ವಿದ್ವಾಂಸರೆಲ್ಲರೂ ಆ ಪತ್ರದಲ್ಲಿನ ಲಿಖಿತವನ್ನು ಓದಲು ಅಸಮರ್ಥರಾದಾಗ, ಬಸವಣ್ಣ ಅದನ್ನು ಓದಿ ಹೇಳುವುದರ ಮೂಲಕ ರಾಜನಿಗೆ ಅಪಾರನಿಧಿಯನ್ನು ದೊರಕಿಸಿಕೊಡುತ್ತಾನೆ. ಇದರಿಂದ ಸಂತೋಷಗೊಂಡ ರಾಜ ಬಸವಣ್ಣನಿಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನೂ, ಅಧಿಕಾರ ವನ್ನೂ ಕೊಡುತ್ತಾನೆ. ಈ ರೀತಿಯಲ್ಲಿ ಬಸವಣ್ಣನು, ಒಮ್ಮೆಲೇ ಅಧಿಕಾರ ಪ್ರತಿಷ್ಠೆಗಳು ಬಂದೊದಗಿದರೂ, ದೈನ್ಯತೆಯನ್ನು ಬಿಟ್ಟುಕೊಡದೆ, ಸದಾಕಾಲ ಜಂಗಮ ಸೇವೆಯಲ್ಲಿರುತ್ತಾನೆ.

ಕೂಡಲಸಂಗಮದಿಂದ ಬಸವಣ್ಣನ ಸೋದರಳಿಯ ಚೆನ್ನಬಸವಣ್ಣ ಬರುತ್ತಾನೆ ಅವನು ಬಸವಣ್ಣನಿಗೆ ಭಕ್ತಿಮಾರ್ಗಪ್ರಚಾರ ಕಾರ್ಯದಲ್ಲಿ ಸಹಾಯಕನಾಗಿ ನಿಲ್ಲು ತ್ತಾನೆ. ಭಕ್ತಿಯನ್ನು ಯಾವ ಬೇಧಭಾವವಿಲ್ಲದೆ ಎಲ್ಲ ವರ್ಗಗಳವರಿಗೂ ಬೋಧಿಸು ತ್ತಾನೆ. ಅದೇ ಸಮಯದಲ್ಲಿ ಕೈಲಾಸದಿಂದ ಬಸವಣ್ಣನ ಕಾರ್ಯಕಲಾಪಗಳೆಲ್ಲವನ್ನೂ ವೀಕ್ಷಿಸುತ್ತಿದ್ದ ಶಿವನು ಅಲ್ಲಮಪ್ರಭುವಿನ ವೇಷದಲ್ಲಿ ಬರುತ್ತಾನೆ. ಬಸವಣ್ಣನು ಅಲ್ಲಮಪ್ರಭುವಿನಿಂದ ಆಶೀರ್ವಾದ ಪಡೆದು ತನ್ನ ಕಾರ್ಯವನ್ನು ಮುಂದುವರೆಸು ತ್ತಾನೆ.

ತಿರುವಿಳೈಯಾಡಲ್ ಚ್ಚರುಕ್ಕಮ್ : ಇಲ್ಲಿ ಹದಿನೈದು ಜಂಗಮರ ಕಥೆಗಳು ವಿವರವಾಗಿ ಹೇಳಲ್ಪಟ್ಟಿದೆ. ಇದರಲ್ಲಿ ಬಸವಣ್ಣನ ಪವಾಡಗಳು ಹೇಳಲ್ಪಟ್ಟಿವೆ. ಅದರಲ್ಲಿ ಒಂದು ಬದನೆಕಾಯಿಯನ್ನು ಶಿವಲಿಂಗವಾಗಿ ಮಾರ್ಪಡಿಸಿದ್ದು. ಕಳ್ಳತನ ಕ್ಕೆಂದು ಮಠಕ್ಕೆ ಕಳ್ಳರು ಜಂಗಮವೇಷದಲ್ಲಿ ಬರುತ್ತಾರೆ. ಕತ್ತಿನಲ್ಲಿ ತೋರಿಕೆಗೆಂದು ಬದನೇಕಾಯಿಯನ್ನು ಕಟ್ಟಿ ಲಿಂಗವೆಂದು ಹೇಳುತ್ತಾರೆ. ಇದನ್ನು ಅರಿತ ಬಸವಣ್ಣ ಅವರಿಗೆ ದಯೆತೋರಿ ಅವರನ್ನು ವೀರಶೈವರನ್ನಾಗಿ ಪರಿವರ್ತಿಸುತ್ತಾನೆ. ಹಾಗೂ ಉಳಿದ ಜಂಗಮರೊಂದಿಗೆ ಒಂದಾಗಿ ಅವರನ್ನು ನೋಡುತ್ತಾನೆ. ಇದನ್ನು ಬಸವಣ್ಣ ಭಕ್ತಿಮಾರ್ಗಪ್ರಚಾರಕ್ಕೆ ಪ್ರಧಾನ ಕಾರಣವನ್ನಾಗಿ ತೆಗೆದುಕೊಳ್ಳುತ್ತಾನೆ. ಇದರ ಮೂಲಕ ಉಪೇಕ್ಷಿತ ವರ್ಗದವರಿಂದಲೂ ಧರ್ಮದ ಪ್ರಗತಿಯನ್ನು ಕಾಣಬಹುದೆಂಬು ದನ್ನು ತೋರಿಸಿಕೊಡುತ್ತಾನೆ. ಈ ಸಂಗತಿಯನ್ನು ತಿಳಿದ ಬಿಜ್ಜಳ ಬಸವಣ್ಣನಿಗೆ

ಅನೇಕ ರೀತಿಯ ಪರೀಕ್ಷೆಗಳನ್ನು ಒಡ್ಡಿದಾಗಲೂ, ಬಸವಣ್ಣ ಎಲ್ಲದರಲ್ಲಿಯೂ ಜಯಶೀಲನಾಗುತ್ತಾನೆ. ಇದರಿಂದ ಬಸವಣ್ಣನ ಕೀರ್ತಿ ಕನ್ನಡನಾಡಿನಲ್ಲಿ ಮಾತ್ರವಲ್ಲದೆ, ಬಹುದೂರದವರೆಗೆ, ಎಲ್ಲೆಡೆಯೂ ಹರಡುತ್ತದೆ.

ತಿರುಕೂಟಚ್ಚರುಕ್ಕಮ್ : ಇಲ್ಲಿ ಹದಿನೆಂಟು ಜಂಗಮರ ಕಥೆಗಳು ಬಂದಿವೆ. ಬಸವಣ್ಣನು ಜಂಗಮರಿಗೆ ತೋರಿಸುತ್ತಿದ್ದ ಉದಾರತೆಯನ್ನೂ ಪೂಜ್ಯತೆಯನ್ನೂ ಕೇಳಿ ನೆರೆನಾಡುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಶಿವಶರಣರು ಕಲ್ಯಾಣಕ್ಕೆ ಧಾವಿಸುತ್ತಾರೆ. ಈ ರೀತಿಯಲ್ಲಿ ಬಂದವರೆಲ್ಲರಿಗೂ ಆತ್ಮೀಯವಾದ ಆಹ್ವಾನ ದೊರಕುತ್ತದೆ. ಅದರಲ್ಲಿ ಪ್ರಮುಖರಾದವರು ಈ ಹದಿನೆಂಟು ಮಂದಿ. ಅವರೆಲ್ಲರಿಗೂ ವಾಸಿಸಲು ಪ್ರತ್ಯೇಕವಾದ ಮಠಗಳನ್ನು ಕೊಟ್ಟು ದೈನಂದಿನ ಖರ್ಚುವೆಚ್ಚಗಳನ್ನು, ಬೇಕಾದ ಸಾಮಗ್ರಿಗಳನ್ನು ಒದಗಿಸುವ ಭಾರವನ್ನು ಬಸವಣ್ಣ ವಹಿಸಿಕೊಳ್ಳುತ್ತಾನೆ. ಅವರುಗಳೆಲ್ಲರೂ ವಿವಿಧ ವೃತ್ತಿಗಳಿಂದ ಬಂದವರಾದರೂ, ಭಕ್ತಿಮಾರ್ಗದಲ್ಲಿ ಒಮ್ಮತವಿದ್ದುದರಿಂದ ಬಸವಣ್ಣ ಅವರೆಲ್ಲರನ್ನೂ ವೀರಶೈವವೆಂಬ ಭಕ್ತಿಯ ಲಾಂಛನದಲ್ಲಿ ಒಂದಾಗಿ ಕಂಡು ಸಮಾನವಾಗಿ ಸತ್ಕರಿಸುತ್ತಾನೆ. ತಾನು ಪ್ರಧಾನಿಯೆಂಬ ಅಹಂಕಾರವನ್ನು ತೊರೆದು ಸಾಮಾನ್ಯ ಶಿವಭಕ್ತನಂತೆ, ಆರ್ತನಂತೆ, ಅವರುಗಳನ್ನು ಭಕ್ತಿಭಾವಗಳಿಂದ ಸೇವಿಸುತ್ತಾನೆ. ಅವರುಗಳೆಲ್ಲರೂ ಬಸವಣ್ಣನ ಕೃಪಾಕಟಾಕ್ಷದಿಂದ ನಿಶ್ಚಿಂತರಾಗಿ ಜೀವಿಸುತ್ತಾರೆ. ಅವರುಗಳಿಗೂ ಕೂಡ ಸಂದರ್ಭ ಬಂದಾಗ ತಮ್ಮ ತಮ್ಮ ಪವಾಡಗಳನ್ನು ತೋರಿಸಿ, ಜನತೆಯ ಮತ್ತು ರಾಜನ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ.

ತಿರುಮಾದುಚ್ಚರುಕ್ಕಮ್ : ಇಲ್ಲಿ ಒಂಭತ್ತು ಜಂಗಮರ ಕಥೆಯಿದೆ. ಬಸವಣ್ಣನ ಪ್ರಯತ್ನದ ಫಲವಾಗಿ ತೀವ್ರವಾಗಿ ಹರಡುತ್ತಿದ್ದ ಭಕ್ತಿಯೆಂಬ ಕಿಚ್ಚು, ಜನಮನದ ಮನಸ್ಸನ್ನಲ್ಲದೆ ರಾಜನ ಮನಸ್ಸನ್ನೂ ಸೂರೆಗೊಳ್ಳುವುದು. ರಾಜನು ಜೈನನಾದರೂ ಇದಕ್ಕೆ ತಲೆಬಾಗುತ್ತಾನೆ. ರಾಜನ ಈ ಪ್ರವರ್ತನೆಯಿಂದ ರಾಜ್ಯದಲ್ಲಿನ ಜೈನರೂ ಬ್ರಾಹ್ಮಣರೂ ಅಸೂಯೆಪಡುತ್ತಾರೆ. ಅವರುಗಳು ಬಸವಣ್ಣನನ್ನು ಮತಿಗಲಭೆಗಳಲ್ಲಿ ಸಿಕ್ಕಿಸಿ, ಅವನ ಕೀರ್ತಿಗೆ ಮಸಿ ಬಳಿಯಲು ಪ್ರಯತ್ನಪಡುತ್ತಾರೆ. ಆದರೆ ಬಸವಣ್ಣನು ಮಡಿವಾಳ ಮಾಚಯ್ಯ, ಚೆನ್ನಬಸವದೇವರ ಸಹಾಯದಿಂದ ಬಂದ ತೊಡಕೆಲ್ಲವನ್ನೂ ನಿವಾರಿಸುತ್ತಾನೆ. ಇದರಿಂದ ಬಸವಣ್ಣನ ಹಗೆಗಳ ಅಸೂಯೆ ಹೆಚ್ಚಾಗಿ, ಸಾಮಾಜಿಕ ಕ್ರಾಂತಿಗೆ ಎಡೆಯಾಗುತ್ತದೆ. ರಾಜನು ಜಗದೇವ ದಂಡನಾಥನಿಂದ ಕೊಲ್ಲಲ್ಪಡುತ್ತಾನೆ. ಈ ವಿಧದ ಸನ್ನಿವೇಶದಿಂದ ಬೇಸತ್ತ ಬಸವಣ್ಣ, ಶಿವಶರಣರೊಂದಿಗೆ ಕೂಡಲ ಸಂಗಮಕ್ಕೆ ತೆರಳುತ್ತಾನೆ. ತಾನು ಬಂದ ಕಾರ್ಯವು ಮುಗಿದ ಪ್ರಯುಕ್ತ ಬಸವಣ್ಣ ಕೂಡಲ ಸಂಗಮೇಶನನ್ನು, ತನ್ನನ್ನು ಹಿಂದಕ್ಕೆ ಕರೆಸಿಕೊಳ್ಳಲು ಪ್ರಾರ್ಥಿಸುತ್ತಾನೆ. ಶಿವನು ಮತ್ತೊಮ್ಮೆ ಗುರುವಿನ ರೂಪದಲ್ಲಿ ಬಂದು ಬಸವಣ್ಣನನ್ನು ಆಲಂಗಿಸಿಕೊಳ್ಳುತ್ತಾನೆ. ಶಿವಲಿಂಗದೊಂದಿಗೆ ಬಸವಣ್ಣನೊಡಗೂಡಿ

ಸಾವಿರಾರು ಸಂಖ್ಯೆಯಲ್ಲಿ ಅನೇಕ ಶಿವಶರಣರೂ ನಾಗಾಂಬೆಯೂ ಲಿಂಗೈಕ್ಯರಾಗುತ್ತಾರೆ. ಮಡಿವಾಳ ಮಾಚಿದೇವ, ಚೆನ್ನಬಸವಣ್ಣರು ಒಮ್ಮೆಲೇ ಕಲ್ಯಾಣವನ್ನು ಬಿಟ್ಟು ಉತ್ತರ ಕನ್ನಡದ ಉಳವಿಯಲ್ಲಿ ಹೋಗಿ ನೆಲೆಸುತ್ತಾರೆ. ಸಕಲೇಶ ಮಾದರಸರು ಶ್ರೀಶೈಲಕ್ಕೆ ಹೋಗುತ್ತಾರೆ.

ತಮಿಳು ವಸವ ಪುರಾಣದಲ್ಲಿ ಎಲ್ಲಿಯೂ ಗಂಗಾಂಬೆಯ ವರ್ಣನೆ ಹೆಚ್ಚಾಗಿ ಬಂದಿಲ್ಲ. ಆಡೈವಟಿಜ್ನ್ದ ಪುರಾಣಂ ನಲ್ಲಿ ಒಬ್ಬ ಕಪಟ ಜಂಗಮ ಬಸವಣ್ಣನ ಹೆಂಡತಿಯು ಬೆಲೆಬಾಳುವ ಸೀರೆ ತನ್ನ ವೇಶ್ಯೆಗೆ ಬೇಕೆಂದು ಕೇಳುತ್ತಾನೆ. ಯಾವ ವಿಧವಾದ ಭಾವನೆಯೂ ಇಲ್ಲದೆ, ಬಸವಣ್ಣನು ಗಂಗಾಂಬೆಗೆ ಸೀರೆ ತೆಗೆದುಕೊಡಲು ಹೇಳಿದಾಗ, ಸೀರೆ ಅಕ್ಷಯವಾಗುವುದು. ಕೊನೆಗೊಮ್ಮೆ ಒಂದು ಕಡೆ ಸೀರೆಯನ್ನು ಕತ್ತರಿಸಿ ಜಂಗಮನಿಗೆ ಕೊಟ್ಟುಬಿಡುತ್ತಾನೆ. ಮತ್ತೊಂದು ಪ್ರಸಂಗದಲ್ಲಿ ಗಂಗಾಂಬೆಯ ಕಿವಿಯ ಆಭರಣಗಳನ್ನು ಬೇಡಿದ ಜಂಗಮನೊಬ್ಬ ಪಡೆಯುತ್ತಾನೆ.

ಬಸವಪುರಾಣದಿಂದ, ಬಸವಣ್ಣನ ಸಮಕಾಲೀನ ಹಾಗೂ ಪ್ರಮುಖರಾದ ಮಡಿವಾಳ ಮಾಚಯ್ಯ, ಬಿಜ್ಜಳ, ಚಿಕ್ಕ ಮಾದಯ್ಯ, ಶಂಕರ ದಾಸಯ್ಯರ್, ನಿಮ್ಮವ್ವೆ, ಅಲಾಯುಧರ್, ಕಿನ್ನರಪ್ಪಿನ ಮಯ್ಯರ್, ಕಲ್ಕೇತ ವಿರಮ್ಮೆಯ, ಮೋಳಿಗೆ ಮಾರಯ್ಯ, ಕನ್ನರಪ್ಪಿರಮಯ್ಯರ್, ಮುಸುಂಡಿ ಚವುಡಯ್ಯ, ಸುರುಗಿ ಚವುಡಯ್ಯ, ತೆಲುಂಗು ಸೋಮಯ್ಯ, ಏಕಾಂತ ರಾಮಯ್ಯ, ಕಿನ್ನರಯ್ಯರ್, ಮೇದಾಕೇತಯ್ಯ, ಜಗದೇವ ದಂಡನಾಥ, ಅಲ್ಲಯ್ಯ. ಮದುವಯ್ಯರ್, ಮತ್ತು ಚೆನ್ನಬಸವದೇವ ಮುಂತಾದವರು ವೀರಶೈವ ಮತ ಪ್ರಚಾರಕ್ಕೆ ಸಹಾಯ ಮಾಡಿದ ಸಂಗತಿ ವ್ಯಕ್ತವಾಗುವುದು.

ಸಹಾಯಕ ಗ್ರಂಥ : ತಮಿಳು ವಸವ ಪುರಾಣ : ಸಂ. ಶ್ರೀ ನಾಗಿ ಚೆಟ್ಟಿಯಾರ್, ೧೯೩೧

ಗಾಯ್ ಡಿ ಮೊಪಾಸಾ

ವೀರೇಂದ್ರ ಸಿಂಪಿ

ವಿಶ್ವದ ಸಣ್ಣಕತೆಗಾರರಲ್ಲಿಯೇ ಮೊಪಾಸಾ ಅಗ್ರಗಣ್ಯನಾಗಿದ್ದಾನೆ. ತಂತ್ರದಲ್ಲಿ ವಸ್ತುನಿಷ್ಠತೆಯನ್ನೂ ಶೈಲಿಯಲ್ಲಿ ಖಚಿತತೆಯನ್ನೂ ಅವನು ಕಲಿತದ್ದು— ಫ್ರೆಂಚ ಕಾದಂಬರಿಕಾರ ಪ್ಲಾಬರ್ಟನಿಂದ. ಸಣ್ಣ ಕತೆಯ ಸಾಹಿತ್ಯಪ್ರಕಾರದಲ್ಲಿ ಚೆಖೊವನದು ಒಂದು ಮಾರ್ಗವಾದರೆ ಮೊಪಾಸಾನದೇ ಇನ್ನೊಂದು ಮಾರ್ಗ. ಅವನ ಕತೆಗಳೆಂದರೆ ಮಧ್ಯಮವರ್ಗದ ಜನರ ಜೀವನದಲ್ಲಿಯ ಉತ್ಕಟ ಕ್ಷಣಗಳನ್ನು ಬಿಚ್ಚಿ ತೋರುವ ಕಥಾನಕಗಳು. ಚೆಖೊವನಲ್ಲಿ ಕಥಾ ಸಂವಿಧಾನದ ಸುಸಂಬದ್ಧವಾದ ಬೆಳವಣಿಗೆ ಇರದೆ, ಕಥೆ ಅಪೂರ್ಣವೆಂಬಂತೆ ನಿಂತುಬಿಡುತ್ತದೆ. ಮೊಪಾಸಾನು ಘಟನೆಯ ಮೇಲೆ ತನ್ನ ಸಂಪೂರ್ಣ ಲಕ್ಷ್ಯವನ್ನು ಕೇಂದ್ರೀಕರಿಸಿದರೆ, ಚೆಖೊವನು ಸಾಮಾನ್ಯಪಾತ್ರಗಳ ಜೀವನಕ್ರಮ ಹಾಗೂ ಸ್ವಭಾವಗಳ ಮೇಲೆ ಒತ್ತನ್ನು ಕೊಡುತ್ತಾನೆ. ಮೊಪಾಸಾನ ಕತೆಗಳಲ್ಲಿ ಪ್ರಾರಂಭ, ಮಧ್ಯ ಹಾಗೂ ಅಂತ್ಯಗಳುಳ್ಳ ಸುಸಂಬದ್ಧವಾದ ಕಥಾ ಸಂವಿಧಾನವಿದ್ದು, ವ್ಯಂಗ್ಯವಾದ ನಿರೂಪಣೆಯಿರುತ್ತದೆ. ಮೊಪಾಸಾ ನಾಟಕ, ಕಾದಂಬರಿ ಹಾಗೂ ಪ್ರವಾಸ ಕಥನಗಳನ್ನು ಬರೆದರೂ ಅವನು ಸಣ್ಣ ಕತೆಗಳಿಗಾಗಿಯೇ ಜಗತ್ಪ್ರಸಿದ್ಧನಾಗಿದ್ದಾನೆ. ಅವನ ಸಣ್ಣಕತೆಗಳಲ್ಲಿಯ ಪ್ರಭುತ್ವದ ಶೈಲಿಯು ವಿಶ್ವದ ಗಣ್ಯ ಕತೆಗಾರರ ಮೆಚ್ಚುಗೆಗೆ ಪಾತ್ರವಾಗಿದೆ. ಸಂಕ್ಷಿಪ್ತತೆ, ನಯಗಾರಿಕೆ ಹಾಗೂ ಕಾಮದ ಸಿಂಚನಗಳನ್ನೊಳಗೊಂಡು ಅವನ ಸಣ್ಣ ಕತೆಗಳು ತುಂಬ ಜನಪ್ರಿಯವಾಗಿವೆ. ಒಂದು ದೃಷ್ಟಿಯಿಂದ ಜನಪ್ರಿಯ ಸಣ್ಣ ಕತೆಗೆ ಭದ್ರವಾದ ತಳಹದಿಯನ್ನು ಒದಗಿಸಿದವನು ಮೊಪಾಸಾನೇ ಆಗಿದ್ದಾನೆ.

ಮೊಪಾಸಾನ ತಾಯ್ತಂದೆಗಳು ನಾರ್ಮನ್ ಕುಟುಂಬಕ್ಕೆ ಸೇರಿದವರಿದ್ದರು. ತಂದೆ ಶ್ರೀಮಂತನಾಗಿದ್ದಂತೆ ಕಾಮುಕನೂ ಆಗಿದ್ದನು. ತಾಯಿ ಅಸಾಮಾನ್ಯ ಕಲಾ ಪ್ರಜ್ಞೆಯುಳ್ಳವಳಾಗಿದ್ದಳು. ತಾಯಿ-ತಂದೆಗಳ ವಿಷಮ ದಾಂಪತ್ಯದ ಪರಿಸರದಲ್ಲಿ ಮೊಪಾಸಾ ಬೆಳೆದನು. ಬಾಲ್ಯದಲ್ಲಿ ಅವನ ಮನಸ್ಸು ಗಲಿಬಿಲಿಗೊಂಡಾಗಲೆಲ್ಲ ಸಮುದ್ರದೆಡೆಗೆ ನಡೆದು ಬಿಡುತ್ತಿದ್ದನು. ಸಮುದ್ರದ ಮುಖದಲ್ಲಿ ಸೃಷ್ಟಿಯ ಆನಂದ ಹಾಗೂ ಕ್ರೌರ್ಯಗಳನ್ನು ಕಾಣುತ್ತಿದ್ದನು. 'ನನ್ನ ಧಮನಿಗಳಲ್ಲಿ ಸಮುದ್ರ ವಿಹಾರಿಗಳ ರಕ್ತಹರಿಯುತ್ತಿದೆ. ವಸಂತ ಋತುವಿನ ಮುಂಜಾವಿನಲ್ಲಿ ನಾವೆಯನ್ನು ಅಪರಿಚಿತ ಬಂದರಗಳಲ್ಲಿ ಹರಿಯಬಿಟ್ಟಾಗ ಆಗುವ ಸಂತೋಷಕ್ಕಿಂತ ಸಮನಾದ ಸಂತೋಷ ಬೇರೊಂದಿಲ್ಲ'ವೆಂದು ಮೊಪಾಸಾ ಹೇಳಿದ್ದಾನೆ.

ತಾಯ್ತಂದೆಗಳ ವಿಷಮ ದಾಂಪತ್ಯದಲ್ಲಿ ಮೊಪಾಸಾ ತಾಯಿಯ ಪಕ್ಷಕ್ಕೆ ಸೇರಿದ್ದು ತಂದೆಯನ್ನು ದ್ವೇಷಿಸುತ್ತಿದ್ದನು. ಅವನು ಹನ್ನೊಂದು ವರ್ಷದವ ನಿದ್ದಾಗ ತಾಯಿ-ತಂದೆಗಳು ಒಬ್ಬರಿಂದೊಬ್ಬರು ಶಾಶ್ವತವಾಗಿ ಅಗಲಿದರು. ದಾಂಪ ತ್ಯದ ಈ ಬಿರುಕು ಮೊಪಾಸಾನ ಮೇಲೆ ತನ್ನ ಅಚ್ಚಳಿಯದ ಪ್ರಭಾವ ಬೀರಿತು. ಅದಕ್ಕೆಂತಲೇ ಮೊಪಾಸಾನ ಕತೆಗಳಲ್ಲಿ ಲಗ್ನದ ಬಗ್ಗೆ ಭೀತಿ ಕಂಡು ಬಂದಂತೆ ಪೀಡೆ ಗೊಳಗಾದ ಹಾಸ್ಯಾಸ್ಪದ ಪತಿಯ ಹಾಗೂ ತಂದೆಯಿಲ್ಲದ ಏಕಾಕಿ ಶಿಶುವಿನ ಚಿತ್ರಣ ಗಳು ವಿಪುಲವಾಗಿ ದೊರೆಯುತ್ತವೆ.

ಮೊಪಾಸಾನ ತಾಯಿಯು ಅವನನ್ನು ಧರ್ಮಗುರುವಿನ ತರಬೇತಿ ಕೇಂದ್ರ ಕ್ಕೇನೋ ಕಳಿಸಿದಳು. ಆದರೆ ಅಲ್ಲಿಯ ಜೀವನದ ರೀತಿಯಿಂದ ಅವನು ತೀವ್ರವೇ ರೋಸಿ ಹೋದನು. ಮೇಲಾಗಿ ಧರ್ಮಗುರುವಾಗಬೇಕೆಂಬ ಇಚ್ಛೆಯೂ ಅವನಲ್ಲಿರ ಲಿಲ್ಲ. ಅಲ್ಲಿ ಪ್ರಾರ್ಥನೆಗಳನ್ನು ನಡೆಸುವ ಬದಲಾಗಿ, ಮಿತ್ರರೊಡನೆ ಕುಡಿತದ ಆನಂದ ಕೇಳಿಗಳನ್ನು ನಡೆಸಿದನು. ಇಂತಹವೇ ಕೆಲ ಅಪರಾಧಗಳಿಗಾಗಿ ಅವನನ್ನು ತರಬೇತಿ ಕೇಂದ್ರದಿಂದ ಹೊರಗೆ ಹಾಕಲಾಯಿತು. ಹದಿನಾರನೇ ವಯಸ್ಸಿಗೇನೇ ಅವನಿಗೊಬ್ಬ ಪ್ರಥಮ ಉಪಪತ್ನಿಯಿದ್ದಳೆಂದ ಮೇಲೆ ಅವನ ರಸಿಕಥತೆಯ ಬಗ್ಗೆ ಹೆಚ್ಚಿಗೆ ಹೇಳುವ ದೇನಿದೆ ? ಜೀವನಕ್ಕಾಗಿ ತಾನೊಬ್ಬ 'ಕೂಳಬಾಕ'ನೆಂದು ಮೊಪಾಸಾನು ತನ್ನನ್ನು ತಾನು ವರ್ಣಿಸಿಕೊಂಡಿದ್ದಾನೆ. ಇಲ್ಲಿ ಒಂದು ವಿಶೇಷವೆಂದರೆ ನಾರ್ಮಂಡಿಯ ಸಣ್ಣ ವಿಶ್ವವು ಅವನಿಗೆಲ್ಲ ಭೋಗಗಳನ್ನು ಒದಗಿಸಿತು.

ನಂತರ ಮೊಪಾಸಾ ಕಾನೂನು ವಿದ್ಯಾಲಯವನ್ನು ಸೇರಿ, ಸಾಧಾರಣ ದರ್ಜೆ ಯಲ್ಲಿ ಪಾಸಾಗುತ್ತ ನಡೆದನು. ಆದರೆ ಇದೇ ಸುಮಾರಿಗೆ ಅಂದರೆ ೧೮೭೦ ರಲ್ಲಿ ಪ್ರಶಿಯವು ಫ್ರಾನ್ಸದ ಮೇಲೆ ದಾಳಿ ನಡೆಸಿದಾಗ, ಮೊಪಾಸಾನು ಫ್ರಾನ್ಸದ ಸೈನ್ಯದ ವಿತರಣಾವಿಭಾಗವನ್ನು ಸೇರಿದನು, ಫ್ರೆಂಚ ಸೈನ್ಯ ಹಿಂದೆ ಹಿಂದೆ ಸರಿಯುತ್ತಿದ್ದಂತೆ. ಮೊಪಾಸಾನು ಓದಿದ್ದು ಶಾಪೆನ್‌ಹಾವರ್‌ನನ್ನು ಬರೆದದ್ದು– ಪ್ರೇಮಗೀತಗಳನ್ನು ಕನಸುಕಂಡದ್ದು—ಜರ್ಮನ್‌ರ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂಬುದನ್ನು ರಣ ರಂಗದ ಈ ಪ್ರತ್ಯಕ್ಷ ಅನುಭವ ಅವನ ಕೆಲ ಅತ್ಯುತ್ತಮ ಕತೆಗಳಿಗೆ ಹೂರಣ ವನ್ನೊದಗಿಸಿತು.

ಯುದ್ಧ ಮುಗಿದರೂ ಆರ್ಥಿಕ ಕಾರಣಗಳಿಂದಾಗಿ ಕಾನೂನು ಅಧ್ಯಯನವನ್ನ ವನು ಮುಂದುವರೆಸಲಿಕ್ಕಾಗಲಿಲ್ಲ. ತಂದೆಯ ಪ್ರಭಾವದಿಂದ ನೌಕಾದಳದ ಕಛೇರಿ ಯಲ್ಲಿ ಕಾರಕೂನನಾಗಿ ನೌಕರಿಯನ್ನು ಪ್ರಾರಂಭಿಸಿದನು. ಆದರೆ ಅವನ ಮೇಲಧಿ ಕಾರಿಗಳಿಗಾಗಲಿ, ಸಹೋದ್ಯೋಗಿಗಳಿಗಾಗಲಿ ತಮ್ಮ ಮಧ್ಯೆ ಪುರುಷಸಿಂಹವೊಂದು ನೌಕರಿಯ ಬಂಧನದಲ್ಲಿ ಸಿಕ್ಕು ತೊಳಲಾಡುತ್ತಿದ್ದುದರ ಕಲ್ಪನೆಯಿರಲಿಲ್ಲ, ಅದರಂತೆ ಪ್ಯಾರಿಸ್ ನಗರಕ್ಕೂ ಅವನ ಪ್ರತಿಭೆಯ ಕಿಂಚಿತ್ ಪರಿಚಯವಿರಲಿಲ್ಲ.

ಆತ್ಮಸುಖವನ್ನು ಅರಸುತ್ತ ಹೊರಟ ಮೊಪಾಸಾನಿಗೆ ಕೊನೆಯಲ್ಲಿ ಕೇಳಿಸಿದ್ದು ಸಿಯೆನ್‌ನದಿಯ ಆತ್ಮೀಯ ಧ್ವನಿ. ಅದರೊಂದಿಗೆ ಅಂಟಿದ ನಂಟು ಕೊನೆಯವರೆಗೂ ಸಾಗಿಬಂತು. ಮುಂಜಾನೆ, ಸಂಜೆ ಯಾವಾಗ ಬೇಕಾದಾಗ ನದಿಯಲ್ಲಿ ನಾವೆಯನ್ನು ಹರಿಬಿಟ್ಟು ಹುಟ್ಟಾಡಿಸುತ್ತ ತನ್ನ ಉತ್ಕಟ ಭಾವನೆಯನ್ನು ಶಮನಗೊಳಿಸುತ್ತಿದ್ದನು. ಸಿಯೆನ್ ನದಿಯು ಅವನ ಜೀವನದ ಅವಿಭಾಜ್ಯ ಅಂಗವಾಯ್ತು. ಅವನ ಪ್ರೇಯಿಸಿಯಾಗಿ, ಅವನ ಉಗ್ರಭಾವನೆಗಳಿಗೆ ತಕ್ಕ ಸಂಗಾತಿಯಾಗಿ ನಿಂತಿತು. ಆಫೀಸಿನ ಧೂಳಿನಿಂದ, ಸೆರೆ-ಸಿಂದಿಗಳ ಗಬ್ಬುವಾಸನೆಯಿಂದ, ಸಂದೇಹಾಸ್ಪದ ಚಾರಿತ್ರ್ಯವುಳ್ಳ ಹೆಣ್ಣುಗಳ ತೋಳಿನಿಂದ ಅವನನ್ನು ಸಿಯೆನ್ ನದಿಯ ತಂಪನ್ನ ಕಂಪಾದ ವಾಸನೆ ತನ್ನತ್ತ ಬಲವಾಗಿ ಸೆಳೆಯಿತು. 'ಮೊಪಾಸಾನೊಬ್ಬ ಭೀಕರ ಹುಟ್ಟು ಹಾಕುವವನಾಗಿದ್ದು, ತನ್ನ ಆತ್ಮ ಸಂತೋಷಕ್ಕಾಗಿ ಸಿಯೆನ್ ನದಿಯಗುಂಟ ದಿನವೊಂದಕ್ಕೆ ೫೦ ಮೈಲುಗಳಷ್ಟು ಹುಟ್ಟು ಹಾಕುತ್ತ ಸಾಗುತ್ತಿದ್ದನೆಂದು ಝೋಲಾ ಹೇಳಿದನು. ಅವನು ಸಮುದ್ರದ, ನದಿಯ ಉತ್ಕಟ ಪ್ರೇಮಿಯಾಗಿದ್ದುದರಿಂದಲೇ ಅವನ ಕತೆ ಕಾದಂಬರಿಗಳಲ್ಲಿ ಸಮುದ್ರ, ನದಿಗಳ ದಟ್ಟ ಹಿನ್ನೆಲೆ ಕಂಡುಬರುವದು.

ತಾಯಿಯ ಸಲಹೆಯ ಪ್ರಕಾರ ಮೊಪಾಸಾನು ಫ್ಲಾಬರ್ಟನ ಪರಿಚಯಮಾಡಿಕೊಳ್ಳಲು ಕ್ರೊಸೆಟ್ಟಿಗೆ ನಡೆದನು. ಅವನ ಮಾರ್ಗದರ್ಶನದಲ್ಲಿ ಮೊಪಾಸಾ ಬರವಣಿಗೆಯ ಕಠಿಣ ತರಬೇತಿಯನ್ನು ಪಡೆದನು. ಫ್ಲಾಬರ್ಟ-ಮೊಪಾಸಾರ ಸಮಾಗಮವೆಂದರೆ ಗುರುಶಿಷ್ಯರ ಅಪೂರ್ವ ಸಮಾಗಮವಾಗಿತ್ತು. ಫ್ಲಾಬರ್ಟ ಪ್ಯಾರಿಸಿಗೆ ಬಂದಾಗಲೆಲ್ಲ ಮೊಪಾಸಾನು ತಾನು ಬರೆದ ಕವಿತೆ, ನಾಟಕ ಕಥೆಗಳನ್ನು ತೋರಿಸುತ್ತಿದ್ದನು. ಫ್ಲಾಬರ್ಟನು ಆ ಬರಹಗಳಲ್ಲೆಲ್ಲ ನೀಲಿ ಪೆನ್ಸಿಲ್ಲಿನಿಂದ ತಿದ್ದುಪಡೆ ಮಾಡುತ್ತ ನಡೆದನು. ಶೈಲಿಯ ಕುರಿತು ಪ್ರವಚನ ಮಾಡಿದನು. ಸಾಹಿತ್ಯಿಕ ಯಶಸ್ಸಿಯಾಗಿ "ನಿರೀಕ್ಷಿಸು ಮತ್ತೆ ನಿರೀಕ್ಷಿಸು ಮತ್ತೆ ಮತ್ತೆ ನಿರೀಕ್ಷಿಸು" ಎನ್ನುವ ತ್ರಿವಿಧ ಸೂತ್ರವನ್ನು ಹೇಳಿಕೊಟ್ಟನು. ಅದರಂತೆ ಝೋಲಾ, ಟರ್ಗಿನೆವ್ ಗಾನಕೋರ್ಟ ಹಾಗೂ ಹೆನ್ರಿಜೇಮ್ಸರ ಜೊತೆ ಮೊಪಾಸಾನ ಪರಿಚಯ ಮಾಡಿಕೊಟ್ಟನು. 'ಮೊಪಾಸಾ ನನ್ನ ಶಿಷ್ಯನಾಗಿದ್ದಾನೆ. ಅವನನ್ನು ನಾನು ಮಗನಂತೆ ಪ್ರೀತಿಸುತ್ತೇನೆ'. ಎಂದು ಫ್ಲಾಬರ್ಟ ಹೇಳಿದನು. ಲೇಖಕ ಮೊಪಾಸಾನಿಗೆ ಫ್ಲಾಬರ್ಟ ಸ್ಫೂರ್ತಿ ದೇವತೆಯಾದಂತೆ, ವಿಷಮ ದಾಂಪತ್ಯದ ಮಗುವಾದ ಅವನಿಗೆ ಸಾಕುತಂದೆಯಾಗಿಯೂ ಪರಿಣಮಿಸಿದನು. ೧೮೮೦ರಲ್ಲಿ ಸಂಭವಿಸಿದ ಫ್ಲಾಬರ್ಟನ ತೀವ್ರ ಮರಣ ದೊಡ್ಡ ಆಘಾತವನ್ನುಂಟು ಮಾಡಿತು.

ಮೊಪಾಸಾ ಸರಕಾರೀ ನೌಕರನಾಗಿ ಕಳೆದವರ್ಷಗಳು ಅತ್ಯಂತ ಸುಖದ ವರ್ಷಗಳಾಗಿದ್ದವು. ತನ್ನ ದಿನದ ಹೆಚ್ಚಿನ ಅವಧಿಯನ್ನು ಅವನು ಈಜುವದರಲ್ಲಿಯೂ ನೌಕಾವಿಹಾರದಲ್ಲಿಯೂ ಕಳೆಯುತ್ತಿದ್ದನು. ಅವನ ಜೊತೆಗೆ ನೌಕಾವಿಹಾರದಲ್ಲಿ ಪಾಲುಗೊಂಡ ಹುಡುಗಿಯರು ಸೂಳೆಯರಾಗಿದ್ದರು. ಆತನ ತಾಯಿಯ ದೃಷ್ಟಿ

ಯಲ್ಲಿಯಾದರೋ ಅವನೊಬ್ಬ ಸಾಚಾ ಶುದ್ಧ ವ್ಯಕ್ತಿಯಾಗಿದ್ದು, ತನ್ನ ಹದಿನಾರನೇ ವಯಸ್ಸಿನವರೆಗೆ ಸ್ತ್ರೀ ಸಂಪರ್ಕಮಾಡಿರಲಿಲ್ಲ. ಅದು ನಿಜವೇ ಇರಲಿ, ಸುಳ್ಳು ಇರಲಿ ಪ್ಯಾರಿಸಿನಲ್ಲಿಯ ಅವನ ಪ್ರಾರಂಭದ ವರ್ಷಗಳು ಭೋಗಕೇಳಿಯ ವರ್ಷಗಳಾಗಿದ್ದವು.

ತಾರುಣ್ಯದಲ್ಲಿ ಅವನು ಸಿಫಿಲಸ್ ಜಡ್ಡಿನಿಂದ ಬಳಲಿದನು. ಅವನ ಸಹೋದರನು ಇದೇ ಜಡ್ಡಿನಿಂದ ತೀರಿಕೊಂಡನೆಂದ ಬಳಿಕ ಇದು ಆನುವಂಶಿಕ ಜಡ್ಡೇ ಆಗಿರಬೇಕು. ಅವನ ಪ್ರತಿಭೆ ಬೆಳಕಿಗೆ ಬರಲು ತುಂಬದಿನಗಳೇ ಹಿಡಿದವು. ಭಯಂಕರ ತಲೆನೋವಿನಿಂದ ಬಳಲುತ್ತಿದ್ದ ಅವನು ಸೇತುವೆಯ ಮೇಲಿಂದ ನೀರೊಳಗೆ ಜಿಗಿಯುತ್ತಿದ್ದನು. ನೆರೆದ ಜನರಿಗೆ ಬೈಯ್ಯುತ್ತಲೂ ಸಹೋದ್ಯೋಗಿಗಳಿಗೆ ಕೀಳು ಅಭಿರುಚಿಯ ಕಥೆಗಳನ್ನು ಹೇಳುತ್ತಲೂ ಪಾರ್ಟಿಗಳಲ್ಲಿ ಒಟ್ಟುಗೂಡಿದ ಸ್ತ್ರೀಯರಿಗೆ ಶ್ಲೇಷಾರ್ಥದ ಶಬ್ದಗಳನ್ನು ಗಳುಹಿದನು.

ಮೊಪಾಸಾನು ಅದೆಷ್ಟು ನಿರ್ಲಜ್ಜನೆಂದು ಹೆಸರುಗಳಿಸಿದ್ದನೋ ಅಷ್ಟೇ ಪ್ರಮಾಣದಲ್ಲಿ ಪ್ರತಿಭಾಶಾಲಿಯೂ ಆಗಿದ್ದನು. ಆ ಪ್ರತಿಭೆಯಿಂದಾಗಿಯೇ ಅವನೆಷ್ಟೋ ಬಾರಿ ತೊಂದರೆಗೀಡಾಗಬೇಕಾಗುತ್ತಿತ್ತು. ಅಸಭ್ಯ ಪ್ರಹಸನವೊಂದನ್ನು ಬರೆದು ಸ್ಟುಡಿಯೋ ಒಂದರಲ್ಲಿ ಪ್ರದರ್ಶನ ನಡೆಸಿದಾಗ ಅವನನ್ನು ಜನ ಬಹಿಷ್ಕರಿಸಿದರು. ಅಶ್ಲೀಲ ಕವಿತೆಯೊಂದನ್ನು ಬರೆದು ಪ್ರಕಟಿಸಿದ್ದಕ್ಕಾಗಿ ಪೋಲೀಸರು ಅವನನ್ನು ಕೋರ್ಟಿಗೆಳೆದರು.

ಸಾಹಿತ್ಯದಲ್ಲಿ ಈ ರೀತಿ ಅಶ್ಲೀಲತೆಯ ಪುರಸ್ಕರ್ತನೆಂದು ಹೆಸರು ಗಳಿಸಿದರೆ, ಜೀವನದಲ್ಲಿಯ ಅವನ ಕ್ಷಣಿಕ ಪ್ರೇಮ ವ್ಯವಹಾರಗಳಿಗೊಂದು ಲೆಕ್ಕವಿಲ್ಲ. ಈ ಪ್ರೇಮವ್ಯವಹಾರಗಳೇ ಅವನಿಗೆ ತಲೆನೋವಿನ ಬಳುವಳಿಯನ್ನು ಇತ್ತವೆಂದು ತೋರುತ್ತದೆ.

ಚಳಿಗಾಲ ಬರುತ್ತಿದ್ದಂತೆ ಅವನ ನೋವು ಚಿಂತೆಗಳಿಗೂ ಮಹಾಪೂರ ಬಂದಂತಾಗುತ್ತಿತ್ತು. ತನ್ನ ಜೀವನದ ಧ್ರುವತಾರೆಯಾಗಿದ್ದ ತಾಯಿಗೆ ಅವನು ಬರೆದದ್ದು ಹೀಗೆ : ಡಿಸೆಂಬರ್ ತಿಂಗಳು ನನ್ನನ್ನೂ ಭಯಭೀತನನ್ನಾಗಿಸುತ್ತಿದೆ. ಇದೊಂದು ಕರಾಳ ತಿಂಗಳು. ವರ್ಷದ ಮಧ್ಯರಾತ್ರಿಯಿದ್ದಂತೆ. ಎದುರಿಗೊಂದು ಮಂದವಾದ ಲ್ಯಾಂಪನ್ನು ಇರಿಸಿಕೊಂಡು ಟೇಬಲ್ಲಿನ ಬಳಿ ನಾನೊಬ್ಬನೇ ಕುಳಿತುಬಿಟ್ಟಾಗ ಒಂದು ಬಗೆಯ ವಿಷಣ್ಣತಾಭಾವ ನನ್ನನ್ನು ಆವರಿಸಿಬಿಡುತ್ತದೆ. ಆಗ ನಾನು ಆಶ್ರಯಕ್ಕಾಗಿ, ಸಾಂತ್ವನಕ್ಕಾಗಿ ಯಾವ ಕಡೆಗೆ ಹೊರಳಲಿ ಎಂಬುದೇ ತಿಳಿಯದು.

ಕೊನೆಗೂ ಅವನು ಹೊರಳಿದ್ದು ಕತೆಗಳತ್ತ. ಮೀನುಗಾರರು, ರೈತರು, ನಟಿಯರು, ವೇಶ್ಯೆಯರು, ಕಾರಕೂನರು—ಇವರೆಲ್ಲರಿಂದ ಅವನು ಕತೆಗಳನ್ನು ಸಂಗ್ರಹಿಸಿದನು.

೧೮೮೦ ರಲ್ಲಿ ಮೊಪಾಸಾನ ಸಾಹಿತ್ಯಿಕ ಜೀವನದಲ್ಲಿ ಒಂದು ತಿರುವು ಬಂತು. ಝೋಲಾ ಮೊದಲುಮಾಡಿ ಆರು ಜನ ಮಿತ್ರರು ಫ್ರಾನ್ಸ ಹಾಗೂ ಪ್ರಶಿಯನ್ ದೇಶಗಳ ನಡುವಿನ ಯುದ್ಧಕ್ಕೆ ಸಂಬಂಧಿಸಿದಂತೆ ಕಥಾ ಸ್ಪರ್ಧೆಯಲ್ಲಿ ಭಾಗವಹಿಸಿದರು. ಆಗ ಮೊಪಾಸಾ ಬರೆದದ್ದು—ಒಬ್ಬ ಪತಿತ ಸ್ತ್ರೀಯಳ ಬಗ್ಗೆ— ಬಾಲ್ ಆಫ್ ಫ್ಯಾಟ್ ಎಂದು ಆ ಕತೆಯ ಹೆಸರು. ಆ ಕತೆ ಉಳಿದೆಲ್ಲ ಕತೆಗಾರರ ಕತೆಗಳಿಗಿಂತ ಶ್ರೇಷ್ಠ ವಾಗಿತ್ತು.

ಅವಳೊಬ್ಬ ಸೂಳೆ; ಜನರು ಅವಳನ್ನು ಬಹಿರಂಗದಲ್ಲಿ ತಿರಸ್ಕರಿಸಿ ಅಂತರಂಗ ದಲ್ಲಿ ಪೂಜಿಸುತ್ತಿದ್ದರು. ಫ್ರಾನ್ಸ ಹಾಗೂ ಪ್ರಶಿಂಯಾಗಳ ಮಧ್ಯೆ ಯುದ್ಧ ನಡೆದಾಗ ಅವಳು ಗಾಡಿಯೊಂದರಲ್ಲಿ ಪ್ಯಾರಿಸಿನಿಂದ ಹಾವರೆಯವರೆಗೆ ಗೌರವಾನ್ವಿತ ವ್ಯಕ್ತಿ ಗಳೊಂದಿಗೆ ಸಂಚರಿಸಿದಳು. ಅವಳನ್ನು ಮುಟ್ಟಿಸಿಕೊಳ್ಳಲೂ ಕೂಡ ಸಿದ್ಧರಿಲ್ಲದ ಈ ಗೌರವಾನ್ವಿತ ವ್ಯಕ್ತಿಗಳು, ಅವಳು ಸಂಗಡ ಊಟದ ಡಬ್ಬಿಯನ್ನು ತಂದಿದ್ದಾ ಳೆಂದು ಗೊತ್ತಾದೊಡನೆಯೇ ಎಲ್ಲ ಭೇದಭಾವಗಳನ್ನು ಮರೆತರು ಅಷ್ಟೇ ಅಲ್ಲ, ಅವಳು ಔದಾರ್ಯದಿಂದ ಬಡಿಸಿದ ಅನ್ನವನ್ನು ಕೈ ಒಡ್ಡಿ ಪಡೆದರು. ಅಂದು ಸಂಜೆ ಅವರು ಛತ್ರವೊಂದರಲ್ಲಿ ಇಳಿದುಕೊಂಡಾಗ ಅದು ಜರ್ಮನ್ ಸೈನಿಕರ ವಶದಲ್ಲಿದ್ದುದು ಗೊತ್ತಾಯ್ತು. ಅವರನ್ನೆಲ್ಲ ಬಂಧಿಸಿ, ಸೈನ್ಯದ ಅಧಿಕಾರಿಯು ಸಾರಿದ್ದೇನೆಂದರೆ– ಎಲ್ಲಿಯವರೆಗೆ 'ದಪ್ಪ ಸ್ತ್ರೀ' ತನ್ನ ಜೊತೆಗೆ ಒಂದು ರಾತ್ರಿಯನ್ನು ಕಳೆಯುವದಿಲ್ಲವೋ ಅಲ್ಲಿಯವರೆಗೆ ಅವರನ್ನೆಲ್ಲ ಬಿಡುಗಡೆ ಮಾಡುವದಿಲ್ಲ. ಸಿಟ್ಟಿನಿಂದ ಅವಳು ಅಧಿಕಾರಿಯ ಆಜ್ಞೆಯನ್ನು ಮನ್ನಿಸಲಿಲ್ಲ, ಆದರೆ ತಮ್ಮ ಬಿಡುಗಡೆಗಾಗಿ ಸಹ ಪ್ರಯಾಣಿಕರು ಅವನ ಆಜ್ಞೆಯನ್ನು ಮನ್ನಿಸಲು ಅವಳನ್ನು ಒತ್ತಾಯಿಸಿದರು. ಕೊನೆಗೆ ಅವಳು ಸೋತು ಅಧಿಕಾರಿಗೆ ತನ್ನನ್ನು ತಾನು ಅರ್ಪಿಸಿದಳು.

ಮರುದಿನ ಅದೇ ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮತ್ತೆ ಪ್ರಾರಂಭಿಸಿ ದರು. ಮತ್ತೆ ತಮಗಾಗಿ ತ್ಯಾಗ ಮಾಡಿದ ಆ ಪತಿತೆಯನ್ನು ಮೊದಲಿನಂತೆ ತಿರಸ್ಕಾರದಿಂದ ಕಾಣಲಾರಂಭಿಸಿದರು. ಈ ಸಾರೆ ಗೌರವಾನ್ವಿತ ವ್ಯಕ್ತಿಗಳೆಲ್ಲ ತಮ್ಮೊಂದಿಗೆ ಭೋಜನ ತಂದಿದ್ದರೆ, ಅವಳು ಯಾವುದೋ ಒಂದು ವಿಸ್ಮರಣೆಯಲ್ಲಿ ತನ್ನ ಊಟವನ್ನು ತಂದಿರಲಿಲ್ಲ, ಅವಳ ಎದುರಿಗೇನೇ ತಮ್ಮ ಡಬ್ಬಿಗಳನ್ನು ತೆರೆದು ಅವರೇನೋ ಊಟ ಮಾಡಿದರು. ಆದರೆ ಅವಳಿಗೆ ಮಾತ್ರ ತಮ್ಮ ಅನ್ನದಲ್ಲಿ ಒಂದು ಅಗುಳನ್ನೂ ತೋರಿಸುವ ಕೃಪೆ ಮಾಡಲಿಲ್ಲ. ಅವಳ ಕಣ್ಣುಗಳಲ್ಲಿ ನೀರು ತುಂಬಿದ್ದನ್ನು ಕಂಡು 'ಸೋಗಲಾಡಿ' ನಾಚಿಕೆಯಿಲ್ಲದವಳು ಹೇಗೆ ಅಳುತ್ತಿದ್ದಾಳೆಂದು ತಮ್ಮತಮ್ಮಲ್ಲೇ ಪಿಸುಗುಟ್ಟಿದರು. — ಮಾನವ ಸ್ವಭಾವದ ಕ್ರೂರತನದ ಮೇಲೆ ಟಿಪ್ಪಣಿ ಬರೆದಂತಿದೆ—ಈ ಕಥೆ.

ಮಾನವರ ಅಮಾನುಷತೆಗಾಗಿ ಲೇಖಕನಿಲ್ಲಿ ತನ್ನ ತಿರಸ್ಕಾರ ಹಾಗೂ ವ್ಯಂಗ್ಯ ಗಳನ್ನು ವ್ಯಕ್ತಪಡಿಸಿದ್ದಾನೆ. ಆದರೆ ಆತನ ಇತರ ಕತೆಗಳಲ್ಲಿ ತಿರಸ್ಕಾರ ಅಥವಾ

ವ್ಯಂಗ್ಯವು ಅನುಕಂಪದಲ್ಲಿ ಪರಿವರ್ತಿತವಾಗುತ್ತಿರುವದೂ ಉಂಟು. ಮೊಪಾಸಾ ಬರೆದ ಸಣ್ಣಕತೆಗಳಲ್ಲಿ 'ಮುತ್ತಿನ ಸರ' ಬಹು ಮುದ್ದಾದ ಕತೆ; ವಿಶ್ವಕಥಾಸಾಹಿತ್ಯ ದಲ್ಲಿ ಅದರ ಸ್ಥಾನ ಹಿರಿದಾದುದು.

ಶ್ರೀಮಂತ ಗೆಳತಿಯು ವಜ್ರದ ಸರವನ್ನು ಪಡೆದು, ಗಂಡನೊಂದಿಗೆ ವೈಭವ ದಿಂದ ಔತಣಕ್ಕೆ ಹೋದ ಕಾರಕೂನನ ಹೆಂಡತಿ, ಆ ವಜ್ರದ ಸರವನ್ನು ಎಲ್ಲಿಯೋ ಕಳೆದುಕೊಳ್ಳುತ್ತಾಳೆ. ನಾಲ್ವತ್ತು ಸಾವಿರದ ಸಾಲ ತೆಗೆದು, ಕಳೆದ ವಜ್ರದ ಸರಕ್ಕೆ ಬದಲಾಗಿ ಇನ್ನೊಂದೇ ಸರವನ್ನು ಗೆಳತಿಗೆ ಮುಟ್ಟಿಸುತ್ತಾಳೆ. ಆದರೆ ಈ ಸಾಲ ಮುಟ್ಟಿಸಲು ದಂಪತಿಗಳಿಗೆ ಹತ್ತುವರ್ಷದ ಕಾಲಾವಧಿ ಮಿತವ್ಯಯದ ಪರಿಶ್ರಮ ಪೂರ್ಣ ಜೀವನ ನಡೆಸಬೇಕಾಗುತ್ತದೆ. ಆ ಗೆಳತಿಯಿಂದ ಕೈಗಡ ತಂದ ವಜ್ರದ ಸರ ನಕಲಿಯದಾಗಿತ್ತೆಂದೂ, ಅದರ ಬೆಲೆ ಕೇವಲ ಐದುನೂರು ಫ್ರ್ಯಾಂಕು ಎಂದೂ ಕೊನೆಗೆ ಅವರಿಗೆ ಗೊತ್ತಾಗುತ್ತದೆ. ಇಲ್ಲಿಗೆ ಕಥೆ ಮುಕ್ತಾಯವಾಗುತ್ತದೆ. ಕಥೆಯ ಮುಕ್ತಾಯ ಕಟುವ್ಯಂಗ್ಯದಿಂದ ಕೂಡಿದ್ದು, ತುಂಬ ಪರಿಣಾಮಕಾರಿಯಾಗಿದೆ. ಆ ದುರ್ದೈವೀ ದಂಪತಿಗಳಿಗೆ ಮುಂದೇನಾಗುತ್ತದೆಂದು ಲೇಖಕ ಹೇಳುವದೇ ಇಲ್ಲ. ಒಂದು ವೇಳೆ ಅವರ ವಜ್ರದ ಸರವನ್ನು ಶ್ರೀಮಂತ ಗೆಳತಿ ಮರಳಿ ಕೊಟ್ಟಿದ್ದರೆ ಅವರು ದೊಡ್ಡ ಸಂಪತ್ತಿನ ಒಡೆಯರಾಗಬಹುದಿತ್ತು. ಈ ಮಾತನ್ನು ಕತೆಗೆ ಜೋಡಿಸಿದ್ದರೆ ಕತೆ ನೀರಸವಾಗಿ ಮುಕ್ತಾಯವಾಗುತ್ತಿತ್ತು. ಮೊಪಾಸಾ ಜೀವನದ ಮಕ್ಕೀಕಾ ಮಕ್ಕಿ ಅನುಕರಣ ಮಾಡಲಿಲ್ಲ. ಅದರ ಬದಲಾಗಿ ಓದುಗರ ಆಸಕ್ತಿಯನ್ನೂ ಕುದುರಿಸು ವಂತೆ ಜೀವನದ ಘಟನೆಗಳನ್ನು ಜೋಡಿಸಿದ್ದಾನೆ. ಅವನ ಸಣ್ಣ ಕತೆಗಳಲ್ಲಿ ನಾಟ ಕೀಯ ಅಂಶವನ್ನು ಗಮನಿಸಬಹುದು.

ಮೊಪಾಸಾನ ಸಣ್ಣಕತೆಗಳನ್ನು ಈ ರೀತಿ ವಿಂಗಡಿಸಲಾಗುತ್ತದೆ. ಫ್ರಾನ್ಸ ಹಾಗೂ ಪ್ರಶಿಯನ್ ಯುದ್ಧಕ್ಕೆ ಸಂಬಂಧಿಸಿದ ಕಥೆಗಳು, ನಾರ್ಮನ್ ದೇಶದ ಒಕ್ಕಲಿ ಗರ ಕುರಿತ ಕಥೆಗಳು, ನೌಕರಶಾಹಿಯ ಕುರಿತ ಕಥೆಗಳು, ಸಿಯೆನ್ ನದಿಯ ದಂಡೆಯ ಮೇಲಿನ ಜೀವನ ಕುರಿತ ಕಥೆಗಳು, ವಿವಿಧ ವರ್ಗಗಳ ಜನರ ಭಾವನಾತ್ಮಕ ಸಮಸ್ಯೆ ಗಳ ಕುರಿತ ಕಥೆಗಳು, ಭ್ರಮೆ ಹಾಗೂ ಕನಸುಗಳ ಕುರಿತ ಕಥೆಗಳು —ಹೀಗೆ ಸುಮಾರು ೩೦೦ ಕಥೆಗಳನ್ನು ಬರೆದಿದ್ದಾನೆ. ಅದರಂತೆ ಅವನು ಆರು ಕಾದಂಬರಿ ಗಳನ್ನೂ, ಮೂರು ಪ್ರವಾಸ ಕಥನಗಳನ್ನೂ ಬರೆದು ಪ್ರಕಟಿಸಿದನು. ಪ್ರಮುಖ ವಾಗಿ ಅವನ ಕಥಾ ಸಾಹಿತ್ಯ— ೧೮೭೦ ರಿಂದ ೯೦ರ ವರೆಗಿನ ಫ್ರೆಂಚ ಜೀವನದ ವಿಸ್ತಾರವಾದ ಹಾಗೂ ವೈವಿಧ್ಯಪೂರ್ಣವಾದ ಚಿತ್ರವನ್ನು ಒದಗಿಸಿದೆ.

ಮೊಪಾಸಾನು ಜೀವನದಲ್ಲಿ ತುಂಬ ನೋವನ್ನು ಅನುಭವಿಸಿದನು. ದೈಹಿಕ ಅನಾರೋಗ್ಯ ಹಾಗೂ ಮಾನಸಿಕ ವೇದನೆಗಳು ಅವನನ್ನು ಗಾಸಿಗೊಳಿಸಿದವು; ಆದರೆ ಅವನ ದುಃಖಭರಿತ ಸಿಟ್ಟುಸಿರಿನಡಿಯಲ್ಲಿ ಗ್ರೀಕ ಸೌಂದರ್ಯ ಪ್ರಜ್ಞೆಯಿತ್ತು. ಅವನು ತನ್ನ ಮನದ ಬಯಕೆಯನ್ನು ಈ ರೀತಿ ಹೇಳಿದ್ದಾನೆ— ಹಕ್ಕಿಯಂತೆ ಆಕಾಶವನೂ

ತೋಳದಂತೆ ಅಡವಿಯನ್ನೂ ಕ್ಯಾಮಿಯೋದಂತೆ ಬಂಡೆಗಲ್ಲುಗಳನ್ನೂ ಪ್ರೀತಿಸುವೆ. ಕುದುರೆಯಂತೆ ಹಸಿರು ಹುಲ್ಲಿನಲ್ಲಿ ಉರುಳಾಡ ಬಯಸುವೆ. ಮೀನಿನಂತೆ ತಿಳಿನೀರಲ್ಲಿ ಈಜಬಯಸುವೆ. ಕೆಳಪ್ರಕೃತಿಯ ಪ್ರಾಣಿಗಳಲ್ಲಿ ಸಾಮಾನ್ಯವಾಗಿರುವ ಬಯಕೆಗಳು ಹಾಗೂ ಪ್ರವೃತ್ತಿಗಳು ನನ್ನಲ್ಲಿ ಕಂಪನವನ್ನುಂಟುಮಾಡುತ್ತವೆ. ಜಗತ್ತನ್ನು ಪ್ರಾಣಿಗಳು ಪ್ರೀತಿಸುವಂತೆ ಪ್ರೀತಿಸುವೆ: ಉಳಿದ ಮಾನವರಂತೆ ಅಲ್ಲ."

ಮೊಪಾಸಾ ಪ್ರಚಂಡ ಮಾನವತಾವಾದಿಯಾಗಿದ್ದಂತೆ, ಪ್ರಾಣಿಗಳ ಬಗ್ಗೆಯೂ ಅಪಾರ ಅನುಕಂಪವುಳ್ಳವನಾಗಿದ್ದ. ಇಷ್ಟಾಗಿಯೂ ಮಾನವರ ಬಗ್ಗೆ ತನ್ನಲ್ಲಿ ಅನುಕಂಪವಿಲ್ಲದವರಂತೆ ನಟಿಸಿದನು. 'ಒಳಗೇನು ಇರುವದೆಂದು ನೋಡುವ ಕುತೂಹಲಕ್ಕಾಗಿಯೇ ನಾನು ಕವಿಯ ತಲೆಬುರುಡೆಯನ್ನೂ ಒಡೆದುನೋಡಬೇಕಂದಿರುವೆ'ನೆಂದು ಅವನು ಅನ್ನುತ್ತಿದ್ದನು. ಮೂಕಪ್ರಾಣಿಗಳ ಅವ್ಯಕ್ತ ನೋವುಗಳು, ವೇದನೆಗಳು ಅವನಲ್ಲಿ ಸಹಾನುಭೂತಿಯನ್ನು ಹುಟ್ಟಿಸಿದವು. ಬಂಧನದಲ್ಲಿ ಸಿಕ್ಕ ತೋಳದ ಕೂಗಿನಲ್ಲಿ ಅವನು ತನ್ನ ಹೃದಯದ ಕೂಗನ್ನೇ ಕೇಳಿದನು. ಕೃಪಣ ಮುದಿಕೆಯೊಬ್ಬಳು ಸರಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ತಪ್ಪಿಸಲು ಬೊಗಳಲಾರದ ನಾಯಿಯನ್ನು ತಗ್ಗಿನಲ್ಲಿ ಹಾಕಿ ಮುಚ್ಚಿಟ್ಟ ಹೃದಯವಿದ್ರಾವಕ ಕಥೆಯನ್ನು ಬರೆದಿದ್ದಾನೆ. ಪ್ರಾಣಿಗಳ ಮೂಕ ವೇದನೆಯನ್ನು ನೆನೆಸಿದಾಗಲೆಲ್ಲ ಆತನ ಕಣ್ಣುಗಳಲ್ಲಿ ನೀರು ಉಕ್ಕಿಹರಿಯುತ್ತಿತ್ತು. ಜೀವಿತದುದ್ದಕ್ಕೂ ಒಡೆಯನಿಗಾಗಿ ಪರಿಶ್ರಮಪಟ್ಟು ಹಸಿರುಗದ್ದೆಗಾಗಿ ಹಲುಬಿ ಹಂಬಲಿಸಿ, ಅದೇ ಹಸಿರುಗದ್ದೆಯಿಂದ ಮೂರು ಮೊಳ ದೂರದಲ್ಲಿ ಹೆಣವಾಗಿ ಕೊಳೆಯುತ್ತ ಬಿದ್ದ ಕತ್ತೆಯ ಕುರಿತು ಒಂದು ಕರುಣಾಪೂರಿತ ಕತೆ ಎನ್ನುವದಕ್ಕಿಂತಲೂ ಸುಂದರವಾದ ಕವನವನ್ನು ಬರೆದಿದ್ದಾನೆಂದೇ ಹೇಳಬಹುದು.

ಪ್ರಾಣಿಗಳ ಕುರಿತ ಈ ಕತೆಗಳಂತೆ, ನಾರ್ಮನ್ ರೈತರ ನಿರರ್ಥಕ ಹೋರಾಟದ ಜೀವಂತ ಚಿತ್ರಣವೂ ಅವನ ಪ್ರಮುಖವಾದ ಕಥಾವಸ್ತುವಾಗಿತ್ತು. ರೈತಾಪಿ ಜನರ ಸಮಸ್ಯೆಗಳನ್ನು ಅವನು ಬೌದ್ಧಿಕವಾಗಿ ಅರಿಯಲು ಇಚ್ಛಿಸದೆ, ಇಂದ್ರಿಯಗಳಿಂದ ಅನುಭವಿಸಲು ಮುಂದಾದನು. ಮನುಷ್ಯರ ಹಾಗೂ ಪ್ರಾಣಿಗಳ ಆಂತರಿಕ ಭಾವನೆಗಳನ್ನೂ ಸಹಜಪ್ರವೃತ್ತಿಗಳನ್ನೂ ವಿಚಾರಗಳನ್ನೂ ಮೂಸಿನೋಡಲು ಅವನು ಸಮರ್ಥನಾಗಿದ್ದನು. "ಮೊಪಾಸಾನ ಪುಟಗಳಲ್ಲಿ ಜೀವನವು ವಾಸನೆಗಳ ಸಂಗೀತ ಮೇಳವಾಗಿ ಪರಿಣಮಿಸಿತು".

ಆದರೆ ಮೊಪಾಸಾನ ಗ್ರಹಿಕೆಗೆ ಬಂದದ್ದು ವಿಶೇಷವಾಗಿ ಜೀವನದ ದುರ್ವಾಸನೆಯೇ. ಅವನ ಜೀವನದರ್ಶನವು ಮುಖ್ಯವಾಗಿ ಕುರೂಪದರ್ಶನವೇ ಆಗಿತ್ತು. "ಸಾಮಾನ್ಯವಾಗಿ ಜೀವನದ ನೀರಸವಾದ, ಅಸಹ್ಯವಾದ ಕ್ಷುದ್ರವಾದ ಅಂಶದ ಮೇಲೆ ತನ್ನ ಲಕ್ಷ್ಯವನ್ನು ಕೇಂದ್ರೀಕರಿಸುತ್ತಿದ್ದನು. ಆ ಅಂಶದ ಅಣುವೊಂದನ್ನು ಕೈಯ್ಯಲ್ಲಿ ಒಡಿದು ರಕ್ತ ಸೋರುವವರೆಗೆ ಹಿಚಕುತ್ತಿದ್ದನು".

ಮೊಪಾಸಾನ ಅತ್ಯಂತ ಭೀಬತ್ಸ ಕತೆಗಳೂ ನಿರೂಪಣೆಯ ಲವಲವಿಕೆಯಿಂದ ಹೊಳೆಯುತ್ತಿರುವುದುಂಟು. ಮಾನವನ ದೈಹಿಕ ಸಂಬಂಧದ ವಿದ್ಯುತ್ ಸಂಪರ್ಕವು ಅವನಿಗೆ ಹೆಚ್ಚು ಸೇರುತ್ತಿತ್ತು. ಅವನು ಬರಹದಲ್ಲಿ ರೇನಾಯಿರ್‌ನೇ ಆಗಿದ್ದನು. ಅವನು ಹೇಳುತ್ತಿರುವ ಜೀವನದ ಕಥೆ ರೈತನದೇ ಆಗಿರಬಹುದು, ಅಥವಾ ರಾಜನದೇ ಆಗಿರಬಹುದು. ಅದರಲ್ಲಿ ಸೂಕ್ಷ್ಮ ಹಾಸ್ಯವೇನೂ ಇರಲಿಲ್ಲ. ಆದರೆ ದುಃಖದ ಮೂರ್ಖತನದ ಹಾಗೂ ಒರಟುತನಗಳ ಪ್ರಹಸನಗಳನ್ನೂ ಬರೆದು ಅವುಗಳಲ್ಲಿ ಕಲೆಯ ಸೂಕ್ಷ್ಮತೆಯನ್ನೂ ಸಾಧಿಸಿದನು.

ಮೊಪಾಸಾನು ಸಣ್ಣಕತೆಯ ಜನಕನಾಗಿದ್ದರೂ ಅವನ ಕಥಾನಿರೂಪಣೆಯ ರೀತಿ ಮಹಾಕಾವ್ಯದ ನಿಧಾನದ ರೀತಿಯಾಗಿತ್ತು. ಅವನು ಸಣ್ಣಕತೆಗಳಾಗಿರುವ ಕಾದಂಬರಿಗಳನ್ನೂ ಕಾದಂಬರಿಗಳಾಗಿರುವ ಸಣ್ಣಕತೆಗಳನ್ನೂ ಬರೆದಿದ್ದಾನೆ.

ಮೊಪಾಸಾನು ಸೃಷ್ಟಿಸಿದ ಪಾತ್ರಗಳಿಗೆ ಆತ್ಮದ ಅಥವಾ ಧರ್ಮದ ಆಸರೆಯಿರಲಿಲ್ಲ. ಅವನು ನಿಜವಾಗಿಯೂ ಕವಿಯಾಗಿದ್ದು, ಸಿನಿಕನಂತೆ ನಟಿಸಿದನು ಅಷ್ಟೇ. ಅವನ ನಿರಾಶಾವಾದ ವೈಜ್ಞಾನಿಕ ಖಚಿತತೆ ಹಾಗೂ ಉಜ್ವಲವೂ ನಿಯಮಬದ್ಧವೂ ಸರಳವೂ ಆದ ಶೈಲಿಯು ಅವನ ಕತೆಗಳಿಗೆ ತನ್ನದೇ ಆದ ಪ್ರತ್ಯೇಕತೆಯನ್ನು ತಂದು ಕೊಟ್ಟಿತು. ತಾನು ದೇವರಿಂದ ಸೃಷ್ಟಿಸಲ್ಪಟ್ಟ ವ್ಯಕ್ತಿಯೆಂದುಕೊಂಡಿದ್ದರೂ ದೇವರ ಪಿತೃತ್ವದಲ್ಲಿ ನಂಬಿಗೆಯನ್ನು ಕಳೆದುಕೊಂಡಿದ್ದನು. ಜೀವಿಸುವದಕ್ಕಾಗಿ ಅವನಲ್ಲಿ ತತ್ವಜ್ಞಾನದ ಯಾವುದೇ ಸೂತ್ರಗಳಿರಲಿಲ್ಲ.

ಕಲಾಕಾರನ ಬಗ್ಗೆ ಮೊಪಾಸಾನ ಅಭಿಪ್ರಾಯ ಹೀಗಿತ್ತು. "ಜಗತ್ತಿನಲ್ಲಿ ಜನರಿದ್ದಷ್ಟು ಸಂಖ್ಯೆಯಲ್ಲಿ ಸತ್ಯಗಳಿವೆ. ನಮ್ಮಲ್ಲಿ ಪ್ರತಿಯೊಬ್ಬನೂ ತನ್ನದೇ ಆದ ಭ್ರಾಮಕ ಜಗತ್ತನ್ನು ನಿರ್ಮಿಸಿಕೊಳ್ಳುತ್ತಾನೆ. ಅದು ಅವನ ಸ್ವಭಾವಕ್ಕನುಗುಣವಾಗಿ ಕಾಮ್ಯಮಯವಾಗಿರಬಹುದು, ಭಾವುಕವಾಗಿರಬಹುದು, ಆನಂದಮಯವಾಗಿರಬಹುದು. ತನ್ನ ಭ್ರಮೆಯನ್ನು ಲೋಕವು ಒಪ್ಪುವಂತೆ ಮಾಡುವವನೇ ಶ್ರೇಷ್ಠ ಕಲಾಕಾರನಾಗಿದ್ದಾನೆ.

ತಾನು ದಿನದಿನಕ್ಕೆ ಸಣ್ಣಾಗುತ್ತಿರುವ ಕಲ್ಪನೆ ಮೊಪಾಸಾನಿಗೆ ದೃಢವಾಯ್ತು. ದಿನವೂ ಮುಂಜಾನೆ ಮುಖಕ್ಷೌರ ಮಾಡಿಕೊಳ್ಳುತ್ತಿದ್ದಂತೆ ಅವನ ಹಾಗೂ ಕನ್ನಡಿಯ ನಡುವೆ ಮಂಜು ಬಂದಂತಾಗುತ್ತಿತ್ತು. ನೋಯುತ್ತಿರುವ ಹಣೆಗೆ ಕೈಯನ್ನಿರಿಸಿಕೊಂಡು ಕೂಡುತ್ತಿದ್ದನು. ವಸ್ತುಗಳ ಅಣು ಅಣುವಿನಲ್ಲೂ ತಾನೇಕೆ ಹೀಗೆ ತೀಕ್ಷ್ಣವಾಗಿ ನೋಡುತ್ತಿದ್ದೇನೆಂಬುದರ ಅರಿವು ಅವನಿಗಾಯ್ತು. ಬಹುಶಃ ಅವನ ಮೆದುಳೇ ಚೂರು ಚೂರಾಗಿ ಸಿಡಿದು ಹೋದಂತಾಯ್ತು. ಅವನು ಕಲಾಕಾರನಾಗಿ ಕಲೆಯಲ್ಲಿ ಉಚ್ಚಸ್ಥಾನವನ್ನೇರುತ್ತ ಹೋದಂತೆ, ವ್ಯಕ್ತಿಯಾಗಿ ಇತಿಹಾಸಪೂರ್ವದ ಅನಾಗರಿಕ ಮಾನವನಾಗಿ ಕಂಗೊಳಿಸುತ್ತಿದ್ದನು.

ಮೊಪಾಸಾನ ಕತೆಗಳಲ್ಲಿ ಬರುವ ಭೂತಗಳು, ಭ್ರಾಂತಿಗಳು ಅವನ ಜೀವನದ ಗುಪ್ತಗಳಿಗೆಗಳ ಮೇಲೆ ಅವಲಂಬಿತವಾಗಿವೆ. ಮಾನವರು ನಿಧಾನವಾಗಿ ಹೇಗೆ ಹುಚ್ಚರಾಗುತ್ತ ಹೋಗುತ್ತಾರೆಂಬುದು ಅವನ ಚಿಂತನದ ವಿಷಯವಾಗಿತ್ತು. ಅವನು ತನ್ನ ಪ್ರತಿರೂಪದ ಜಾಡ್ಯದಿಂದ ಬಳಲುತ್ತಿದ್ದನು. ವ್ಯಕ್ತಿಯೊಬ್ಬನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಕಾಣುವಂತೆ, ಅವನು ತನ್ನನ್ನು ತಾನು ಸ್ಪಷ್ಟವಾಗಿ ಕಂಡನು. ಒಂದು ಸಂಜೆ ಅವನು ತನ್ನ ಕೋಣೆಗೆ ಬಂದಾಗ, ಕ್ಷಣದ ಹಿಂದೆಯೇ ಬೇರೆಡೆ ತೆಗೆದಿರಿಸಿದ ಪುಸ್ತಕವನ್ನು ಹಿಡಿದು, ತಾನೇ ಖುರ್ಚಿಯ ಮೇಲೆ ಕುಳಿತು ಓದುತ್ತಿರುವದನ್ನು ಕಂಡನು. ಮತ್ತೊಮ್ಮೆ ಬರೆಯುತ್ತ ಕೂತಾಗ ಅವನ ಎರಡನೇ ರೂಪವು ಸದ್ದಿಲ್ಲದೆ ಬಂದು ಕುಳಿತು, ಪ್ರತಿಯೊಂದು ಶಬ್ದವನ್ನು ಕೈಯಿಂದ ಬರೆಯಹಚ್ಚಿತು. ಅವನ ಮುಖವೆಲ್ಲ ಭಯದಿಂದ ಬಿಳುಪಾಗಿ ಜೋರಾಗಿ ಚೀರಿದನು. ತನ್ನದೇ ಆದ ಪ್ರತಿರೂಪವನ್ನು ಹೊರದಬ್ಬಲು ಪ್ರಯತ್ನ ಮಾಡಿದನು.

ಸಾವಿನ ಬಗ್ಗೆ ಅವನಲ್ಲಿ ಮಿತಿಮೀರಿದ ಭೀತಿಯಿತ್ತು. 'ಸಾವು ನನ್ನ ಹತ್ತಿರ ಕುಳಿತಿದೆ; ಅದನ್ನು ಹಿಂದಕ್ಕೆ ಸರಿಸಲು ತೋಳನ್ನು ಮುಂದೆ ಚಾಚುತ್ತಿದ್ದೇನೆ. ಹಾದಿಯಲ್ಲಿ ತುಳಿಯಲ್ಪಡುವ ಕ್ರಿಮಿಗಳು, ಬೀಳುತ್ತಿರುವ ಎಲೆಗಳು. ಗೆಳೆಯನ ತಲೆಯ ಮೇಲಿನ ಬಿಳೀ ಕೂದಲುಗಳು ಚೀರಿ ಚೀರಿ ಹೇಳುತ್ತವೆ.— ನಾನು (ಸಾವು) ಇಲ್ಲಿದ್ದೇನೆಂದು.

ಮೊಪಾಸಾನ ತಮ್ಮ ಹಾರ್ವೆಗೆ ಒಮ್ಮೆಲೇ ಮಿದುಳಿನ ಆಘಾತವಾಯ್ತು. ಅವನನ್ನು ಹುಚ್ಚಾಸ್ಪತ್ರೆಗೆ ಕರೆದುಕೊಂಡು ಹೋದಾಗ, – ಅವನು ಮೊಪಾಸಾನನ್ನು ಬಾಲ್ಯದಲ್ಲಿ ಕರೆಯುತ್ತಿದ್ದಂತೆ —'ಬಾ ಗಾಯ್, ತೋಟದಲ್ಲಿ ಆಡೋಣವಂತೆ', ಗಾಯ್ ಮುಂದೆ ಬಂದು, ಹಾರ್ವೆಯ ಕಣ್ಣೀರನ್ನು ಒರೆಸುತ್ತಿದ್ದಂತೆ, ಅವನು ಮುಚ್ಚಿದ ಕಣ್ಣನ್ನು ತೆರೆಯಲೇ ಇಲ್ಲ.

ತಮ್ಮನ ಸಾವು ಮೊಪಾಸಾನ ಮೇಲೆ ದೊಡ್ಡ ಆಘಾತವನ್ನುಂಟುಮಾಡಿತು. ಜೀವನದ ದೈವೀದುರ್ವಿಪಾಕವೆಂಬಂತೆ ಅವನ ಸೃಜನಶೀಲತೆಯ ಸಮೃದ್ಧ ಅವಧಿಯೂ ಈಗ ಪ್ರಾರಂಭವಾಯ್ತು. ರಕ್ತದಲ್ಲಿಯ ವಿಷಜಂತುಗಳು ಅವನನ್ನು ನಿತ್ಯವೂ ಕೊಲ್ಲುತ್ತ ನಡೆದವು. ಸೇವಕನೊಂದಿಗೆ ಹೊಲದಲ್ಲಿ ಹೋಗುತ್ತಿದ್ದಾಗ, ಮೊಪಾಸಾನು ಎತ್ತರವಾದ ಶಿಲುಬೆಯನ್ನು ಕಂಡು, — 'ಲೋ ಫ್ರಾನ್ಸಿಸ್, ಕ್ರಿಸ್ತನು ಶಿಲುಬೆಗೇರಿದಾಗ ಅವನಿಗೆ ೩೩ ವರ್ಷಗಳಾಗಿದ್ದವು. ನಾನೋ ಈಗಾಗಲೇ ೪೧ ರ ಅಂಚಿನಲ್ಲಿದ್ದೇನೆ.

ಹೊಸವರ್ಷದ ಹೊಸದಿನ. ಮೊಪಾಸಾ ತನ್ನ ತಲೆಗೆ ಗುರಿಯಿಟ್ಟುಕೊಂಡು ಪಿಸ್ತೂಲಿನ ಗುಂಡನ್ನು ಹಾರಿಸಬೇಕೆಂದನು. ಪಿಸ್ತೂಲು ಖಾಲಿಯಿದ್ದುದನ್ನು ಕಂಡು, ಬ್ಲೇಡಿನಿಂದ ತನ್ನ ಗಂಟಲನ್ನೇ ಕತ್ತರಿಸಿ ಹಾಕಿದನು. ಆಗ ಅವನ ಮುಖ

ದಲ್ಲಿ ನಿರ್ಲಿಪ್ತತೆಯು ಮುಗುಳ್ನಗೆಯಿತ್ತು. ಸೇವಕ ಚೀರುತ್ತ ಅವನೆಡೆಗೆ ಬಂದಾಗ— 'ಫ್ರಾನ್ಸಿಸ್' ನಾನೇನು ಮಾಡಿಕೊಂಡಿದ್ದೇನೆ. ನೋಡು ನನ್ನ ಗಂಟಲನ್ನು ಕತ್ತರಿಸಿ ಕೊಂಡಿದ್ದೇನೆ.' ಇದು ಹುಚ್ಚತನದ ಒಂದು ಪ್ರತ್ಯಕ್ಷ ಉದಾಹರಣೆ.

ಕೊನೆಗೂ ಪ್ರಕೃತಿವಾದಿ ಮಾನವಪ್ರಾಣಿಯ ಮೇಲೆ ಕೊನೆಯ ಪ್ರಯೋಗ ಮಾಡಿಯೇ ಬಿಟ್ಟು. ಡಾಕ್ಟರರು ರಕ್ತಸ್ರಾವವನ್ನು ತಡೆಯಲು ಬ್ಯಾಂಡೇಜನ್ನು ಕಟ್ಟಿದರು. ಮುಂಜಾನೆ ಅವನನ್ನು ಅವನ ನೆಚ್ಚಿನ ಸಮುದ್ರಕ್ಕೆ ಕರೆದುಕೊಂಡು ಹೋದರು. ಅಲ್ಲಿರುವ ಬೆಲ್‌ಎಮಿ ಎಂಬ ನಾವೆಯ ದರ್ಶನದಿಂದ ಅವನ ಕಳೆದು ಹೋದ ವಿವೇಕ ಮರಳಿ ಬರಬಹುದೆಂದು ಆವರು ಆಶಿಸಿದ್ದರು. ಕೆಲಹೊತ್ತಿನವರೆಗೆ ಅವನು ನಾವೆಯನ್ನು ದಿಟ್ಟಿಸಿ ನೋಡುತ್ತ ನಿಂತಿದ್ದನು. ಮಾತನ್ನು ಹೊಸದಾಗಿ ಕಲಿಯುತ್ತಿರುವ ಶಿಶುವಿನಂತೆ ಮೊಪಾಸಾನು ತುಟಿಗಳನ್ನು ಅಲುಗಾಡಿಸಿದನು ಅಷ್ಟೇ, ಆದರೆ ಏನನ್ನೂ ಉಸುರಲಿಲ್ಲ. ಮುಖ ಹೊರಳಿಸಿದನು. ಅಲ್ಲಿಗೆ ಅವನು ಕೊನೆಯ ಉಸಿರನ್ನೆಳೆದನು.

ರತ್ನಾಕರವರ್ಣಿ : ಒಂದು ಸಮಾಲೋಚನೆ

ಆರ್. ಪಿ. ಕುಲಕರ್ಣಿ

ಕನ್ನಡ ಪ್ರಾಚೀನ ಮತ್ತು ಮಧ್ಯಯುಗದ ಕವಿಗಳ ಚರಿತ್ರೆಗಳ ಬಗ್ಗೆ ಹೇಗೋ ಹಾಗೇ ರತ್ನಾಕರನ ಜೀವನ ಚರಿತ್ರೆಯು ಸಂಶೋಧಕರನ್ನು 'ತಗರು ತಗರಿನಂತೆ ಮಾಕೊಂಡು ಹೊಡೆದಾಡಲು' ಹಚ್ಚುವ ವಿಷಯವಾಗಿದೆ. ಹಿಂದಿನ ಕಾಲದ ಕವಿಗಳ ಚರಿತ್ರೆಯು ಇದಮಿತ್ಥಂ —ಎಂದು ಹೇಳುವದು ಎಷ್ಟು ಕಷ್ಟ ಸಾಧ್ಯವೋ, ಅಷ್ಟೇ ರತ್ನಾಕರನ ಜೀವನ ಚರಿತೆಯು ಬಗ್ಗೆ ಹೇಳುವದು ಕಷ್ಟಸಾಧ್ಯ ವೆಂದು ತೋರುವದು. ಅವನ ಚರಿತ್ರೆ, ಕಾಲ ಮತ್ತು ಅವನ ಕೃತಿಗಳ ಬಗ್ಗೆ ಸಾಹಿತ್ಯ ಸಂಶೋಧಕರಲ್ಲಿ ಒಮ್ಮತವಿಲ್ಲದಿರುವದು ಕಂಡುಬರುತ್ತದೆ. ದೇವಚಂದ್ರನ ರಾಜಾವಳಿ ಕಥೆಯನ್ನು ಮತ್ತು ಕೆಲವು ದಂತ ಕತೆಗಳನ್ನು ಆಧಾರವಾಗಿಟ್ಟುಕೊಂಡು ಕೆಲವರು ಅವನ ಚರಿತ್ರೆಯನ್ನು ಬರೆದಿರುವರು. ಅವನ ಗ್ರಂಥಗಳಲ್ಲಿ ಬಂದ ಅಂಶಗಳ ಆಧಾರದ ಮೇಲಿಂದ ಇನ್ನೂ ಕೆಲವರು ಅವನ ಜೀವನ ಕತೆಯನ್ನು ಕಟ್ಟಿರು ವರು. ಇನ್ನೂ ಸಂಶೋಧನೆ ನಡೆಯಬೇಕಾಗಿದ್ದು. ಅಂಥ ಜಿಜ್ಞಾಸುಗಳ ಎದುರು ನನ್ನ ಕೆಲವು ವಿಚಾರಗಳನ್ನು ಇಡಬಯಸುವೆ.

ಚರಿತ್ರೆ :— ಭಾರತೀಯ ಪರಂಪರೆಯಲ್ಲಿ ರಚಿತವಾದ ಚರಿತ್ರ ಗ್ರಂಥಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದರೆ ಮಾನವ ಬುದ್ಧಿಗೊಪ್ಪದ ಅದ್ಭುತ ಚಮತ್ಕಾರ ಗಳನ್ನು ಅವುಗಳಲ್ಲಿ ಸೇರಿಸಿದುದು ಕಂಡುಬರದೆ ಇರಲಾರದು. ಈ ನಿಯಮಕ್ಕೆ ರತ್ನಾಕರನ ಚರಿತ್ರೆಯು ಅಪವಾದವಲ್ಲ. ಇಂದಿನ ತರ್ಕಾಧಿಷ್ಠಿತ ವಿಜ್ಞಾನ ಯುಗ ವಲ್ಲಿ ಪವಾಡಪೂರಿತ ಚರಿತ್ರೆಗಳನ್ನು ನಂಬುವದು ಸಾಧ್ಯವಿಲ್ಲ. ಯಾವದೇ ಚರಿ ತ್ರೆಯು ಬುದ್ಧಿಗೊಪ್ಪಿಗೆಯಾಗಿರಬೇಕು. ಭಾವೋನ್ಮಾದದಲ್ಲಿ ಬರೆದುದಾಗಿರ ಬಾರದು. ರತ್ನಾಕರನ ಚರಿತ್ರೆಗೆ ಆಧಾರಗ್ರಂಥವೆಂದು ಒಪ್ಪಿಕೊಂಡ ದೇವಚಂದ್ರನ ರಾಜಾವಳೀ ಕತೆಯಲ್ಲಿ ನಿರೂಪಿತವಾದ ಅಂಶಗಳಲ್ಲಿ ತರ್ಕಕ್ಕೆ ಒಪ್ಪಿತವಾದವುಗಳನ್ನು ಮಾತ್ರ ನಾವು ಎತ್ತಿಕೊಳ್ಳಬೇಕು. ಅದಲ್ಲದೆ ರತ್ನಾಕರನ ಗ್ರಂಥವೆಂದು ಖಚಿತವಾದ 'ಭರತೇಶ ವೈಭವ'ದಲ್ಲಿ ತನ್ನ ಬಗ್ಗೆ ಅವನೇ ಹೇಳಿಕೊಂಡ ಸಂಗತಿಗಳನ್ನೇ ನಂಬಿ ಅವನ ಚರಿತ್ರೆಯನ್ನು ಕಂಡುಕೊಳ್ಳಬೇಕಾಗಿದೆ.

"ಕರ್ನಾಟಕ ಸುಕ್ಷೇತ್ರ"ದವನೆಂದು, 'ಕ್ಷತ್ರಿಯ ವಂಶಜ'ನೆಂದು, 'ಧಾತ್ರಿ ನುಡಿ ವುದು' ಎಂದು ಅವನು ತನ್ನ ಕುಲ ಮತ್ತು ಸ್ಥಲದ ಬಗ್ಗೆ ಹೇಳಿರುವನು. ಅವನು

'ಕನ್ನಡ' ಜಿಲ್ಲೆಗೆ ಸೇರಿದವನೆಂದೂ, 'ಕ್ಷತ್ರಿಯ' ಮನೆತನದವನೆಂದೂ ಹೇಳಿಕೊಂಡು ದರ ಮೇಲಿಂದ 'ಸೂರ್ಯವಂಶದ ರಾಜನಾದ ದೇವರಾಜನ ಪುತ್ರನು' ಎಂದು ದೇವಚಂದ್ರನು ಹೇಳುವ ಮಾತು ಖಚಿತವಾಗುವದು. 'ರತ್ನಾಕರ'ನೆಂದು ಜನರು ತನ್ನನ್ನು ಹೇಳುವರೆಂದೂ 'ಇವು' ತನ್ನ 'ಗಾತ್ರದ ಸೊಮ್ಮು' ಎಂದೂ ಹೇಳಿದುದರ ಮೇಲಿಂದ ಕ್ಷತ್ರಿಯವಂಶಕ್ಕೆ ಸೇರಿದ ಸೂರ್ಯವಂಶದ ದೇವರಾಜನ ಪುತ್ರನೆಂದೂ, ಅವನ ಹೆಸರು ರತ್ನಾಕರನೆಂದೂ ನಿಶ್ಚಿತವಾಗುವದು. "ಆಮಯ ಜನನ-ಮರಣ ಗಳುಳ್ಳ" ಜನಕರ ಹೆಸರನ್ನು ಅವನು ಹೇಳಿಕೊಳ್ಳದಿದ್ದರೂ, 'ರಾಜಾವಳೀ' ಕತೆ ಯಲ್ಲಿ ದೇವಚಂದ್ರನು ಹೇಳಿದ ಅವನ ತಂದೆಯ ಹೆಸರು ಸರಿ ಇರಬಹುದೆಂದು ಊಹಿ ಸಲು ಅವಕಾಶವಿದೆ, ಸರ್ವಜ್ಞ ಕವಿಯು ತನ್ನ ತಂದೆ-ತಾಯಿಗಳ ಬಗ್ಗೆ ಹೇಳಿ ಕೊಂಡಂತೆ.

"ನಿರುತ ನಿರ್ಭೇದ ಭಕ್ತಿಯೆಂ ತಾಯಿಯಾ ಶ್ರೀಮಂ ।
ದರ ಸ್ವಾಮಿ ಪಡೆದಯ್ಯನೆಂದು । ಪರಿಣಾಮವಡೆದ
ರತ್ನಾಕರ ಸಿದ್ಧನ । ಪಿರಿಯಂ ತಂದೆಯ ಕಂಡರಿವು ॥"

(ದಿ. ಧ್ಯ. ಸಂ. ೩೪)

ಎಂದು ಹೇಳಿಕೊಂಡುದುದುಂ ವಿಶೇಷವಾಗಿದೆ.

ಗುರುಗಳು :— ತನಗೆ ಜೈನಧರ್ಮದ ದೀಕ್ಷೆಯನ್ನಿತ್ತವರು ಚಾರುಕೀರ್ತಿ ಯೋಗೀಶ್ವರರೆಂದು ತಾನೇ ಹೇಳಿಕೊಂಡಿರುವನು. 'ದೀಕ್ಷಾಗ್ರ ಗುರು ಚಾರುಕೀರ್ತಿ ಯೋಗೀಶ್ವರ', 'ದೇಶಿಕಾಗ್ರಣಿ ಚಾರುಕೀರ್ತ್ಯಾಚಾರ್ಯ ಶುಚಿದೀಕ್ಷೆಯಿತ್ತಾಗ.' (ಸರ್ವ ಮೋ. ಸಂ. ೧೧೩, ೧೧೪) ಎಂದು ಅವನು ಹೇಳಿಕೊಂಡುದರಿಂದ ಮತದ ಗುರುಗಳು ಚಾರುಕೀರ್ತಿ ಆಚಾರ್ಯರೆಂದು ತಿಳಿಯುವದು. ಮೋಕ್ಷಾಗ್ರ ಗುರುಗಳು ಬೇರೆಯಾಗಿರಬಹುದೆಂದು ಊಹಿಸಲು ಅವಕಾಶವದೆ. 'ಮೋಕ್ಷಾಗ್ರ ಗುರು ಹಂಸ ನಾಥಾ' (ಸಿ. ಮೋ. ೧೧೩) 'ಆಶಾತಿದೂರ ಶ್ರೀ ಗುರು ಹಂಸನಾಥ ಪ್ರಕಾಶದೊಳ್ನಿಲಿಸಿ ರಕ್ಷಿಸಿದಾ' (ಸ. ಮೋ. ಸಂ. ೧೧೪) 'ಗುರು ಹಂಸನಾಥನ ಆಜ್ಞೆಯೊಳು ಸಿದ್ಧಾಂತದ ತಿರುಳರಿದು' (ಸ. ಮೋ. ಸಂ. ೧೧೫) ಎಂದು ಹೇಳಿ ತನ್ನ ಆಧ್ಯಾತ್ಮ ಗುರುವು ಹಂಸನಾಥನೆಂದು ಅವನು ಹೇಳಿದುದು ಕಂಡುಬರುತ್ತದೆ. ಇವರ ಮೇಲಿಂದ ಅವನ ಧರ್ಮಗುರುಗಳು ಮತ್ತು ಅಧ್ಯಾತ್ಮ ಗುರುಗಳು ಬೇರೆ ಬೇರೆಯಾಗಿರಬೇಕೆಂದು ತೋರುತ್ತದೆ. ಪ್ರಾರಂಭದ ಆಸ್ಥಾನ ಸಂಧಿಯಲ್ಲಿಯ ೪ನೇ, ೫ನೇ ಪದ್ಯಗಳಲ್ಲಿ "ದುರಿತಂಜಯ ಹಂಸನಾಥ ನಮೋ ನಮೋ ಗುರುವೇ ಪತ್ಯಕ್ಷವಾಗೆನಗೆ." ಎಂದು ಹೇಳಿಕೊಂಡಿರುವನು.

ಇನ್ನೊಂದು ಮಹತ್ವದ ಸಂಗತಿಯನ್ನು ನಾವಿಲ್ಲಿ ಗಮನದಲ್ಲಿ ತಂದುಕೊಳ್ಳ ಬೇಕಾಗಿದೆ. ಆತ್ಮನನ್ನೇ 'ಹಂಸ' ಎಂದು ಜೈನಾಗಮಗಳಲ್ಲಿ ಸಂಬೋಧಿಸಲಾಗು ವದಂತೆ, ಆತ್ಮನನ್ನು ಕುರಿತು ರತ್ನಾಕರನು 'ಹಂಸ' ನೆಂದು ಸಂಬೋಧಿಸಿದುದು

ಕಂಡು ಬರುವದು. "ಬಾಹ್ಯರಚನೆಯೊಳೇನೆಂದು ಬಿಟ್ಟು ಅನುಭವಿಸುತಿಹೆನು ಹಂಸನೊಳಗೆ" (ಸ. ಮೋ. ಸಂ. ೧೦೧) ಎಂದು ಹೇಳಿಕೊಂಡಿರುವದನ್ನು ನೋಡಿದಾಗ ಇಲ್ಲಿ 'ಹಂಸ' ಎಂದರೆ ಆತ್ಮನೆಂದೇ ಸ್ಪಷ್ಟವಾಗುವದು. ಆ ದೃಷ್ಟಿಯಿಂದ 'ಗುರು ಹಂಸನಾಥಾ' ಎಂದು ಆತ್ಮನನ್ನುದ್ದೇಶಿಸಿ ಹಾಗೆ ಹೇಳಿರಲೂ ಬಹುದು. ರತ್ನಾಕರನ ಅಧ್ಯಾತ್ಮಗುರುಗಳು ಯಾರಿರಬಹುದೆಂಬ ಬಗ್ಗೆ ಸಂಶೋಧನೆಯಾಗುವದು ಅವಶ್ಯವದೆ. ಇಲ್ಲವೆ ಆತ್ಮನೇ ತನ್ನ ಗುರುವೆಂದು ಅವನು ಭಾವಿಸಿರಬಹುದೇ ಎಂಬ ಬಗ್ಗೆ ಇತ್ಯರ್ಥವಾಗಬೇಕಾಗಿದೆ. ಧ್ಯಾನಕ್ಕೆ ಮೂಲವಾದ ಮಂತ್ರವನ್ನು ಚಾರುಕೀರ್ತಿ ಆಚಾರ್ಯರಿಂದ ಅವನು ಪಡೆದಿರಲೂ ಬಹುದು.

"ದೇಶಿಗಣಾಗ್ರಣಿ ಚಾರುಕೀರ್ತ್ಯಾಚಾರ್ಯ । ಶ್ರೀ ಶುಚಿದೀಕ್ಷೆ
ಯಿತ್ತಾಗ । ಆಶಾತಿದೂರ ಶ್ರೀಗುರು ಹಂಸನಾಥ ಪ್ರ ।
ಕಾಶದೊಳ್ನಿಲಿಸಿದಾ ॥ (ಸ. ಮೋ. ಸಂ. ೧೧೪)

ವಿದ್ಯಾಭ್ಯಾಸ :— "ಅವರೊಂದು ತಿಂಗಳೋದಿದ ಶಾಸ್ತ್ರ ನನಗೊಂದು । ದಿವಸದೊಳವಗತವಹುದು ॥ (ಸ. ಮೋ. ಸಂ. ೧೦೧) ಎಂದು ರತ್ನಾಕರನೇ ತನ್ನ ಬುದ್ಧಿಶಕ್ತಿಯನ್ನು ಕುರಿತು ಹೇಳಿಕೊಂಡಿರುವನು. ಅವನ 'ಭರತೇಶ ವೈಭವ' ಗ್ರಂಥವನ್ನು ಸಮಗ್ರವಾಗಿ ಅಭ್ಯಾಸ ಮಾಡಿದರೆ, ತನ್ನ ಬಗ್ಗೆ ಅವನು ಹೇಳಿಕೊಂಡ ಮಾತಿನ ಸತ್ಯತೆಯ ಅರಿವಾಗುವದು. ಆ ಗ್ರಂಥದ "ಭೋಗವಿಜಯವನ್ನು ನೋಡಿದರೆ ಕಾಮಶಾಸ್ತ್ರ, ಸಂಗೀತ ಮತ್ತು ನಾಟ್ಯಶಾಸ್ತ್ರಗಳ ಅವನ ಆಳವಾದ ಅಭ್ಯಾಸದ ಕಲ್ಪನೆ ಬರುವದು. ಆಯಾ ಶಾಸ್ತ್ರಗಳಲ್ಲಿಯ ತಿರುಳಿನ ಹೊನಲನ್ನೇ ಅಲ್ಲಿ ಅವನು ಹರಿಸಿರುವನು. 'ಆಸ್ಥಾನ' 'ಕವಿವಾಕ್ಯ' ಮತ್ತು 'ವೀಣಾ' ಸಂಧಿಗಳಲ್ಲಿ ಅವನ ಸಂಗೀತ ಜ್ಞಾನದ ಅರಿವಾದರೆ ಪೂರ್ವನಾಟಕ ಉತ್ತರ ನಾಟಕ ಸಂಧಿಗಳಲ್ಲಿ ನಾಟ್ಯ ಮತ್ತು ಕಾಮಶಾಸ್ತ್ರಗಳ ಹೊನಲನ್ನು ಹರಿಸಿರುವನು.

ಇದು ರತ್ನಾಕರ ಲಲಿತಶಾಸ್ತ್ರಗಳ ಅಭ್ಯಾಸವಾದರೆ ತತ್ತ್ವೋಪದೇಶ, ವಿದ್ಯಾಗೋಷ್ಠಿ, ಶ್ರೇಣ್ಯಾರೋಹಣ, ಬ್ರಾಹ್ಮಣನಾಮ, ವಿರಕ್ತಿ, ಸಮವಸರಣ, ದಿವ್ಯಧ್ವನಿ, ತತ್ತ್ವಾರ್ಥ, ಮೋಕ್ಷಮಾರ್ಗ, ಮತ್ತು ಧ್ಯಾನಸಾಮರ್ಥ್ಯ ಸಂಧಿಗಳಲ್ಲಿ ವಿವರಿಸಲಾದ ಜೈನತತ್ತ್ವಜ್ಞಾನದ, ಯೋಗ ಶಾಸ್ತ್ರದ, ಆತ್ಮಾನುಭವದ ಮತ್ತು ಬೇರೆ ಮತಗಳ ತತ್ತ್ವಜ್ಞಾನದ ಅವನ ಅಭ್ಯಾಸದ ಆಳದ ನೆಲೆಯು ಕಲ್ಪನೆ ವಾಚಕರಿಗೆ ಬರದೆ ಇರಲಾರದು. 'ದಿಗ್ವಿಜಯ' ವಿಭಾಗದಲ್ಲಿಯ 'ಕಟಕವಿನೋದ' ಸಂಧಿಯಲ್ಲಿ ಭರತಚಕ್ರಿಯ ಶಕ್ತಿಸಾಮರ್ಥ್ಯವನ್ನು, ಕಾಮದೇವ ಮತ್ತು ಭರತಚಕ್ರಿಗೆ ನಡೆದ ಯುದ್ಧ ಮತ್ತು ಅದರ ಪರಿಣಾಮವನ್ನು ತೋರಿಸುವ ಅವನ ಬುದ್ಧಿಯು ಮಾನವ ಸಹಜವಾದದ್ದಲ್ಲವೆಂದು ತೋರುವದು.

ಜೈನಧರ್ಮತತ್ತ್ವಗಳ ಮತ್ತು ಜೈನಪುರಾಣಗಳ ಆಳವಾದ ಅಭ್ಯಾಸದ ಜತೆಗೆ ವೈದಿಕ ತತ್ತ್ವಜ್ಞಾನ, ವೈದಿಕ ಪುರಾಣ, ವೀರಶೈವ ತತ್ತ್ವಗಳ ಅಭ್ಯಾಸವನ್ನು ಅವನು

ಮಾಡಿರಬೇಕೆಂದು ತೋರುವದು. ವಿವಿಧ ದರ್ಶನಗಳ ಅಭ್ಯಾಸ ಮಾಡಿದುದಲ್ಲದೆ ಅವುಗಳ ತತ್ವವನ್ನು ತನ್ನ ಅನುಭವದ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸಿದ ಕವಿ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಸಹಜವಾಗಿ ಕಾಣುವದು ಸಾಧ್ಯವಿಲ್ಲ. ಇವುಗಳೆಲ್ಲದರ ಜತೆ ಪ್ರಾಸಾಲಂಕಾರಗಳ ಅವನ ಜ್ಞಾನವು ಅವನ ಹುಟ್ಟುಗುಣವೆಂದೇ ಹೇಳಬೇಕಾಗು ವದು.

ಗ್ರಂಥರಚನೆ : ರತ್ನಾಕರನ ಚರಿತ್ರೆಯಂತೆ ಅವನ ಗ್ರಂಥರಚನೆಯ ವಿಷ ಯವೂ ವಿವಾದಕ್ಕೆ ಎಡೆಕೊಡುವದು. 'ಭರತೇಶ ವೈಭವ' ಗ್ರಂಥವನ್ನು ರಚಿಸಿ ದುದಲ್ಲದೆ 'ಶತಕತ್ರಯಗಳನ್ನು' ಮತ್ತು ಪದ್ಯಗಳನ್ನು ರಚಿಸಿರುವನೆಂದು ಕೆಲವರು ಅಭಿಪ್ರಾಯ ಪಡುವರು. ಆದರೆ 'ಶತಕತ್ರಯ'ದ ಮತ್ತು ಹಾಡುಗಳ ಕರ್ತೃವಿನ ಬಗ್ಗೆ ಸಂಶೋಧ ನಡೆಯಬೇಕಾಗಿದೆ. ನಮ್ಮ ಕೆಲವು ವಿಚಾರಗಳನ್ನು ಸಹೃದಯರ ಗಮನಕ್ಕೆ ತರ ಬಯಸುತ್ತೇವೆ.

೧) ಮುದ್ರಿಕೆ : ಕನ್ನಡ ಸಾಹಿತ್ಯದಲ್ಲಿ ವಚನಕಾರರು, ದಾಸರು ತಮ್ಮ ಕೃತಿಗಳ ಕೊನೆಗೆ ಮುದ್ರಿಕೆಯನ್ನು ಕೊಟ್ಟಿರುವರು. 'ಭರತೇಶ ವೈಭವ'ದ ಪ್ರತಿ ಯೊಂದು ಸಂಧಿಯ ಕೊನೆಯಲ್ಲಿ 'ಚಿದಂಬರ ಪುರುಷಾ' ಎಂದು ಹೇಳುವದರಿಂದ, ಅದು ಅವನ ಮುದ್ರಿಕೆ ಇರಬಹುದೆಂದು ಊಹಿಸಬಹುದು. 'ಶತಕತ್ರಯ'ಗಳ ಓದಿದಾಗ, ಒಂದಕ್ಕೆ 'ರತ್ನಾಕರಾಧೀಶ್ವರಾ' ಎಂದೂ, ಇನ್ನೊಂದಕ್ಕೆ 'ಅಪರಾಜಿ ತೇಶ್ವರಾ' ಎಂದೂ ಇದ್ದು 'ತ್ರಿಲೋಕಶತಕಕ್ಕೆ' ಮುದ್ರಿಕೆಯೇ ಇಲ್ಲದಿರುವದು ಕಂಡು ಬರುವದು. ಶತಕತ್ರಯಗಳಲ್ಲಿ ಭಿನ್ನ ಮುದ್ರಿಕೆಗಳು ಇರುವ ಕಾರಣವೇನು? ತನ್ನ ಕಾವ್ಯ ಕೃತಿಗಳಿಗೆ ಮುದ್ರಿಕೆಯನ್ನು ಆಯ್ದುಕೊಂಡುದು ಕಂಡು ಬರುವದಿಲ್ಲ: ಆದ್ದರಿಂದ 'ಶತಕತ್ರಯ'ಗಳು ರತ್ನಾಕರನ ಕೃತಿಗಳಿರಬಹುದೇ ಎಂಬ ಸಂಶಯ ಬರುವದು.

೨) 'ರತ್ನಾಕರ' ಶತಕದ ಮೊದಲನೇ ಪದ್ಯದಲ್ಲಿ "ಶೃಂಗಾರಶ್ರೀ ಕವಿ ಹಂಸ ರಾಜನೊಡೆಯಾ ರತ್ನಾಕರಾಧೀಶ್ವರಾ", 'ಶೃಂಗಾರ ಶ್ರೀಕವಿ ಹಂಸರಾಜ' ಎಂದು ಕವಿಯು ತನ್ನ ಹೆಸರನ್ನು ಹೇಳಿಕೊಂಡು 'ಒಡೆಯಾ ರತ್ನಾಕರಾಧೀಶ್ವರಾ' ಎಂದು ಹೇಳಿದುದರ ಉದ್ದೇಶವನ್ನು ಕುರಿತು ತುಸು ಚರ್ಚಿಸುವದು ಅವಶ್ಯವದೆ. "ಶೃಂಗಾರ ಕವಿ ಹಂಸರಾಜ'ನೆಂದು ರತ್ನಾಕರನಿಗೆ ಬಿರುದು ಇತ್ತೆಂದು ಶ್ರೀ ಟಿ. ಎಸ್. ಶಾಮಣ್ಣ ಅವರು 'ಭರತೇಶ ವೈಭವ ಸಂಗ್ರಹ' ಎಂಬ ತಮ್ಮ ಗ್ರಂಥದ ೧೧ನೇ ಪುಟದಲ್ಲಿ ಹೇಳಿರುವರು. ಈ ತಮ್ಮ ಹೇಳಿಕೆಗೆ ದೇವಚಂದ್ರನನ್ನೇ ಅವರು ಮೊರೆ ಹೊಕ್ಕಂತೆ ತೋರುವದು. ಆ ಹೇಳಿಕೆಯನ್ನು ಪುಷ್ಟೀಕರಿಸಲು, "ಭರತೇಶ ವೈಭವ ವನ್ನು ಓದಿದಲ್ಲಿ ಈ ಕವಿಯು (ರತ್ನಾಕರನು) ಈ ಬಿರುದಿಗೆ ಹೇಗೆ ಪಾತ್ರನೆಂಬುದು ಕಂಡುಬರದ ಇರಲಾರದು." ಎಂದು ಹೇಳಿ ಶೃಂಗಾರಕ್ಕಾಗಿಯೇ ಭರತೇಶ ವೈಭವ

ಗ್ರಂಥವು ಬರೆಯಲ್ಪಟ್ಟಿತೆಂದು ಶಾಮಣ್ಣನವರು ಧ್ವನಿತ ಮಾಡಿರುವರು. 'ಧ್ಯಾನಕೆ ಬೇಸರಾದಾಗ,' 'ಹಂಸನಾಥನನ್ನೆ ಅದಿ ಮಾಡಿಕೊಂಡು, 'ಅಧ್ಯಾತ್ಮವೆ ನಿಜಿತ ಪ್ರಯೋಜನವೆನಗೆ' ಎಂದು ಹೇಳಿ 'ಭರತೇಶ ವೈಭವ'ವನ್ನು ತಾನು ಬರೆದ ಬಗ್ಗೆ ಅವನೇ ಹೇಳಿಕೊಳ್ಳುವಾಗ, ನಮ್ಮ ಹೇಳಿಕೆಯ ಸಮರ್ಥನೆಗಾಗಿ ಅವನ ಮೇಲೆ ಇಲ್ಲದ ಆರೋಪ ಮಾಡುವದು ಸರಿಯಲ್ಲ.

ಆಗಮವಧ್ಯಾತ್ಮವಳವಟ್ಟು ಶೃಂಗಾರ । ತ್ಯಾಗಭೋಗದ ಮೋಡಿ ಮೆರೆಯೆ । ಭೋಗಿಯೋಗಿಗಳೆದೆ ಜುಮ್ಮು ಜುಮ್ಮೆನೆ ಸೀಮ । ದಾಗಿ ಸೊಲ್ಲಿಸುವೆನಾಲಿಸಿರೋ । (ಆ. ಸಂ. ೧೪) ಈ ಪದ್ಯದ ಸಮಗ್ರ ಅರ್ಥಮಾಡಿಕೊಂಡು ನೋಡಿದರೆ ರತ್ನಾಕರನು ಅಧ್ಯಾತ್ಮ ಕವಿ ಎಂಬುದು ಕಂಡುಬರಬಹುದು. 'ಸರ್ವರ ಮೋಕ್ಷ' ಸಂಧಿಯ ೯೬, ೯೭ ಪದ್ಯಗಳು ನಮ್ಮ ಮೇಲಿನ ಹೇಳಿಕೆಯನ್ನೆ ಎತ್ತಿ ಹಿಡಿಯುವವು.

'ಶೃಂಗಾರಕಾಗಿ ಕಷ್ಟರಕತೆ ಕೇಳ್ದು ಜ । ನಂಗಳು ಕೆಡಬೇಡವೆಂದು । ಅಂಗ ಸುಖಿಯು ಮೋಕ್ಷ ಸುಖಿಯು ಕಾವ್ಯವನಿಷ್ಟು । ಶೃಂಗಾರಕಟ್ಟಿ ಪೇಳಿದೆನು । ದುರುಳರ ಪಾದರಿಯರ ನೀಚ ಸತಿಯರ । ವಿರಚಿಸಿತಿಲ್ಲ ಸಿಂಗರಕೆ । ಭರತ ಚಕ್ರಿಯೆ ಪೇಳ್ದೆನವರ ಪೆಂಡಿರ ಪೇಳ್ದೆ । ಸ್ಮರಿಸಿದರೆಲ್ಲರ್ಗೆ ಪುಣ್ಯ ಅಧ್ಯಾತ್ಮವೇ ಜೀವಾಳವಾಗಿರುವ 'ಭರತೇಶ ವೈಭವ'ವು ಶೃಂಗಾರ ಕಾವ್ಯವೆನಿಸಲಾರದು. ಭೈರಸ ಒಡೆಯರ ಆಸ್ಥಾನದಲ್ಲಿ ಶೃಂಗಾರ ಶ್ರೀ ಕವಿ ಹಂಸರಾಜನೆಂಬ ಬೇರೊಬ್ಬ ಕವಿಯೂ ಇರಬಹುದು.

೩) 'ರತ್ನಾಕರಾಧೀಶ್ವರಾ' ಎಂಬ ಪದವನ್ನು 'ಭರತೇಶ ವೈಭವ'ದಲ್ಲಿ ನಾವು ಎಲ್ಲಿಯೂ ಕಾಣುವದಿಲ್ಲ. 'ಗುರು ಹಂಸನಾಥಾ' ಶ್ರೀಮಂದರ, ಚಿದಂಬರ ಪುರುಷ, ನಿರಂಜನಸಿದ್ಧಾ ಇವುಗಳಲ್ಲಿ ಯಾವದೇ ಪದವನ್ನು 'ರತ್ನಾಕರ' ಶತಕದಲ್ಲಿ ಕಾಣ ಲಾರೆವು. ಆದರೆ 'ಭರತೇಶ ವೈಭವ'ದಲ್ಲಿ ಅವುಗಳನ್ನು ಧಾರಾಳವಾಗಿ ಬಳಸಿದುದು ಕಂಡುಬರುತ್ತದೆ.

೪) ದೇವೇಂದ್ರಕೀರ್ತಿ, ಮಹೇಂದ್ರಕೀರ್ತಿ ಒಬ್ಬರೆಯಾಕಾಗಬಾರದೆಂಬ ಶಾಮಣ್ಣನವರ ವಾದವನ್ನು ಒಂದುವೇಳೆ ಒಪ್ಪಿದರೂ ಶತಕತ್ರಯಗಳ ಕೊನೆಯ ಗದ್ಯ ಭಾಗದಲ್ಲಿ "ಶ್ರೀಮದ್ದೇವೇಂದ್ರಕೀರ್ತಿ ಯೋಗಿಶ್ವರ ಪಾದಾಂಭೋಜ, ಭೃಂಗಾಯ ಮಾನ ಶೃಂಗಾರ ಕವಿ ಹಂಸರಾಜ" ಎಂದು ಬರುವದು. ಭೈರಸ ಒಡೆಯರ ಆಸ್ಥಾನ ದಲ್ಲಿಯ ಶೃಂಗಾರಕವಿ ಹಂಸರಾಜನು ದೇವೇಂದ್ರಕೀರ್ತಿಗಳ ಶಿಷ್ಯನಾಗಿರಬೇಕು. ರತ್ನಾಕರನ ಗುರುಗಳು ಚಾರುಕೀರ್ತಿ ಯೋಗೀಶ್ವರರು. ದೇವೇಂದ್ರಕೀರ್ತಿಯ ಉಲ್ಲೇಖವು 'ಭರತೇಶ ವೈಭವ'ದಲ್ಲಿ ಬರುವದಿಲ್ಲ. 'ಹಂಸರಾಜ'ನು ದೇವೇಂದ್ರ ಕೀರ್ತಿ ಯೋಗೀಶ್ವರರ ಶಿಷ್ಯನಾದರೆ ರತ್ನಾಕರನು ಚಾರುಕೀರ್ತಿ ಯೋಗೀಶ್ವರ ಶಿಷ್ಯನು. ಇಬ್ಬರ ಗುರುಗಳು ಕೂಡ ಭಿನ್ನವಾಗಿರುವರು.

೫) ಒಂದು ವ್ಯಕ್ತಿಯ ಚರಿತ್ರವನ್ನು ಬರೆಯುವಾಗ ದಂತಕತೆಗಳಿಗೆ ಎಷ್ಟು ಮಹತ್ವ ಕೊಡಬೇಕೋ ಅಷ್ಟೇ ಕೊಡಬೇಕು. ಅಂಥ ಒಂದು ಆ ದಂತಕತೆಯನ್ನೇ ಆಧಾರವಾಗಿಟ್ಟುಕೊಂಡು ರತ್ನಾಕರನು ಜೈನಮತವನ್ನು ಸ್ವೀಕರಿಸಿದನೆಂದು ಹೇಳುವದು ಅಷ್ಟು ಸರಿಯಲ್ಲ. ಇಂಥ ದಂತಕತೆಗಳು ಕನ್ನಡ ಸಾಹಿತ್ಯದಲ್ಲಿ ಬಂದುದು ಇದೇ ಮೊದಲನೆಯದಲ್ಲ. ಅವಮಾನದ ಬೇಗೆಯನ್ನು ತಾಳದೆ ಕ್ರೋಧಪರವಶನಾಗಿ ತನ್ನ ಧರ್ಮವನ್ನೇ ಬಿಡುವ ಮಟ್ಟದವನು ರತ್ನಾಕರನು ಇದ್ದನೇ ಎಂಬುದನ್ನು ಅವನನ್ನೇ ಕೇಳೋಣ.

'ಧ್ಯಾನಕೆ ಬೇಸರಾದಾಗ ನನ್ನಾತ್ಮಲೀ । ಲಾನುವೃದ್ಧಿಗೆ ಪೇಳ್ದೆನೈಸೆ ॥
ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ । ಮೋನದೊಳಿಹೆನು ಅದು ಸಾಕು.

ಸ. ಮೋ. ಸಂ. ೧೦೬

ರತ್ನಾಕರನ ದ್ವೇಷಿಗಳು ಇದ್ದರು. ಅವನ ಕಾವ್ಯವನ್ನು ಜರೆದರು. ಆದರೆ "ಮಾರ್ಕೊಳ್ಳದೆ ಆನು ಮೋನದೊಳಿದ್ದೆ ಬ್ರುಧರು ರಾಜರ್ಕಳೆ ನೂಂಕಿದರವರಾ" (ಸ. ಮೋ. ಸಂ. ೧೦೫). ಇದರ ಮೇಲಿಂದ ನೋಡಿದರೆ 'ತುಲ್ಯನಿಂದಾಸ್ತುತಿ ರ್ಮೌನಿ' ಎಂಬಂತೆ, ತನ್ನ ನಿಂದನೆಯನ್ನು ಕೇಳದ ಕಿವುಡನವನಿದ್ದನು. ಅಂಥವನಿಂದ ಧರ್ಮಾಂತರವು ಸಾಧ್ಯವೇ ?

ಇನ್ನು ಆಂತರಿಕ ಕಾರಣಗಳನ್ನು ಗಮನಿಸುವಾ ;

ಅಧ್ಯಾತ್ಮಿಕ ತತ್ವಗಳು ಕಾಲಾತೀತವಾದವುಗಳು. ಶ್ರೀ ಶಾಮಣ್ಣ ಅವರು ತಮ್ಮ ಗ್ರಂಥದ ೧೨ನೇ ಪುಟದ ಮೇಲೆ 'ರತ್ನಾಕರಾಧೀಶ್ವರ' ಶತಕದಲ್ಲಿಯು, ಮತ್ತು 'ಭರತೇಶ ವೈಭವ'ದಲ್ಲಿಯು ಅವತಣಿಕೆಗಳನ್ನು ವಿವರಿಸಿ ರತ್ನಾಕರ ಶತಕವು ರತ್ನಾಕರನ ಕೃತಿಯೆಂದು ಬರೆದಿರುವರು. ಒಂದೇ ತತ್ವದ ಅನುಯಾಯಿಗಳಿಬ್ಬರಲ್ಲಿ ವಿಚಾರಸಾಮ್ಯ ಮತ್ತು ವಿವರಿಸುವ ರೀತಿಯಲ್ಲಿ ಸಾಮ್ಯವಿರಬಹುದೆಂದು ಮಾನಸ ಶಾಸ್ತ್ರಜ್ಞರು ಅಭಿಪ್ರಾಯ ಪಡುವರು. ಅದನ್ನು 'Parallallism of ideas' ಎಂದು ಕರೆಯಲಾಗುವದು. ಉದಾಹರಣೆ : ಪಾಪವನ್ನು ಲೋಹಸಂಕೋಲೆಗೆ ಮತ್ತು ಪುಣ್ಯವನ್ನು ಹೊನ್ನ ಸಂಕೋಲೆಗೆ ಹೋಲಿಸಿರುವನು. ಅದೇ ಮಾದರಿಯ ವಿಚಾರವು ಕನ್ನಡವನ್ನರಿಯದ ಮರಾಠಿ ಸಂತಕವಿಯಾದ ಜ್ಞಾನೇಶ್ವರರ ಬರವಣಿಗೆಯಲ್ಲಿ ಬರುವದು. ಕೇವಲ ವಿಚಾರ ಸಾಮ್ಯ, ವಿವರಣ ಸಾಮ್ಯದಿಂದ ಒಂದೇ ವ್ಯಕ್ತಿ ಎರಡೂ ಗ್ರಂಥಗಳನ್ನು ಬರೆದನೆಂದು ಹೇಳಲಿಕ್ಕಾಗದು. ರತ್ನಾಕರನ 'ಭರತೇಶ ವೈಭವ'ವನ್ನು ಓದಿ ಹಂಸರಾಜನು ಸ್ಫೂರ್ತಿಪಡೆದಿರಲೂ ಬಹುದು, ಇದಕ್ಕೆ ಉದಾಹರಣೆ ಎಂದರೆ ತ್ರಿಲೋಕ ಶತಕದ ೧೧೧ ರಿಂದ ೧೨೨ ಪದ್ಯಗಳಲ್ಲಿ ವರ್ಣಿಸಲಾದ ಭೇದಾಭೇದ ಭಕ್ತಿಯ ವಿವರವು ಭರತೇಶ ವೈಭವದ ವಿದ್ಯಾಗೋಷ್ಠಿ ಸಂಧಿಯಲ್ಲಿಯ ೪೪ ರಿಂದ ೫೦ ಪದ್ಯಗಳಲ್ಲಿಯು ವರ್ಣನೆಯ ರೂಪಾಂತರವಿದ್ದಂತಿದೆ.

ಜೈನಾಗಮಗಳನ್ನು ಅಭ್ಯಾಸಮಾಡಿದ ಇಬ್ಬರೂ ಒಂದೇ ವಿಚಾರವನ್ನು ತಮ್ಮ ಗ್ರಂಥಗಳಲ್ಲಿ ವಿವರಿಸಿರುವದೂ ಸಾಧ್ಯವಿದೆ.

೨) ಅಪರಾಜಿತೇಶ್ವರ ಶತಕದ ಮತ್ತು ರತ್ನಾಕರ ಶತಕದ ಅನುಕ್ರಮವಾಗಿ ೧೨೬ ನೇ ಮತ್ತು ೧೨೫ ನೇ ಪದ್ಯಗಳಲ್ಲಿ ಕವಿಯು ಆರ್ತ ಮತ್ತು ರೌದ್ರಧ್ಯಾನದ ವಿವರಗಳು ಬರುವವು. ಆದರೆ ಧರ್ಮ ಮತ್ತು ಶುಕ್ಲ ಧ್ಯಾನಗಳ ಬಗ್ಗೆ ಯಾವದೇ ವಿವರವಿಲ್ಲ. ಇದರ ವಿರುದ್ಧವಾಗಿ ಧರ್ಮ ಮತ್ತು ಶುಕ್ಲಧ್ಯಾನದ ಬಗ್ಗೆ ಮಾತ್ರ ರತ್ನಾಕರನು ಬರೆಯುವನು. ಶತಕತ್ರಯಗಳಲ್ಲಿ ಪದಸ್ಥಧ್ಯಾನ ಮತ್ತು ಪಂಚ ನಮೋಕಾರದ ಬಗ್ಗೆ ಬರುವದು. ಆದರೆ ರತ್ನಾಕರನು ಪಿಂಡಸ್ಥಧ್ಯಾನವೇ ಆತ್ಮ ಸಿದ್ಧಿಯ ಸಾಧನವೆಂದು ಹೇಳಿದುದಲ್ಲದೆ ಪಂಚನಮೋಕಾರದ ಮಾತು 'ಭರತೇಶ ವೈಭವ'ದಲ್ಲಿ ಎಲ್ಲಿಯೂ ಕಂಡು ಬರುವದಿಲ್ಲ. ಶತಕತ್ರಯಗಳ ಕರ್ತೃವು ಪರಂಪರೆಗೆ ಅಂಟಿಕೊಂಡವನು. ರತ್ನಾಕರನು ಕ್ರಾಂತಿಕಾರಿಯು.

ಅಪರಾಜಿತೇಶ್ವರ ಶತಕದಲ್ಲಿ ಶ್ರೀಮಂದರ ಸ್ವಾಮಿಯ ಹೆಸರು ಬರುವದು. ತ್ರಿಲೋಕ ಶತಕದಲ್ಲಿ ಚಿದಂಬರ ಪುರುಷ, ನಿರಂಜನ ಸಿದ್ಧಾ ಎಂಬ ಹೆಸರುಗಳು ಭರತೇಶ ವೈಭವದಲ್ಲಿಯೂ ಬರುವವೆಂಬ ಮಾತ್ರಕ್ಕೆ ಎರಡೂ ಗ್ರಂಥಗಳ ಕರ್ತೃವು ರತ್ನಾಕರನೆಂದೇ ಹೇಳಲಿಕ್ಕೆ ಬಾರದು. ಶ್ರೀಮಂದರಸ್ವಾಮಿ ಎಂದು ೧ನೇ ತೀರ್ಥಂಕರನ ಹೆಸರು. ಚಿದಂದರ ಪುರುಷ, ನಿರಂಜನಸಿದ್ಧ ಜಿನನ ಹೆಸರುಗಳು. ಈ ಜಿನ ನಾಮಗಳನ್ನು, ತೀರ್ಥಂಕರನ ಹೆಸರನ್ನು ಯಾರಾದರೂ ಬಳಸಬಹುದು.

ಇನ್ನು ಕೊನೆಯದಾಗಿ ತ್ರಿಲೋಕ ಶತಕದ ಕೊನೆಯಲ್ಲಿ ಬರುವ ವೃತ್ತ ಪದ್ಯದಲ್ಲಿ ರತ್ನಾಕರಾರ್ಯನು ತ್ರಿಲೋಕ ಶತಕದ ಕರ್ತೃ ಎಂಬರ್ಥದಲ್ಲಿ ಬರುವದು. ಆದರೆ ಅದರ ಕೆಳಗಿನ ಗದ್ಯದಲ್ಲಿ ಹಂಸರಾಜನು ಸೃಜಿಸಿದಂ ಎಂದು ಇದೆ. ಮೂರೂ ಶತಕಗಳಲ್ಲಿ ೧೨೮ ಪದ್ಯಗಳಿವೆ. ಆದರೆ ತ್ರಿಲೋಕ ಶತಕದಲ್ಲಿ ೧೨೯ ನೇ ವೃತ್ತ ಪದ್ಯವಿದೆ. ೧೨೯ನೇ ಪದ್ಯದ ಕೆಳಗೆ 'ಇತ್ಯಾಶೀವಾದಃ' ಎಂದಿದೆ. 'ರತ್ನಾಕರಾರ್ಯ ಸೃಜಸಿದಂ' ಅಂದರೆ ರತ್ನಾಕರಾರ್ಯನ ಆಶೀರ್ವಾದದಿಂದ ಈ ಕೃತಿಯು ಸೃಜಿಸಲ್ಪಟ್ಟಿತೆಂದು ಹೇಳುವದೇ ಕವಿಯ ಉದ್ದೇಶವಿರಬಹುದು. ಆಧ್ಯಾತ್ಮ ಗೀತೆಗಳೂ ರತ್ನಾಕರನೂ :—

"ವಿಶ್ವಕವಿ ರತ್ನಾಕರನ ಭರತೇಶ ವೈಭವ" ಎಂಬ ತಮ್ಮ ಗ್ರಂಥದಲ್ಲಿ ರತ್ನಾಕರನು ಅಧ್ಯಾತ್ಮಗೀತೆಗಳನ್ನು ಬರೆದಿರುವನೆಂದು ಹೇಳಿ ಅವನ್ನು ಮುದ್ರಿಸಿ ಹಾಕಿದ್ದಾರೆ, ಭುವನ ಹಳ್ಳಿಯ ಶ್ರೀಪತಿರಾಯರು ಅಚ್ಚು ಹಾಕಿಸಿದ ೯೪ ಗೀತೆಗಳು, ಮತ್ತು ಮೂಡಬಿದಿರೆಯಲ್ಲಿ ದೊರೆತ ೩೯ ಗೀತೆಗಳು ಮೇಲಿನ ಗ್ರಂಥದಲ್ಲಿ ಪ್ರಕಟವಾಗಿವೆ, ಮಹೇಂದ್ರಕೀರ್ತಿ ಮತ್ತು ರತ್ನಾಕರಾಧೀಶ್ವರರ ಹೆಸರುಗಳು ಆ ಪದ್ಯಗಳಲ್ಲಿ ಬಂದಿವೆ. ಚಾರುಕೀರ್ತಿಯೋಗೀಶ್ವರರ ಹೆಸರಾಗಲೀ, ಚಿದಂಬರ ಪುರುಷ ಎಂಬ ಮುದ್ರಿಕೆಯಾಗಲೀ, ಹಂಸನಾಥನೆಂಬ ಪದವಾಗಲೀ ಎಲ್ಲಿಯೂ ಬಂದಿಲ್ಲ.

ದೇವೇಂದ್ರಕೀರ್ತಿ, ಮಹೇಂದ್ರಕೀರ್ತಿ ಎಂಬ ಹೆಸರುಗಳು ಒಂದೇ ವ್ಯಕ್ತಿಗೆ ಇರುವ ಸಂಭವವೂ ಉಂಟು. ಶತಕತ್ರಯಗಳ ಕರ್ತೃನಾದ ಶ್ರೀ ಹಂಸರಾಜನು ಆ ಪದ್ಯಗಳನ್ನು ಒಂದು ವೇಳೆ ರಚಿಸಿರಬಹುದು. ಇಲ್ಲಿ ಪ್ರಸಿದ್ಧವಾದ ಪದ್ಯಗಳ ೩೫ ನೇ ಪುಟದ ಮೇಲಿನ 'ಧ್ಯಾನಿಸು ನಿನ್ನ ನಿಜಾತ್ಮನಾ' ಎಂಬ ಪದ್ಯದಲ್ಲಿ 'ಪರಂ ಜ್ಯೋತಿ, ಹಂಸನಾಥ, ಶ್ರೀಮಂದರಸ್ವಾಮಿ' ಎಂಬ ಪದಗಳು ಬಂದಿವೆ. ಅಷ್ಟು ಮಾತ್ರಕ್ಕೆ ಆ ಪದ್ಯಗಳನ್ನು ರತ್ನಾಕರನೇ ಬರೆದನೆಂದು ಹೇಳುವ ಕಡುಕಷ್ಟ. ಆ ಪದ್ಯಗಳ ಶೈಲಿ ತೀರ ಸಾಮಾನ್ಯವಾಗಿದೆ. ವಿಶ್ವಕವಿ ಎಂದು ಹೇಳಿಸಿಕೊಳ್ಳುವ ಪ್ರತಿಭಾವಂತ ಕವಿಯು ಅಂಥ ತೀರ ಸಾಮಾನ್ಯ ಪದ್ಯಗಳನ್ನು ರಚಿಸಿರಬೇಕೆಂದು ಹೇಳುವದು ಕವಿಯ ಪ್ರತಿಭೆಗೆ ಆಹ್ವಾನವಿತ್ತಂತೆ. ಆದರೂ ಶ್ರೀ ಬ್ರಹ್ಮಪ್ಪನವರು ಸಂಗ್ರಹಿಸಿರುವ ಪದ್ಯಗಳನ್ನು ಕುರಿತು ಸಂಶೋಧನೆಯ ಅವಶ್ಯಕತೆ ಇದೆ.

ಬೇರೆ ಮತಗ್ರಂಥಗಳ ಪ್ರಭಾವ : ರತ್ನಾಕರನ ಅಭ್ಯಾಸ ಆಳವಾದುದು. ಅವನ ಜ್ಞಾನಭಾಂಡಾರವು ಸಮೃದ್ಧವಾದದ್ದು. ಜೈನ ಮತ ಗ್ರಂಥಗಳನ್ನು, ಜೈನ ಪುರಾಣಗಳನ್ನು ಓದಿಕೊಂಡುದಲ್ಲದೆ, ಅವುಗಳ ಮರ್ಮವನ್ನು ಅರಿತುಕೊಂಡವನು. ತನ್ನ ಮತದ ತೆಕ್ಕೆಯಲ್ಲಿ ಸಿಲುಕಿ ತೊಳಲಾಡುವ ಮತಾಂಧತೆ ಅವನಲ್ಲಿ ಕಂಡು ಬರುವದಿಲ್ಲ. ವೈದಿಕ ಮತಗ್ರಂಥಗಳ, ತತ್ವಜ್ಞಾನ ಗ್ರಂಥವಾದ ಭಗವದ್ಗೀತೆಯ, ಯೋಗಶಾಸ್ತ್ರದ ವೀರಶೈವ ಮತಗ್ರಂಥಗಳ ಆಳವಾದ ಅಭ್ಯಾಸವನ್ನೂ ಅವನು ಮಾಡಿರಬಹುದೆಂದು ತೋರುವದು. ಶ್ರೀಮದ್‌ಭಾಗವತದಲ್ಲಿ ವರ್ಣಿಸಲಾದ ಶ್ರೀಕೃಷ್ಣಚರಿತೆಯಲ್ಲಿಯ ಕೆಲವು ಸನ್ನಿವೇಶಗಳಿಗೂ, ಭರತಚಕ್ರವರ್ತಿಯ ಜೀವನದಲ್ಲಿಯ ಕೆಲವೊಂದು ಸನ್ನಿವೇಶಗಳಿಗೂ ತುಂಬಾ ಹೋಲಿಕೆಯು ಕಂಡುಬರುವದು.

ಶ್ರೀಕೃಷ್ಣನನ್ನು ಪೂರ್ಣಾವತಾರವೆಂದೂ, ಪೂರ್ಣಜ್ಞಾನಿಯೆಂದೂ, ನಿಷ್ಕಾಮಕರ್ಮಿಯೆಂದೂ, ಯೋಗೀಶ್ವರನೆಂದೂ ಬಗೆಯಲಾಗುವಂತೆ, ರತ್ನಾಕರನ ಭರತಚಕ್ರಿಯು ಪೂರ್ಣಜ್ಞಾನಿಯು, ಜಿನಸ್ವರೂಪನು, ಕಾಲಕರ್ಮಗಳಿಗೆ ಅತೀತನು, ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯು. ಶ್ರೀಕೃಷ್ಣನಿಗೆ ೧೬ ಸಾವಿರ ಸತಿಯರೆಂದೂ, ಅವರೆಲ್ಲರಲ್ಲಿ ಅವನು ಏಕಕಾಲಕ್ಕೆ ಕಾಣಿಸಿಕೊಂಡನೆಂದು ಶ್ರೀ ವ್ಯಾಸ ಮಹರ್ಷಿಗಳು ಭಾಗವತದ ೧೦ನೇ ಸ್ಕಂಧದ ಕೆಳಗಿನ ಪದ್ಯಗಳಲ್ಲಿ ವರ್ಣಿಸಿರುವರು.

"ಅಥೋ ಮುಹೂರ್ತಮೇಕಸ್ಮಿನ್ ನಾನಾಗಾರೇಷು ತಾಃ ಸ್ತ್ರಿಯಃ ।
ಯಥೋಪಯೇಮೇ ಭಗವಾನ್ ತಾವದ್ರೂಪ ಧರೋಽವ್ಯಯಃ॥
ಗೃಹೇಷು ತಾಸಾಮನಪಾಯ್ಯತರ್ಕ್ಯಕೃ । ನ್ನಿರಸ್ತಸಾಮ್ಯಾ
ತಿಶಯೇಷ್ವವಸ್ಥಿತಃ॥ ರೇಮೇ ರಮಾಭಿರ್ನಿಜಕಾಮ ಸಂಪ್ಲುತೋ॥

ಹೀಗೆ ೧೬ ಸಾವಿರ ಸತಿಯರ ಸ್ವಗೃಹಗಳಲ್ಲಿ ಶ್ರೀಕೃಷ್ಣನು ಕಾಣಿಸಿಕೊಂಡು, ಅವರಲ್ಲಿ ರಮಿಸಿದಂತೆ ಭರತಚಕ್ರೇಶನು ೯೬ಸಾವಿರ ಸತಿಯರಲ್ಲಿ ಒಂದೇ ವೇಳೆಗೆ ಕಾಣಿಸಿಕೊಂಡು

ಅವರ ಕೂಡ ರಮಿಸಿದ ವಿಷಯುವು ಭರತೇಶ ವೈಭವದ ತಾಂಡವ ವಿನಯು ಸಂಧಿ ಯಲ್ಲಿ ಬರುವದು : (ಪ. ೧೪೬, ೧೪೭)

"ಮೇಲಿಟ್ಟು ಮುಸುಕು ತೊಲಗಲಾಗಿ ಭರತ ಭೂ। ಪಾಲನೆ ಹಲವು ರೂಪಾಗಿ। ಬಾಲೆ ಬಾಲೆಯರಿಗೆ ತಪ್ಪದೊಪ್ಪಿದ......

"ಗದ್ದುಗೆಯೊಳಗೆ ಕುಳಿತಿದ್ದನು ಕೆಳಗೆ ನಿಂ। ದಿದ್ದಲತಾಗಿಂಯುರೊಡನೆ। ಎದ್ದು ನಿಂದಿದ್ದನೊಬ್ಬೊಬ್ಬಳಿಗೊಬ್ಬೊಬ್ಬ ಮುದ್ದಿನ ಭರತೇಶನಾಗಿ'

'ಹಲವು ರೂಪಾಗುವೆ'ನೆಂಬ ಮಾತ್ರಕ್ಕೆ ಭರತೇಶನು ಹಲವು ರೂಪಾದನು

ಭಾಗವತದಲ್ಲಿಯು ಸನ್ನಿವೇಶಗಳ ಸೂತ್ರಗಳ ಆಧಾರವನ್ನು ಇಟ್ಟುಕೊಂಡು, ಇಲ್ಲವೆ ಜೈನ ಪುರಾಣಗಳ ಕತೆಗಳ ಆಧಾರದಿಂದಲೋ, ತನ್ನ ಪ್ರತಿಭೆಯ ಎರಕದಲ್ಲಿ ಪುರಾಣಗ್ರಂಥಗಳಲ್ಲಿಯು ವರ್ಣನೆಯುನ್ನು ಅವನು ಬಳಸಿಕೊಂಡಿರುವನು. (ತಾಂ. ವಿ. ಸಂ. ೧೪೩ ರಿಂದ ೧೫೧). ಭಾಗವತದಲ್ಲಿ ತ್ರಿಪುರದಹನದ ಕತೆ ಬರುವಂತೆ, ಮಹಾಭಾರತದಲ್ಲಿ ಮಾರಣಹೋಮದ ಕತೆ ಬರುವದು. ಅಂಹಿಸಾವ್ರತಿಯಾದ ರತ್ನಾಕರನು ತ್ರಿಪುರದಹನದ ಉಪಮೆಯುನ್ನು ಬಳಸಿಕೊಂಡುದನು ನೋಡಿದರೆ, ಅವನ ಪ್ರತಿಭೆಯು ಕಲ್ಪನೆ ಬರದೆ ಇರಲಾರದು. ಭರತೇಶವೈಭವದ ಧ್ಯಾನಸಾಮರ್ಥ್ಯ ಸಂಧಿಯ ೧೬ನೇ ಪದ್ಯದಲ್ಲಿ ಅವನು ಹೀಗೆ ಬರೆಯುುವನು. "ಎರಡು ಕಂಗಳ ಮುಚ್ಚಿ ಸುಜ್ಞಾನವೆಂಬ ದೊ। ಡ್ಡುರಿಗಣ ತೆಗೆದಾತ್ಮಶಿವನು। ಅರಿಕರ್ಮದನುಜರಿಪ್ಪಂಗ ಮೂರೆಂಬ ಮು। ಪ್ಪುರಗಳ ಸುಡುತಿರ್ದನಾಗ"॥ (ದ್ಯಾ. ಸಾ. ಸಂ. ೧೬)

ಪಂಚೇಂದ್ರಿಯಗಳ ಪೀಕಲಾಟದಿಂದ ಮನುಷ್ಯನು ಹೇಗೆ ದುಃಖಕ್ಕೀಡಾಗುವ ನೆಂಬ ವಿಷಯುದ ಬಗ್ಗೆ ಬರೆದ ರತ್ನಾಕರನ ವರ್ಣನೆಯು, ಭಾಗವತದಲ್ಲಿ ಬರುವ ಒಂದು ಶ್ಲೋಕದ ಭಾಷಾಂತರವಿದ್ದಂತಿದೆ. "ಪತಂಗ ಮಾತಂಗ ಕುರಂಗ ಭೃಂಗಾ। ಮೀನಾಹತಾಃ ಪಿಂಚ ಭರೇವ ಪಂಚ। ಪ್ರಮಾದಿ ನರಾಃ ಸಕಥಂ ಸಹಸ್ಯತೆ। ಯುಃ ಸೇವತೆ ಪಂಚಭಿರೇವ ಪಂಚ ॥"

"ಎರಳೆ ಮೀನಾನೆ ಪತಂಗ ತುಂಬಿಗಳು ಕಾ।
ತರಿಸಿಯೊಂದೊಂದಿಂದ್ರಿಯದೊಳು॥
ಪರಿಭವ ವಡೆದಿನ್ನೈದಿಂದ್ರಿಯಕೆ ಸಿಕ್ಕಿ।
ದರಸು ಕೆಡುವುದಾವ ಚೋದ್ಯ॥ (ಕ. ವಾ. ಸಂ ೧೫)

ಭಾಗವತ ಮತ್ತು ಭರತೇಶ ವೈಭವದಲ್ಲಿಯ ವಿಚಾರ ಸಾಮ್ಯತೆಯುನ್ನು ತೋರಿಸುವ ದೃಷ್ಟಿಯಿಂದ ಮೇಲಿನ ಉದಾಹರಣೆಯುನ್ನು ಕೊಡಲಾಗಿದೆ. ಈ ದೃಷ್ಟಿ ಯಿಂದಲೂ ಮೇಧಾವಿಗಳು ವಿಚಾರ ಮಾಡಬೇಕಾಗಿದೆ.

ಮಾರಣಹೋಮದ ಉದಾಹರಣೆಯುನ್ನು ರತ್ನಾಕರನು ಬಳಸಿಕೊಂಡುದು ಕೆಳಗಿನ ಅವತರಣಿಕೆಯಿಂದ ಕಂಡುಬರುವದು. "ಭರತ ಚಕ್ರೇಶನು ಸಂಸ್ಕೃತಿಯೆಂಬ

ವೈರಿಗೆ ಮಾರಣಾಧ್ವರವನೊಡ್ಡಿದನು". ವೈದಿಕ ಪರಂಪರೆಯಲ್ಲಿ ಪ್ರಾಮುಖ್ಯವಾದ ಯಜ್ಞಯಾಗಾದಿಗಳನ್ನು ಉಪಮೇಗಳಲ್ಲಿ ರತ್ನಾಕರನು ಬಳಸಿಕೊಂಡುದು ಕಂಡು ಬರುವದು.

"ಘೋರ ಕರ್ಮವೆ ಕಾಷ್ಠ ತನು ಹೋಮಕುಂಡಧ್ಯಾ । ನಾರೂಢ ಶಿಖಿ ಮನವೆಂಬ । ಧೀರ ದೀಕ್ಷಿತನು ಸಂಸೃತಿಯೆಂಬ ವೈರಿಗೆ । ಮಾರಣಾಧ್ವರವನೊಡ್ಡಿದನು."

ಮಹಾಭಾರತದಲ್ಲಿಯೂ ಕೃಷ್ಣದ್ರೌಪದಿಯರ ಬಂಧುಭಗಿನೀ ಪ್ರೇಮವು ಸರ್ವರಿಗೂ ವಿದಿವಾದುದು, ಮನಮೆಚ್ಚುವಂತಹದು. ಭರತೇಶ ವೈಭವದ 'ಅಂಕಮಾಲಾ' ಸಂಧಿಯಲ್ಲಿ ಹಿಮವಂತನ ಮಗಳಾದ ಗಂಗಾದೇವಿಯು ಭರತಚಕ್ರೇಶನನ್ನು ಕಾಣಲು ಬಂದ ಸನ್ನಿವೇಶ. 'ಸೋದರನ ಕಾಣ್ಬೆನೆಂಬರ್ತಿಯಿಂದ ಗಂಗಾದೇವಿ ಬಂದಳು ತಾನೆ'. ಆ ಭರತಚಕ್ರಿಯನ್ನು ಕುರಿತು ಅವಳು ಆಡಿದ ಮಾತುಗಳು "ಬಡವರ ಹುದಾವು ಸಿರಿಯಲ್ಲಿ ಭರತೇಶ । ನೊಡನೆ ಹುಟ್ಟಿದಳೆಂಬ ತೇಜ । ಪೊಡವಿಗಧಿಕವದರಿಂದಂಜಿ ನೇಳೆಂದು । ಹಿಡಿದಳು ಸೆರಗನಾ ದೇವಿ. (ಅಂ. ಮಾ. ಸಂ. ೩೪)

"ಅಕ್ಕ ಬಪ್ಪೆನು ಬಿಡು ಸೆರಗ ನಿನ್ನಯ ಮನದ ಅಕ್ಕರ ಕಿಡೆಪೆನೆ." ಎಂದು ರಾಯ ಚಕ್ಕನೆದ್ದನು, ಬೆಡಗಿಂದ.

ಭಗವದ್ಗೀತೆ ಮತ್ತು ಭರತೇಶ ವೈಭವ :—

ಭಗವದ್ಗೀತೆಯ ೨ನೇ ಅಧ್ಯಾಯದಲ್ಲಿ ಆತ್ಮನ ಅಮರತ್ವವನ್ನು ಕುರಿತು ಬರೆದ ಕೆಳಗಿನ ಶ್ಲೋಕಗಳ ಭಾಷಾಂತರವನ್ನೇ ರತ್ನಾಕರನು ಮಾಡಿದಂತೆ ತೋರುವದು.

"ನೈನಂ ಛಿಂದಂತಿ ಶಸ್ತ್ರಾಣಿ । ನೈನಂ ದಹತಿ ಪಾವಕಃ ॥ ನಚೈನಂ ಕ್ಲೇಸಯಂತ್ಯಾಪೋ ನ ಶೋಷಯತಿ ಮಾರುತಃ ॥ (ಭ. ಗೀ.) 'ನೀರಿಂದ ನೆನೆಯು, ಕಿಚ್ಚಿಂದ ಬೇಯನು ಖಡ್ಗ । ಧಾರೆಗೆ ಸಂಧಿಸನಾತ್ಮಾ (ವಿ. ಗೋ. ೨೨) 'ಯೇ ಯಥಾ ಮಾಂ ಪ್ರಪದ್ಯಂತೆ ತಾಂಸ್ತಥೈ ಭಜಾಮಿ (ಭ. ಗೀ.) 'ತನ್ನಾತ್ಮನಲ್ಪನೆಂದೆಣಿಸುವಾಗಲ್ಪನು । ತನ್ನಾತ್ಮವಧಿಕವೆಂದರಿದು ॥ ಮನ್ನಿಸುವನಲ್ಪನಲ್ಲ." (ಭ. ವೈ)

"ಮನೆಯಿಂದ ಮನೆಗೆ ಪೋದಂತಾತ್ಮ ತನುವಿಂದ । ತನುವಿಗೆ ತಾನೈಯ್ದುತಿಹನು .." ಎಂದು ರತ್ನಾಕರನು ತನ್ನದೇ ಆದ ಸುಲಲಿತ ಮತ್ತು ಸರಳವಾದ ಶೈಲಿಯಲ್ಲಿ ಹೇಳಿದುದು ಗೀತೆಯಲ್ಲಿ ಕೆಳಗಿನಂತೆ ಹೇಳಲಾಗಿದೆ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ' ಔದಾರಿಕಾಂಗಕ್ಕೆ ರತ್ನಾಕರನು ಮನೆಯ ಉಪಮೆಯನ್ನು ಕೊಟ್ಟಿರುವನು. ಭಗವದ್ಗೀತೆಯಲ್ಲಿ ಹಳೆ ಬಟ್ಟೆಯನ್ನು ಕೊಡಲಾಗಿದೆ ಇಷ್ಟೆ. ಜೀವನ ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಪ್ರವೇಶಿಸುವ ರೀತಿಯು ಎರಡೂ ಕಡೆಯಲ್ಲಿ ಬಂದಿದೆ.

ಧ್ಯಾನದ ವಿಧಾನದ ಬಗ್ಗೆ ರತ್ನಾಕರನು ಹೇಳಿದುದನ್ನು ನೋಡಿದರೆ ಯೋಗ ಶಾಸ್ತ್ರದ ಅವನ ಅಭ್ಯಾಸವು, ಮತ್ತು ಅವನ ಸಾಧನಾನುಭವಗಳು ಎಷ್ಟು ಆಳ ವಾಗಿದ್ದುವೆಂಬುದರ ಕಲ್ಪನೆ ವಾಚಕರಿಗೆ ಬಾರದೆ ಇರಲಾರದು.

"ವಜ್ರ ಸನ್ನಿಭನು ಪದ್ಮಾಸನದೊಳಿಗಾಗ । ವಜ್ರದಂತಲುಗದೆ ಕುಳಿತಾ ॥
ಮೂಲಾಧಾರದಿಂದೊಡ್ಯಾಣ ಬಂಧವ । ಜಾಲಂಧ್ರಬಂಧವನೆಸಗಿ ॥
ನೂಲನೇರಿಸುವಂತೆ ಬ್ರಹ್ಮರಂಧ್ರಕೆ ಮತ್ತೆ । ಗಾಳಿಯನೆತ್ತಿ ನಿಲ್ಲಿಸಿದಾ ॥
ಕುಂಡಲಿಯನು ವಾಯುವಿಂದೇರಿಸಲು ಪುಷ್ಟ । ಕಾಂಡನ ಶಕ್ತಿ ತಗ್ಗಿದುದು ॥
ಗುಂಡಿಯೊಳಗೆ ಗಾಳಿನಿಂದಿರೆ ನಿಂದುದು । ಕಂಡಕಡೆಗೆ ಹೋಹ ಚಿತ್ತಾ ॥

ಕಳ್ಳಕುಪ್ಪಿಗೆ (ಕೊರಳ) ಗಾಳಿಯೇರಿ ನಿಂದಿರೆ ನಿದ್ರೆ । ನಿಲ್ಲದೆ ಜರಿದೋಡಿತಾಗ ॥
....
ನೆತ್ತಿಗನಿಲನೇರಿದಾಗ ಮೈಯೊಳಗಣ । ಕತ್ತಲೆ ಕೆಟ್ಟು ಪ್ರಕಾಶಾ ॥
ಅತ್ತಿತ್ತ ತೋರುತಿದ್ದುದು ॥

ಹಠಯೋಗ ಪ್ರದೀಪಿಕೆ ಮೊದಲಾದ ಯೋಗ ಶಾಸ್ತ್ರಗಳ ಮೇಲಿನ ಗ್ರಂಥ ಗಳನ್ನು ರತ್ನಾಕರನು ಆಳವಾಗಿ ಅಭ್ಯಾಸ ಮಾಡಿರಬೇಕೆಂಬುದು ಮೇಲಿನ ಅವತರಣಿಕೆ ಯಿಂದ ಸಿದ್ಧವಾಗುವದಲ್ಲದೆ, ಅವನ ಅಧ್ಯಾತ್ಮ ಸಾಧನ ಅಗಾಧತೆಯ ಕಲ್ಪನೆಯೂ ಬರುವದು.

ರತ್ನಾಕರ ಅಧ್ಯಾತ್ಮ ಸಾಧನ–ಸಾಧ್ಯ :—

ವ್ಯವಹಾರ ನಿಶ್ಚಯವರಿದು, ತನ್ನಾತ್ಮತತ್ವವನ್ನು ನೆಮ್ಮಿ, ಧ್ಯಾನ ಮತ್ತು ಯೋಗಗಳ ಸಾಧನದಿಂದ ತನ್ನ ನಿಜವ ಸಾಧಿಸಿದ ಮುನಿಯು ಅವನು. ತನ್ನ ಧ್ಯಾನ ಸಾಮರ್ಥ್ಯದಿಂದ ಕರ್ಮದ ಬೇರು ಕಿತ್ತೆಸೆದು ಕರ್ಮಕತ್ತಲೆಗೆ ಮಾರ್ತಾಂಡನವನು. ಕಾಲಕರ್ಮಗಳಾಚೆಗಿರುವ ಪರಬೊಮ್ಮ, ತ್ರಿಭುವನಸಾರ, ಚಿದಂಬರ ಪುರುಷನ ಸಕಲ ಲಕ್ಷಣಗಳನ್ನು ಪಡೆದ ಕಾಲನ ಗಂಡ. ತಾನು ಒಕ್ಕುಡಿತೆ ಮಾಡಿ ಉಂಡ ಆತ್ಮಾನಂದ ವನ್ನು ಭವ್ಯಜೀವಿಗಳಿಗುಣಿಸಲು ಭರತ ಚಕ್ರಿಯ ಚರಿತ್ರೆಯನ್ನು ರಚಿಸಿದನು. "ಕೇಳಿರೋ ಭವ್ಯರು ನಿಮಗೊಂದು ಸುಕಥೆಯ । ಪೇಳುವೆನು ಅತಿ ಮೃದುವಾಗಿ ॥ ಕೇಳಿದಿರಾದರೆ ನಿಮಗಾತ್ಮಸುಖವಿಂದು। ನಾಳೆನಾಡಿದಿನೊಳಗಹುದು ॥ (ಆ. ಸಂ. ೧೧) 'ಆಧ್ಯಾತ್ಮವೆ ನಿಚಿತ ಪ್ರಯೋಜನವೆನಗೆ' ಎಂದು ಹೇಳಿ ತನ್ನ ಕಾವ್ಯರಚನೆಯ ಉದ್ದೇಶವನ್ನು ಸ್ಪಷ್ಟಪಡಿಸಿರುವನು. ರತ್ನಾಕರನ ಆಧ್ಯಾತ್ಮವು ತರ್ಕಶಾಸ್ತ್ರವನೋದಿ ತಗರು ತಗರುಗಳಂತೆ ಹೊಡೆದಾಡುವ ತತ್ವಜ್ಞಾನಿಗಳ ತರ್ಕವಲ್ಲ. ಅರ್ಕನಂತೆಸೆವ ಆತ್ಮನನ್ನು ಕಂಡು ಬೇಕೈದು ವಚನಿಸಲರಿಯದೆ ತನ್ನಲ್ಲಿ ತಾನೇ ತೃಪ್ತನಾಗಿ, ಮತ್ತ ನಾಗಿ, ಆತ್ಮಾರಾಮನಾಗಿ ಇರುವ ಮಹಾಯೋಗಿಯು ಅವನು. ಯುಕ್ತಿಗೂಡಿದ

ಭಕ್ತಿಯಿಂದ ಆತ್ಮಧ್ಯಾನವನ್ನು ಮಾಡಿ ಆತ್ಮಾನಂದದಲ್ಲಿ ಓಲಾಡುವ ಅನುಭಾವಿಯೂ ಧ್ಯಾನಕ್ಕೆ ಯೋಗದ ಸಂಯೋಗ ಮಾಡಿ ಆನಂದಯೋಗವನ್ನು ಸಾಧಿಸಿದ ಯೋಗಿ ಅವನು. ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ. ಮನದ ಕಷಾಯವನ್ನು ಕೆಡಿಸಿದ ಜೈನ ಮುನಿಯವನು.

ಇಂಥ ಅಧ್ಯಾತ್ಮಕವಿಯನ್ನು ಶೃಂಗಾರಕವಿ ಎಂದು ಕರೆಯುವದೆಂದರೆ ಕನ್ನಡ ಸಾಹಿತ್ಯಪ್ರಪಂಚಕ್ಕೆ, ಕರ್ನಾಟಕ ಸಂಸ್ಕೃತಿಗೆ ದೊರೆತ ರತ್ನದ ಹಾರವನ್ನು, ಮರುಳು ಕಲ್ಲೆಂದು ತಿಳಿದು ಮಣ್ಣಿಗೆಸೆದಂತೆಯೇ ಸರಿ. ಅವನ ಬಗ್ಗೆ ಸಂಶೋಧನೆಗಳು ನಡೆದಷ್ಟು ಕಡಿಮೆಯೇ ಸರಿ.

ಅಂಬಿಗರ ಚೌಡಯ್ಯನ ವಚನಗಳಲ್ಲಿ ಸ್ತ್ರೀ

ವಿಜಯಶ್ರೀ ಸಬರದ

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ'

—ಮನು

'ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ ಅಜ್ಞಾನವು
ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವದು'

—ಚೀನಿಗಾದೆ

ಸ್ತ್ರೀಯರು ತತ್ತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು,
ವೈವಾಹಿಕ ನಿಯಮಗಳನ್ನು ಪಾಲಿಸುವದೇ ಅವರಿಗೆ ಹೆಚ್ಚಿನ ತತ್ತ್ವ'

—ಯುರೋಪಿನ ಧರ್ಮಬೋಧಕ

'ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು. ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು. ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ.'

—ಸೇಂಟ್ ಪಾಲ್

'ಸ್ತ್ರೀ ಬುದ್ಧಿವಂತಳಾಗುವದಕ್ಕೆ ಬಯಸುವದೇ ಮಹಾಪರಾಧ.'

—ಮಾರ್ಟಿನ್ ಲೂಥರ್

ಕೇವಲ ಭಾರತವಷ್ಟೇ ಅಲ್ಲ. ಇಡೀ ಪ್ರಪಂಚವೇ ಸ್ತ್ರೀಗೆ ಕೊಟ್ಟ ದೊಡ್ಡ ಗೌರವವಿದು. ಇದನ್ನೆಲ್ಲಾ ಗಮನಿಸಿದರೆ ಸ್ತ್ರೀಶೋಷಣೆಗೆ ಪ್ರೇರಣೆಯಾದ ವೇದ–ಉಪನಿಷತ್ತು – ಪುರಾಣಗಳನ್ನು ಮೊದಲು ಸುಟ್ಟುಬಿಡಬೇಕೆಂದು ವಿಚಾರವಂತ ಸ್ತ್ರೀಯರಿಗೆ ಅನ್ನಿಸಿದರೆ ಖಂಡಿತಾ ಅದವರ ತಪ್ಪಲ್ಲ. ಸ್ತ್ರೀ ಶತ–ಶತಮಾನಗಳಿಂದ ಇಂದಿನವರೆಗೂ ಶೋಷಣೆಗೊಳಗಾಗಿದ್ದಾಳೆ.

ಸಮಾಜದಲ್ಲಿ ಇಂದಲ್ಲ - ನಾಳೆ ಬಡವರ ಶೋಷಣೆ ತಪ್ಪಬಹುದು, ದಲಿತರ ಬಿಡುಗಡೆಯಾಗಬಹುದು ಆದರೆ ಸ್ತ್ರೀಶೋಷಣೆ ತಪ್ಪುವದು ಅಷ್ಟು ಸುಲಭದ ಮಾತಲ್ಲ. ಇದು ಆಕೆಯ ಪಾಲಿಗೆ ಶತಮಾನಗಳಿಂದಲೂ ಪ್ರಶ್ನೆಯಾಗಿಯೇ ಉಳಿದು ಬಂದಿದೆ. ಸ್ತ್ರೀ ಸ್ವತಂತ್ರಕ್ಕೆ ಅನರ್ಹಳು ಎಂದು ಹೇಳಿದ ಮನು 'ಮಾತೃದೇವೋಭವ'

ಎಂಬುದನ್ನು ಹೇಳಿ ತನ್ನ ಎಡಬಿಡಂಗಿತನವನ್ನು ತೋರಿಸಿದ್ದಾನೆ. ಸ್ತ್ರೀಯನ್ನು ಸಂಕೋಲೆಯಲ್ಲಿರಿಸಿ ಮೇಲ್ನೋಟಕ್ಕೆ ಆಕೆಯನ್ನು ದೇವತೆಯೆಂದು ಕರೆಯುವ್ನ ಮನುವಿನ ಕದೀಮಂತನವನ್ನು ಸ್ತ್ರೀ ಇಂದಾದರೂ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಯಜಮಾನ ಸಂಸ್ಕೃತಿ ಮೌಢ್ಯವನ್ನು ಬಿತ್ತಿದೆ, ಅಂಧತೆಯನ್ನು ಬೆಳೆಸಿದೆ. ಇದನ್ನೆಲ್ಲಾ ನೋಡಿದರೆ ಈ ನಮ್ಮ ಇಂಡಿಯಾದ ಚರಿತ್ರೆ, ಸಂಸ್ಕೃತಿ, ಪರಂಪರೆ ಇದಾವುದೂ ನಮ್ಮದಲ್ಲವೆನ್ನಿಸುತ್ತದೆ. ಇಡೀ ಪ್ರಪಂಚವೇ ಸ್ತ್ರೀಯನ್ನು ಕೀಳಾಗಿ ಕಂಡಿರುವದನ್ನು ಗಮನಿಸಿದಾಗ ಹೆಣ್ಣು ಧಿಮಿಗುಡುವ ಜ್ವಾಲೆಯಾಗುವದು ಸಹಜವಿದೆ.

ಹನ್ನೆರಡನೆಯ ಶತಮಾನದ ಶಿವಶರಣರ ಧರ್ಮವೊಂದನ್ನು ಬಿಟ್ಟರೆ ಉಳಿದ ಯಾವ ಧರ್ಮಗಳೂ ಹೆಣ್ಣಿಗೆ ಗೌರವ ನೀಡಿಲ್ಲ. ಎಲ್ಲಾ ಧರ್ಮಗಳು ಹೆಣ್ಣನ್ನು ಮೋಹ–ಮಾಯೆ ಎಂದು ಹೇಳಿ ಆಕೆಯನ್ನು ಅಸ್ಪೃಶ್ಯಳನ್ನಾಗಿ ಮಾಡಿವೆ. ವರ್ಣಾಶ್ರಮ ಧರ್ಮವಂತೂ ಸ್ತ್ರೀಯನ್ನು ತೀರಾ ಕೆಳ ದೃಷ್ಟಿಯಿಂದ ಕಂಡಿದೆ. ಆ ಧರ್ಮದ ಪ್ರಕಾರ ಸ್ತ್ರೀ ಎಂದೆಂದಿಗೂ ಅಸ್ಪೃಶ್ಯಳೇ ಆಗಿರುತ್ತಾಳೆ.

ಒಂದು ರೀತಿಯ ಕ್ರಾಂತಿಗೆ ಪ್ರಯತ್ನಿಸಿದನೆಂದು ಹೇಳಲಾಗುವ ಬುದ್ಧನೂ ತನ್ನ ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಮೊದಮೊದಲು ಅನುಮಾನಿಸಿದ. ಬೌದ್ಧ ಧರ್ಮದ ಪ್ರಮುಖ ಕ್ರಿಯೆಗಳಲ್ಲಿ ಸ್ತ್ರೀಯರಿಗೆ ಅವಕಾಶವಿರಲಿಲ್ಲ.' ಇನ್ನು ಜೈನಧರ್ಮವನ್ನು ತೆಗೆದು ನೋಡಿದರೆ ಅದರ ಗೋಳು ಹೇಳತೀರದು. 'ಗಂಡಾಗಿ ಹುಟ್ಟಿ ಬಂದಾಗಲೇ ಹೆಣ್ಣಿಗೆ ಮುಕ್ತಿ, ಎನ್ನುವ ತೀರಾ ಕ್ಷುಲ್ಲಕತನ ಅದರದು. ವೈಷ್ಣವ ಧರ್ಮವಂತೂ ಹೆಣ್ಣನ್ನು ಕಸಕ್ಕಿಂತ ಕಡೆಮಾಡಿದೆ. ಹೆಣ್ಣನ್ನು–ಹೆಣ್ಣೆಂದು, ಆಕೆ ಸಾಕ್ಷಾತ್ ದೇವರೆಂದು ಹೆಣ್ಣಿನ ಶಕ್ತಿಯನ್ನು ಗುರುತಿಸಿ ಅವಳ ಬುದ್ಧಿಗೆ ಮಹತ್ವ ಕೊಟ್ಟದ್ದು ಬಸವಣ್ಣನವರ ಕಾಲಕ್ಕೆ ಮಾತ್ರ.

ಹೆಣ್ಣು ಮಾಯೆಯಲ್ಲವೆಂಬುದನ್ನು ಸ್ಪಷ್ಟಪಡಿಸಿದ ವಚನಕಾರರು ಹೆಣ್ಣಿಗೆ ತಮ್ಮೊಡನೆ ಸಮಾನತೆ ಕಲ್ಪಿಸಿ ಕೊಟ್ಟರು, ಸ್ವಾತಂತ್ರ್ಯ ಕೊಟ್ಟರು. ಇವರು ಕೊಟ್ಟ ಸಮಾನತೆ ಕೇವಲ ನುಡಿಯಲ್ಲಿರದೇ ನಡೆಯಲ್ಲಿ ಪಲ್ಲವಿಸಿತ್ತು. ಮಹಾದೇವಿಯಕ್ಕ ಕೇವಲ ಶರಣೆಯಷ್ಟೇ ಆಗಿರದೆ, ಅನುಭವ ಮಂಟಪದ ಪ್ರಮುಖ ಅಂಗವಾಗಿರುವದು ಅತ್ಯಂತ ಮಹತ್ವದ ವಿಷಯ. ಬೌದ್ಧಿಕವಾಗಿ ಮಾನಸಿಕವಾಗಿ ವೈಚಾರಿಕವಾಗಿ ಗಂಡಿಗಿಂತ ಒಂದು ಹೆಜ್ಜೆ ಮುಂದೆ ಕಾಲಿಡಲು ಹೆಣ್ಣಿಗೆ ಅವಕಾಶ ಸಿಕ್ಕಿದ್ದು ಚರಿತ್ರೆಯಲ್ಲಿ ೧೨ನೇ ಶತಮಾನವೊಂದೇಯೆನ್ನಬಹುದು. ಯಜಮಾನ ಸಂಸ್ಕೃತಿಯಿಂದ ಕಳಚಿಕೊಂಡು ಹೊರಬಂದ ಹೆಣ್ಣು – ಹೆಣ್ಣಾಗಿ ನಿಂತದ್ದು. ಗಂಡಿನ ಸರಿಸಮಾನ ಸಾಧನೆ ಮಾಡಿದ್ದು ವಚನಕಾರರ ಕಾಲಕ್ಕೆ ಮಾತ್ರ.

ಈ ದೃಷ್ಟಿಯಿಂದ ಅಂಬಿಗರ ಚೌಡಯ್ಯನವರು ಅತ್ಯಂತ ಮಹತ್ವದ ವಚನಕಾರರೆನಿಸುತ್ತಾರೆ. ಈಗ ಸಧ್ಯ ದೊರೆತಿರುವ ಚೌಡಯ್ಯನವರ ವಚನಗಳಲ್ಲಿ ಸ್ತ್ರೀಗೆ

ಸಂಬಂಧಿಸಿದವು ಕೆಲವೇ ವಚನಗಳಿದ್ದರೂ ಅವು ಇಂದಿಗೂ ಜರೂರಿಯೆನಿಸುತ್ತವೆ. ಸ್ತ್ರೀಸಮಾಜಕ್ಕೆ ಧಾರ್ಮಿಕ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟವರಲ್ಲಿ ಶರಣರೇ ಪ್ರಮುಖರು ಮತ್ತು ಪ್ರಥಮರು. ಚೌಡಯ್ಯನವರ ವಚನಗಳನ್ನು ಓದಿದಾಗ ಸ್ತ್ರೀ-ಪುರುಷರೆಂಬ ಭೇದವೇ ಅವರಲ್ಲಿಲ್ಲದಿದ್ದುದು ಕಂಡುಬರುತ್ತದೆ. ಹೇಳಬೇಕಾದುದನ್ನು ನಿರ್ಭಿಡೆ-ನಿರ್ಭಯಂಗಳಿಂದ ಹೇಳುವ ಚೌಡಯ್ಯನವರ ಸ್ವತಂತ್ರ ವಿಚಾರಗಳು ಇಂದಿಗೂ ಸ್ವಾಗತಾರ್ಹವಾಗಿವೆ. ಚೌಡಯ್ಯನವರ ಈ ವಿಶಿಷ್ಟ ಗುಣ ಸ್ತ್ರೀ ಸಮುದಾದಾಯಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ.

'ಶುಕ್ಲಶೋಣಿತ ಪಿಂಡದಲ್ಲಿಯೇ ಉತ್ಪತ್ತಿ
ಚಿತ್ತ, ವಾಯು, ಪ್ರಾಣ, ಅಷ್ಟದಳ ಪದ್ಮದಲ್ಲಿಹದು,
ಮೊಲೆ ಮುಡಿ ಮೂಡಿದರೆ ಹೆಣ್ಣೆಂಬರು
ಗಡ್ಡ ಮೀಸೆಯಾಗಲು ಗಂಡೆಂಬರು
ನಡುವೆ ಸುಳಿವಾತ್ಮನು ಹೆಣ್ಣಲ್ಲ, ಗಂಡಲ್ಲ
ಇದರಂತುವ ತಿಳಿಯಲ್ಕೆ ಶೃತಿಗಳಿಗೋಚರ
ವೆಂದಾತನಂಬಿಗ ಚೌಡಯ್ಯ'

ಈ ವಚನ ಶತಮಾನಗಳಿಂದ ಹಿಡಿದ ಜಾಡ್ಯಕ್ಕೆ ಚುಚ್ಚುಮದ್ದಿನಂತಿದೆ. ನಡುವೆ ಸುಳಿವಾತ್ಮ ಹೆಣ್ಣಲ್ಲ ಗಂಡಲ್ಲ ಎಂಬ ಮಾತು ಎಷ್ಟು ಮುಖ್ಯವೋ, 'ಇದರಂತುವ ತಿಳಿಯಲ್ಕೆ ಶೃತಿಗಳಿಗಗೋಚರ' ಎನ್ನುವ ಕೊನೆಯ ನುಡಿ ಅದಕ್ಕಿಂತಲೂ ಮುಖ್ಯ ಮತ್ತು ತೀರಾ ಸತ್ಯವಾದುದು.

ಈ ಮಾತನ್ನು ತಿಳಿದುಕೊಳ್ಳುವ ಸಾಮರ್ಥ್ಯ ಶೃತಿಗಳಿದ್ದರೆ ಹೆಣ್ಣಿನ ಪಾಡೇಕೆ ಕಣ್ಣೀರಿನಲ್ಲಿ ತೊಳೆಯುತಿತ್ತು ! ಚೌಡಯ್ಯ ಮೊದಲಾದ ವಚನಕಾರರು ಬದುಕಿನ ನೈಜ ನಾಡಿಯನ್ನೇ ಹಿಡಿದು ಪರೀಕ್ಷಿಸಿದ್ದರಿಂದ ಸತ್ಯಾ-ಸತ್ಯಗಳು ಹೊರಬಿದ್ದವು. ಶತಮಾನಗಳಿಂದ ಹೆಣ್ಣಿಗಾದ ಮೋಸ ಬಯಲಾಯಿತು. ಆದ್ದರಿಂದಲೇ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನೆಂದು, ಮಹಾದೇವಿಯೆಂದು ಶರಣರು ಗೌರವಿಸಿದರು. ಸಮಾನ ಅವಕಾಶ–ಗೌರವ ದೊರೆತದ್ದರಿಂದ ಹನ್ನೆರಡನೇ ಶತಮಾನದ ವಚನಕಾರ್ತಿಯರು ಎಲ್ಲಂದದಲ್ಲಿ ಬೆಳೆದು ನಿಂತರು. ಅಕ್ಕಮಹಾದೇವಿ, ಕಾಳವ್ವೆ, ಸೋಮವ್ವೆ, ಸುಂಕವ್ವೆ, ಲಕ್ಕಮ್ಮ, ರೇವಮ್ಮ, ನೀಲಮ್ಮ— ಈ ಮುಂತಾದ ಸ್ತ್ರೀಯರು ಮನುಷ್ಯರಂತೆ ಬಾಳಿದ್ದು ಕೇವಲ ಹನ್ನೆರಡನೆಯ ಶತಮಾನದಲ್ಲಿ ಮಾತ್ರ. ಮುಂದಿನ ವೀರಶೈವ ಸಮಾಜ ವಚನಕಾರರ ನುಡಿಗಳನ್ನು ತನ್ನ ನಡೆಯಲ್ಲಿ ತರದೇ ಹೋಗಿದ್ದರಿಂದ ಹೆಣ್ಣಿನ ಶೋಷಣೆ ನಿರಂತರವಾಯಿತು. ಆರ್ಥಿಕ ವ್ಯವಸ್ಥೆಯ ಸುಧಾರಣೆಯೊಂದಿಗೆ ಮಾತ್ರ ಸಾಮಾಜಿಕ ಸುಧಾರಣೆ ಸಾಧ್ಯವೆಂಬ ವಿಚಾರದ ಕಡೆ ಅಷ್ಟೊಂದು ಗಮನ ಕೊಡದ ನಮ್ಮ ನಾಡಿನ ಎಲ್ಲಾ ಕ್ರಾಂತಿಗಳು ವಿಫಲವಾದದ್ದೂ ಕೂಡ ಇದೇ ಕಾರಣಕ್ಕಾಗಿ.

ಹೆಣ್ಣು-ಗಂಡಿನಲ್ಲಿ, ಸತಿ-ಪತಿಯಲ್ಲಿ ತಾರ-ತಮ್ಯ ಸಲ್ಲದೆಂದು ಸ್ಪಷ್ಟಪಡಿಸುವ ಚೌಡಯ್ಯನವರ ಈ ಕೆಳಗಿನ ವಚನ ಉಳಿದ ವಚನಕಾರರಿಗಿಂತ ತೀರಾ ಭಿನ್ನವಾಗಿದೆ. ಹೆಣ್ಣನ್ನು ಗಂಡಿನ ಸಮಾನ ಕಾಣುವ ಚೌಡಯ್ಯನವರ ವಿಶಾಲ ಗುಣ ಇಲ್ಲಿ ಬಹಳ ಮುಖ್ಯವೆನಿಸುತ್ತದೆ.

'ಶರಣಸತಿ ಲಿಂಗಪತಿ' ಎಂಬರು
ಶರಣ ಹೆಣ್ಣಾದ ಪರಿ ಇನ್ನೆಂತು
ಲಿಂಗ ಗಂಡಾದ ಪರಿ ಇನ್ನೆಂತು
ನೀರು ನೀರ ಕೂಡಿ ಬೆರೆದಲ್ಲಿ-ಭೇದಿಸಿ ಬೇರೆ ಮಾಡಬಹುದೆ ?
ಗಂಡು-ಹೆಣ್ಣು ಯೋಗವಾದಲ್ಲಿ
ಆತುರ ಹಿಂಗೆ ಘಟಬೇರಾಯಿತ್ತು.
ಶರಣ ಸತಿ ಲಿಂಗ ಪತಿ ಎಂಬ ಮಾತು
ಮೊದಲಿಗೆ ಮೋಸ ಲಾಭಕ್ಕಧೀನ
ಉಂಟೇ ಎಂದನಂಬಿಗ ಚೌಡಯ್ಯ'

ವೀರಶೈವಧರ್ಮದಲ್ಲಿದ್ದುಕೊಂಡೇ ಅದರ ಕೆಲ ವಿಚಾರಗಳನ್ನು ಅಲ್ಲಗಳೆದ ದಿಟವಚನಕಾರ ಚೌಡಯ್ಯ. ಶರಣಸತಿ ಲಿಂಗಪತಿ ಎಂಬ ಮಾತೇ ಮೊದಲಿಗೆ ಮೋಸ ಎನ್ನುವ ದಟ್ಟ ಸತ್ಯ ಬಯಲಾದದ್ದು ಚೌಡಯ್ಯನವರಿಂದ ಮಾತ್ರ. ಹೆಣ್ಣನ್ನು ತೀರಾ ಹತ್ತಿರದಿಂದ ಕಂಡು ಎಲ್ಲ ಹಂತದಲ್ಲಿ ಸಮಾನತೆ ತರಬಯಸುವ ನಿಜವಾದ ಸಮತಾವಾದಿಯ ನುಡಿಯಿದು. ಹೆಣ್ಣಿನ ಬಗ್ಗೆ ಎಲ್ಲ ವಚನಕಾರರಿಗಿಂತಲೂ ಒಂದು ಹೆಜ್ಜೆ ಮುಂದೆಹೋಗಿ ಚೌಡಯ್ಯನವರು ಆಲೋಚಿಸಿದ್ದಾರೆ.

ತುಳಿತಕ್ಕೊಳಗಾದ ಹೆಣ್ಣನ್ನು ಮೇಲಕ್ಕೆತ್ತಲು ಚೌಡಯ್ಯ ಮುಂತಾದ ವಚನಕಾರರು ಸಮಾಜದ ಇನ್ನೊಂದು ಮುಖವಾದ ಗಂಡಿಗೆ ಎಚ್ಚರಿಸಿದ್ದಾರೆ. ಹೀಗೆ ಹೇಳುವಾಗ ಮಹಾಭಾರತದ ಉದಾಹರಣೆ ಕೊಟ್ಟು ಅಂತವರಿಗೆ ನರಕ ತಪ್ಪಿದ್ದಲ್ಲವೆನ್ನುತ್ತಾರೆ.

'ಪರಧನ, ಪರಸತಿ, ಪರನಿಂದೆಗಳಿರೆ
ಮುಂದೆ ನರಕವು ಎಂದು ಗುರುವಾಕ್ಯ ಸಾರುತ್ತಿವೆ,
ಪರಧನ ಪರಸತಿ ಪರಭೂಮಿಗೆಳುಪಿ
ಹತವಾಗಿ ಹೋದ ದುರ್ಯೋಧನ......'
'ಪರಸತಿಯು ನಿಂದೆಯೋ ನರಕ'-ಎನ್ನುವ

ಗುರುವಾಕ್ಯದ ಪರಂಪರೆಯನ್ನು ಸಮಾಜದ ಆರೋಗ್ಯಪೂರ್ಣ ಬೆಳವಣಿಗೆಗಾಗಿ, ಆದರ್ಶಕ್ಕಾಗಿ ಉಪಯೋಗಿಸಿಕೊಂಡ ಚೌಡಯ್ಯನವರ ಜಾಣ್ಮೆ ಮೆಚ್ಚುವಂತಹದು. ಕುಕೃತ್ಯದಿಂದಾಗಿ ಹತನಾದ ಮಹಾಭಾರತದ ದುರ್ಯೋಧನನ ಚಿತ್ರವನ್ನು ಮೂಡಿಸಿ

ಆ ಅವಗುಣವನ್ನು ಹೊಂದಿದ ಎಲ್ಲ ಗಂಡಸರಲ್ಲಿಯೂ ಜಾಗ್ರತಿಯನ್ನುಂಟುಮಾಡು ತ್ತಾರೆ. ಈರ್ಷೆ, ದುರಾಶೆ, ಅಸೂಯೆಯಂತಹ ನೀಚ ಗುಣಗಳು ಮಾನವನನ್ನು ಹಾಳುಮಾಡದೇ ಬಿಡವು ಎಂದು ಸ್ಪಷ್ಟಪಡಿಸುವ ಚೌಡಯ್ಯನವರ ಹಲವಾರು ವಚನ ಗಳಲ್ಲಿ ಮನುಷ್ಯನ ಇಹದ ಬದುಕಿಗೆ, ಇಲ್ಲಿ ನೆಲೆಸಬೇಕಾದ ಶಾಂತಿ–ಸಮಾನತೆಗೆ ಅತ್ಯಂತ ಪ್ರಮುಖಸ್ಥಾನವಿದೆ.

ಮಮತೆಯ ಮಗಳಾಗಿ, ಪ್ರೀತಿಯ ಸತಿಯಾಗಿ, ಒಲವಿನ ತಾಯಿಯಾಗಿ ಬದುಕಿನ ವಿವಿಧ ಮಜಲುಗಳಲ್ಲಿ ಪ್ರಜ್ವಲಿಸುವ ಸ್ತ್ರೀಯನ್ನು ನಮ್ಮ ಇಂಡಿಯಾದ ಸಂಸ್ಕೃತಿ ಕಡೆಗಣಿಸಿದ್ದು ಹೆಣ್ಣಿನ ದೊಡ್ಡ ದುರಂತ. ಹೆಣ್ಣನ್ನು ಕೇವಲ ಭೋಗದ ವಸ್ತುವನ್ನಾಗಿ ಸೇವಕಳಂತೆ ಕಂಡ ವೈದಿಕ ಗೊಡ್ಡುತನ ಹನ್ನೆರಡನೇ ಶತಮಾನದಲ್ಲಿ ಹೇಳಹೆಸರಿಲ್ಲದಂತಾದದ್ದು ಇದಕ್ಕಾಗಿಯೇ ಎನ್ನಬಹುದು. ಹೆಣ್ಣಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಪ್ರಥಮರೆನಿಸಿದ್ದರಿಂದಲೇ ಚೌಡಯ್ಯ ಮುಂತಾದ ವಚನಕಾರರಿಗೆ ಮಹತ್ವಬಂತು.

'ರತಿಯಿಂದ ರತ್ನ ಗತಿಯಿಂದ ವಾದ್ಯ
ಸದ್ಗತಿಯಿಂದ ಮುಕ್ತಿ ನಿರ್ಗತಿಯಿಂದ ವಿರಕ್ತಿ...'

ಎನ್ನುವ ವಚನವೂ ಕೂಡ ಹೆಣ್ಣಿನ ಹಿರಿಮೆಯನ್ನೇ ಸಾರುತ್ತದೆ. ಶಾಂತಿ–ಸಹನೆಗಳ ಪ್ರತೀಕವಾದ ಹೆಣ್ಣು ತನ್ನನ್ನೇ ಸುಟ್ಟುಕೊಂಡು ಜ್ಯೋತಿಯಂತೆ ಬೆಳಕು ಕೊಟ್ಟಿ ದ್ದಾಳೆ. ಆ ಬೆಳಕಿನಲ್ಲಿ ಮೆರೆದ ಚರಿತ್ರೆ ಮಾತ್ರ ಹೆಣ್ಣನ್ನು ಮರೆತಿದೆ. ಯಾರು ಮರೆತರೂ ವಚನಕಾರರು ಮಾತ್ರ ಹೆಣ್ಣನ್ನು ಮರೆಯಲಿಲ್ಲ. ಮಹಾದೇವಿಯಕ್ಕನ ಶ್ರೀಪಾದಗಳಿಗೆ ನಮೋನಮೋ ಎಂದು ನಮಿಸಿದ ಪ್ರಭುದೇವರಿಂದ ಹಿಡಿದು ಸಕಲ ವಚನಕಾರರು ಹೆಣ್ಣಿಗೆ ಗೌರವ–ಪ್ರಾಮುಖ್ಯತೆ–ಸಮಾನತೆ ಕೊಟ್ಟರು. ಹೆಣ್ಣನ್ನು 'ತ್ಯಾಗ' ಎಂಬ ಹಿರಿಯ ಹೆಸರಿನಿಂದ ಕರೆಯುವದರ ಮೂಲಕ ಹಿಂದೂಧರ್ಮ ಹೆಣ್ಣಿಗೆ ಅಧೋಗತಿಯನ್ನುಂಟುಮಾಡಿದೆ.

ಶತ–ಶತಮಾನಗಳಿಂದ ಸ್ತ್ರೀ ಎಲ್ಲಾ ಸವಲತ್ತುಗಳಿಂದ ವಂಚಿತಳಾದಾಗ ವಚನಕಾರರು ಬೀರಿದ ಹೊಸ ದೃಷ್ಟಿ ಚರಿತ್ರೆಯಲ್ಲಿ ಬಹಳ ಮುಖ್ಯವಾದದ್ದು. ಹೆಣ್ಣನ್ನು ಹೆಣ್ಣಾಗಿ ಕಂಡು ಆಕೆಗೆ ಬದುಕ ಕೊಟ್ಟವರು ವಚನಕಾರರು. ಈ ದೃಷ್ಟಿ ಯಿಂದ ಚೌಡಯ್ಯನವರ ವಿಚಾರಗಳು ಮಹತ್ವಪೂರ್ಣವೆನಿಸುತ್ತಿವೆ.

ಜೀವವಿದ್ದು ಜಡವಸ್ತುವಿನಂತೆ ಉಪಯೋಗಿಸಲ್ಪಡುತ್ತಿದ್ದ ಹೆಣ್ಣಿನ ಗೋಳಿನ ಸ್ಥಿತಿ ಶರಣರನ್ನು ಮುಟ್ಟಿದ್ದು, ಸ್ತ್ರೀಸಮೂಹ ಅಂದು ಜಾಗ್ರತವಾದದ್ದು ತೀರಾ ಆಕಸ್ಮಿಕ. ಚೌಡಯ್ಯನವರಲ್ಲಿ ಸ್ತ್ರೀ ಗೌರವದ ಸ್ಥಾನಪಡೆದಿದ್ದಾಳೆ. ಉಳಿದ ವಚನಕಾರರಿಗಿಂತ ಚೌಡಯ್ಯನವರು ಹೊಸ ವಿಚಾರಗಳನ್ನು ಸ್ತ್ರೀ ಬಗೆಗೆ ಹೇಳಿದ್ದಾರೆ.

ವಿವಿಧ ರೀತಿಯಲ್ಲಿ ಸ್ತ್ರೀ ಶೋಷಣೆ ಇಂದಿಗೂ ನಡೆಯುತ್ತಿದೆ. ಸ್ತ್ರೀ ಸಮೂಹವೆಲ್ಲಾ ಜಾಗ್ರತರಾಗಿ ಸಂಘಟನೆಯಾಗದ ಹೊರತು ಯಜಮಾನ ಸಂಸ್ಕೃತಿಯಿಂದ ಕಳಚಿಕೊಂಡು ಹೊರಬರದಹೊರತು ಅನ್ಯಾಯವಾದಾಗ ಬೀದಿಗಿಳಿಯದ ಹೊರತು, ಸ್ತ್ರೀ ಶೋಷಣೆ ನಿಲ್ಲದು. ಈ ವಿಚಾರಗಳತ್ತ ಸ್ತ್ರೀ ಇಂದು ಗಮನ ಕೊಡಬೇಕಾಗಿದೆ. ಹೊಸ ಮೌಲ್ಯಗಳನ್ನು ಹುಡುಕಿಕೊಳ್ಳಬೇಕಾಗಿದೆ.

[* ಇಲ್ಲಿ ಬಳಸಿಕೊಂಡ ವಚನಗಳನ್ನು ಬಿ. ಆರ್. ಸುರಪುರ ಅವರು ಸಂಪಾದಿಸಿರುವ 'ಅಂಬಿಗರ ಚೌಡಯ್ಯನ ವಚನಗಳು' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.]

ಕನ್ನಡ ಜಾನಪದದಲ್ಲಿ ಭಾಷಿಕ ಆಟಗಳು

ಹೆಚ್. ಎಂ. ಮಹೇಶ್ವರಯ್ಯ

ಕನ್ನಡ ಜನಪದರ ಬದುಕಿನಲ್ಲಿ ಒಂದಾಗಿ ಬೆರತುಕೊಂಡಿರುವ ಅನೇಕ ಜನಪದ ಪ್ರಕಾರಗಳಂತೆ ಜಾನಪದ ಗಣಿತ ಹಾಗೂ ಜಾನಪದ ಭಾಷಿಕ ಆಟಗಳನ್ನು ಸಂಗ್ರಹಿಸಿ, ವಿಶ್ಲೇಷಿಸುವ ಅಗತ್ಯತೆ ಇಂದು ಅಧಿಕವಾಗಿದೆ. ಏಕೆಂದರೆ ಉಳಿದ ಜಾನಪದ ಪ್ರಕಾರಗಳಂತೆ ಹೇಗೋ ಜೀವಂತವಾಗಿ ಮುಂದೆ ನಡೆಯುವ ಅವಕಾಶಗಳು ಜಾನಪದ ಗಣಿತ ಹಾಗೂ ಜಾನಪದ ಭಾಷಿಕ ಆಟಗಳಿಗೆ ತೀರ ಕಡಿಮೆಯಾಗಿವೆ. ಹಿಂದಿನಂತೆ ಇವು ಸಾರ್ವತ್ರಿಕವಾಗಿ ಇಂದು ಉಳಿದುಕೊಂಡು ಬರದೆ ಕೆಲವೇ ಜನಪದ ಕಲಾವಿದರಲ್ಲಿ ಉಳಿದುಕೊಂಡು ಬಂದು, ಕಣ್ಮರೆಯಾಗುವ ಸ್ಥಿತಿಯಲ್ಲಿವೆ.

ಜಾನಪದ ಜಾಣಗಣಿತ ಹಾಗೂ ಭಾಷಿಕ ಆಟಗಳನ್ನು ಕನ್ನಡ ಜನಪದ ವಿದ್ವಾಂಸರು ಒಗಟುಗಳಲ್ಲಿಯೇ ಸೇರಿಸಿ ವಿವರಿಸಿದರೂ ಅವುಗಳಿಗೆ ಪ್ರತ್ಯೇಕವಾದ ಸ್ಥಾನಕೊಡಬೇಕೆನ್ನುವ ಅಗತ್ಯತೆಯನ್ನು ಮನಗಂಡು ಅವುಗಳನ್ನು ಬೇರೆಯಾಗಿ ವಿವರಿಸಿರುವುದೂ ಕಂಡು ಬರುತ್ತದೆ. ಒಗಟುಗಳನ್ನೂ ಸಹ ಒಗಟುಗಳ ಆಟ (Riddle games)ವೆಂದು ಕರೆಯುತ್ತಾರೆ.[೧] ಆದ್ದರಿಂದಲೇ ನಾನೂ ಸಹ ಭಾಷೆಗೆ ನೇರವಾಗಿ ಸಂಬಂಧಿಸಿದ ಕೆಲವು ರೂಪಗಳನ್ನು ಆರಿಸಿಕೊಂಡು ಅವುಗಳನ್ನು ಭಾಷಿಕ ಆಟಗಳೆಂದು ಕರೆದಿದ್ದೇನೆ. ಈ ಹಿಂದೆಯೇ ಆರ್. ಎಸ್. ಬಾಗ್ಸ್‌ರವರು ಒಗಟು ಹಾಗೂ ಗಾದೆಗಳನ್ನು ಭಾಷಿಕ ಬಗೆ (Language type)ಗಳಲ್ಲಿ ಸೇರಿಸಿದ್ದಾರೆ.

ಕನ್ನಡ ನಾಡಿನಲ್ಲಿ ಒಗಟುಗಳು ಮನರಂಜನೆಯಾಗಿಯೋ ಇಲ್ಲವೇ ರಾಜರ ಆಸ್ಥಾನದಲ್ಲಿ ವಿದ್ವಾಂಸರ ವಿದ್ವತ್ತಿನ ಪರೀಕ್ಷೆಗಳಾಗಿಯೋ, ಎರಡು ಗುಂಪುಗಳ ಪ್ರತಿಷ್ಠೆ ಹಾಗೂ ಗೌರವಗಳ ಸಂಕೇತಗಳಾಗಿಯೋ ಹಾಗೂ ಸ್ಪರ್ಧಾತ್ಮಕ ರೂಪಗಳಾಗಿಯೋ ಉಳಿದುಕೊಂಡು ಬಂದಿದ್ದುದು ತಿಳಿದು ಬರುತ್ತದೆ. ಆದರೆ ಕಾಲ ಪ್ರವಾಹದಲ್ಲಿ ಅವುಗಳು ಜನಗಳಲ್ಲಿ ಮನರಂಜನೆ ಹಾಗೂ ಬೇಸರ ನಿವಾರಣೆಯ ಕಾರ್ಯಕ್ಕಷ್ಟೇ ಸೀಮಿತವಾಗಿ ಉಳಿದು ಬಂದವು. ವಾಕ್‌ಸಂಪ್ರದಾಯಕ್ಕೆ ಸೇರಿದ ಒಗಟುಗಳ ಮುಂದಿನ ಬೆಳವಣಿಗೆಯೇ ಜಾನಪದ ಗಣಿತ ಎಂದು ಕೆಲವರು

---

೧. ಜೀವನಹಳ್ಳಿ ಸಿದ್ದಗಂಗಪ್ಪ : 'ಜಾನಪದ ಜಾಣಗಣಿತ ಮತ್ತು ಭಾಷಾ ಚಮತ್ಕಾರ' (೧೯೮೧) ಪ್ರೇಮ ಪ್ರಕಾಶನ, ಜೀನಹಳ್ಳಿ.

ಅಭಿಪ್ರಾಯ ಪಡುತ್ತಾರೆ. ಒಟ್ಟಿನಲ್ಲಿ ಒಗಟುಗಳು ತಮ್ಮ ಗರ್ಭದಲ್ಲಿಯೇ ಪ್ರಶ್ನೋತ್ತರಗಳನ್ನ ಳವಡಿಸಿಕೊಂಡಿರುವುದರಿಂದ ಅವು ಮನುಷ್ಯನ ಬುದ್ಧಿಶಕ್ತಿಯನ್ನು ಬೆಳೆಸುವುದರೊಂದಿಗೆ ಅವನಿಗೆ ಬೇಕಾದ ಬೌದ್ಧಿಕ ಸಾಮರ್ಥ್ಯವನ್ನೂ ನೀಡುತ್ತ ಬಂದವು.

ಈ ಟಿಪ್ಪಣಿರೂಪದ ಪ್ರಬಂಧದಲ್ಲಿ ಭಾಷಿಕ ಆಟಗಳೆಂದರೆ ಭಾಷೆಯ ಅಂಗಗಳಾದ ಧ್ವನಿ, ಅಕ್ಷರ, ಪದ, ದ್ವಂದ್ವಾರ್ಥ, ಗೂಡಾರ್ಥಗಳಿಗೆ ಸಂಬಂಧಿಸಿದ ಕೆಲವು ರೂಪಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡದಲ್ಲಿ ಈವರೆಗೆ ಸಂಗ್ರಹವಾಗಿರುವ ಜಾನಪದ ಗ್ರಂಥಗಳಿಂದ ಉದಾಹರಣೆಗಳನ್ನು ಉಪಯೋಗಿಸಿಕೊಂಡು ಅವುಗಳ ವಿಶ್ಲೇಷಣೆ ಹಾಗೂ ವಿವರಣೆಗೆ ಪ್ರಯತ್ನಿಸಿದ್ದೇನೆ. ಇಂತಹ ಉದಾಹರಣೆ ಕನ್ನಡದಲ್ಲಷ್ಟೇ ಅಲ್ಲದೆ ಇತರ ಭಾರತೀಯ ಭಾಷೆಗಳಲ್ಲಿಯೂ ದೊರೆಯಬಹುದು. ಪದಸಮಸ್ಯೆಗೆ (ನುಡಿಯಾಟ) ಸಂಬಂಧಿಸಿದ ಆಟಗಳು ಅಮೇರಿಕನ್ನರ ಭಾಷೆಗಳಲ್ಲಿವೆ ಎಂದು ತಿಳಿದು ಬಂದಿದೆ.[೨] ಪದಸಮಸ್ಯೆ(word play)ಗೆ ಸಂಬಂಧಿಸಿದ ಆಟಗಳಲ್ಲಿ ಪದಗಳ ಕ್ಲಿಷ್ಟತೆ ಏಕೀಕೃತವಾಗಿರುತ್ತದೆ. ಕೆಲವು ಉದಾಹರಣೆಗಳಲ್ಲಿ ದ್ವಂದ್ವಾರ್ಥ ಅಥವಾ ಅಕ್ಷರಗಳ ಸಂಕಲನ, ವ್ಯವಕಲನ ಅಥವಾ ಸ್ಥಾನಪಲ್ಲಟಗಳ ಮೂಲಕ ಭ್ರಾಂತಿ ತರುವ ಹಲವು ಬಗೆಯ ಒಗಟುಗಳಿದ್ದು ಅಂತವು ಲ್ಯಾಟಿನ್, ಗ್ರೀಕ್, ಜರ್ಮನ್ ಹಾಗೂ ಫ್ರೆಂಚ್ ಭಾಷೆಗಳಲ್ಲಿವೆ.

ಕನ್ನಡದಲ್ಲಿ ಭಾಷಿಕ ಆಟಗಳನ್ನು ದ್ವಂದ್ವಾರ್ಥ, ನುಡಿಯಾಟ, ಗೂಡಾರ್ಥ, ಧ್ವನಿರೂಪ–ಮುಂತಾಗಿ ವಿವರಿಸಬಹುದಾಗಿದೆ.

೧) ದ್ವಂದ್ವಾರ್ಥ (Dual Meanings)

ದ್ವಂದ್ವಾರ್ಥದ ರೂಪಗಳು ಕೇಳುಗನಲ್ಲಿ ಅರ್ಥಸಂದಿಗ್ಧತೆಯನ್ನುಂಟು ಮಾಡಿ ಭ್ರಮೆಯನ್ನುಂಟು ಮಾಡುತ್ತವೆ. ಅಕ್ಷರಗಳಲ್ಲಿ ಹೆಚ್ಚು ಕಡಿಮೆಯಾಗುವ ಇಲ್ಲವೇ ಅವುಗಳ ಸ್ಥಾನಪಲ್ಲಟದಿಂದ ಹೊರಡುವ ಧ್ವನ್ಯಾರ್ಥಗಳ ಸಮೂಹವೇ ಈ ರಚನೆಗಳು.

೧) ನಾನೂರು ಗೂಟದಾಗೆ ನೂರು ಗೂಟಕ್ಕೆ
ಕುದುರೆಗಳನ್ನು ಕಟ್ಟಿದೆ. ಹಾಗಾದರೆ ಉಳಿದ ಗೂಟಗಳೆಷ್ಟು ?

ನಾನೂರು ಎನ್ನುವ ಪದ ದ್ವಂದ್ವಾರ್ಥವನ್ನು ಹೊಂದಿ ಕೇಳುಗನಿಗೆ ಭ್ರಮೆಯನ್ನುಂಟು ಮಾಡುತ್ತದೆ. ನಾನೂರು ಎಂದರೆ ನಾನು+ನೂರು ಅಥವಾ ನಾಲ್ಕುನೂರು ಎಂದಾಗುತ್ತದೆ. ನಾನೂರು ಗೂಟಗಳಾದರೆ ಇನ್ನೂ ಮುನ್ನೂರು ಗೂಟಗಳು ಉಳಿಯುತ್ತವೆ. ನಾನು ನೂರು ಆದರೆ ಒಂದೂ ಉಳಿಯುವುದಿಲ್ಲ. ಹೀಗೆ ಶಬ್ದಗಳು, ಭ್ರಮೆಯುತ್ಪತ್ತಿಯನ್ನುಂಟು ಮಾಡುತ್ತವೆ.

---
೨. American Folklore

೨) ಒಬ್ಬನಲ್ಲಿ ಹತ್ತುಕುದುರೆ ಇದ್ದವು
ಅವಾ ಹತ್ತೂ ಕುದುರೆ ಮಾರಿದ
ಹಾಗಾದರೆ ಅವನಹತ್ತಿರ ಎಷ್ಟು ಕುದುರೆ ಉಳಿದವು ?

ಹತ್ತೂ ಎನ್ನುವ ಪದ ಹತ್ತು ಹಾಗೂ ಹತ್ತುವ ಎನ್ನುವ ಎರಡು ಅರ್ಥಗಳನ್ನು ಕೊಡುವುದರಿಂದ ಕೇಳುಗನಲ್ಲಿ ಭ್ರಮೆಯುತ್ಪತ್ತಿಯಶಾಗುತ್ತದೆ. ಹತ್ತು ಕುದುರೆ ಮಾರಿದರೆ ಒಂದೂ ಉಳಿಯುವದಿಲ್ಲ. ಹತ್ತುವ ಕುದುರೆ ಮಾರಿದರೆ ೯ ಕುದುರೆ ಉಳಿಯುತ್ತವೆ.

೩) ಕೆರ್ಯಾಗೆ ಏಳೆಮ್ಮೆ ಏರ್ಯಾಗ ಹತ್ತೆಮ್ಮೆ
ಮನ್ಯಾಗೆ ಹಿಂಡೆಮ್ಮೆ ಒಟ್ಟು ಎಷ್ಟೆಮ್ಮೆ ?

ಮೇಲಿನ ಉದಾಹರಣೆಯಲ್ಲಿ ಏಳೆಮ್ಮೆ, ಹತ್ತೆಮ್ಮೆ ಹಾಗೂ ಹಿಂಡೆಮ್ಮೆಗಳು ಸಂಖ್ಯಾ ವಾಚಕಗಳಾಗಿಯೂ ಕ್ರಿಯಾಸೂಚಕಗಳಾಗಿಯೂ ಕೇಳುಗನಲ್ಲಿ ಭ್ರಮೆಯುಂಟು ಮಾಡುವುದರಿಂದ ದ್ವಂದ್ವಾರ್ಥಕ್ಕೆ ಎಡೆಮಾಡಿಕೊಡುತ್ತವೆ. ಒಂದೇ ಎಮ್ಮೆ ಕೆರೆ ಯಲ್ಲಿ ಎದ್ದು ಏರಿಯಲ್ಲಿ ಹತ್ತಿ ಮನೆಯಲ್ಲಿ ಹಿಂಡುತ್ತದೆ ಎನ್ನುವ ಉತ್ತರವನ್ನು ಕಾಣಬಹುದು.

೪) ಕೆಲವು ಉದಾಹರಣೆಗಳಲ್ಲಿ ಎರಡೂ ಪ್ರಶ್ನೆಗಳಿಗೂ ಚಮತ್ಕಾರದಿಂದ ಒಂದೇ ಉತ್ತರ ನೀಡುವುದನ್ನು ಕಾಣುತ್ತೇವೆ. ಆ ರೀತಿಯ ಒಂದು ಉದಾಹರಣೆ ಇಲ್ಲಿದೆ :

ನನ್ನ ಕುದುರೆ ನೋಡಿದೆಯಾ ?
ತೆಂಗಿನಕಾಯಿಗೆ ದುಡ್ಡೆಷ್ಟು ?

ಎರಡೂ ಪ್ರಶ್ನೆಗಳಿಗೂ ಉತ್ತರ 'ನಾಕಾಣೆ'. ನಾ ಕಾಣೆ ಎನ್ನುವ ಉತ್ತರದಲ್ಲಿ ಕುದುರೆಯನ್ನು ನಾನು ಕಾಣೆ ಅಂದರೆ ನಾನು ನೋಡಿಲ್ಲ ಮತ್ತು ತೆಂಗಿನಕಾಯಿಯ ಬೆಲೆ ನಾಲ್ಕುಆಣೆ ಎನ್ನುವ ಎರಡೂ ಅರ್ಥಗಳೂ ಇರುವುದು ಕಂಡು ಬರುತ್ತದೆ.

ಈ ಮೇಲಿನ ಉದಾಹರಣೆಗಳು ಜಾನಪದ ಲೆಕ್ಕದಂತೆ ಕಂಡರೂ ಇಲ್ಲಿ ಪದದ ಅರ್ಥ ಮೇಲುಗೈ ಪಡೆದು ಸಂದಿಗ್ಧತೆಯನ್ನುಂಟು ಮಾಡುವುದರಿಂದ ಭಾಷಿಕ ಆಟ ದಲ್ಲಿ ಈ ಬಗೆಯನ್ನು ಸೇರಿಸಬಹುದಾಗಿದೆ.

೨) ನುಡಿಯಾಟ (Word Play)

ಒಂದು ಪದದಲ್ಲಿ ಬರುವ ಮೊದಲ ಹಾಗೂ ಕೊನೆಯ ಅಕ್ಷರವನ್ನು ಸೂಚ್ಯ ವಾಗಿ ಹೇಳುವುದರ ಆ ಪದವನ್ನು ಪೂರ್ಣಗೊಳಿಸುವುದು ಅಥವಾ ಅಕ್ಷರಗಳನ್ನು ಕೂಡುವುದು, ಕಳೆಯುವುದು ಮುಂತಾದ ರೀತಿಯಿಂದ ಆ ಪದವನ್ನು ಕಂಡು ಹಿಡಿ ಯುವಂತೆ ಮಾಡುವುದನ್ನು ಇಲ್ಲಿ ಕಾಣುತ್ತೇವೆ. ಅಮೇರಿಕೆಯಲ್ಲಿರುವ ಈ ಮಾದ

ರಿಯ ಒಗಟುಗಳನ್ನು 'Word Play' ಎಂದು ಕರೆಯುತ್ತಾರೆ.[೩] ಈ ರೀತಿಯ ನುಡಿಯಾಟಗಳು ಇತ್ತೀಚಿನ ಬೆಳವಣಿಗೆಯೆಂತಲೂ ಹಾಗೂ ಸಾಹಿತ್ಯಿಕ ಕ್ರಿಯೆಯ ಫಲವೆಂತಲೂ ಕೆಲವರು ಅಭಿಪ್ರಾಯ ಪಡುತ್ತಾರೆ.

೧) ಅರ್ಧಚಂದ್ರನಂಗೇ ಕಾಣಬೇಕು. ಐದು ಅಕ್ಷರದ ಅಡಿಗೆ ಪದ ಅದಾಗಿರಬೇಕು ಮೊದ್ಲಕ್ಷರ 'ಕ' ಕೊನೆಯ ಅಕ್ಷರ 'ಬು' ಇದೆಂಥದು ಹೇಳು?

ಇದಕ್ಕೆ ಉತ್ತರ : ಕರಿಗಡಬು

೨) ಒಂದು ಬಂಡ್ಯಾಗ ಮೂರು 'ಗಿ'
ಚಕ್ಕಡಿಯಲ್ಲಿ ಡಂಬರಗಿ, ಜತಿಗಿ ಹಾಗೂ ಉದ್ದಿಗಿ ಎನ್ನುವ 'ಗಿ' ಅಂತ್ಯಾಕ್ಷರವುಳ್ಳ ಮೂರು 'ಗಿ' ಗಳಿವೆ.

೩) ೧ — ೨ ಅಕ್ಷರ ಕೂಡಿ ಕೆಲಸ
೧ — ೩ ಅಕ್ಷರ ಕೂಡಿ ಮುಸುಕು
೧ — ೪ ಅಕ್ಷರ ಕೂಡಿ ಕೈ ಆಕಳಕರ
ಹಾಗಾದರೆ ನಾನ್ಯಾರು ?

ಇದಕ್ಕೆ ಉತ್ತರ : ಕರ್ಮವೀರ

೪) ಆರು — ಕ ಎಂಬ ಊರಿನಲ್ಲಿ ಮೂರು — ತಿ ಎಂಬ ಹುಡುಗನಿದ್ದನು ಆರು — ತಿ ಎತ್ತುವಾಗ ಮೂರು — ಥೇ ಹೋದನು. ಇದನ್ನು ಹೇಗೆ ಬರೆಯುತ್ತೀರಿ ?

ಕಕಕಕಕಕ ಎಂಬ ಊರು ತಿತಿತಿ ಎಂಬ ಹುಡುಗನಿದ್ದ
ತಿತಿತಿತಿತಿತಿ ಎತ್ತುವಾಗ ಥೆಥೆಥೆ ಹೋದನು

೫) ಗಿರಿಬಸಕನ ಕಸಬರಿಗಿ ತಿರುಗಿ ಹೇಗಾದರೂ ಓದಿ
ಗಿರಿಬಸಕನ ಕಸಬರಿಗಿಯನ್ನು ತಿರುಗಿ ಓದಿದರೂ ಹಾಗೆಯೇ ಬರುವುದು ಇದರ ವೈಶಿಷ್ಟ.

ಮೇಲೆ ಹೆಸರಿಸಿದ ಅನೇಕ ಉದಾಹರಣೆಗಳು ನುಡಿಯಾಟಗಳಾಗಿರುವುದು ಕಂಡು ಬರುತ್ತದೆ.

೩) ಗೂಡಾರ್ಥ (Enigma)

ಗೂಡಾರ್ಥದ ರೂಪಗಳಲ್ಲಿ ಅರ್ಥವು ಸ್ಫುಟವಾಗಿ ಹೊಳೆಯದೆ ತೀಕ್ಷ್ಣವಾಗಿ ಯೋಚಿಸಬೇಕಾಗುತ್ತದೆ. ಶಬ್ದದ ಮೂಲದಿಂದಲೇ ಅದರ ಅರ್ಥವನ್ನು ಹುಡುಕಿ ಕೊಂಡು ಹೋಗಿ ಅದಕ್ಕೆ ಸಂಬಂಧಿಸಿದ ಅನ್ವರ್ಥಗಳನ್ನು ಬಳಸಿಕೊಂಡಾಗ ಉತ್ತರ ಸಿಗುತ್ತದೆ.

---

೩. American Folklore

೧) ವಿರಾಟರಾಯನ ಹೆಂಡತಿ ತಮ್ಮನ ವೈರಿಯ ಅಣ್ಣನ ಅಪ್ಪನ ವಾಹನ ವಾವುದು ?

ಈ ಪ್ರಶ್ನೆಗೆ ಉತ್ತರಿಸಬೇಕಾದರೆ ವಿರಾಟರಾಯನ ಹೆಂಡತಿ, ಅವಳ ತಮ್ಮ, ಅವನ ವೈರಿ, ಅವನ ಅಣ್ಣ, ಅಣ್ಣನ ಅಪ್ಪ ಹಾಗೂ ಅವನ ವಾಹನವನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಇದಕ್ಕೆ ಮಹಾಭಾರತದ ಜ್ಞಾನ ಅಗತ್ಯವಾಗುತ್ತದೆ.

ವಿರಾಟರಾಯನ ಹೆಂಡತಿ ತಮ್ಮ	—ಕೀಚಕ
ಕೀಚಕನ ವೈರಿ	—ಭೀಮ
ಭೀಮನ ಅಣ್ಣ	—ಧರ್ಮರಾಯ
ಧರ್ಮರಾಯನ ಅಪ್ಪ	—ಯಮ
ಯಮನ ವಾಹನ	— ಕೋಣ

ಕೋಣ ಎನ್ನುವ ಉತ್ತರಕ್ಕಾಗಿ ಮೇಲಿನ ಸಂಗತಿ ತಿಳಿದಿರಬೇಕಾಗುತ್ತದೆ.

೪) ಧ್ವನಿರೂಪಗಳು (Sound Forms)

ಕೆಲವು ಧ್ವನಿಗೆ ಸಂಬಂಧಿಸಿದ ರೂಪಗಳು ಜನಪದದಲ್ಲಿ ದೊರೆಯುವುದು ನಮ್ಮ ಜನಪದರಿಗಿದ್ದ ಧ್ವನಿಯ ಜ್ಞಾನವನ್ನು ತಿಳಿಸುತ್ತದೆ.[೪] ಈ ಕೆಲವು ಉದಾಹರಣೆಗಳನ್ನು ನೋಡಬಹುದು :

೧) ಚಿಕ್ಕ ಹನಸೋಗೇಲಿ ಒಂದು ಟಗರು
ದೊಡ್ಡ ಹನಸೊಗೇಲಿ ಒಂದು ಟಗರು
'ಟಾ' ಅಂದರೆ ಗುದ್ದಲ್ಲ
'ಅಯ್ಯಪ್ಪ' ಅಂದರೆ ಗುತ್ತವೆ.

ಈ ಮೇಲಿನ ಉದಾಹರಣೆಯಲ್ಲಿ ಬರುವ ಚಿಕ್ಕ ಹನಸೋಗಿಯ ಟಗರು, ದೊಡ್ಡ ಹನಸೋಗಿಯ ಟಗರು ಎಂದರೆ ಮೇಲ್ತುಟಿ, ಕೆಳದುಟಿಗಳು. 'ಟಾ' ಅಂದರೆ ಅವು ಗುದ್ದುವುದಿಲ್ಲ 'ಅಯ್ಯಪ್ಪ' ಅಂದರೆ ಗುದ್ದುತ್ತವೆ. ಪ ಎನ್ನುವ ಉಭಯೋಷ್ಠ್ಯ ಧ್ವನಿಯ ಉಚ್ಚಾರದ ಕ್ರಮವನ್ನು ಈ ಉದಾಹರಣೆ ವಿವರಿಸುವುದರ ಮೂಲಕ ಅವರಿಗಿದ್ದ ಧ್ವನಿ ವಿವರಣೆಯ ಜ್ಞಾನವನ್ನು ತೋರಿಸುತ್ತದೆ.

೨) ಮೇಲೆ ಬೆಟ್ಟ ಕೆಳಗೆ ಬೆಟ್ಟ
'ಟಗ್ಗಿ' ಎಂದರೆ ಬೀಳುವುದಿಲ್ಲ
'ಟಗ್ಗಪ್ಪ' ಎಂದರೆ ಬೀಳುತ್ತದೆ

---

೪. Girji R. M. : DLA News vol VI No. 9, 1982

ಈ ಉದಾಹರಣೆಯೂ ಸಹ ಉಭಯೋಷ್ಠ್ಯಧ್ವನಿಯಾದ 'ಪ' ವನ್ನು ವಿವರಿಸುವುದೇ ಆಗಿದೆ.

೩) ಇಬ್ಬರು ಗರತೀರು
'ಅಪ್ಪ' ಅಂದರೆ ಕೂಡ್ತಾರೆ
'ಅವ್ವ' ಅಂದರೆ ಕೂಡಲ್ಲ

ಇದೂ ಸಹ 'ಪ' ಧ್ವನಿಯ ವಿವರಣೆ

೪) 'ಅಕ್ಕ' ಅಂದ್ರೆ ಮುಟ್ಟೋದಿಲ್ಲ 'ಅಣ್ಣ' ಅಂದ್ರೆ ಮುಟ್ಟುತ್ತೈತೆ

ಈ ಉದಾಹರಣೆಯಲ್ಲಿ ಅಣ್ಣ ಎಂದಾಗ ನಾಲಿಗೆ ತಾಲುವನ್ನು ಮುಟ್ಟುತ್ತದೆ ಎನ್ನುವುದನ್ನು ಸೂಚಿಸುತ್ತದೆ.

ಮೇಲಿನ ಉದಾಹರಣೆಗಳಿಂದ ತುಟಿ ಹಾಗೂ ನಾಲಿಗೆಯಿಂದ ಧ್ವನಿಗಳು ಉಚ್ಚಾರವಾಗುತ್ತವೆ ಎನ್ನುವ ಜನಪದರ ಸ್ಪಷ್ಟಕಲ್ಪನೆ ಗೋಚರಿಸುತ್ತದೆ. ಇನ್ನೂ ಇಂತಹ ಹಲವಾರು ಉದಾಹರಣೆಗಳು ದೊರೆಯುತ್ತಿವೆ.

ಈ ಟಿಪ್ಪಣಿ ರೂಪದ ಪ್ರಬಂಧದಲ್ಲಿ ಕನ್ನಡ ಜಾನಪದದಲ್ಲಿ ದೊರೆಯುವ ಕೆಲವು ಭಾಷೆಗೆ ಸಂಬಂಧಿಸಿದ ವಿಶಿಷ್ಟ ರೂಪಗಳನ್ನು ಗಮನಿಸಿದ್ದಾಯಿತು. ಪ್ಲೆಟೋನ ಕಾಲದಲ್ಲಿಯೇ ಹುಡುಗರ ಅಚ್ಚುಮೆಚ್ಚಿನ ಕ್ರೀಡೆಗಳಾಗಿದ್ದ ಒಗಟುಗಳು ಇಂದಿಗೂ ಅಲ್ಲಲ್ಲಿ ದೊರೆಯುತ್ತವೆ. ಆದರೆ ಅವುಗಳ ಬಗ್ಗೆ ಇನ್ನೂ ಅಧ್ಯಯನವಾಗಬೇಕಾಗಿದೆ. ಆಗ ಮಾತ್ರ ಇನ್ನೂ ಸ್ಪಷ್ಟವಾದ ಚಿತ್ರ ನಮಗೆ ದೊರೆಯುತ್ತದೆ.

ಜಾನಪದ ಭಾಷಿಕ ಆಟಗಳನ್ನು ಮಕ್ಕಳ ಪಠ್ಯಕ್ರಮದಲ್ಲಿ ಅಳವಡಿಸುವ ಅಗತ್ಯತೆ ಇದೆ. ಏಕೆಂದರೆ ಇವು ಮಕ್ಕಳ ಗ್ರಹಣಶಕ್ತಿ, ಕಲ್ಪನಾಶಕ್ತಿಯನ್ನು ಬೆಳೆಸುವಲ್ಲಿ ಹೆಚ್ಚು ಉಪಯುಕ್ತವಾಗುತ್ತವೆ. ಮನರಂಜನೆಯ ಜೊತೆಗೆ ಬೋಧನೆಯನ್ನೂ ಹೆಚ್ಚು ಯಶಸ್ವಿಯಾಗಿ ನೀಡುವ ಸಾಧ್ಯತೆ ಇದೆ.

ಈ ಲೇಖನ ಬರೆಯಲು ಸ್ಫೂರ್ತಿ ನೀಡಿದ ಜೀನಹಳ್ಳಿ ಸಿದ್ಧಲಿಂಗಪ್ಪನವರ ಜಾನಪದ ಜಾಣಗಣಿತ ಮತ್ತು ಭಾಷಾಚಮತ್ಕಾರ ಎಂಬ ಗ್ರಂಥವನ್ನು ಹಾಗೂ ಆರ್. ಎಂ. ಗಿರ್ಜಿಯವರ **DLA News** ನಲ್ಲಿ ಪ್ರಕಟವಾದ ಟಿಪ್ಪಣಿಯನ್ನೂ ಕೃತಜ್ಞತೆಯಿಂದ ನೆನಪಿಸುತ್ತೇನೆ.

ಸಹಾಯಕ ಗ್ರಂಥಗಳು

೧. ಸಿದ್ಧಲಿಂಗಪ್ಪ ಜೀನಹಳ್ಳಿ (೧೯೮೧) ಜಾನಪದ ಜಾಣಗಣಿತ ಮತ್ತು ಭಾಷಾಚಮತ್ಕಾರ. ಪ್ರೇಮಪ್ರಕಾಶನ ಜೀನಹಳ್ಳಿ

೨. ಸೋಮಶೇಖರ ಇಮ್ರಾಪುರ (೧೯೭೬) ಕನ್ನಡ ಸಾವಿರದ ಒಗಟುಗಳು, ಕ. ವಿ. ವಿ. ಧಾರವಾಡ.

೩. ರಾಗಾ (೧೯೭೯) ನಮ್ಮ ಒಗಟುಗಳು (ಉಷಾಸಾಹಿತ್ಯ ಮಾಲೆ, ಮೈಸೂರು)

೪. ಶ್ರೀಕಂಠ ಕೂಡಿಗೆ (೧೯೮೨) ಭೂಮಿ ಹುಣ್ಣಿಮೆ, ದಖಿನ್ ಪಬ್ಲಿಷರ್ಸ್, ಬೆಂಗಳೂರು.

೫. ಲಕ್ಕಪ್ಪಗೌಡ ಎಚ್. ಜಿ. (೧೯೭೩) ಒಗಟುಗಳು, ಮೈ. ವಿ. ವಿ. ಮೈಸೂರು.

೬. Jamcs A. Kelso (Ed) Encyclopaedia of Religion and Ethics vol. X

ಕನ್ನಡ ಸಾಹಿತ್ಯದಲ್ಲಿ ಸಂಶೋಧನೆ

ಬಿ. ಆರ್. ಹಿರೇಮಠ

೧

ಕನ್ನಡ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಸಣ್ಣಕತೆ, ನಾಟಕ, ಕಾದಂಬರಿ, ವಿಮರ್ಶೆಗಳಂತೆ ಸಂಶೋಧನೆಯೂ ಒಂದು ಸ್ವತಂತ್ರ ಅಧ್ಯಯನ ಕ್ಷೇತ್ರವೆನಿಸಿದೆ. ಇದು ತುಂಬ ನೀರಸವಾದ, ಸಾರ್ವಜನಿಕರ ಆಕರ್ಷಣೆಗೆ ದೂರವಾದ ಕ್ಷೇತ್ರ. ಇಂಥ ನೀರಸವಾದ ಸಂಶೋಧನಾ ಕ್ಷೇತ್ರದಲ್ಲಿ ದುಡಿಯುವವರ ಸಂಖ್ಯೆಯೂ ವಿರಳ. ಆದರೆ ಹಲವಾರು ಜನ ತರುಣ ಸಂಶೋಧಕರ ಆಗಮನದಿಂದ ಕಳೆದ ದಶಕದಲ್ಲಿ ಈ ಕ್ಷೇತ್ರವಿಸ್ತಾರ ವೈವಿಧ್ಯವನ್ನೂ, ಆಸಕ್ತಿ-ಭರವಸೆಗಳನ್ನೂ ಹುಟ್ಟಿಸುವಂತಾಯಿತು. ಕಳೆದ ದಶಕದಲ್ಲಿ ನಡೆದ ಸಂಶೋಧನೆಯ ಸಮೀಕ್ಷೆ ಪ್ರಸ್ತುತ ಲೇಖನದ ವಸ್ತು. ಕಳೆದ ದಶಕದಲ್ಲಿ ಭಾಷೆ, ಸಾಹಿತ್ಯಚರಿತ್ರೆ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಶಾಸನ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ನಡೆದಿರುವುದು ಕಂಡುಬರುತ್ತದೆ. ಈ ಕ್ಷೇತ್ರಗಳನ್ನು ಒಂದೊಂದಾಗಿ ಪರಿಶೀಲಿಸದೆ ಮಾದರಿಗಾಗಿ ಕೆಲವನ್ನು ಮಾತ್ರ ಪ್ರಸ್ತುತ ಸಮೀಕ್ಷೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಅಲ್ಲದೆ ಆ ಅವಧಿಯಲ್ಲಿ ಪ್ರಕಟವಾದ ಸಂಶೋಧನ ಗ್ರಂಥ ಹಾಗೂ ಲೇಖನಗಳನ್ನು ಬಿಡಿ ಬಿಡಿಯಾಗಿ ಪರಿಶೀಲಿಸದೆ ಇಡಿಯಾಗಿ ನೋಡಿ, ಅಲ್ಲಿ ಕಂಡುಬರುವ ಒಲವು (Trends), ನ್ಯೂನತೆ (Deficiency), ಮೌಲಿಕತೆ (Value)ಗಳನ್ನು ಸಂಗ್ರಹಿಸಿ ಹೇಳುವ ಪ್ರಯತ್ನವಿಲ್ಲಿದೆ. ಇಲ್ಲಿ ಎಲ್ಲ ಲೇಖಕರ ಗ್ರಂಥ ಹಾಗೂ ಲೇಖನಗಳನ್ನು ಉಲ್ಲೇಖಿಸುವುದು ಸಾಧ್ಯವಿಲ್ಲ. ಕಾರಣ ಉಲ್ಲೇಖವಾಗದಿರುವ ಲೇಖಕರು ತಪ್ಪು ಭಾವಿಸಬಾರದಾಗಿ ಕೋರಿಕೆ.

ಈ ದಶಕದ ಸಂಶೋಧನೆ ಸ್ವತಂತ್ರ ಗ್ರಂಥ, ಲೇಖನ ಹಾಗೂ (ಸಂಪಾದಿತ ಕೃತಿಯ) ಪ್ರಸ್ತಾವನೆಗಳ ರೂಪದಲ್ಲಿ ಹೊರಬಂದಿದೆ. ಇವುಗಳಲ್ಲಿ ಲೇಖನಗಳ ಸಂಖ್ಯೆ ಅತ್ಯಧಿಕ. ಸ್ವತಂತ್ರ-ಗ್ರಂಥಗಳ ಸಂಖ್ಯೆ ಅಲ್ಪ: (ಸಂಪಾದಿತ ಕೃತಿಯ) ಪ್ರಸ್ತಾವನೆಗಳ ಸಂಖ್ಯೆ ಅತ್ಯಲ್ಪ. ಲೇಖನಗಳಲ್ಲಿ 'ಟಿಪ್ಪಣಿ' (Short Notes) ಗಳೇ ಹೆಚ್ಚಾಗಿದ್ದುದು ಕಂಡುಬರುತ್ತದೆ. ಇದು ಕಳೆದ ದಶಕದ ವೈಶಿಷ್ಟ್ಯಗಳಲ್ಲಿ, ಒಲವುಗಳಲ್ಲಿ ಗಮನಿಸುವಂಥದಾಗಿದೆ. ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದ ಮೂರ್ತಿ, ಸಿ. ಪಿ. ಕೆ., ಎಸ್. ಶಿವಣ್ಣ, ಸೀತಾರಾಮ ಜಾಗೀರ್‌ದಾರ್,

ಬಿ. ಆರ್. ಹಿರೇಮಠ, ಎನ್. ಎಸ್. ತಾರಾನಾಥ, ಹನುಮಾಕ್ಷಿ ಗೋಗಿ ಮುಂತಾದ ಸಂಶೋಧಕರ ಟಿಪ್ಪಣಿಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಅನೇಕ ಹೊಸ ಸಂಗತಿಗಳು ಬೆಳಕಿಗೆ ಬಂದವು. ಪ್ರಬುದ್ಧ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ; ಕರ್ನಾಟಕ ಭಾರತಿ; ಸಾಧನೆ, ಬಸವಪಥ, ಅಂಕಣ, ತುಳುವ ಮೊದಲಾದ (ತ್ರೈಮಾಸಿಕ) ಪತ್ರಿಕೆಗಳು ಈ ಟಿಪ್ಪಣೆಗಳ ಪ್ರಕಟನೆಗೆ ಹೆಚ್ಚಿನ ಅವಕಾಶ ಕಲ್ಪಿಸಿ ಕೊಟ್ಟವು. ಅಲ್ಲದೆ ಈ ಪತ್ರಿಕೆಗಳ ಸಂಪಾದಕರು ಸ್ವತಃ ಸಂಶೋಧಕರಾದುದರಿಂದ ಸಂಶೋಧನ ಲೇಖನಗಳ ಪ್ರಕಟನೆ ಮತ್ತು ಗುಣಮಟ್ಟಗಳ ಕಡೆಗೇ ಆದ್ಯಗಮನ ಕೊಡುವಂತಾಯಿತು. ಈ ಮತ್ತು ಇಂಥ ಪತ್ರಿಕೆಗಳು ಸಂಶೋಧನ ಲೇಖನಗಳ ಪ್ರಧಾನವೇದಿಕೆಯಾಗಿ ನಿಂತುದು ಕಳೆದದಶಕದ ಇನ್ನೊಂದು ವೈಶಿಷ್ಟ್ಯ. ಮೊದ ಮೊದಲು ಸಂಶೋಧನ ಲೇಖನಗಳ ಪ್ರಕಟನೆಗೆ ಮೀಸಲಾದ ಪತ್ರಿಕೆಗಳು ಇಲ್ಲವೆನ್ನು ವಷ್ಟು ಕಡಿಮೆಯಾಗಿದ್ದವು. ಈ ಕೊರತೆಯನ್ನು ನೀಗಿಸಿದ ಶ್ರೇಯಸ್ಸು ಮೇಲಿನ ಪತ್ರಿಕೆಗಳಿಗೆ ಸಲ್ಲುತ್ತದೆ. ಅನೇಕ ಜನ ತರುಣ ಸಂಶೋಧಕರನ್ನು ತರಬೇತಿಗೊಳಿಸಿದ ಇವು, ಅವರ ಸಂಶೋಧನ ಲೇಖನಗಳ ಪ್ರಕಟನೆಗೆ ಪ್ರಾಶಸ್ತ್ಯ ನೀಡಿದವು.

ಕಳೆದ ದಶಕದಲ್ಲಿ ಬಹುಸಂಖ್ಯೆಯ ಸಂಶೋಧನ ಲೇಖನಗಳು ಬೆಳಕುಕಾಣಲು ಸಂಭಾವನ, ಸಂಸ್ಮರಣ ಗ್ರಂಥಗಳೂ ಕಾರಣವೆನಿಸಿವೆ. ಕರ್ನಾಟಕ– ಮೈಸೂರು– ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಬಸವ ಸಮಿತಿ ಹಾಗೂ ಬಿ. ಎಂ. ಶ್ರೀ ಪ್ರತಿಷ್ಠಾನಕೇಂದ್ರ, ಮೈಸೂರಿನ ಕುವೆಂಪು ಟ್ರಸ್ಟ್, ಉಡುಪಿಯ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ ಮುಂತಾದ ಸಂಸ್ಥೆಗಳು ಏರ್ಪಡಿಸಿದ ಹಲವಾರು ವಿಚಾರಸಂಕಿರಣಗಳಲ್ಲಿ ಸಂಶೋಧನ ಲೇಖನಗಳಿಗೆ ಪ್ರಾಶಸ್ತ್ಯ ಸಂದಿರುವದು ನೆನೆಯುವಂಥದಾಗಿದೆ. ಹೀಗೆ ಪತ್ರಿಕೆ, ಸಂಭಾವನ–ಸಂಸ್ಮರಣಗ್ರಂಥ, ವಿಶ್ವವಿದ್ಯಾಲಯಸಂಸ್ಥೆಗಳು ಸಂಘಟಿಸಿದ ವಿಚಾರಸಂಕಿರಣಗಳ ಮೂಲಕ ಸಂಶೋಧನ ಲೇಖನಗಳ ಪ್ರಕಟನೆಗೆ ಕಳೆದ ದಶಕದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಅವಕಾಶ, ಪ್ರಾಮುಖ್ಯ ಪ್ರಾಪ್ತವಾಯಿತು. ಕಳೆದ ದಶಕ ದಲ್ಲಿ ಅತ್ಯಂತ ಮಹತ್ವದವು ಎನಿಸಿದ ಕೆಲವು ಲೇಖನಗಳನ್ನು ಇಲ್ಲಿ ಉದಾಹರಿಸ ಬಹುದು : ಡಾ. ಎಂ. ಎಂ. ಕಲಬುರ್ಗಿ– ವೀರಸಿದ್ಧಾಂತ, ಅರ್ಜುನವಾಡ ಶಾಸನದ ಒಂದು ತ್ರುಟಿತಪದ್ಯ, ದೇವೂರ ದಾಸಿಮಯ್ಯ, ತೋಂಟದ ಸಿದ್ಧಲಿಂಗ ಯತಿಗಳ ಕಾಲ, ಶ್ರೀಕೃಷ್ಣ ಪಾರಿಜಾತ ಮತ್ತು ಸಿರಗುಪ್ಪಿ ಸದಾಶಿವಯ್ಯ; ಡಾ. ಎಂ. ಚಿದಾನಂದಮೂರ್ತಿ–ಸಟ್ಟಿಂಗ, ಭಗವ–ಮಸಕಬ್ಬೆ, ಕೊಂಡಗುಳಿ ಕೇಶಿರಾಜ ಇತ್ಯಾದಿ; ಬಿ. ಆರ್. ಹಿರೇಮಠ– ತೋಂಟದ ಸಿದ್ದಲಿಂಗಯತಿಗಳ ಕಾಲ : ಒಂದು ಟಿಪ್ಪಣಿ, ಬೋಳಬಸವೇಶ್ವರ ಕಾಲ, ಮುಮ್ಮಡಿ ಚಿಕ್ಕಭೂಪಾಲ ಮತ್ತು ಹರದನಹಳ್ಳಿ ಬಸವಲಿಂಗಸ್ವಾಮಿಗಳು ಇತ್ಯಾದಿ.

ಕವಿಯ ಕಾಲ, ದೇಶ, ಮತ-ಮನೆತನಗಳಿಗೆ ಮಾತ್ರ ಸೀಮಿತವಾಗಿದ್ದ ಸಂಶೋಧನೆ ಕವಿ ಬಾಳಿದ ಯುಗಪರಿಚಯ, ಕೃತಿಯ ಸಾಮಾಜಿಕ-ಸಾಂಸ್ಕೃತಿಕ ಅಧ್ಯಯನಗಳತ್ತ ನಡೆದು ಬಂದಿತು. ಈ ರೀತಿ ಸಂಶೋಧನೆಯ ಫಲವಾಗಿ ದೇ. ಜವರೇಗೌಡರ ಕುಮಾರವ್ಯಾಸ ಭಾರತದ ಸಾಂಸ್ಕೃತಿಕ ಅಧ್ಯಯನ, ಹೊಸಬೆಟ್ಟು ಸೀತಾರಾಮ ಆಚಾರ್‌ರ ವಾಲ್ಮೀಕಿ; ಒಂದು ಅಧ್ಯಯನ, ಬಿ. ವ್ಹಿ. ಮಲ್ಲಾಪೂರ ಅವರ ನಯಸೇನ ಮತ್ತು ಅವನ ಕೃತಿಗಳು ಮೊದಲಾದ ಮೌಲಿಕ ಗ್ರಂಥಗಳು ಮೂಡಿಬಂದವು. ಈ ದಿಶೆಯಲ್ಲಿ ಸಂಶೋಧನೆ ಕೈಕೊಳ್ಳುವವರಿಗೆ ಇವು ಒಳ್ಳೆಯ ಮಾದರಿಯಾಗಿ ಪರಿಣಮಿಸಿದವು. ಕವಿಕೃತಿಗಳ ಸಾಂಸ್ಕೃತಿಕ ಅಧ್ಯಯನ ಕಳೆದ ದಶಕದ ಅತ್ಯಂತ ಪ್ರಮುಖ ಒಲವು ಎನಿಸಿತು. ಇದರಿಂದ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಒಂದು ಹೊಸ ತಿರುವು, ಹೊಸ ಅಧ್ಯಾಯ ಆರಂಭವಾಯಿತು.

ಸಂಶೋಧನೆಯ ವಸ್ತು, ಭಾಷೆ, ಶೈಲಿ, ಪ್ರತಿಪಾದನೆಗಳಿಂದ ಓದುಗರಿಗೆ ಬಹಳಷ್ಟು ಗಂಟುಗಳಾಗಿ ಪರಿಣಮಿಸಿದ್ದ ಗೋವಿಂದ ಪೈ ಮಾದರಿಯ ಸಂಶೋಧನ ಪದ್ಧತಿ ಕಡಿಮೆಯಾಗುತ್ತ ಬಂದಿತು. ಬರಹದ ವಸ್ತು-ರೀತಿಗಳಲ್ಲಿ ಓದುಗರಿಗೆ ಅರ್ಥವಾಗುವಂತೆ ಸಂಶೋಧನ ಲೇಖನ, ಗ್ರಂಥಗಳು ರಚಿತಗೊಂಡವು. ಇದರಿಂದ ಸಂಶೋಧಕ-ಸಂಶೋಧನೆ-ಓದುಗರ ನಡುವಿನ ಅಂತರ ಮಾಯವಾಗತೊಡಗಿತು. ಸಂಶೋಧನೆಯ ಬಗೆಗೆ ವಿದ್ವಾಂಸರಲ್ಲಿ ಆಸಕ್ತಿ, ಕುತೂಹಲ, ಕಳಕಳಿ ಉಂಟಾಗತೊಡಗಿದವು. ಓದುಗರಿಂದ ಪ್ರೋತ್ಸಾಹದಾಯಕ ಪ್ರಕ್ರಿಯೆಗಳು ಬರಲಾರಂಭಿಸಿದವು. ಹೀಗಿದ್ದರೂ ಹಿರಿಯ ತಲೆಮಾರಿನ ಕೆಲವು ಜನ ಸಂಶೋಧಕರು ಹಳೆಯ ಜಾಡಿನಲ್ಲಿಯೇ ಮುಂದುವರಿದುದು ತಿಳಿಯುತ್ತದೆ.

ಕವಿ ಹಾಗೂ ಅವನ ಕೃತಿಗಳನ್ನು ಸಂಸ್ಕೃತ, ಪ್ರಾಕೃತ ಮುಂತಾದ ಭಾಷೆಗಳಲ್ಲಿರುವ ಮೂಲ ಕವಿಕೃತಿಗಳೊಂದಿಗೆ ತೂಗಿನೋಡಿ ಬೆಲೆಕಟ್ಟುವ ತೌಲನಿಕ ಕಾರ್ಯದಲ್ಲಿ ಸಂಶೋಧಕರು ನಿರತರಾದರು. ಈ ರೀತಿಯ ತೌಲನಿಕ ಕಾರ್ಯಕ್ಕೆ ತಮ್ಮನ್ನೇ ಅರ್ಪಿಸಿಕೊಂಡ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ನ. ಸುಬ್ರಹ್ಮಣ್ಯ ಅವರು ಕ್ರಮವಾಗಿ ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ, ನಾಗವರ್ಮನ ಕರ್ಣಾಟಕ ಕಾದಂಬರಿ ಹಾಗೂ ಮಹಾಭಾರತ ಸಮೀಕ್ಷೆ (ವ್ಯಾಸ-ಪಂಪ-ನಾರಣಪ್ಪರ ಕೃತಿಗಳ ತೌಲನಿಕ ಅಧ್ಯಯನ) ಎಂಬ ಗ್ರಂಥಗಳನ್ನು ರಚಿಸಿದರು. ಇವು ತೌಲನಿಕ ಅಧ್ಯಯನ ಮಾಡುವವರಿಗೆ ಉತ್ತಮ ಮಾದರಿಗಳಾಗಿರುತ್ತವೆ. ಇದಲ್ಲದೆ ಕವಿಸಾಹಿತ್ಯ, ಶಾಸನಸಾಹಿತ್ಯಗಳ ತೌಲನಿಕ ಅಧ್ಯಯನವೂ ಪ್ರಾರಂಭಗೊಂಡಿತು.

ನಾಡಿನ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದಲ್ಲಿ ಮಹತ್ವದ ಘಟಕಗಳೆನಿಸಿದ ವ್ಯಕ್ತಿನಾಮ, ಸ್ಥಳನಾಮಗಳ ಕಡೆಗೆ ಸಂಶೋಧಕರ ವಿಶೇಷಗಮನ ಹರಿದಿರುವುದೂ ಈ ಅವಧಿಯಲ್ಲಿ ಕಂಡುಬರುತ್ತದೆ. ಸೇಡಿಯಾಪು ಕೃಷ್ಣಭಟ್ಟರ 'ಕೆಲವು ದೇಶ

ನಾಮಗಳು,' ರಘುಪತಿ ಭಟ್ಟರ 'ತುಳುನಾಡಿ'ನ ಸ್ಥಳನಾಮಗಳು. ಮೊದಲಾದ ಕೃತಿಗಳನ್ನೂ ಡಾ. ಎಂ ಚಿದಾನಂದಮೂರ್ತಿಯವರ ಶಾಸನಗಳಲ್ಲಿ ವ್ಯಕ್ತಿನಾಮ, ಸ್ಥಳನಾಮಗಳು; ಡಾ. ಎಂ. ಎಂ, ಕಲಬುರ್ಗಿ ಅವರ ಧಾರವಾಡ ಗ್ರಾಮನಾಮ ವಿವೇಚನೆ, ಅಡ್ಡಹೆಸರುಗಳು; ಡಾ. ಎಚ್. ಎಂ. ಮಹೇಶ್ವರಯ್ಯ ಅವರ ಸ್ಥಳನಾಮಗಳ ಈಚಿನ ಪ್ರವೃತ್ತಿ ಇತ್ಯಾದಿ ಲೇಖನಗಳನ್ನೂ ಇಲ್ಲಿ ಹೆಸರಿಸಬಹುದು.

ಶಿವಶರಣರ ವಚನಗಳನ್ನು ಮಾತ್ರ ಪ್ರಕಟಿಸುತ್ತಿದ್ದ ಸಮಯದಲ್ಲಿ ಈ ವಚನಗಳಿಗೆ ಆ ಆ ಕಾಲ ದೇಶಗಳಲ್ಲಿ ಬರೆದ ಟೀಕೆಗಳನ್ನು ಹೊರತರುವ ವ್ಯವಸ್ಥಿತ ಪ್ರಯತ್ನಗಳು ಕಾಲಿಟ್ಟವು. ಸಕಲಪುರಾತನರ ಬೆಡಗಿನವಚನಗಳ ಟೀಕೆ, ಬಸವಣ್ಣನವರ ಟೀಕಿನವಚನಗಳು (ಭಾಗ ೧, ೨) ಕೃತಿಗಳ ಮೂಲಕ ವಚನ ವ್ಯಾಖ್ಯಾನದ ಮಹತ್ವ, ಉಪಯುಕ್ತತೆಗಳು ಹೆಚ್ಚುತ್ತ ಬಂದವು.

ತುಂಬ ಅಲಕ್ಷಿಸಲ್ಪಟ್ಟ ಲಘುಕೃತಿಗಳ ಅಧ್ಯಯನಕ್ಕೆ ಕೆಲವರು ಶ್ರೀಕಾರ ಹಾಕಿದರು. 'ಆದಯ್ಯನ ಲಘುಕೃತಿಗಳು' ಹಾಗೂ ಕೊಂಡಗುಳಿ ಕೇಶಿರಾಜನ ಕೃತಿಗಳು ಪ್ರಕಟಗೊಂಡ ಮೇಲಂತೂ ಲಘುಕೃತಿಗಳ ಬಗೆಗೆ ಬಹಳಷ್ಟು ಬೆಲೆ, ಭರವಸೆ, ಮಹತಿ ಮೂಡಿಬಂದವು. ಇದಲ್ಲದೆ ಶ್ರೀ ಎಸ್. ಶಿವಣ್ಣ ಹಾಗೂ ಡಾ. ವೀರಣ್ಣ ರಾಜೂರ ಅವರು ಇಂಥ ಲಘುಕೃತಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

ನಾಡಿನ ಇತಿಹಾಸ ರಚನೆಗೆ ಅಮೂಲ್ಯ ಅಂಶಗಳನ್ನು ಒದಗಿಸುವ ಐತಿಹಾಸಿಕ ಕಾವ್ಯಗಳ ಸಂಪಾದನಾಕಾರ್ಯವನ್ನು ಕೈಗೆತ್ತಿಕೊಂಡುದು ಒಂದು ವಿಶೇಷ. ಇಮ್ಮಡಿ ಚಿಕ್ಕಭೂಪಾಲಸಾಂಗತ್ಯ, ಕೊಲ್ಲಾಪ್ರರದ ನಿಂಬಸಾಮಂತ ಚರಿತೆ, ಕರಿಬಂಟನ ಕಾಳಗಕೃತಿಗಳು ಈ ವಿಶೇಷ ಸಾಧನೆಯ ಸಾರ್ಥಕ ಫಲಗಳೆನಿಸಿವೆ.

ಒಂದು ಅರಸು ಮನೆತನ ಹಾಗೂ ಅರಸುಮನೆತನದ ಒಬ್ಬ ಅರಸನ ಕಾಲಾವಧಿಯಲ್ಲಿ ರಚಿತವಾದ ಸಾಹಿತ್ಯಸಂಶೋಧನೆಯತ್ತ ಲಕ್ಷ್ಯವಹಿಸಿದರು. ಸಾ. ಶಿ. ಮರುಳಯ್ಯನವರ 'ಕೆಳದಿ ಅರಸರಕಾಲದ ಕನ್ನಡ ಸಾಹಿತ್ಯ', ವಿ. ಶಿವಾನಂದ ಅವರ 'ಪ್ರೌಢದೇವರಾಯನಕಾಲದ ಕನ್ನಡ ಸಾಹಿತ್ಯ' ಎಂಬಿವು ಈ ಮಾದರಿಯಲ್ಲಿ ಬರೆದ ಗ್ರಂಥಗಳಾಗಿರುತ್ತವೆ. ಡಾ. ಬಿ. ವ್ಹಿ. ಶಿರೂರ ಅವರ 'ಶ್ರವಣಬೆಳ್ಗೊಳ' ಕೃತಿಯೊಂದಿಗೆ ಸಾಂಸ್ಕೃತಿಕ ಕೇಂದ್ರವನ್ನು ವಸ್ತುವಾಗಿಸಿಕೊಂಡು ಅಭ್ಯಸಿಸುವ ಅಧ್ಯಾಯ ಆರಂಭವಾಯಿತು.

ಸಂಶೋಧನೆಗಾಗಿ ಆರಿಸಿಕೊಂಡ ವಿಷಯದ ಅಂಕಗಳ ತಲಸ್ಪರ್ಶಿಯಾದ ಪರಿಶೋಧನೆ ಕೆಲಸ ಈಗ ವ್ಯಾಪಕವಾಯಿತು. ಈ ಮೊದಲು ಸ್ತ್ರೀಯರು ಸಂಶೋಧನ ಕ್ಷೇತ್ರದಿಂದ ದೂರ ಉಳಿದಿದ್ದರು. ಆದರೆ ಡಾ. ಚೆನ್ನಕ್ಕ ಎಲಿಗಾರ, ಡಾ. ಡಿ. ವಿಜಯಾ, ಡಾ. ಶೈಲಜಾ ಉಡಚಣ, ಡಾ. ಆರ್. ಕೆ. ಪಾರ್ವತಿ, ಹನುಮಾಕ್ಷಿ ಗೋಗಿ ಮುಂತಾದವರು ಸಂಶೋಧನ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತರಾದುದು ಒಂದು ಶುಭ ಸೂಚನೆಯೆಂದೇ ಹೇಳಬೇಕು.

ಅನೇಕ ವರ್ಷಗಳಿಂದ ಪ್ರಕಟಿಸುತ್ತ ಬಂದ ಸಂಶೋಧನ ಲೇಖನಗಳನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಪ್ರವೃತ್ತಿ ಇಲ್ಲಿ ಎದ್ದು ಕಾಣುತ್ತದೆ. ಡಾ. ಎಂ. ಚಿದಾನಂದಮೂರ್ತಿಗಳ ಸಂಶೋಧನ–ತರಂಗ(೨), ಗ್ರಾಮೀಣ, ವಾಗರ್ಥ, ಡಾ. ಎಂ. ಎಂ. ಕಲಬುರ್ಗಿಯವರ ಶಾಸನವ್ಯಾಸಂಗ (ಭಾಗ : ೧, ೨), ಭೀಮರಾವ ಚಿಟಗುಪ್ಪಿ ಅವರ ಸಂಶೋಧನ ಪಂಚದಶಿ, ಹುಲ್ಲೂರ ಶ್ರೀನಿವಾಸರ ಸಂಶೋಧನ ಲೇಖನಗಳು, ಹಂಪನಾ ಅವರ ಕಮ್ಮಟದ ಕಿಡಿಗಳು ಇತ್ಯಾದಿ ಈ ನಿಟ್ಟಿನಲ್ಲಿ ಕಾಣಸಿಗುವ ಕೃತಿಗಳಾಗಿರುತ್ತವೆ.

ಹೀಗೆ ಕಳೆದದಶಕದಲ್ಲಿ ಮೂಡಿಬಂದ ಹಲವಾರು ಒಲವು ಕಾರಣವಾಗಿ ಸಂಶೋಧನೆ ಹತ್ತುಮುಖವಾಗಿ ಪ್ರವಹಿಸಿತು. ಸತ್ವ, ಗುಣಮಟ್ಟಗಳಲ್ಲಿ ತನ್ನದೇ ಆದ ಎತ್ತರವನ್ನು ಕಾಯ್ದುಕೊಂಡು ಬಂದಿತು.

ಅನೇಕ ಜನರು ಸಂಪಾದಿಸಿದ ಪ್ರಾಚೀನ ಗ್ರಂಥಗಳ ಸಂಪಾದನೆಯಲ್ಲಿ ಎ. ಆರ್. ಕೃ., ಟಿ. ಎಸ್. ವೆಂಕಣ್ಣಯ್ಯ, ತೀ. ನಂ. ಶ್ರೀ., ಡಿ. ಎಲ್. ಎನ್., ಹಾಗೂ ಎಸ್. ಎಸ್. ಬಸವನಾಳ ಮಾದರಿಯ ಶಾಸ್ತ್ರೀಯವಾದ ಪಾಠಶೋಧನ, ಪಾಠಪರಿಷ್ಕರಣಗಳು ಕಂಡುಬರುವುದಿಲ್ಲ. ಹೀಗಿದ್ದರೂ ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಂ. ಕಲಬುರ್ಗಿ, ಡಾ. ಎಲ್. ಬಸವರಾಜು, ಶ್ರೀ ಎಚ್. ದೇವೀರಪ್ಪ, ಎನ್. ಬಸವಾರಾಧ್ಯ ಮುಂತಾದವರು ಸಂಪಾದಿಸಿದ ಗ್ರಂಥಗಳಲ್ಲಿ ಗ್ರಂಥಸಂಪಾದನ ತತ್ವಗಳ ಗ್ರಹಿಕೆ, ಪಾಠಶೋಧನ–ಪಾಠಪರಿಷ್ಕರಣಗಳ ಹಿಂದೆ ಇರುವ ಆಳವಾದ ಅಧ್ಯಯನ, ಪಾಂಡಿತ್ಯ, ಸಂಶೋಧನ–ಪ್ರಯೋಗ ದೃಷ್ಟಿಗಳು ಎದ್ದು ಕಾಣುತ್ತವೆ.

೨

ಕಳೆದ ದಶಕದ ಸಮಗ್ರ ಸಂಶೋಧನೆಯನ್ನು ಸಮೀಕ್ಷಿಸಿದಾಗ ಕೆಲವೊಂದು ಕೃತಿಗಳಲ್ಲಿ ನ್ಯೂನತೆಗಳು ಉಳಿದುಕೊಂಡುದು ಮನದಟ್ಟಾಗುತ್ತದೆ. ಸಂಶೋಧನೆಯು ಸಾಮಗ್ರಿ ಸಂಕಲನ, ಸಂಕಲನವಾದ ಸಾಮಗ್ರಿಯ ವಿಶ್ಲೇಷಣೆಗಳಲ್ಲಿ ವ್ಯವಸ್ಥೆ, ವ್ಯವಧಾನಾದಿಗಳ ಬಗ್ಗೆ ಅನಾಸ್ಥೆ ಅಲ್ಲಿ ಗೋಚರಿಸುತ್ತದೆ. ತಾವು ಸಂಶೋಧನೆಗಾಗಿ ಆರಿಸಿಕೊಂಡ ವಸ್ತುವಿನ ಬಗಗೆ ಕೆಲವರಿಗ ಖಚಿತ ಜ್ಞಾನವಿಲ್ಲದಿರುವುದೂ ಗೊತ್ತಾಗುತ್ತದೆ. ತಾನು ಮಾಡುವ ಸಂಶೋಧನೆಯ ವಿಷಯದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನೆ ಎಷ್ಟು ? ವಿದ್ವಾಂಸರು ಅಲ್ಲಿ ಯಾವ ಸಮಸ್ಯೆಗಳನ್ನು ಎತ್ತಿದ್ದಾರೆ ? ಅವುಗಳಲ್ಲಿ ಯಾವವು ಇನ್ನೂ ಚರ್ಚಾಸ್ಪದವೆನಿಸಿವೆ ? ಮುಂತಾದ ಅಂಶಗಳ ಪರಿಜ್ಞಾನವಿಲ್ಲದೆ ತನಗ ತಿಳಿದ ಸಂಗತಿಗಳೆಲ್ಲವೂ ಹೊಸವೆಂದು ಭಾವಿಸಿಕೊಂಡು ಪುಟಗಳನ್ನು ತುಂಬಿಸಿ, (ಸಂಶೋಧನೆ ಅಲ್ಲದಿದ್ದರೂ) ಅದು ಸಂಶೋಧನೆಯೆಂದು ತೃಪ್ತಿಪಟ್ಟುಕೊಂಡಿರುವದು ತಿಳಿಯುತ್ತದೆ.

ಕೆಲವರ ಬರೆಹದಲ್ಲಿ ಬರುವ ಆಲಂಕಾರಿಕ ಭಾಷೆ, ಆಡಂಬರದ ಶೈಲಿ, ಕ್ಲಿಷ್ಟ ವಾದ ನಿರೂಪಣೆಗಳು ಸಂಶೋಧನೆಯನ್ನು ಮುಸುಕುಗೊಳಿಸಿಬಿಟ್ಟಿವೆ. ಇನ್ನು ಕೆಲವರ ಪ್ರತಿಪಾದನ ವಿಚಾರ, ನಿರೂಪಣ ವಿಧಾನಗಳು ಸುಲಭವಾಗಿ ಅರ್ಥವಾಗುವ ದಿಲ್ಲ. ಅವ್ಯವಸ್ಥಿತವಾದ ಆಲೋಚನೆ, ಶಿಥಿಲಶೈಲಿಗಳ ಮೂಲಕ ಸಂಶೋಧನ ಕೃತಿ (ಬುಧನ ಜಾತಕ, ಋಗ್ವೇದಸಾರ: ನಾಗಪ್ರತಿಮಾ ವಿಚಾರ, ವೈವಸ್ವತ ಮನು ಪ್ರಣೀತ ಮಾನವಧರ್ಮದ ಆಕೃತಿ)ಗಳು ಓದುಗರಿಂದ ದೂರ ಉಳಿಯುವ ಸ್ಥಿತಿ ಯನ್ನು ಪಡೆದುಕೊಂಡಿವೆ.

ಶ್ರದ್ಧೆಯ ಕೊರತೆಯಿಂದಾಗಿ ಬರೆವಣಿಗೆಯನ್ನು ಲಘುವಾಗಿ ಪರಿಭಾವಿಸಿದ ಪ್ರವೃತ್ತಿ ಅಲ್ಲಲ್ಲಿ ಪ್ರವೇಶಪಡೆದಿದೆ. ಅಧ್ಯಯನ ಹಾಗೂ ಪರಿಶ್ರಮಗಳಲ್ಲಿ ಅಭಾವ ಕಾಣಿಸಿಕೊಂಡಿದೆ. ಹೀಗಾಗಿ ಕೃತಿಯ ಒಡಲಲ್ಲಿ ಅವಸರದ ನಿರ್ಣಯಗಳನ್ನು ಬಿತ್ತುತ್ತ ನಡೆದಿರುವುದು ವ್ಯಕ್ತವಾಗುತ್ತದೆ. ಇದಲ್ಲದೆ ಸಂಶೋಧಕನಿಗೆ ವಿರೋಧ ವಾದ ಭಾವಾವೇಶ. ಭಾವೋದ್ರೇಕಗಳು ಅಲ್ಲಲ್ಲಿ ಮಿಂಚಿರುತ್ತವೆ.

ಸಂಶೋಧಕರು ಸಂಶೋಧನ ಲೇಖನಗಳಲ್ಲಿ ವೈಯಕ್ತಿಕ ದೋಷಾರೋಪಣೆಗೆ ತೊಡಗಿರುವುದು ಅತ್ಯಂತ ವ್ಯಸನದ ಸಂಗತಿ. ಇಂಥವರಿಂದ ಸಂಶೋಧನೆಗೆ ಕೆಟ್ಟ ಹೆಸರು ಬರುವದರಲ್ಲಿ ಸಂದೇಹವಿಲ್ಲ.

ಕೀರ್ತಿಪ್ರಲೋಭನೆ, ಆತುರದ ಪ್ರಕಟನ ಪ್ರವೃತ್ತಿಯಿಂದ ಕೆಲವು ಕೃತಿಗಳಲ್ಲಿ ಸಂಶೋಧನೆ ಸೊರಗಿದಂತಾಗಿದೆ. ಸಂಶೋಧನೆಯಲ್ಲಿ ತಾವು ಬಳಸಿಕೊಂಡ ವಿದ್ವಾಂಸರ ಅಭಿಪ್ರಾಯಗಳಿಗೆ ಆಕರಗಳನ್ನು ಸೂಚಿಸುವದಿಲ್ಲ. ಈ ಅಪ್ರಮಾಣಿ ಕತೆ ಸಂಶೋಧನೆ ಕೃತಿಯ ಗುಣಮಟ್ಟವನ್ನು ಕಡಿಮೆಯಾಗಿಸಿದೆ.

ಗ್ರಂಥದ ಅಂತ್ಯದಲ್ಲಿ ಗ್ರಂಥವಿವರಣ ಪಟ್ಟಿ (Bibliography) ಇರಬೇಕು. ಇದರಲ್ಲಿ ಸಂಶೋಧನಕಾರ್ಯಕ್ಕೆ ಬಳಸಿಕೊಂಡ ಗ್ರಂಥದ ಹೆಸರು, ಲೇಖಕರ ಹೆಸರು, ಪ್ರಕಾಶನ, ಪ್ರಕಟವಾದ ವರ್ಷ ಇತ್ಯಾದಿ ವಿವರಗಳು ಸ್ಥಾನಪಡೆಯಬೇಕಾಗುತ್ತದೆ. ಆದರೆ ಸಂಶೋಧಕರ ಉದಾಸೀನತೆಯಿಂದ ಇವುಗಳಲ್ಲಿ ಪರಿಪೂರ್ಣತೆ, ಏಕರೂಪತೆ ಕಾಣಿಸುವದಿಲ್ಲ. ಕೆಲವು ಸಲ 'ಗ್ರಂಥವಿವರಣಪಟ್ಟಿ' ಯಲ್ಲಿರುವ ಗ್ರಂಥಗಳಿಗೂ ಸಂಶೋಧನೆ, ಕೃತಿಯಲ್ಲಿ ಉಪಯೋಗಿಸಿಕೊಂಡಿರುವ ಗ್ರಂಥಗಳಿಗೂ ತಾಳಮೇಳ ವಿಲ್ಲ (ಗ್ರಂಥದ ಆವೃತ್ತಿಯ ವಿಚಾರದಲ್ಲಿ). ಇವು ಕೆಲವೊಮ್ಮೆ 'ಗ್ರಂಥವಿವರಣ ಪಟ್ಟಿಯಲ್ಲಿರುವ ಗ್ರಂಥಗಳ ಪ್ರಸ್ತಾಪವನ್ನು (ತಮ್ಮ) ಸಂಶೋಧನಕೃತಿಯಲ್ಲಿ ಎಲ್ಲಿಯೂ ಮಾಡಿರುವದಿಲ್ಲ. ಇದು ಸಂಶೋಧನ ಕೃತಿಗೆ ಕಲಂಕ ತರುವಂಥದು. ಕಾರಣ ಸಂಶೋಧನಕೃತಿಗಳು ಈ ಕಲಂಕದಿಂದ ಮುಕ್ತವಾಗಬೇಕಾಗಿದೆ.

ಬಹುಸಂಖ್ಯೆಯ ಕೃತಿಗಳಲ್ಲಿ ಕಂಡುಬರುವ ಅತಿದೊಡ್ಡ ಕೊರತೆಯೆಂದರೆ 'ಶಬ್ದಸೂಚಿ' ಇಲ್ಲದಿರುವದು. ಇದು ಗ್ರಂಥದ ಉಪಯುಕ್ತತೆಯನ್ನು ಕಡಿಮೆ

ಗೊಳಿಸುತ್ತದೆ. ಸಂಶೋಧನೆಯ ಪ್ರಸಂಗದಲ್ಲಿ ಬಳಸಿಕೊಂಡ ಸಂಕೇತ-ಸಂಕ್ಷೇಪಗಳಲ್ಲಿ ಹಾಗೂ ಅಡಿಟಿಪ್ಪಣಿಗಳಲ್ಲಿ ಒಂದು ವ್ಯವಸ್ಥೆ, ಏಕರೂಪತೆ, ಸ್ಪಷ್ಟತೆ ಗೋಚರಿಸುವದಿಲ್ಲ, ಕೆಲವರಂತೂ ಇವುಗಳನ್ನು ಕೈಗೆ ಬಂದಂತೆ ಬಳಸಿದ್ದಾರೆ. ಬಹಳಷ್ಟು ಸಂಶೋಧನ ಕೃತಿಗಳ ಮುಖಪುಟ ವಿನ್ಯಾಸ ಆಕರ್ಷಕವಾಗಿವೆ, ಅರ್ಥಪೂರ್ಣವೆನಿಸಿವೆ. ಹೀಗೆ ಮುಖಪುಟವಿನ್ಯಾಸದ ದೃಷ್ಟಿಯಿಂದ ಕೃತಿಗಳು ಮೈತುಂಬಿಕೊಂಡಿರುವದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಬರೆದುದನ್ನು ಮುದ್ರಿಸುವಲ್ಲಿ ತೋರಿದ ಔದಾಸೀನ್ಯದಿಂದ ಗ್ರಂಥದ ತುಂಬೆಲ್ಲ ಅಚ್ಚಿನ ದೋಷಗಳು ಎಡೆಪಡೆದಿರುತ್ತವೆ. ಈ ಅಚ್ಚಿನ ದೋಷಗಳು ಸಾಮಾನ್ಯವಾಗಿ ಬಹಳಷ್ಟು ಜನ ಸಂಶೋಧಕರ ಗ್ರಂಥಗಳಲ್ಲಿ ಗಾಢವಾಗಿರುವದು ಸ್ಪಷ್ಟವಾಗುತ್ತದೆ. ಇದು ಅಕ್ಷಮ್ಯವಾದಂಥದು. ಇಂಥ ಮುದ್ರಣಪ್ರಮಾದಗಳಿಂದ ಸಂಶೋಧನ ಕೃತಿಯ ಗುಣಮಟ್ಟ ಕಡಿಮೆಯಾಗುವದು. ಹೀಗೆ ಸಂಶೋಧನಕೃತಿಗಳಲ್ಲಿ ಕೆಲವೊಂದು ನ್ಯೂನತೆಗಳು ನಿರಾತಂಕವಾಗಿ ನಿಂತಿರುವದು ತಿಳಿದುಬರುತ್ತದೆ.

ಸಂಶೋಧನೆ ವ್ಯಕ್ತಿನಿಷ್ಠವಾದುದಲ್ಲ, ವಸ್ತುನಿಷ್ಠವಾದುದು. ವಸ್ತುನಿಷ್ಠ ಸತ್ಯವನ್ನು ಪ್ರಕಟಿಸುವದು ಸಂಶೋಧಕನ ಗುರಿ. ಆದರೆ ಇತ್ತಿತ್ತಲಾಗಿ ಸಂಶೋಧನೆಯ ಮೂಲತತ್ವಗಳನ್ನು ಅರಿಯದವರು ಸಂಶೋಧನೆಯನ್ನು ಸಂಶೋಧಕರನ್ನು ತಪ್ಪಾಗಿ ಅರ್ಥೈಸುವ ಕಾರ್ಯದಲ್ಲಿ ತೊಡಗಿದುದು ದುರದೃಷ್ಟಕರ.

ಸಂಶೋಧನೆಯಲ್ಲಿ ಕಲ್ಪನೆಗೆ ಅವಕಾಶವಿಲ್ಲ, ಊಹೆಗೆ ಅವಕಾಶವಿದೆ. ಇದ್ದ ಸಾಮಗ್ರಿಯ ಬಲದಿಂದ ಸಂಶೋಧಕನು ಊಹೆಯನ್ನು ಮಂಡಿಸಬಹುದು. ಆದರೆ ಈ ಊಹೆ ಕಾಲಾನಂತರದಲ್ಲಿ ಸತ್ಯವಾಗಿ ಪರಿಣಮಿಸಬಹುದು, ಇಲ್ಲವೆ ಬಿದ್ದು ಹೋಗಬಹುದು. ಆ ಮಾತು ಬೇರೆ. ಒಂದು ಮಾತು ಮಾತ್ರ ನಿಜ, ಇಂಥ ಊಹೆಗಳು ಸಂಬಂಧಿಸಿದ ಸಂಶೋಧನೆ ಮುಂದುವರೆಯಲು ದಾರಿಮಾಡಿಕೊಡುತ್ತವೆ. ಆಲೋಚನಾಪರವಾದ ಇಂಥ ಕೆಲವು ಪ್ರಯತ್ನಗಳು ಕಳೆದ ದಶಕದಲ್ಲಿ ನಡೆದವು. ಆದರೆ ಊಹೆ-ಕಲ್ಪನೆ-ನಿರ್ಣಯಗಳ ನಡುವಿನ ಅಂತರವನ್ನು ಅರಿಯಲಾರದವರು ಸಂಶೋಧನೆಯನ್ನು ತಪ್ಪಾಗಿ ಅಭಿಪ್ರಾಯಿಸುವಂತಾಯಿತು.

೩

ಹೀಗಿದ್ದರೂ ಕಳೆದ ದಶಕದಲ್ಲಿ ರಚಿತವಾದ ಮೌಲಿಕ ಸಂಶೋಧನ ಗ್ರಂಥಗಳಿಗೆ ಕೊರತೆಯಿಲ್ಲವೆಂದು ಹೇಳಬಹುದು. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ (ಡಾ. ಎಂ. ಎಂ. ಕಲಬುರ್ಗಿ), ಹೊಸಗನ್ನಡದ ಅರುಣೋದಯ (ಡಾ. ಶ್ರೀನಿವಾಸ ಹಾವನೂರ), ಹೊಸಗನ್ನಡ ಸಾಹಿತ್ಯದ ಉದಯ ಕಾಲ (ಡಾ. ರಾ. ಯ. ಧಾರವಾಡಕರ), ಹೊಸಗನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು (ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ), ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ (ಡಾ. ವರದರಾಜ ಹುಯಿಲಗೋಳ),

ಕವಿರಾಜಮಾರ್ಗ ಪ್ರಶಸ್ತಿ (ಭೀಮರಾವ ಚಿಟಗುಂಪ್ಪಿ), ಕನ್ನಡ ಹಸ್ತಪ್ರತಿಗಳ ಇತಿಹಾಸ (ಎಚ್. ದೇವೀರಪ್ಪ) ಮೊದಲಾದ ಸಂಶೋಧನ ಗ್ರಂಥಗಳು ಕಳೆದ ದಶಕದ ಸಂಶೋಧನೆಯ ಮೌಲಿಕತೆಯನ್ನು ಹೆಚ್ಚಿಸಿವೆ.

ಈ ಮೇಲಿನ ಸಂಶೋಧನ ಗ್ರಂಥಗಳಲ್ಲಿ "ವಿಸ್ತಾರವಾದ ವ್ಯಾಸಂಗ, ಖಚಿತವಾದ ವಿಷಯ ಪರಿಜ್ಞಾನ, ಸಂಶೋಧನ ತತ್ವಗಳ ಗ್ರಹಿಕೆ, ಹೊಸದನ್ನು ಹೇಳಬೇಕೆನ್ನುವ ಹಂಬಲ" ಗಳೊಂದಿಗೆ ಅಪಾರವಾದ ಶ್ರದ್ಧೆ ಪರಿಶ್ರಮ ಹಾಗೂ ಸಂಶೋಧನೆಗೆ ತಲಸ್ಪರ್ಶಿಯಾದ ಆಕರಗಳ ಪರಿಶೋಧನೆ ಇರುವುದು ವಿದಿತವಾಗುತ್ತದೆ. ಇದಲ್ಲದೆ ಡಾ. ಶಂ. ಬಾ. ಜೋಶಿ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಾ. ಎಲ್. ಬಸವರಾಜು, ಮೊದಲಾದವರ ಕೃತಿಗಳಲ್ಲಿಯೂ ಅಧ್ಯಯನದ ಆಳ, ಪ್ರಾಮಾಣಿಕತೆ ಪರಿಶ್ರಮಗಳನ್ನು ಗುರುತಿಸುತ್ತೇವೆ.

ಡಾ. ಶಂ. ಬಾ. ಜೋಶಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಕೆಲವು ಸಂಶೋಧನ ಲೇಖನ, ಅಭಿಪ್ರಾಯ ಹಾಗೂ ಗ್ರಂಥಗಳನ್ನು ಪ್ರಕಟಿಸುವಲ್ಲಿ ತೋರಿದ ಧೈರ್ಯ ಮೆಚ್ಚುವಂತಹದೂ ಅನುಕರಣೀಯವಾದುದೂ ಆಗಿದೆ. ಇಂಥ ಪ್ರಾಮಾಣಿಕ ಧೈರ್ಯ ಮಾತ್ರ ಸಂಶೋಧನೆಯನ್ನು ಬದುಕಿಸುತ್ತದೆ, ಬೆಳೆಸುತ್ತದೆ.

ಒಟ್ಟಿನಲ್ಲಿ ಮುಂದಿನ ದಶಕದ ಸಂಶೋಧನೆ, ಕಳೆದ ದಶಕದ ಸಂಶೋಧನ ಗ್ರಂಥ ಹಾಗೂ ಲೇಖನಗಳಲ್ಲಿ ಕಂಡುಬರುವ ನ್ಯೂನತೆಯ ಗುಂಜುಗಳನ್ನು ಬಿಡಿಸಿಕೊಂಡು, ಅಲ್ಲಿ ಮೂಡಿಬಂದ ಮೌಲಿಕತೆಯನ್ನು ಮೈಗೂಡಿಸಿಕೊಂಡು ಇನ್ನೂ ಅಸ್ಪೃಶ್ಯವಾಗಿ ಬಿದ್ದಿರುವ ಅನೇಕ ವಿಷಯಗಳತ್ತ ಗಮನ ಹರಿಸುವುದು ಅವಶ್ಯವಿದೆ.

●

ಶ್ರೀ ಅನಂತರಾವ್ ಜೋಷಿ ಅವರೊಡನೆ ಒಂದು ಸಂದರ್ಶನ

ಶಿ. ಕುಮಾರಸ್ವಾಮಿ

[ಐವತ್ತೇಳು ವರ್ಷದ ಶ್ರೀ ಅನಂತರಾವ್ ಜೋಷಿ ಅವರು ವೃತ್ತಿರಂಗಭೂಮಿ ಕಲಾವಿದರು ಹಾಗೂ ಜಮಖಂಡಿಯ 'ಶ್ರೀ ಗಜಾನನ ನಾಟಕ ಮಂಡಳಿ'ಯ ಮಾಲಿಕರು. ಕನ್ನಡನಾಡಿನ ರಂಗಭೂಮಿಯ ಇತಿಹಾಸಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಈ ನಾಟಕ ಮಂಡಳಿಯ ಜೀವ-ಭಾವ ಶ್ರೀ ಜೋಷಿ ಅವರು. ಸರಳಸ್ವಭಾವದ ಹಾಗೂ ಗಂಭೀರವಾಗಿ ಮಾತಾಡುವ ಶ್ರೀ ಜೋಷಿ ಅವರು ಹುಟ್ಟುಕಲಾವಿದರು : ತಮ್ಮ ಅಪೂರ್ವ ಕಲಾಪ್ರತಿಭೆಯಿಂದ ಪ್ರೇಕ್ಷಕರನ್ನು ರಂಜಿಸುವುದರೊಂದಿಗೆ ಕಲೆಯನ್ನೇ ನಂಬಿ ಬಾಳುವ ಇತರ ಕಲಾವಿದರಿಗೂ ಆಶ್ರಯವನ್ನಿತ್ತು ಬಹುಕಷ್ಟದಿಂದ ಹಿರಿಯರು ಕಟ್ಟಿಕೊಟ್ಟಿರುವ ಈ ನಾಟಕ ಸಂಸ್ಥೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ನಾಟಕ ಪ್ರದರ್ಶನಕ್ಕೆ ಅಗತ್ಯವಿರುವ ಎಲ್ಲ ಸಾಮಾನು-ಸರಂಜಾಮುಗಳನ್ನು ಒದಗಿಸಿಕೊಂಡಿರುವ ಇವರು ಹವಾಮಾನವನ್ನನುಸರಿಸಿ ಊರೂರು ತಿರುಗಿ ತಮಗೆ ಅಂಟಿ ಬಂದ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಒಮ್ಮೆ ಶಿವಮೊಗ್ಗಾ ಜಿಲ್ಲೆಯ ಬಿ. ಆರ್. ಪ್ರಾಜೆಕ್ಟಿನಲ್ಲಿ ಇವರು ನಾಟಕದ ಪ್ರದರ್ಶನದ ಡೇರೇ ಹಾಕಿದ್ದಾಗ ಶ್ರೀ ಜೋಷಿ ಹಾಗೂ ಅವರ ಇತರ ಕಲಾವಿದರನ್ನು ಸಂದರ್ಶಿಸುವ ಒಂದು ಅವಕಾಶ ಲಭಿಸಿತು. ಆ ಸಂದರ್ಶನದಲ್ಲಿ ಪ್ರಧಾನವಾಗಿ ಹಿರಿಯರಾದ ಶ್ರೀ ಜೋಷಿ ಅವರೊಂದಿಗೆ, ಅವರು ನಡೆಸಿಕೊಂಡು ಬರುತ್ತಿರುವ ನಾಟಕ ಮಂಡಳಿಯ ಆಗು-ಹೋಗುಗಳನ್ನು ಹಾಗೂ ಕನ್ನಡ ರಂಗಭೂಮಿಯನ್ನು ಕುರಿತು ಕೆಲವು ವಿಷಯಗಳನ್ನು ಪ್ರಸ್ತಾಪಿಸಲಾಯಿತು. ಈ ಪ್ರಸ್ತಾಪದಲ್ಲಿ ಅವರು ನೀಡಿದ ವಿವರಗಳು ಹಾಗೂ ಇಂದಿನ ರಂಗಭೂಮಿಯನ್ನು ಕುರಿತಂತೆ ಅವರು ಪಟ್ಟ ಅಭಿಪ್ರಾಯಗಳು ನಮ್ಮ ಸಮಕಾಲೀನ ರಂಗಭೂಮಿಯ ಸಂದರ್ಭದಲ್ಲಿ ಕೆಲವು ಗಮನಾರ್ಹ ಅಂಶಗಳನ್ನು ಒದಗಿಸುವುದರಿಂದ ಅವುಗಳನ್ನು ಸಂಕ್ಷಿಪ್ತವಾಗಿಯಾದರೂ ಓದುಗರೊಂದಿಗೆ ಹಂಚಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.]

ನಾನು : ನಮಸ್ಕಾರ, ಶ್ರೀ ಜೋಷಿ ಅವರಿಗೆ.

ಶ್ರೀ ಜೋಷಿ : ನಮಸ್ಕಾರ, ನೀವ್ಯಾರು ಅಂತ ನೆನಪಿಗೆ ಬರಲಿಲ್ವಲ್ಲಾ……

ನಾನು : ಇದೇ ಊರಿನಲ್ಲಿ ನಾಟಕದ ವಿಷಯವನ್ನು ಕುರಿತು ಓದುತ್ತಿರುವ ಒಬ್ಬ ವಿದ್ಯಾರ್ಥಿ. ನನ್ನ ಹೆಸರು ಕುಮಾರಸ್ವಾಮಿ ಅಂತ. ನಿನ್ನೆ

ರಾತ್ರಿ ನಿಮ್ಮ ಮಂಡಳಿಯವರು ಪ್ರದರ್ಶಿಸಿದ 'ಬಸ್ ಕಂಡಕ್ಟರ್' ಎಂಬ ನಾಟಕವನ್ನು ನೋಡಿದೆ, ತುಂಬಾ ಚೆನ್ನಾಗಿ ಬಂತು. ಈ ಸಂತೋಷದ ವಿಷಯವನ್ನು ತಿಳಿಸುತ್ತಾ, ತಮ್ಮ ನಾಟಕ ಮಂಡಳಿಯ ಇತಿಹಾಸದ ಬಗ್ಗೆ ತಿಳಿದುಕೊಳ್ಳಲು ತಮ್ಮಲ್ಲಿಗೆ ಬಂದಿದ್ದೇನೆ. ದಯವಿಟ್ಟು ತಾವು ಈ ಸಂಗತಿಗಳನ್ನು ತಿಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೋಷಿ : ತುಂಬಾ ಸಂತೋಷ. ನನಗೆ ಬಲ್ಲಷ್ಟನ್ನು ತಿಳಿಸುತ್ತೇನೆ, ಮೊದಲು ಯಾವ ವಿಷಯಕ್ಕೆ ಬರೋಣ ?

ನಾನು : ನಿಮ್ಮ ನಾಟಕ ಮಂಡಳಿ ನಡೆದು ಬಂದ ದಾರಿಯಿಂದ ಆರಂಭಿಸಬಹುದಲ್ಲವೇ ?

ಶ್ರೀ ಜೋಷಿ : ಆಗಬಹುದು. ೧೯೩೫ರಲ್ಲಿ ನಮ್ಮ ಹಿರಿಯ ಸಹೋದರರಾದ ಶ್ರೀ ದತ್ತಂಭಟ್ಟರು ಈ ಸಂಸ್ಥೆಯನ್ನು ಆರಂಭಿಸಿದರು. ಈ ಸಂಸ್ಥೆ ಇಲ್ಲಿಯವರೆಗೆ ನೂರಾರು ನಾಟಕಗಳನ್ನು ಪ್ರದರ್ಶಿಸಿದೆ. ನಾವು ಕರ್ನಾಟಕದ ಎಲ್ಲಾ ಪ್ರಮುಖ ಸ್ಥಳಗಳಲ್ಲಿಯೂ ಅಲ್ಲದೆ, ಮಹಾರಾಷ್ಟ್ರ, ತಮಿಳನಾಡು ಮತ್ತು ಆಂಧ್ರದ ಕೆಲವು ಗಡಿಪ್ರದೇಶಗಳಲ್ಲಿಯೂ ನಾಟಕಗಳನ್ನು ಪ್ರದರ್ಶಿಸಿದ್ದೇವೆ. ನಾವು ಪ್ರಾರಂಭದಲ್ಲಿ ಹೆಚ್ಚಾಗಿ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದೆವು. ಅಂದಿನ ಕಾಲಕ್ಕೆ ಪೌರಾಣಿಕ ನಾಟಕಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತು; ಜನ ಜಾತ್ರೆಯೇ ಸೇರುತ್ತಿತ್ತು. ಪೌರಾಣಿಕ ನಾಟಕಗಳ ಭವ್ಯ ರಂಗ ಸಜ್ಜಿಕೆ ನೋಡುಗರನ್ನು ಮೂಕರನ್ನಾಗಿಸುತ್ತಿತ್ತು. ಇಡೀ ರಾತ್ರಿಯೆಲ್ಲಾ ಪ್ರೇಕ್ಷಕರನ್ನು ಸೆರೆಹಿಡಿಯುತ್ತಿದ್ದ ಕಲಾವಂತಿಕೆ ಪೌರಾಣಿಕ ನಾಟಕಗಳಿಗೆ ಲಭಿಸಿತ್ತು. ಆದರೆ, ಬರಬರುತ್ತ ಸಾಮಾಜಿಕ ನಾಟಕಗಳಿಗೆ ಹೆಚ್ಚಿನ ಒಲವು ತೋರಿ ಪೌರಾಣಿಕ ನಾಟಕಗಳು ಕಡಿಮೆಯಾದವು. ಪ್ರೇಕ್ಷಕರ ಬದಲಾದ ಅಭಿರುಚಿಗೆ ತಕ್ಕಂತೆ ನಾವೂ ಸಹ ಬದಲಾಗುವುದು ತೀರಾ ಅನಿವಾರ್ಯವಾಯಿತು. ಆದರಿಂದಾಗಿ ಜನಪದ ಹಾಗೂ ಸಾಮಾಜಿಕ ಕಥೆಗಳನ್ನು ಅಳವಡಿಸಿ ನಾಟಕಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದೆವು. ಮನರಂಜನೆಯನ್ನೇ ಪ್ರಧಾನವಾಗಿ ಬಯಸಿ ಬರುವ ಪ್ರೇಕ್ಷಕರಿಗೆ ಸಂಸ್ಕೃತಿಯನ್ನುಳ್ಳ ಪೌರಾಣಿಕ, ಚಾರಿತ್ರಿಕ ನಾಟಕಗಳು ಬೇಡಾದುವು. ದಣಿದ ಶರೀರಕ್ಕೆ ಹಾಯೆನಿಸುವ ಹಾಸ್ಯ ಅವರಿಗೆ ಬೇಕು. ಸರಳವಾದ ಕಥೆ, ಸರಸವಾದ ಪಾತ್ರ ಹಾಗೂ ಸುಂದರವಾದ ದೃಶ್ಯ

ಗಳನ್ನು ಮಾತ್ರ ಬಯಸುವ ಪ್ರೇಕ್ಷಕವೃಂದ ಹೆಚ್ಚಾಯಿತು. ನೋಡುಗರಿಗೆ ಯಾವುದು ಅಗತ್ಯವೋ ಅದು ನಮಗೂ ಅಗತ್ಯ, ಅಲ್ಲವೆ ? ಆದುದರಿಂದಲೇ ಅವರು ಬಯಸುವುದಕ್ಕೆ ತಕ್ಕಂತೆ ನಾಟಕಗಳನ್ನು ಬರೆಸುತ್ತೇವೆ, ಅದನ್ನು ಅವರಿಗೆ ಒಪ್ಪುವ ರೀತಿಯಲ್ಲಿ ಪ್ರದರ್ಶಿಸುತ್ತೇವೆ.

ನಾವು ಪ್ರದರ್ಶಿಸಿದ ಜನಪ್ರಿಯ ನಾಟಕಗಳು : 'ಶ್ರೀಸತ್ಯನಾರಾಯಣಮಹಾತ್ಮೆ', 'ಟಿಪ್ಪುಸುಲ್ತಾನ್', 'ದೀಪಾವಳಿ' ಮುಂತಾದುವು. ಮೈಸೂರಿನ ಕಡೆ 'ದೀಪಾವಳಿ' ನಾಟಕವು ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ಈ ನಾಟಕಗಳಲ್ಲದೆ, 'ರತ್ನಮಾಂಗಲ್ಯ', 'ಲಂಬಾಣಿಹುಡುಗಿ', 'ಬಸ್‌ಕಂಡಕ್ಟರ್' ಮುಂತಾದ ನಾಟಕಗಳನ್ನು ಜನ ಮೆಚ್ಚಿಕೊಂಡಿದ್ದಾರೆ. ನಾಟಕಗಳನ್ನು ಪ್ರದರ್ಶಿಸುವುದಕ್ಕೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಒದಗಿಸಿಕೊಂಡಿದ್ದೇವೆ. ಮಳೆಗಾಲದಲ್ಲಿ ಬಿಟ್ಟು ಮಿಕ್ಕೆಲ್ಲಾ ಕಾಲದಲ್ಲಿ ಡೇರೇ ಕಟ್ಟಿ ನಾಟಕಗಳನ್ನು ಪ್ರದರ್ಶಿಸುತ್ತೇವೆ. ಮಳೆಗಾಲದಲ್ಲಿ ಎಲ್ಲಾ ವ್ಯವಸ್ಥೆಗಳಿರುವ ರಂಗಮಂದಿರಗಳು ದೊರೆತರೆ ನಾಟಕಗಳನ್ನು ಆಡುತ್ತೇವೆ. ನಮ್ಮ ಸಂಸ್ಥೆಯಲ್ಲಿ ಸುಮಾರು ಹದಿನೆಂಟು ಮಂದಿ ಕಲಾವಿದರಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಾವೆಲ್ಲರೂ ಕಷ್ಟನಷ್ಟಗಳನ್ನು ಅನುಭವಿಸಿದ್ದೇವೆ. ಒಮ್ಮೊಮ್ಮೆ ಕಲಾವಿದರೆಲ್ಲರೂ ಉಪವಾಸವಿದ್ದುದುಂಟು. ಆದರೂ ದಿಕ್ಕೆಡದೆ ಹ್ಯಾಗೋ ಸಾವರಿಸಿಕೊಂಡು ಈ ಮಂಡಳಿಯನ್ನು ಬೆಳೆಸಿಕೊಂಡು ಬರುತ್ತಿದ್ದೇವೆ. ನಮ್ಮ ನಾಟ್ಯಕಲೆ ಪ್ರದರ್ಶನಗೊಳ್ಳುವುದು ಜನರಿಗಾಗಿ. ಜನರು ಆನಂದಗೊಂಡರೆ ನಮಗೆ ಒಂದು ತುತ್ತು ಅನ್ನ, ಇಲ್ಲದಿದ್ದರಂತೂ ಹೊಟ್ಟೇಮೇಲೆ ತಣ್ಣೀರು ಬಟ್ಟೆ. ಈವರೆಗೆ ನಾಟಕಾಭಿಮಾನಿಗಳೆಲ್ಲರೂ ನಮ್ಮ ನಾಟಕಗಳನ್ನು ಮೆಚ್ಚಿದ್ದಾರೆ; ಕಷ್ಟಕಾಲದಲ್ಲಿ ಹಣಸಹಾಯ ನೀಡಿ ಪ್ರೋತ್ಸಾಹಿಸಿದ್ದಾರೆ. ಅವರೇ ಇಂದಿಗೂ ಈ ಸಂಸ್ಥೆ ಜೀವಂತವಾಗಿರಲಿಕ್ಕೆ ಕಾರಣರು.

ನಾನು : ನಿಮ್ಮ ನಾಟಕಮಂಡಳಿಗೆ ಸರಕಾರದ ಪ್ರೋತ್ಸಾಹವಿಲ್ಲವೆ ?

ಶ್ರೀ ಜೋಷಿ : ಎಲ್ಲಿ ಬಂತು. ಯಾವ ಕಾಲಕ್ಕೂ ನಮಗೆ ಪ್ರೇಕ್ಷಕರೇ ಶ್ರೀ ರಕ್ಷೆ. ನಾವು ಈ ಸಂಸ್ಥೆ ಸ್ಥಾಪಿಸಿ ನಾಲ್ವತ್ತೇಳು ವರ್ಷಗಳೇ ಕಳೆದಿದ್ದರೂ ಸರಕಾರ ನಮಗೆ ಯಾವುದೇ ರೀತಿಯ ಪ್ರೋತ್ಸಾಹ ನೀಡಿಲ್ಲ. ರಂಗ ತಂಡಗಳೆಂದರೆ ಏನೋ ನಿರ್ಲಕ್ಷ್ಯ, ಏನೋ ಕೀಳು ಧೋರಣೆ. ಇದರಿಂದಾಗಿಯೇ ನಾವು ನಮ್ಮ ವೃತ್ತಿ ರಂಗಭೂಮಿ ಹೊಸಹೊಸ

ತಾಗಿ ಬೆಳೆಯುವುದಕ್ಕೆ ತುಂಬಾ ಕಷ್ಟ ಎಂದು ಹೇಳುತ್ತಾ ಬಂದಿರುವುದು. ಈ ಮಾತು ಇನ್ನೂ ಯಾರ ಕಿವಿಗೂ ಬಿದ್ದಿಲ್ಲ. ಸರಕಾರದ ಸಹಾಯವಿದ್ದಲ್ಲಿ ಯಾವುದೇ ನಾಟಕ ತಂಡದವರೂ ಬೆಳೆಯಲು ಸಾಧ್ಯ. ದಿನಕಳೆದಂತೆ ಪ್ರೇಕ್ಷಕರು ಹೊಸಹೊಸದನ್ನು ಬಯಸಿ ಬರುತ್ತಾರೆ, ಅವರು ಬಯಸಿದ್ದನ್ನು ನಾವು ತಂದುಕೊಡಲು ಈ ಕಾಲದಲ್ಲಂತೂ ಸಾಧ್ಯವಾಗುವದಿಲ್ಲ. ಆಗ ಸಹಜವಾಗಿ ಪ್ರೇಕ್ಷಕ ಆಕರ್ಷಕ ಮಾಧ್ಯಮಗಳಿಗೆ ಮಾರು ಹೋಗುತ್ತಾನೆ. ಹೀಗಾದಾಗ ನಮ್ಮ ಸಾಂಪ್ರದಾಯಿಕ ರಂಗಭೂಮಿ ಬೆಳೆಯಲು ಸಾಧ್ಯವೆ ? ಹೀಗೆಂದ ಮಾತ್ರಕ್ಕೆ ಯಾವುದೇ ನಾಟಕಮಂಡಳಿಗೆ ಸರಕಾರದ ಪ್ರೋತ್ಸಾಹ ದೊರೆತಿಲ್ಲ ಎಂದಲ್ಲ. ದೊರೆತಿದೆ. ಆದರೆ, ದಿನೇ ದಿನೇ ಮುಚ್ಚುವ ಸ್ಥಿತಿಗೆ ಬರುತ್ತಿರುವ ಬಡ ನಾಟಕಮಂಡಳಿಗಳಿಂದ ಸರಕಾರ ಏಕೋ ಏನೋ ದೂರವಿದೆ. ಒಮ್ಮೆ, ನಮ್ಮ ನಾಟಕಮಂಡಳಿಗೆ ಸರಕಾರದ ಪ್ರೋತ್ಸಾಹ ಒದಗುವುದರಲ್ಲಿತ್ತು. ಆದರೆ, ನಮ್ಮ ಹಣೆಬರಾನೋ ಏನೋ ಕೆಲವು ಕಾರಣಗಳಿಂದಾಗಿ ಅದು ಕೈಗೆ ದಕ್ಕಲಿಲ್ಲ, ಒಟ್ಟನಲ್ಲಿ, ನಾಟಕಗಳು ಚೆನ್ನಾಗಿ ನಡೆದರೆ ನಮ್ಮ ಬಾಳು ನಡೆಯುತ್ತೆ. ಇಲ್ಲದಿದ್ದರೆ ನಮ್ಮ ಬಾಳು ಯಾವತ್ತಿಗೂ ಗೋಳು.

ನಾನು : ಕಲಾಸೇವೆಗಾಗಿಯೇ ಮುಡಿಪಾಗಿರುವ ನಿಮ್ಮಂತಹ ಕಲಾವಂತರಿಗೆ ಸರಕಾರದ ಪ್ರೋತ್ಸಾಹ ಸಿಗದಿದ್ದುದು ನಿಜಕ್ಕೂ ವಿಷಾದನೀಯ. ಈಗಲಾದರೂ ಸರಕಾರ ನಿಮ್ಮ ಸೇವೆಗೆ ಮಾನ್ಯತೆ ನೀಡಿ, ನಿಮ್ಮ ಕಲೆ ಹಾಗೂ ಕಲಾಮಂಡಳಿಯ ಬೆಳವಣಿಗೆಗೆ ಸಹಕಾರಿಯಾದೀತೆಂದು ನಂಬುತ್ತೇನೆ.

ಶ್ರೀ ಜೋಷಿ : ಏನೋ... ಎಂತೋ.. ? ಈಗ ಮತ್ಯಾವ ವಿಷಯ ಕೇಳಬೇಕು ಅಂತಿದ್ದೀರಿ ?

ನಾನು : ನಿಮ್ಮ ಪ್ರಕಾರ ರಂಗಭೂಮಿ ಅಂದು ಹೇಗಿತ್ತು ? ಇಂದು ಹೇಗಿದೆ ?

ಶ್ರೀ ಜೋಷಿ ; ಅಂದಿಗೂ ಇಂದಿಗೂ ತುಂಬಾ ಬದಲಾಗಿದೆ. ಒಂದು ಸಂಸ್ಕೃತಿ, ಘನತೆ ಅಂದಿನ ರಂಗಭೂಮಿಯ ಜೀವಾಳವಾದರೆ, ಇಂದಿನವರಿಗೆ ನಾಗರಿಕತೆ, ವೈಚಾರಿಕತೆ ಮುಖ್ಯವಾಗಿದೆ. ಅಂದು ದೇಶೀಕಲೆಗಳಿಗೆ ಮಹತ್ವ ಹೆಚ್ಚಾಗಿದ್ದರೆ, ಇಂದು ಪಾಶ್ಚಾತ್ಯ ಅನುಕರಣೆಗೆ ಹೆಚ್ಚಿನ ಮನ್ನಣೆ ದೊರೆತಿದೆ. ಅಂದು ಸಾಭಿನಯ, ಕಲಾಯುಕ್ತ ನಾಟಕಗಳು ಹೆಚ್ಚು. ಅಂದಿನ ನಾಟಕಗಳ ಪ್ರಪಂಚ ವೈವಿಧ್ಯಮಯ. ಹೆಚ್ಚಾಗಿ ಅಂದು ಪೌರಾಣಿಕ ನಾಟಕಗಳೇ ಪ್ರದರ್ಶಿತಗೊಳ್ಳು

ತ್ತಿದ್ದುದರಿಂದ ಭವ್ಯವಾದ ರಂಗಸಜ್ಜಿಕೆಗಳಿಗೆ ಹೆಚ್ಚು ಗಮನ ನೀಡಲಾಗುತ್ತಿತ್ತು. ಇಂದು ಜಾರಿಯಲ್ಲಿರುವ ಬೆಳಕಿನ ತಾಂತ್ರಿಕ ವ್ಯವಸ್ಥೆ ಅಂದಿರಲಿಲ್ಲ. ಸಂಗೀತಕ್ಕೆ ಅಂದಿನ ನಾಟಕಗಳಲ್ಲಿ ಹೆಚ್ಚಿನ ಸ್ಥಾನವಿತ್ತು. ಸಂಗೀತ ಹಾಗೂ ಅಭಿನಯಗಳೆರಡರಲ್ಲಿಯೂ ಪರಿಶ್ರಮವುಳ್ಳ ಕಲಾವಿದರಿದ್ದರು. ರಂಗವೇದಿಕೆಯ ಮೇಲೆ ಸ್ವತಃ ನಟರೇ ಹಾಡಿ ಅಭಿನಯಿಸಬೇಕಾಗಿತ್ತು. ಆದರೆ, ಇಂದು ಎರಡಾಣೆ ಭಾಗ ಸಂಗೀತವಿದ್ರೆ ಸಾಕು. ನಮಗೆ ಸಂಗೀತ ಅನಿವಾರ್ಯ. ಇವರಿಗೆ ಸಂಗೀತ ಭಾಗಶಃ. ನಮ್ಮ ಸಂಗೀತ ಶಾಸ್ತ್ರೀಯವಾಗಿದ್ದರೆ ಈಗ ಜಾನಪದೀಯ ದಾಟಿ ಅಥವಾ ಚಲನಚಿತ್ರದ ಮೋಹಕ ಸಂಗೀತಕ್ಕೆ ಹೆಚ್ಚಿನ ಬೆಲೆ. ನಮ್ಮ ಕಾಲಕ್ಕೆ ಹಾಸ್ಯ ಪ್ರಧಾನವೆನಿಸಿದ್ದರೂ ಅದಕ್ಕೆ ಒಂದು ಮಿತಿ ಇತ್ತು. ಇಂದು ಹಾಸ್ಯ ಇದೆ; ಮಿತಿಯಿಲ್ಲ ಎನಿಸುತ್ತದೆ.

ಅಂದಿಗೂ ಇಂದಿಗೂ ನಮ್ಮ ರಂಗಭೂಮಿಯಲ್ಲಿ ಸಾಕಷ್ಟು ಅಂತರವಿರುವುದಕ್ಕೆ ಕಾರಣ, ಪ್ರೇಕ್ಷಕರ ಬದಲಾಗಿ ಅಭಿರುಚಿ. ನಮ್ಮ ಸಾಮಾನ್ಯ ಬದುಕಿನಲ್ಲಿ ತೋರಿದ ಹಲವು ಹೊಸತನಗಳಿಂದಾಗಿ ಈ ರೀತಿಯ ಹೊಸ ಬದಲಾವಣೆಗಳು ಕಾಣಿಸಿಕೊಂಡವು ನಿಜ. ಆದರೆ, ಪರಂಪರಾಗತವಾದ ಮೌಲ್ಯಗಳನ್ನು ಉಳಿಸಿಕೊಂಡು ಬಂದಿರುವ ಸಾಂಪ್ರದಾಯಿಕ ರಂಗಭೂಮಿಯನ್ನು ಒಕ್ಕಣ್ಣಿನಿಂದ ನೋಡುವುದು ಸರಿಯೇ ? ಕೆಲವು ಜನಪ್ರಿಯ ಮಾಧ್ಯಮಗಳು ತಲೆ ಎತ್ತಿದಂತೆ ನಮ್ಮ ರಂಗಭೂಮಿಯ ಸ್ಥಾನ ಆತಂಕದ ಸ್ಥಿತಿಯಲ್ಲಿತ್ತು. ೧೯೩೩ ರಿಂದ ೧೯೫೦ರ ವರೆಗೆ ರಂಗಭೂಮಿಯ ಪರಿಸ್ಥಿತಿ ತೀರಾ ಗಂಭೀರವಾಗಿತ್ತು. ಮುಂದೆ ಹವ್ಯಾಸಿ ತಂಡಗಳು ಹುಟ್ಟಿಕೊಂಡಿದ್ದರಿಂದ ಈ ಆತಂಕದ ಪರಿಸ್ಥಿತಿ ಎಷ್ಟೋ ಸುಧಾರಿಸಿತು. ಒಟ್ಟಿನಲ್ಲಿ, ನಮ್ಮ ಅಂದಿನ ರಂಗಭೂಮಿ ಇಂದು ಸಿಗುವುದು ವಿರಳ. ಅಂದಿನ ಕಾಲದಲ್ಲಿ ದೊರಕುತ್ತಿದ್ದ 'ಆತ್ಮಸಂತೋಷ' ಇಂದಿಲ್ಲ. ಅಂದಿನ ಕಲಾವಿದರು 'ಆತ್ಮಸಂತೋಷಕ್ಕೆ' ಹೆಚ್ಚು ಮಹತ್ವ ನೀಡಿ ಅಭಿನಯಿಸುವುದು ಕಂಡುಬಂದರೆ ಇಂದು ವ್ಯಾವಹಾರಿಕ ವಿಚಾರಗಳಿಗೆ ಮಹತ್ವ ದೊರೆಯುತ್ತಿದೆ. ಇದು ತಪ್ಪು ಎಂದಲ್ಲ. ಅಭಿರುಚಿ ಹಾಗೂ ಕಾಲಕ್ಕೆ ತಕ್ಕಂತೆ ಬದಲಾವಣೆ ಅನಿವಾರ್ಯ. ಹೊಸ ಹೊಸ ಪ್ರಯೋಗಗಳಿಗೆ ಇಂದು ಹೆಚ್ಚಿನ ಪ್ರೋತ್ಸಾಹ ದೊರಕುತ್ತಿದೆ. ಅಭಿನಯಗಳನ್ನು ಕಲಿಸುವ ಶಾಲೆಗಳು ನಡೆದಿವೆ. ಈ ಪ್ರಯತ್ನದಲ್ಲಿ ಶ್ರೀ ಸುಬ್ಬಣ್ಣ ಅವರ ಸಾಧನೆ ದೊಡ್ಡದು. ಅವರು ಕಟ್ಟಿ,

ಬೆಳೆಸುತ್ತಿರುವ ರಂಗಭೂಮಿ ಬಹು ಸುಂದರ. ಅಲ್ಲಿ ರಂಗಭೂಮಿಯ ಬಗೆಗೆ ತರಗತಿಗಳು, ಪ್ರಯೋಗಗಳು, ವಿಚಾರಗಳು ನಡೆಯುತ್ತಿವೆ. ಒಟ್ಟಾರೆ, ಅಂದಿಗಿಂತಲೂ ಇಂದು ರಂಗಭೂಮಿ ವಿಸ್ತಾರವಾಗಿ ಬೆಳೆಯುತ್ತಿದೆ ಎಂಬುದು ಯಾರಿಗಾದರೂ ಸಂತಸ ತರುವ ಸಂಗತಿಯೆ.

ನಾನು : ರಂಗಭೂಮಿ ಕಲಾವಿದರ ಬದುಕು ಅಂದಿಗಿಂತ ಇಂದು ಸುಧಾರಿಸಿದೆಯೆ ?

ಶ್ರೀ ಜೋಷಿ : ಅಂದಿಗಿಂತಲೂ ಹೆಚ್ಚಾಗಿ ಇಂದು ಕಲಾವಿದರು ಮುಳ್ಳಿನ ಹಾಸಿಗೆಯಲ್ಲಿ ಹೊರಳಾಡಿ ತಮ್ಮ ಬದುಕನ್ನು ನೂಕುತ್ತಿದ್ದಾರೆ. ಅಂದು ನಾಟಕಕಲೆಯನ್ನು ಮೆಚ್ಚಿಕೊಳ್ಳುವ ಅಪಾರ ಜನರಿದ್ದರು. ಬೇರೆ ಮನರಂಜನಾ ಮಾಧ್ಯಮಗಳಿಲ್ಲದ ಅಂದಿನ ಕಾಲಕ್ಕೆ ನಾಟಕಗಳು ಚೆನ್ನಾಗಿ ನಡೆದು ನಮ್ಮ ಬದುಕು ಸರಾಗವಾಗಿ ನಡೆಯುತ್ತಿತ್ತು. ಇಂದಾದರೋ, ದಿನದಿನಕ್ಕೂ ಆಕರ್ಷಕ ಮಾಧ್ಯಮಗಳು ತಲೆ ಎತ್ತುತ್ತಿರುವುದರಿಂದ ನಮ್ಮ ವೃತ್ತಿ ರಂಗಭೂಮಿ ಪ್ರೇಕ್ಷಕರನ್ನು ಕಳೆದುಕೊಳ್ಳುತ್ತಿದೆ. ಪ್ರೇಕ್ಷಕರೇ ಬರದಿದ್ದರೆ ನಾಟಕ ಪ್ರದರ್ಶನ ಯಾರಿಗಾಗಿ ನಡೀಬೇಕು, ಹೇಳಿ ? ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುವ ಪ್ರತಿನಿಧಿಗಳಾಗಂವ ಹಾಗೂ ನೊಂದ ಮನಸ್ಸಿಗೆ ಕ್ಷಣವಾದರೂ ಹಿತವನ್ನುಂಟುಮಾಡುವ ನಾವು ನಿಜ ಜೀವನದಲ್ಲಿ ಸಂತಸಗೊಂಡಿರುವ ದಿನಗಳು ಅತ್ಯಲ್ಪ. ನೋಡಿ : ಎಲ್ಲರ ಬಾಳಿನಲ್ಲಿಯೂ ಒಂದೊಂದು ಕಲೆ ಇರುತ್ತದೆ; ಅದನ್ನು ಗುರುತಿಸುವ ಪ್ರೋತ್ಸಾಹಿಸುವ ಮನೋಭಾವವನ್ನು ಹೆಚ್ಚು ಮಂದಿ ಬೆಳೆಸಿಕೊಂಡಾಗ ಕಲೆಯು ವ್ಯಾಪಕ ಬೆಳವಣಿಗೆ ಸಾಧ್ಯ, ಕಲಾವಿದನಾಗಿ ನಾನು ಹೇಳುವ ಒಂದೇ ಒಂದು ಕಡೆಯಮಾತೆಂದರೆ: ಕಲಾವಿದರನ್ನು ಕೀಳಾಗಿ ಕಾಣಬೇಡಿರಿ, ಅವರಿಗೂ ಸಹ ನಮ್ಮಂತೆಯೇ ಒಂದು ಬದುಕಿದೆ ಎಂಬುದನ್ನು ಮಾತ್ರ ಮರೆಯಬೇಡಿರಿ. ಇದೊಂದು ಮಾತನ್ನಾದರೂ ಎಲ್ಲರೂ ತಿಳಿದುಕೊಂಡರೆ ನಮ್ಮ ಬಾಳು ಎಷ್ಟೋ ಸುಧಾರಿಸುತ್ತದೆ.

ನಾನು : ನೀವು ಹೇಳಿದಂತೆ ಕಲಾವಿದರ ಬದುಕು ಸಾಕಷ್ಟು ಸುಧಾರಿಸಿಲ್ಲ. ಸರಕಾರ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದರೂ ಅದು ಸಾಲದಾಗಿದೆ. ಸರಕಾರದ ಪ್ರೋತ್ಸಾಹ ಕಲಾವಿದರಿಗೆ ಹಾಗೂ ಕಲಾಮಂಡಳಿಗಳಿಗೆ ನಿರಂತರ ಇರಬೇಕಾದುದು. ನೀವು ಕಡೆಯಲ್ಲಿ ಹೇಳಿದ ಒಂದು ಮಾತು ನಮ್ಮ ಈಗಿನ ಕಲಾಸಕ್ತಿ ಯಾವ ಬಗೆಯದು ಎಂಬುದನ್ನು ತೋರಿಸುತ್ತದೆ. ಕಲಾವಿದರನ್ನು ಕೀಳಾಗಿ ಕಾಣುವ ಪ್ರವೃತ್ತಿ

ಇಂದಿಗೂ ಉಳಿದುಕೊಂಡಿರುವುದು ನಮ್ಮ ಒಂದು ದೊಡ್ಡ ದುರಂತ. ಎಲ್ಲಿಯವರೆಗೆ ಕಲೆ ಹಾಗೂ ಕಲಾವಿದರಲ್ಲಿ ಗೌರವಭಾವನೆಗಳನ್ನು ಉಳಿಸಿ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಈ ದುರಂತವನ್ನು ತಪ್ಪಿಸಲಿಕ್ಕೆ ಸಾಧ್ಯವೇ ಇಲ್ಲವೇನೋ ಎನಿಸುತ್ತಿದೆ. .... ಈ ದಿವಸ ನಿಮ್ಮೊಂದಿಗೆ ಕಳೆದ ಕೆಲವು ಕ್ಷಣಗಳು ತುಂಬಾ ಬೆಲೆಯುಳ್ಳದ್ದು. ನನಗೆ ತಿಳಿಯದ ಎಷ್ಟೋ ಅಂಶಗಳನ್ನು ತಿಳಿಸಿ, ನನ್ನಲ್ಲಿ ಕುತೂಹಲವನ್ನುಂಟು ಮಾಡಿದ್ದೀರಿ...... ನಿಮ್ಮೊಂದಿಗೆ ಮತ್ತಷ್ಟು ಮಾತನಾಡಬೇಕೆನಿಸುತ್ತಿದೆ. ಆದರೆ, ನಿಮಗೆ ಸಂಜೆಯು ನಾಟಕ ಪ್ರದರ್ಶನದ ಸಿದ್ಧತೆಯಿರುವುದರಿಂದ ಅದು ಸಾಧ್ಯವಿಲ್ಲದಾಗಿದೆ. ಮತ್ತೊಮ್ಮೆ ತಮ್ಮನ್ನು ಭೇಟಿಮಾಡಲು ಇಚ್ಛಿಸುತ್ತೇನೆ. ಬರುತ್ತೇನೆ. ನಮಸ್ಕಾರ.

ಶ್ರೀ ಜೋಷಿ : ಅಗತ್ಯವಾಗಿ ಬನ್ನಿರಿ. ನಮಸ್ಕಾರ.

ಶ್ರೀಮತಿ : ಓರ್ವ ಜೈನ ಕವಯಿತ್ರಿ

ಎಂ. ಎ. ಜಯಚಂದ್ರ

ಕವಿ ನೇಮರಸನ ಕಾವ್ಯಗಳು ಎರಡು. ಒಂದು ಸುದರ್ಶನ ಚರಿತೆ.[೧] ಮತ್ತೊಂದು ಲೋಭದತ್ತ ಚರಿತೆ.[೨] ಸುದರ್ಶನ ಚರಿತೆಯಿಂದ ಕವಿಯ ಕಾಲ ಕ್ರಿ. ಶ. ೧೪೮೪ ಎಂದು ತಿಳಿಯುವುದು.[೩] ಲೋಭದತ್ತ ಚರಿತೆಯಲ್ಲಿ ಪೂರ್ವಕವಿಗಳನ್ನು ನೆನೆಯುವ ಪದ್ಯ ಹೀಗಿದೆ—

> ಶ್ರೀಮತಿಯನು ಹಂಪನ ನಾಗಚಂದ್ರನ
> ನೇಮಿಯನಗ್ಗಳಯ್ಯನನು ।
> ರಾಮಣೀಯದ ಪೊನ್ನ ರನ್ನ ಜನ್ನನ ನೆನೆ
> ದೀ ಮಹಾಕೃತಿಯ ಪೇಳುವೆನು ॥ (೧–೧೩)

ಹಂಪ, ನಾಗಚಂದ್ರ, ನೇಮಿ, ಅಗ್ಗಳ, ಪೊನ್ನ, ರನ್ನ, ಜನ್ನ–ಈ ಮಹಾಕವಿಗಳ ಪಂಕ್ತಿಯಲ್ಲಿ 'ಶ್ರೀಮತಿ' ಯನ್ನು ನೇಮರಸ ಸ್ಮರಿಸಿದ್ದಾನೆ. ಆದ್ದರಿಂದ 'ಶ್ರೀಮತಿ' ಗಣ್ಯ ಕವಿ ಅಥವಾ ಕವಯಿತ್ರಿ ಆಗಿರಬೇಕು. ಹೆಸರು ಸ್ತ್ರೀಸೂಚಕದಂತಿರುವುದರಿಂದ ಶ್ರೀಮತಿ ಕವಯಿತ್ರಿ ಎಂದೇ ಭಾವಿಸಬಹುದು. ಉಪಲಬ್ಧ ಇತರ ಜೈನ ಕೃತಿಗಳಲ್ಲಿ ಈಕೆಯ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ.

ಆದರೆ ಸು. ಕ್ರಿ. ಶ. ೧೨೨೫ ರಲ್ಲಿದ್ದ ರಾಘವಾಂಕನ ಕೃತಿಯೊಂದರಲ್ಲಿ ಆನುಷಂಗಿಕವಾಗಿ ಈಕೆಯ ಪ್ರಸ್ತಾಪ ಬಂದಿದೆ. ರಾಘವಾಂಕನ ಸೋಮನಾಥ ಚಾರಿತ್ರದ[೪] ಕಥಾನಾಯಕ ಆದಯ್ಯ. ಈತ ಜೈನರನ್ನು ಭಂಗಪಡಿಸುತ್ತಾನೆ. ಆ ಪ್ರಸಂಗದ ಪದ್ಯವೊಂದು ಹೀಗಿದೆ—

> ನೇಮಿಯಂ ಕೆಡಕುತ್ತಿ ಮಲಧಾರಿಗಳನಿ ದು
> ಹೇಮಚಂದ್ರನನೊರಸಿ ಮಾಘನಂದಿಯ ಕೊಂದು

---

೧. ಸುದರ್ಶನ ಚರಿತೆ, ಸಂ : ಮಹೇಂದ್ರ, ಶುಭ ಪ್ರಕಾಶನ, ಬೆಂಗಳೂರು–18, 1979.

೨. ಲೋಭದತ್ತ ಚರಿತೆ, ಸಂ : ಬಿ. ಎಸ್. ಕುಲಕರ್ಣಿ, ಕ. ವಿ. ವಿ. ಧಾರವಾಡ, 1973.

೩. ನಯದಿಂದ ಶಕ ಸಾವಿರದ ನಾನೂರಾಜಿ । ನೆಯ ಕ್ರೋಧಿ ವತ್ಸರಾಂತ್ಯದೊಳು
ಜಯದಿಂದಲಿ ಸುದರುಶನ ಚರಿತೆಯತಿ । ಶಯ ಮುಗಿಯಿತು ಮುದದಿಂದ 11 (5–66)

೪. ಸೋಮನಾಥ ಚಾರಿತ್ರ ಸಂ : ಆರ್. ಸಿ. ಹಿರೇಮಠ ಮತ್ತು ಎಂ. ಎಸ್. ಸುಂಕಾಪುರ, ಕ. ವಿ. ವಿ. ಧಾರವಾಡ, 1967, (5–43)

ಶ್ರೀಮತಿಗಳಂ ಪಿಡಿದು ತ್ರೈವಿದ್ಯರಂ ತಂದು ತಾರುಕುಂಡೆಯು ಹಾಯಿಸಿ ।
ಭೂಮಿಂಗೊಜಗಿಸಿ ವರ್ಧಮಾನರಂ ಶ್ರುತಕೀರ್ತಿ
ನಾಮುಮಂ ತೊಡೆದು ಪಾರಿಸ ಮಾವನೆಂದು ಕಾ
ಯ್ದಾ ಮೂಲಸಂಘವಾಪುಲಿಸಂಘವೆಂಬುಭಯ[೫] ಸಂಘಮಂ ಭಂಗಿಸಿದನಂ ॥

ಮೇಲಿನ ಪದ್ಯದಲ್ಲಿ "ಆದಯ್ಯ ಸೋಲಿಸಿದನೆಂದು ಕೊಟ್ಟಿರುವ ವ್ಯಕ್ತಿಗಳೆಲ್ಲ ('ಪಾರಿಸ ಮಾವ' ನವರೆಗಿನ ವ್ಯಕ್ತಿಗಳು–ಪಾರಿಸನು ಆದಯ್ಯನ ಮಾವ) ಜೈನ ವಾಙ್ಮಯದ ಇತಿಹಾಸದಲ್ಲಿ ಸುಪ್ರಸಿದ್ಧರು. ಅವರೆಲ್ಲ ದೊಡ್ಡ ವಿದ್ವಾಂಸರು ಮತ್ತು ತಪಸ್ವಿಗಳು. ಆದಯ್ಯ ಬೇರೆ ಬೇರೆ ಜೈನರನ್ನು ಸೋಲಿಸಿದ ಎಂದು ವರ್ಣಿಸುವ ಭರದಲ್ಲಿ, ಆದಯ್ಯನ ಸಮಕಾಲೀನರಾಗಿರದೆ ಎಷ್ಟೊ ಹಿಂದೆ ಇದ್ದ, ತನಗೆ ಗೊತ್ತಿದ್ದ ಹೆಸರುಗಳನ್ನೆಲ್ಲ ರಾಘವಾಂಕ ಒಟ್ಟಿಗೆ ತಂದಿದ್ದಾನೆ ಎಂಬುದನ್ನು ಹೇಳಬೇಕಾಗಿಲ್ಲ. ಅವನ ಕೃತಿ ಇತಿಹಾಸವಲ್ಲ, ಕಾವ್ಯ— ಆದ್ದರಿಂದ ಅದೆಲ್ಲವೂ ಕ್ಷಮ್ಯವೇ."

ಮೇಲಿನ ಪದ್ಯಗಳೆರಡರಿಂದ ಕೆಲವು ನಿರ್ಧಾರಗಳು ಹೊರಬೀಳುವುದು. ರಾಘವಾಂಕನಿಗಿಂತ ಹಿಂದೆ, ಅಂದರೆ ಸು. ಕ್ರಿ. ಶ. ೧೨೨೫ ಕ್ಕಿಂತ ಹಿಂದೆ ಶ್ರೀಮತಿ ಇದ್ದಳು. ಎಷ್ಟು ಹಿಂದೆ ಎಂಬುದು ಇನ್ನೂ ತೆರೆದ ಪ್ರಶ್ನೆ. ಆಕೆ ಜೈನ ಸಮಾಜದಲ್ಲಿ ಸಾಕಷ್ಟು ಗೌರವಾನ್ವಿತಳಾಗಿ ಪ್ರಸಿದ್ಧಳಾಗಿರಬೇಕು. ಆದ್ದರಿಂದಲೇ ಆದಯ್ಯ ಆಕೆಯನ್ನು ಸೋಲಿಸಿದ ಎಂಬಂತೆ ಚಿತ್ರಿಸಿದ್ದಾನೆ. ಕವಿ ನೇಮರಸ ಕನ್ನಡದ ಪ್ರಸಿದ್ಧ ಜೈನ ಕವಿಗಳ ಸಾಲಿನಲ್ಲಿ ಆಕೆಯನ್ನು ನೆನೆದಿರುವುದರಿಂದ ಆಕೆಯೂ ಖ್ಯಾತ ಜೈನ ಕವಯಿತ್ರಿಯಾಗಿರಬೇಕು ಎಂಬುದರಲ್ಲಿ ಅನುಮಾನವಿಲ್ಲ.

ಶ್ರೀಮತಿಯ ಉಲ್ಲೇಖ ಕವಿಚರಿತೆಯಲ್ಲಾಗಲಿ, ಸಾಹಿತ್ಯ ಚರಿತ್ರೆಗಳಲ್ಲಾಗಲಿ ಇಲ್ಲ. ಆಕೆಯ ಯಾವ ಕೃತಿಯೂ ಇದುವರೆಗೆ ದೊರೆತಿಲ್ಲ. ವಿಶೇಷವಾಗಿ ಶೋಧಿಸಿದರೆ ಸಿಗಬಹುದೇನೋ.

---

೫. 'ಯಾಪನೀಯ (=ಬಾಪುಲಿ=ಆಪುಲಿ) ಸಂಘದ ಒಂದು ಅಪೂರ್ವ ಉಲ್ಲೇಖ', ಲೇ : ಎಂ. ಚಿದಾನಂದ ಮೂರ್ತಿ, ಸಾಧನೆ, ಪು 139–. (40–3). 1981.

ಸಿರದ ಗಾಳ-ಉರಿಯ ಉಯ್ಯಾಲೆ-ಮೊದಲೆಯ ಉಲಿ

ಎಂ. ಎಂ. ಕಲಬುರ್ಗಿ

ಆ ದೇವಿಯ ಜಾತ್ರೆಗೆ ಪೊಳೆ
ಪೊದೆಳಪೆಱ ಸಿರದ ಗಾಳವಟುರಿಯುಯ್ಯಾಲೆ ಕೈ ।
ಪೊದಸುಕೆ ಕೋಕಿಲಧ್ವನಿ
ಮೊದಲೆಯುಲಿಯಾಗೆ ಬಂದನಂದು ವಸಂತಂ ॥

ಜನ್ನನ ಯಶೋಧರ ಚರಿತೆಯ ಪದ್ಯವಿದು (೧-೩೬). ವಸಂತಮಾಸದಲ್ಲಿ ಚಂಡ ಮಾರಿದೇವತೆಗೆ ಪಶುಬಲಿ ಅರ್ಪಿಸುವ ಸಂದರ್ಭ. ಈ ಹಬ್ಬ ನಿಮಿತ್ತ ದೇವಿಯ ಆವರಣದಲ್ಲಿ ಜರುಗುತ್ತಲಿದ್ದ ಕ್ರೂರ ಆಚರಣೆಗಳನ್ನು ವಸಂತ ವ್ಯಾಪಾರಗಳ ಮೂಲಕ ಧ್ವನಿಸುತ್ತಾನೆ; ಕವಿ. ವಸಂತಮಾಸದ ಬಾಲಚಂದ್ರ ಶಿರದ ಗಾಳ, ಅಶೋಕವೃಕ್ಷ ಉರಿಯ ಉಯ್ಯಾಲೆ, ಕೋಕಿಲೆಯ ಧ್ವನಿ ಮೊದಲೆಯ ಉಲಿಯಂತೆ ಅಲ್ಲಿ ಕಾಣಿಸು ತ್ತಿದ್ದವು; ಕೇಳಿಸುತ್ತಿದ್ದವು. ಸಿರದ ಗಾಳ, ಉರಿಯ ಉಯ್ಯಾಲೆ, ಮೊದಲೆಯ ಉಲಿ–ಈ ಜಾನಪದ ಕ್ರೂರವಿಧಿಗಳ ವಿವೇಚನೆ ಇಲ್ಲಿ ಪ್ರಸ್ತುತವೆನಿಸಿದೆ.

ಸಿರದ ಗಾಳ : ಈ ಪದಕ್ಕೆ ಯಶೋಧರ ಚರಿತೆಯ ಸಂಪಾದಕ ಕೆ. ವ್ಹಿ. ರಾಘ ವಾಚಾರ್ ಅರ್ಥ ಹೇಳಿಲ್ಲ; ಇನ್ನೊಬ್ಬ ಸಂಪಾದಕ ತೆಕ್ಕುಂಜೆ ಗೋಪಾಲಕೃಷ್ಣಭಟ್ಟ "ತಲೆಯ ಗಾಳ" ಎಂದು ಸರಳ ಶಬ್ದಾರ್ಥ ಹೇಳಿದರೆ, ಮತ್ತೊಬ್ಬ ಸಂಪಾದಕ ಎಚ್. ಎಂ. ಶಂಕರನಾರಾಯಣರಾವ್ "ವಸಂತಕಾಲದಲ್ಲಿ ಬಂದ ಆ ದೇವಿಯ ಜಾತ್ರೆಗೆ, ಆ ಸಮಯದಲ್ಲಿ ಬಾಲಚಂದ್ರನು ಪ್ರಾಣಿಗಳ ತಲೆಗೆ ನೇತುಹಾಕಲು ಸಿಕ್ಕಿ ಸುವ ಗಾಳವೋ ಎಂಬಂತೆ ಕಾಣಿಸಿಕೊಂಡನು" ಎಂದು ವಿವರಣೆ ಹೇಳುತ್ತಾರೆ.

"ತಲೆಯ ಗಾಳ", "ಅದು ಪ್ರಾಣಿಗಳಿಗೆ ಸಂಬಂಧಿಸಿದುದು" ಎಂಬ ಈ ಅಭಿ ಪ್ರಾಯಗಳನ್ನು ಸಿ. ಪಿ. ಕೆ. ಒಪ್ಪುವುದಿಲ್ಲ. ಇಲ್ಲಿಯ 'ಸಿರ' ತಲೆ ಅರ್ಥದ ಸಂಸ್ಕೃತ 'ಶಿರಸ್' ಪದದ ತದ್ಭವವಲ್ಲ; ನರ, ಸ್ನಾಯು ಅರ್ಥದ ಸಂಸ್ಕೃತ ಸಿರಾ (ಶಿರಾ) ಪದದ ತದ್ಭವವೆಂದು ಹೇಳಿ, ಇದು ಬೆನ್ನಸ್ನಾಯುಗಳಲ್ಲಿ ಕಬ್ಬಿಣದ ಕೊಕ್ಕೆ ಸೇರಿಸಿ ಮನುಷ್ಯನನ್ನು ತೂಗಾಡಿಸುತ್ತಿದ್ದ 'ಸಿಡಿ ಸಂಪ್ರದಾಯ'ದ ಸೂಚನೆಯಾಗಿದೆಯೆನ್ನು ತ್ತಾರೆ. ಇನ್ನೂ ಮುಂದುವರಿದು ಇದೇ ಕೃತಿಯ ಬೇರೊಂದೆಡೆ ಬರುವ (೧–೫೫)

• ತಾಳಂಗೆಯನರ್ಚಿ ನೆತ್ತಿಯ
ಗಾಳಂ ಗಗನದೊಳೆಬಲ್ವ ವಾರಿಯ ಬೀರರ್ ।

ಪಾಳಿಯೊಳಿಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆಱದಿಂ ॥

ಎಂಬ ಪದ್ಯವನ್ನು ಗಮನಿಸಿ "ಇಲ್ಲಿಯೂ ತೂಗಾಡುವ ವೀರರ ಚಿತ್ರವುಂಟು. ಆದ್ದರಿಂದ 'ಸಿರದ ಗಾಳ', ಮತ್ತು 'ನೆತ್ತಿಯ ಗಾಳ' ಎರಡೂ ಅಭಿನ್ನವೇ ಅಥವಾ ಬೇರೆ ಬೇರೆಯೇ ಎಂಬುದು ವಿಚಾರಯೋಗ್ಯ. ಇಷ್ಟಂತೂ ನಿಶ್ಚಿತ: 'ಸಿರದ ಗಾಳ'ವೇ ಆಗಲಿ, 'ನೆತ್ತಿಯ ಗಾಳ'ವೇ ಆಗಲಿ, ತೂಗಾಡುತ್ತಿದ್ದವರು ಮನುಷ್ಯರೇ ವಿನಾ ಪ್ರಾಣಿಗಳಲ್ಲ" ಎಂಬ ನಿರ್ಣಯಕ್ಕೆ ಬಂದಿದ್ದಾರೆ.[೧]

ಆದರೆ ಹಳಗನ್ನಡ ಕಾವ್ಯಗಳಲ್ಲಿ ಬಾಲಚಂದ್ರನನ್ನು ಗಾಳಕ್ಕೆ ಹೋಲಿಸಿದ "ವಿರಹಿಗಳ ಗಂಟಲಗಾಳಂ..... ಕರಮೆಸೆವತ್ತಂದು ಕೊಂಕಿದೆಳವೆಱೆ ನಭದೊಳ್"[೨] ಎಂಬ ಉಪಮೆಯನ್ನು ಮನದಂದರೆ, 'ಸಿರದ ಗಾಳ'ವೆಂಬುದು 'ನೆತ್ತಿಯ ಗಾಳ', 'ಬೆನ್ನಗಾಳ'ಗಳನ್ನಲ್ಲ, ಗಂಟಲ ಗಾಳವನ್ನು ಸೂಚಿಸುತ್ತದೆ ಎಂಬ ಸಂದೇಹ ಹುಟ್ಟುತ್ತದೆ. 'ಗಂಟಲಗಾಳ' ಎಂಬ ಪದ ಜನಪದದಲ್ಲಿ ಇನ್ನೂ ಬಳಕೆಯಲ್ಲಿದೆ. ಕುತ್ತಿಗೆಯ ಸ್ನಾಯುಗಳಿಗೆ ಈಗಲೂ ಹಳ್ಳಿಗರು 'ಸಿರ' ಪದವನ್ನು ಬಳಸುತ್ತಾರೆ. "ಕೊರಳ ಸೆರೆ ಹಿಗ್ಗಿದವು ದೃಗುಜಲಮುರವಣಿಸೆ ಕಡುನೊಂದ" ಎಂಬ ಪ್ರಯೋಗ ಕುಮಾರ ವ್ಯಾಸನಲ್ಲಿದೆ. ಇನ್ನೂ ನಿಖರವಾಗಿ ಹೇಳಬೇಕೆಂದರೆ ಕುತ್ತಿಗೆಯ ಹಿಂಭಾಗಕ್ಕೆ 'ಸಿರ' ಎಂಬ ಅರ್ಥವನ್ನು ದ್ರಾವಿಡ ಭಾಷೆಗಳಲ್ಲಿ ಸಾಧಿಸಬಹುದಾಗಿದೆ.[೩] ಆದುದರಿಂದ 'ಸಿರ' ದ್ರಾವಿಡ ಪದವಾಗಿದ್ದು ಇಲ್ಲಿಯ 'ಸಿರದ ಗಾಳ' ಕುತ್ತಿಗೆಯ ಹಿಂಭಾಗಕ್ಕೆ ಚುಚ್ಚುವ ಸಿಡಿಯನ್ನು ಸೂಚಿಸುವ ಸಾಧ್ಯತೆಯಿದೆ.

ಉರಿಯ ಉಯ್ಯಾಲೆ : ಸಿರದ ಗಾಳದಂತೆ ಮಾರಿದೇವತೆಯ ಮುಂದೆ ಜರುಗುತ್ತಲಿದ್ದ ಇನ್ನೊಂದು ಜನಪದ ಕ್ರೂರ ಆಚರಣೆ ಉರಿಯ ಉಯ್ಯಾಲೆಯೆಂದು ಹೇಳುತ್ತಾನೆ, ಜನ್ನ. ಈ ಆಚರಣೆ ಇಂದು ಜರುಗುತ್ತಲಿರುವ ಸ್ಥಳವಾಗಲೀ, ಇದರ ಸ್ವರೂಪವಾಗಲೀ ನಮಗೆ ತಿಳಿದುಬಂದಿಲ್ಲ. ಬಹುಶಃ ನೆಲದ ಮೇಲೆ ಉರಿಯನ್ನುಂಟುಮಾಡಿ ಮರಕ್ಕೆ ಕಟ್ಟಿದ ಜೋಕಾಲಿಯಿಂದ ಆ ಉರಿಯಲ್ಲಿ ಜೀಕಿ ಹೋಗುವ ಸಂಪ್ರದಾಯವಿದಾಗಿರಬೇಕು— ಎಂದು ಊಹಿಸಬಹುದಾಗಿದೆ. ಮಂಡ್ಯಜಿಲ್ಲೆಯ ಕೃಷ್ಣರಾಜಪೇಟ ತಾಲೂಕಿನ ತೋಣಚಿ ಗ್ರಾಮದ ಶಾಸನ (೧೧೩೧ ? ೧೧೯೧ ?) ದಲ್ಲಿ "ನಮ ಸಿವಯ ಒಂದುರಿ ಉಯ್ಯಲನೇಱು...ಕಿಱುಹುವರು ಸಿವನ ಹಳಿವನ ಬಾಯೊಳು... . ಮುತ್ತಂಸ ಲೋಕೋದ್ಭವರು ಮ್ರಿಡನ ಮನೆ [ಮ] ಗಡ ಮಾರ್ಗ್ಗಮಾಂ" ಎಂಬ ಉಲ್ಲೇಖ ಬರುತ್ತದೆ.[೪] ಅರ್ಥ ಸ್ಪಷ್ಟವಾಗದಿದ್ದರೂ

೧. ಶೋಧನ – "ಸಿರದ ಗಾಳ" ಎಂದರೇನು ?
೨. ಸೂಕ್ತಿಸುಧಾರ್ಣವ, ಪುಟ ೨೩೧
೩. Dravidian Etymological Dictionary 2316.
೪. Ec.

ಇದು ಜನ್ನನ ಹೇಳಿಕೆಯನ್ನು ಸಮರ್ಥಿಸುವ ಆ ಕಾಲದ ಉಲ್ಲೇಖವಾಗಿದ್ದು, ಕೃಷ್ಣರಾಜಪೇಟೆ ಪ್ರದೇಶದಲ್ಲಿ ಕ್ಷೇತ್ರಕಾರ್ಯ ನಡೆಸಿ ಜಾನಪದ ವಿದ್ವಾಂಸರು ಈ ಆಚರಣೆಯನ್ನು ಶೋಧಿಸಬೇಕಾಗಿದೆ.

ಮೂದಲೆಯ ಉಲಿ : ಮಾರಿದೇವತೆಯ ಜಾತ್ರೆಯಲ್ಲಿ ಜರುಗುವ ಇನ್ನೊಂದು ಕೀಳು ವಿಧಿ ಮೂದಲೆ. ಸ್ವರೂಪ ಸ್ಪಷ್ಟವಾಗುವುದಿಲ್ಲವಾದರೂ ಇದು ಭಾಷೆಗೆ ಸಂಬಂಧಪಟ್ಟ ಕ್ರಿಯೆಯಾಗಿದ್ದು ಹೀಗಳೆಯುವಿಕೆ, ಸ್ಪರ್ಧಾತ್ಮಕವಾಗಿ ಹೀಗಳೆಯುವಿಕೆ ಎಂಬ ಅರ್ಥವಂತೂ ಖಚಿತ. ಆದುದರಿಂದ ಇದು ದೇವತೆಯ ಮುಂದೆ ಪ್ರಕಟವಾಗುತ್ತಲಿದ್ದ ಅಶ್ಲೀಲ ಮಾತು–ಗೀತರೂಪದ ಸಾಹಿತ್ಯವಾಗಿರಬಹುದು. ಜಾತ್ರೆಯಂಥ ವಿಶಿಷ್ಟ ಸಂದರ್ಭಗಳಲ್ಲಿ ಜಾನಪದ ಕ್ಷುದ್ರದೇವತೆಯನ್ನು ಪೊರಕೆಯಿಂದ ಹೊಡೆಯುವ[೫], ಬಯ್ಯುವ, ದೇವರದರ್ಶನಕ್ಕೆ ಬಂದ ಭಕ್ತರನ್ನು ಅವಾಚ್ಯವಾಗಿ ನಿಂದಿಸುವ, ದೇವರ ಸಮ್ಮುಖದಲ್ಲಿ–ದೈವಭಕ್ತರ ಸಮೂಹದಲ್ಲಿ ಅಶ್ಲೀಲ ಹಾಡು ಹೇಳುವ ಸಂಪ್ರದಾಯ ಈಗಲೂ ಕೆಲವೆಡೆ ಪೂರ್ಣ ಪ್ರಮಾಣದಲ್ಲಿ ಕಂಡು ಬರುತ್ತದೆ. ಇಷ್ಟೇ ಏಕೆ ಈ ದಿಗಂಬರಸಾಹಿತ್ಯ ಇಂಥ ದೈವತದ ಪೂಜೆಯ ಒಂದು ಭಾಗವಾಗಿ ಹೂವು–ಪತ್ರಿ ಮಂತ್ರ–ನೈವೇದ್ಯಗಳಂತೆ ಬಳಕೆಯಾಗುತ್ತದೆ. ಅಶ್ಲೀಲತೆಯ ಪ್ರಮಾಣ ಅಧಿಕವಾದಷ್ಟೂ ದೇವತೆಗೆ ಅಧಿಕತೃಪ್ತಿಯೆಂದು ಈ ಸಾಹಿತ್ಯವನ್ನು ಹೇಳುವ–ಕೇಳುವ ಭಕ್ತರ ನಂಬಿಕೆಯಾಗಿದೆ. ಇಂದಿಗೂ ಆಸಾದಿ ವೃತ್ತಿಗಾಯಕರು ಮಾರಿ ಮೊದಲಾದ ಕಿರುಕಳೆ ದೇವತೆಗಳ ಮುಂದೆ ನೇರವಾಗಿ ಇಲ್ಲವೆ ಸ್ಪರ್ಧಾತ್ಮಕವಾಗಿ ಅಶ್ಲೀಲ ಹಾಡುಗಳನ್ನು ಹೇಳುತ್ತಾರೆ, ಸುರಿಮಳೆಯಾಗಿ ಬಯ್ಗುಳವನ್ನು ಬಳಸುತ್ತಾರೆ.[೬] 'ದಿವಸ್ನಾಲೆ' ಎಂದು ಪ್ರತಿ ಪದ್ಯಕ್ಕೆ ಮುಕ್ತಾಯವಾಗುವ ಲೈಂಗಿಕ ಹಾಡುಗಳನ್ನು ಮಾರಮ್ಮನ ಮುಂದೆ ಏನೂ ಸಂಕೋಚವಿಲ್ಲದೆ ಸಾಭಿನಯವಾಗಿ ಹಾಡುತ್ತಾರೆ.[೭] ಇಂದು ಇಂಥ ಹಾಡುವಿಕೆ ಬಯ್ಯುವಿಕೆಗಳು ಸಾಮಾನ್ಯವಾಗಿ ಸ್ತ್ರೀದೇವತೆಗಳ ಮುಂದೆ[೮] ಅದರಲ್ಲಿಯೂ ಮಾರಿದೇವತೆಯ ಮುಂದೆ ಜರುಗುವುದನ್ನೂ ಜನ್ನ ಸೂಚಿಸಿದುದು ಮಾರಿದೇವತೆಯಾಗಿರುವುದನ್ನು ನೆನೆದರೆ ಯಶೋಧರ ಚರಿತೆಯ 'ಮೂದಲೆಯ ಉಲಿ' ಈ ಅಶ್ಲೀಲ ಸಾಹಿತ್ಯವಾಗಿರಬಹುದೆಂದೂ ಈ ಸಾಹಿತ್ಯದ ಪ್ರಾಚೀನ ಪಾರಿಭಾಷಿಕ ಪದ "ಮೂದಲೆ"ಯಾಗಿರಬೇಕೆಂದೂ ಅನಿಸುತ್ತದೆ.

---

೫. "ಸಮಗಾರದೇವರಿಗೆ ಮುಚ್ಚಪೆಟ್ಟು" ಎಂಬ ಗಾದೆ ಮಾತು ಒಂದು ಕಾಲದಲ್ಲಿ ದೇವರಿಗೆ ಪೊರಕೆಯಿಂದ ಹೊಡೆಯುವ ಪದ್ಧತಿಯ ಪಳೆಯುಳಿಕೆಯಾಗಿದೆ.

೬. ಬಸವರಾಜ ನೆಲ್ಲೀಸರ್ —

೭. ಎಂ. ಚಿದಾನಂದಮೂರ್ತಿ — ಗ್ರಾಮೀಣ, "ಶೂಲದ ಹಬ್ಬ"

೮. ಹನುಮಂತದೇವರ ಮುಂದೆ ಜರುಗುವ ಒಂದೆರಡು ಉದಾಹರಣೆಗಳಿವೆ. ಹೋಳಿ ಹಬ್ಬದಲ್ಲಿ ಜರುಗುತ್ತಿದ್ದರೂ ಅದು ಪ್ರಾಂತೀಯ ಜಾನಪದ ಹಬ್ಬವಲ್ಲ.

ಬಹುಶಃ ಇಂಥ ಮೂದಲಿಕೆಯ ಹಾಡು ಅಥವಾ ಮೂದಲಿಸುವ ಹಾಡು ಎಂಬುದೇ 'ಮಹಾಲ್ಸಿ ಹಾಡು' ಎಂದು ವ್ಯತ್ಯಸ್ತರೂಪದಲ್ಲಿ ಇಂದು ಬಳಕೆಯಾಗುತ್ತಿರಬಹುದು. ಇಂದು ನಮಗೆ ಶ್ಲೀಲ–ಅಶ್ಲೀಲ ರೂಪದ ಮಹಾಲ್ಸಿ ಹಾಡುಗಳು ಸಿಗುತ್ತಿದ್ದರೂ ಮೂಲತಃ ಇವು ಅಶ್ಲೀಲ ಪ್ರಧಾನ ಗೀತಗಳೇ ಆಗಿರಬೇಕು. ಏಕೆಂದರೆ ಇವುಗಳನ್ನು ಹಾಡುವ ದೊಂಬರ ಸ್ತ್ರೀಯರ ಮುಖ್ಯ ವೃತ್ತಿ ಸೂಳೆಗಾರಿಕೆಯಾಗಿದೆ. ಪುರುಷರ ತೃಪ್ತಿಗಾಗಿ, ಅವರನ್ನು ಸಾರ್ವಜನಿಕವಾಗಿ ಉನ್ಮತ್ತಗೊಳಿಸುವುದಕ್ಕಾಗಿ ಇವರು ದೇವರ ಹೆಸರಿನಲ್ಲಿ ಅಶ್ಲೀಲ ಹಾಡು ಹೇಳುವುದು ತೀರ ಸಹಜ. ಆದುದರಿಂದ 'ಮಹಾಲ್ಸೆ ಹಾಡು' ಇದರ ಪ್ರಾಚೀನ ಹೆಸರು 'ಮೂದಲಿಸುವ ಹಾಡು'ಎಂದು ಭಾವಿಸಬಹುದಾಗಿದೆ. ಇಂದು ಮಹಾಲ್ಸೆ ಹಾಡು ಸಂಪ್ರದಾಯ ಜನ್ನನ ಪರಿಸರದಲ್ಲಿ ಸಿಗುವುದನ್ನು ಇಲ್ಲಿ ನೆನೆಯಬೇಕು.[೯]

ಈ ವರೆಗೆ ವಿವರಿಸಿದ ಮೂರು ಜಾನಪದ ಕ್ರಿಯೆಗಳನ್ನಲ್ಲದೆ ಮಾಂಸ ನೈವೇದ್ಯ ಮತ್ತು ಕೆಂಡ ತುಳಿಯುವಿಕೆ(ಉರಿ-ಬಿಸಿಲ-ದಂಡ-ನಮಸ್ಕಾರ ?)ಗಳೆಂಬ ಇನ್ನೆರಡು ಸಂಪ್ರದಾಯಗಳನ್ನೂ ಜನ್ನ ಮುಂದಿನ ಪದ್ಯಗಳಲ್ಲಿ ಹೇಳಿದ್ದಾನೆ. ಹೀಗೆ ಇಲ್ಲಿ ಐದು ಜಾನಪದ ಕ್ರೂರ ಆಚರಣೆಗಳನ್ನು ಕಾಣಬಹುದಾಗಿದೆ. ಇದೆಲ್ಲವನ್ನು ಗಮನಿಸಿದರೆ ಸಾಹಿತ್ಯೇತರ ಪ್ರಯೋಜನ ದೃಷ್ಟಿಯಿಂದಲೂ ನಮ್ಮ ಪ್ರಾಚೀನ ಕೃತಿಗಳ ಅಧ್ಯಯನ ತುಂಬ ಮಹತ್ವದ್ದೆಂದು ಮನವರಿಕೆಯಾಗುತ್ತದೆ.

●

೯. ಎಚ್. ಎಂ. ಮಹೇಶ್ವರಯ್ಯ – ದೊಂಬರ ಮದಾಲ್ಸಿ ಪದಗಳು.

ಭಾಷಾ ಬಾಂಧವ್ಯ : ವೈಜ್ಞಾನಿಕ ದೃಷ್ಟಿ

ಕೆ. ಜಿ. ಶಾಸ್ತ್ರಿ

ಇದಮಂಧತಮಃ ಕೃತ್ಸ್ನಂ ಜಾಯೇತ ಭುವನತ್ರಯಂ ।
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಂ ನ ದೀಪ್ಯತೇ ॥

ಭಾಷೆಯ ಬೆಳಕು ಬೆಳಗದಿದ್ದರೆ ಭುವನತ್ರಯವೂ ಭಾರೀ ಕತ್ತಲೆಯ ತುತ್ತಾಗುತ್ತಿತ್ತು. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂವಾದವಾಗಲೀ, ಸಾಮೂಹಿಕ ವ್ಯಾವಹಾರಿಕ ಸಂಪರ್ಕವಾಗಲಿ, ಜಾನಾಂಗಿಕ ಸಾಂಸ್ಕೃತಿಕ ಸಂವಹನವಾಗಲಿ ದುಸ್ಸಾಧ್ಯವೇ ಆಗುತ್ತಿತ್ತು. ಭಾಷೆಯು ಸಂಯೋಜನೆಯ ಕಲ್ಪನೆಯೇ ಮಾನವ ಬುದ್ಧಿಯ ಶ್ರೇಷ್ಠತಮ ಸಂಶೋಧನೆ ಎಂದರೂ ತಪ್ಪಲ್ಲ. ಈ ಒಂದು ಮೂಲ ಸಾಧನದ ಬಲದಿಂದಲೇ ನಾಡಾಡಿಯಂತಿದ್ದ ಅವನು ನಾಗರಿಕತೆಯ ಉಚ್ಚ ಶಿಖರವನ್ನು ಎಟುಕಿದ್ದಾನೆ. ಇದು ಜಗತ್ತಿನ ಯಾವದೇ ಭಾಷೆ ಕೈಗೂಳಿಸಬಹುದಾದ ಸೌಭಾಗ್ಯ. ಪ್ರತಿ ಭಾಷೆಯೂ ತನ್ನ ತನ್ನದೇ ಆದ ಧ್ವನಿ ವ್ಯವಸ್ಥೆ, ಪದಪ್ರಯೋಗ ವ್ಯಾಕರಣ ರಚನಾ ವೈಶಿಷ್ಟ್ಯಗಳನ್ನು ಪಡೆದಿರಬಹುದಾದರೂ ಎಲ್ಲ ಭಾಷೆಗಳ ವ್ಯಾವಹಾರಿಕ ಗುರಿ ಒಂದೇ : ಸಂಪರ್ಕ ಸುಸೂತ್ರವಾಗಬೇಕು; ಸ್ನೇಹ, ಸೌಹಾರ್ದಗಳು ನೆಲೆಸಬೇಕು; ಬಾಂಧವ್ಯದ ಬೆಸುಗೆ ಭದ್ರವಾಗಬೇಕು. ಆದರೆ ಇಂದು ಜೀವನದ ಎಲ್ಲ ಕ್ಷೇತ್ರಗಳನ್ನು ತನ್ನ ಅಪ್ಪುಗೆಗಳೆಸುವ ರಾಜಕಾರಣ ಭಾಷಾಕ್ಷೇತ್ರವನ್ನೂ ಬಿಟ್ಟಿಲ್ಲ. ಅದು 'ಭಾಷಾಕಾರಣ (Linguism) ವೆಂಬ ಹೊಸ ಭೂತವನ್ನೇ ಹುಟ್ಟಿಸಿದೆ. ತಪ್ಪು ಭಾಷೆಯದು ಅಥವಾ ಭಾಷೆಗಳದಲ್ಲ– ನಮ್ಮ ಭಾಷಾಧೋರಣೆ(Language Attitude)ಯದು.

ಭಾಷೆಯೆಂಬುದು ದೇವನಿರ್ಮಿತವೆಂಬುದು ಹಳೆಯ ಕಲ್ಪನೆ. ಆದರೆ ಅದು ಮಾನವ ಸಮುದಾಯವು ಪರಸ್ಪರ ಸಹಕಾರ, ವ್ಯವಹಾರಗಳಿಗಾಗಿ ಐಚ್ಛಿಕವಾಗಿ ರೂಢಿಸಿಕೊಂಡ ವಿಶಿಷ್ಟ ಧ್ವನಿ ಸಂಕೇತ ಸಮುಚ್ಚಯವೆಂಬುದು ಇಂದಿನ ಸಿದ್ಧಾಂತ. ಆದ್ದರಿಂದ ಖಂಡಿತವಾಗಿಯೂ ಅದು ಒಂದು ಮಾನವನಿರ್ಮಿತವಾದ ವ್ಯವಸ್ಥೆಯೇ. ಇಂಥ ಮಾನವ ವ್ಯವಸ್ಥೆಗಳೆಲ್ಲ ಅವುಗಳ ನಿಯೋಜಕರ, ವಿನಿಯೋಗಿಗಳ ಯೋಗ್ಯಾ–ಯೋಗ್ಯತೆಗಳಿಗೆ ತಕ್ಕ ಫಲ ಕೊಡತಕ್ಕವು. ಭಾಷೆ ಕೂಡ ಮೂಲತಃ ಶುದ್ಧ ಉದ್ದೇಶ, ಪ್ರಯೋಜನಗಳಿಗೆ ಒದಗಬಹುದಾಗಿದ್ದರೂ ಪರಸ್ಪರ ಅಸಹನೆ, ದ್ವೇಷ ಭಾವನೆಗಳ ಅಭಿವ್ಯಕ್ತಿ ಮಾಧ್ಯಮವಾಗಿ ಬಳಕೆಗಿಳಿಯಲೂಬಹುದು. ಹಾಗಾದಾಗ ಅದು ಇನ್ನಿಷ್ಟು ಮಾರ್ಮಿಕವೂ ಅಷ್ಟೇ ಮರ್ಮಘಾತಕವೂ ಆಗಿ ಪರಿಣಮಿಸುವದು.

ಭಾಷಾ ಅಸಹನೆ ಮೊದಲು ವ್ಯಕ್ತವಾಗುವದು ತನ್ನದಲ್ಲದ ಅನ್ಯಭಾಷೆಯ ಕುರಿತಾದ ತಿರಸ್ಕಾರ ರೂಪದಲ್ಲಿ. ಇದೊಂದು ಸಮಾಜಶಾಸ್ತ್ರೀಯ ಸಮಸ್ಯೆ. ಸ್ವಭಾಷೆಯೊಂದನ್ನೇ ಬಲ್ಲವನಾಗಿ ಗೌರವಿಸುವ ವ್ಯಕ್ತಿಗೆ ಆ ಭಾಷೆಯ ಪದಗಳಿಗೂ ಅವು ಸೂಚಿಸುವ ಅರ್ಥಗಳಾದ ವಸ್ತು, ವಿಚಾರಗಳಿಗೂ ಒಂದು ತಾದಾತ್ಮ್ಯ ಭಾವ ತೋರುತ್ತದೆ. ಅದರಿಂದ ಬೇರೆ ಭಾಷೆಯಾಡುವವರೆಲ್ಲ ಸ್ವಲ್ಪ ಕಡಿಮೆ ಯೋಗ್ಯತೆಯವರೆಂದೋ ತನ್ನ ಅನುಭವ ಪ್ರಪಂಚಕ್ಕೆ ವಿರೋಧಿಗಳೋ, ವಿದೇಶಿಗಳೋ ಎಂದು ಎಣಿಸುವ ಕಡೆ ಅವನು ವಾಲುತ್ತಾನೆ. ಇದೊಂದು ನಿಜವಾಗಿಯೂ, ಅನಾರೋಗ್ಯಕರವಾದ ಮನೋಧರ್ಮ. ಏಕೆಂದರೆ ಇದು ಒಮ್ಮೆ ತಲೆದೋರಿತೆಂದರೆ ಯಾವ ಘಟ್ಟಕ್ಕೆ ಯಾವ ಮಟ್ಟಕ್ಕೆ ಬೆಳೆದೀತೆಂಬುದನ್ನು ಹೇಳಸಲ್ಲ. ವೈಯಕ್ತಿಕದ ನೆಲೆಯಿಂದ ಇದು ಸಾಮಾಜಿಕ, ಧಾರ್ಮಿಕ, ಜನಾಂಗಿಕ, ರಾಷ್ಟ್ರೀಯ ಮಟ್ಟದ ಬೃಹತ್ ಪ್ರಮಾಣವನ್ನೂ ಮುಟ್ಟಬಹುದು.

ಇದೆಲ್ಲಕ್ಕೆ ಕಾರಣಗಳು ಎರಡು : ೧) ಭಾಷೆಗಳ ಬಳಕೆ, ಬೆಳವಣಿಗೆಯ ಕ್ರಮಗಳ ಕುರಿತಾದ ತಪ್ಪು ಕಲ್ಪನೆಗಳು ೨) ವ್ಯಾವಹಾರಿಕ ವಾಸ್ತವಕ್ಕಿಂತ ಭಾವನಾತ್ಮಕ ಭ್ರಮೆಗಳಿಗೆ ಜೋತು ಬೀಳುವದು. ಮೊದಲನೆಯದಾಗಿ ಅರಿಯಬೇಕಾದದ್ದು, ಭಾಷೆಗಳಲ್ಲಿ ಮೇಲು, ಕೀಳುಗಳಿಲ್ಲ: ನಾವೆಣಿಸುವಂತೆ ಈ ರೂಪ ಅಶುದ್ಧ ಈ ರಚನೆ ಅಬದ್ಧ ಎಂಬುದಿಲ್ಲ. ವ್ಯವಹಾರಕ್ಕೆ ಸಮರ್ಪಕವಾಗಿ. ಪರಿಣಾಮಕಾರಿಯಾಗಿ ಒದಗುವ ಎಲ್ಲ ಭಾಷಾ ರೂಪ ರೀತಿಗಳೂ ಅಷ್ಟೇ ಗೌರವಾರ್ಹವಾದವು. ಎರಡನೆಯದಾಗಿ, ಭಾಷೆ ಒಂದು ನಿರಂತರವಾಗಿ ಹರಿಯುವ ನದಿ. ತನ್ನ ಓಘಕ್ಕೆ ಬೇಕಾದಂತೆ ಪಾತ್ರವನ್ನು ಬದಲಾಯಿಸುವದು ಅದಕ್ಕೆ ಸಹಜ ಧರ್ಮ. ತನ್ನ ಒಡಲಲ್ಲಿ ಮುಗಿಬೀಳುವ ವಸ್ತುಸಂಚಯವನ್ನು ತನ್ನ ಮೈಯಲ್ಲಿಯೇ ಒಡಗೂಡಿಸಿಕೊಳ್ಳುವ ಕುಶಲ ಕಲೆಯೂ ಅದಕ್ಕುಂಟು. ಹೀಗಾಗಿ ಭಾಷೆಗಳಿರುವಲ್ಲೆಲ್ಲ ಉಪಭಾಷೆಗಳು– ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳಿರುವದು ಅವುಗಳ ಅನಿವಾರ್ಯ ಬೆಳವಣಿಗೆಯ ಲಕ್ಷಣಗಳು. ಹಾಗೆಯೇ ಲಿಪಿ ಸಾಹಿತ್ಯಗಳನ್ನು ಹೊಂದಿರದ ಭಾಷೆಗಳು (ಸಾಹಿತ್ಯ ಸಂಪನ್ನವಾದ ಭಾಷೆಗಳನ್ನು ಗಮನಿಸಿ) ತಿರಸ್ಕಾರಯೋಗ್ಯವೆಂದು ತೀರ್ಮಾನಿಸುವದೂ ತಪ್ಪು. ಭಾಷೆಯ ಪ್ರಧಾನಕಾರ್ಯ ಪ್ರಯೋಜನ ವ್ಯವಹಾರಕ್ಕೆ ಒದಗುವದು. ಅದಕ್ಕೆ ಅದು ತಾಳುವ ಬಾಯ್ಮಾತಿನ (Oral) ಸ್ವರೂಪವೇ ಮುಖ್ಯ, ಬರಹದ ರೂಪ ಗೌಣ. 'ಶ್ರಾವಣ' ರೂಪವೇ ಅದರ ನೈಜವ್ಯಕ್ತಿತ್ವ, ಚಾಕ್ಷುಕವು ಅದರ ಪರೋಕ್ಷ ಪ್ರತಿನಿಧಿತ್ವ. ಲಿಪಿಯಿಲ್ಲದ ಭಾಷೆಗಳೂ ಭಾಷೆಯ ಮುಖ್ಯ ಪ್ರಯೋಜನವಾದ ವ್ಯವಹಾರದ ದೃಷ್ಟಿಯಿಂದ ಸ್ವಯಂ-ಪೂರ್ಣವಾದವುಗಳೇ. ಆದರೆ ಅವಕ್ಕೆ ಅಭಿವೃದ್ಧಿಗೆ ಸಿಕ್ಕ ಅವಕಾಶಗಳು ಕಡಿಮೆಯೆಂದೇ ಅರ್ಥ. ಭಾಷೆಗಳಲ್ಲಿ ಭೇದವನ್ನು ಗುರುತಿಸುವದೇ ಆದರೆ, ಅವನ್ನು 'ಅಭಿವೃದ್ಧಿ ಹೊಂದಿದ' (cultivated) ಹಾಗೂ 'ಅಭಿವೃದ್ಧಿ ಹೊಂದದ'

(uncultivated) ಎಂದು ಲಕ್ಷಿಸಿಯೇ ವಿನಹ ಉಚ್ಚ ನೀಚವೇಬ ತಾರತಮ್ಯ ದೃಷ್ಟಿಯಿಂದಲ್ಲ. ಅಲ್ಲದೆ ಭಾಷೆಗಳಿರುವಷ್ಟು ಪ್ರತ್ಯೇಕ ಲಿಪಿಗಳಿರಬೇಕೆಂದಾದರೂ ಎಲ್ಲಿದೆ ? ಈಗಾಗಲೇ ಲಿಪಿ ಪಡೆದಿರುವ ಭಾಷೆಗಳು ಸುದೈವವುಳ್ಳವೆನ್ನಬಹುದೇ ಹೊರತು ಲಿಪಿಯಿಲ್ಲದ ಭಾಷೆಗಳೆಲ್ಲ ದುರ್ದೈವಿಗಳೆಂಬುದು ಮಾತ್ರ ಸರಿಯಲ್ಲ. ಯಾವ ಭಾಷೆಗಳಲ್ಲಿಯ ಯಾವ ಪದಗಳನ್ನೂ ಯಾವದೇ ಲಿಪಿಯಲ್ಲಿ ಸೂಕ್ತ ಮಾರ್ಪಾಡಿನೊಡನೆ ಸೂಚಿಸುವದು ದುಸ್ಸಾಧ್ಯವಲ್ಲ. ಅಂತೆಯೇ ಆಧುನಿಕ ಭಾಷಾ ವಿಜ್ಞಾನವು ಅಂತಾರಾಷ್ಟ್ರೀಯ ಲಿಪಿ (IPA) ಗೂ ಎಡೆಮಾಡಿಕೊಟ್ಟಿದೆ. ಆದ್ದರಿಂದ ಈ ವಿಷಯದಲ್ಲಿ ಉಪೇಕ್ಷಾಭಾವನೆಯಾಗಲಿ, ನೈಜ್ಯಾನುಸಂಧಾನವಾಗಲಿ ಸಲ್ಲ.

ಇನ್ನು ವ್ಯಾವಹಾರಿಕತೆಯ ವಿಚಾರ. ಭಾರತವು ೧೬೫೨ ಮಾತೃಭಾಷೆಗಳಿಂದ ಕೂಡಿದ ಬಹುಭಾಷೆಯ ರಾಷ್ಟ್ರವಾಗಿದೆ. ಹೀಗಿರುವಾಗ ಕೆಲವು ಪ್ರಮುಖ ಹಾಗೂ ಬಹು ಸಂಖ್ಯಾಕತೆಯನ್ನವಲಂಬಿಸಿದ ಭಾಷೆಗಳ ಆಧಾರವನ್ನನುಸರಿಸಿ ಪ್ರಾಂತರಚನೆ ಮಾಡಿದಷ್ಟಕ್ಕೆ ಇತರ ಭಾಷೆಗಳೆಲ್ಲ ಅಳಿಯುವವೇ ? ಆ ಭಾಷಿಕರೆಲ್ಲ ಮಾಯವಾಗುವರೇ ? ಅಂಥವರೊಡನೆ ನಮ್ಮ ವರ್ತನೆ, ಸಂಬಂಧಗಳು ಹೇಗಿರಬೇಕು ? ಪ್ರಾಂತ ರಚನೆ ಆಡಳಿತ ಸೌಕರ್ಯಕ್ಕಾಗಿ; ಇತರ ಭಾಷಿಕರ ನೆಲಸು ಜೀವನಸೌಕರ್ಯಕ್ಕಾಗಿ. ಅದು ನಮ್ಮ ರಾಷ್ಟ್ರದ ಸಂವಿಧಾನವು ನೀಡಿದ ಹಕ್ಕು. ಆದ್ದರಿಂದ ನಮ್ಮೆದಿಗಾಗಿ ಬೇಕಾಗಿರುವದು ಭಾಷಾಬಾಂಧವ್ಯ. ಬಳಕೆಯಲ್ಲಿರುವ ಭಾಷೆ, ಭಾಷಿಕರ ನಡುವಿನ ನಿಕಟಸ್ನೇಹ, ಸಾಮರಸ್ಯದಿಂದ ಕೂಡಿದ ವ್ಯವಹಾರ. ಬಾಂಧವ್ಯ ಎಂದಮೇಲೆ ಅದು ಏಕಮುಖದ್ದಲ್ಲ (Unilateral), ಪಾರಸ್ಪರಿಕ (Bilateral or reciprocal) ವಾಗಿರುವದು ಅವಶ್ಯ. ಇಲ್ಲಿ ತೂಕ ತಪ್ಪಿದರೆ ಹೋರಾಟ ಶತಸ್ಸಿದ್ಧ. ಒಂದು ಭಾಷಾಪ್ರಾಂತದಲ್ಲಿ ಅನ್ಯಭಾಷಿಕರು ಸಹಜವಾಗಿಯೇ ಅಲ್ಪಸಂಖ್ಯಾಕರಾಗುವರು. ಈ ಅಲ್ಪ ಸಂಖ್ಯಾಕರಿಗೆ ಅವರ ಮಾತೃಭಾಷೆ, ಸಂಸ್ಕೃತಿ ಉಳಿಸಿ, ಬಳಸಿ, ಬೆಳೆಸಿಕೊಳ್ಳಲು ಅವಕಾಶ ನಿರಾಕರಣೆ ಆಗಕೂಡದು. ಹಾಗೆಯೇ ಅಲ್ಲಿ ನೆಲೆಸಿ ಬದುಕಿನ ಭಾಗ್ಯ, ಭೋಗ್ಯಗಳನ್ನು ಪಡೆಯುವ ಅನ್ಯಭಾಷಿಕರೂ ಅಲ್ಲಿಯ ಜೀವಪ್ರವಾಹದೊಡನೆ ಬೆರೆಯಲು ಪ್ರಾಂತ ಭಾಷೆಯನ್ನು ಕಲಿತು ಹೀಗೆ ದ್ವಿಭಾಷಿಕರಾಗಿ (Bilingual) ಸಾರ್ಥಕವಾಗಿ ವ್ಯವಹರಿಸುವದು ಅತ್ಯಗತ್ಯ. ಹೀಗೆ ಒಟ್ಟಿಗೆ ಕಲೆತಾಗ ತೆಕ್ಕೆ ಬಿದ್ದಾಗ ಒಬ್ಬರ ಮೈಧೂಳು ಇನ್ನೊಬ್ಬರ ಮೈಗೆ ಹತ್ತಿ ಹೊಡೆಕರಿಸುವಂತೆ ಇವರ ಭಾಷೆಯ ಪದ, ಲಕ್ಷಣಗಳು ಅವರಿಗೆ, ಅವರದು ಇವರಿಗೆ ಅಂಟಿಕೊಂಡು ಹೊಸರೂಪ, ಹೊಸ ಭೇದಗಳು ಸೃಷ್ಟಿಯಾಗಿ ಸಾಂಸ್ಕೃತಿಕ ಸಾಮರಸ್ಯದೊಡನೆ ವೈವಿಧ್ಯದ ವೈಭವವನ್ನೂ ಹೆಚ್ಚಿಸುವಲ್ಲಿ ಸಂಶಯವಿಲ್ಲ.

ಭಾಷಾಬಾಂಧವ್ಯದ ವಿಷಯದಲ್ಲಿ ಕನ್ನಡ ನಾಡು ಸುದೈವಿಯಾಗಿದೆ. ಇಲ್ಲಿ ಕನ್ನಡವಲ್ಲದೆ ತೆಲುಗು, ಉರ್ದು, ಮರಾಠಿ, ತಮಿಳು, ತುಳು, ಕೊಂಕಣಿ, ಮಲಯಾಳ, ಹಿಂದಿ, ಕೊಡಗುಗಳೂ ಆಡುಭಾಷೆಯಾಗಿರುವವರಿದ್ದಾರೆ. ಅವರೆಲ್ಲ

ಇಲ್ಲಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದಲ್ಲಿ ಸಮರಸರಾಗಿದ್ದಾರೆ. ಹಾಗೆ ನೋಡಿದರೆ ಕೆಲವೆಡೆ ತುಂಬಾ ಪ್ರಬಲರಾಗಿದ್ದಾರೆ ಕೂಡ. ಇದು ಸಾಧ್ಯವಾದುದು ಇಲ್ಲಿಯ ವ್ಯಾವಹಾರಿಕ ಭಾಷೆ ಕನ್ನಡವನ್ನು ಒಪ್ಪಿ ವರಿಸಿದುದರಿಂದ. ಕೆಲವರಂತೂ ಕನ್ನಡವನ್ನೇ ತಮ್ಮ ದೈವವಾಗಿ ಸ್ವೀಕರಿಸಿ ಅಪೂರ್ವ ಸಾಹಿತ್ಯ ಕೃತಿಗಳ ಕಾಣಿಗೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಹಿರಿಯರಾದ ಮಾಸ್ತಿ, ಡಿ. ವಿ. ಗುಂಡಪ್ಪ, ಗೋರೂರು, ನಾ. ಕಸ್ತೂರಿ, ಗೋವಿಂದ ಪೈ, ಪಂಜೇ ಮಂಗೇಶ ರಾವ್, ಬೇಂದ್ರೆ, ಶಂಬಾ ಜೋಶಿ, ದಿನಕರ ದೇಸಾಯಿ, ಗೌರೀಶ ಕಾಯ್ಕಿಣಿ ಮುಂತಾದವರ ಹಾಗೂ ಇನ್ನಿತರರ ಋಣವನ್ನು ನೆನೆಯಬೇಕು.

ಹಾಗೆಂದು ಭಾಷೆಯ ಅಸಹನೆಯ ಜಳ ತಾಕಿದ ಅನುಭವವೂ ಕನ್ನಡ ನಾಡಿಗೆ ಇಲ್ಲದಿಲ್ಲ. ಅದು ಭಾಷೆಯ ಹೆಸರಿನಲ್ಲಿ ಮಹಾರಾಷ್ಟ್ರ ನಡೆಸಿರುವ ಪ್ರಾದೇಶಿಕ ಆಕ್ರಮಣ. ಅದೊಂದು ಬರಿಯ ರಾಜಕೀಯ: ಆಗೀಗ ಎಬ್ಬಿಸುವ ಗುಲ್ಲು. ಪರಿಣಾಮ ಮಹಾರಾಷ್ಟ್ರದ 'ಶಿವಸೇನೆ'ಗೆ ಮುಖಾಮುಖಿಯಾಗಿ ಬೆಳಗಾವಿಯ 'ಭೀಮಸೇನೆ' ಹೊಡೆದು ನಿಲ್ಲಬೇಕಾದ ಪರಿಸ್ಥಿತಿ. ಇದಕ್ಕೆ ಯಾವ ವ್ಯಾಖ್ಯಾನವೂ ಬೇಡ.

ಬಾಂಧವ್ಯದಲ್ಲಿ ಪಾರಸ್ಪರಿಕತೆ ಮುಖ್ಯ. ಕನ್ನಡ ತನಗೆ ಸಂಪರ್ಕವುಂಟಾದ ಯಾವ ಬೇರೆಯ ಭಾಷೆಯಿಂದಲೂ ಧ್ವನಿ, ಪದ, ನುಡಿಗುಟ್ಟು ವಾಕ್ಯವಿಧಾನಗಳನ್ನು ಪಡೆಯಲೂ, ಅವುಗಳ ಮೇಲೆ ತನ್ನ ಪ್ರಭಾವ ಬೀರಲೂ ಕೂಡ ತಪ್ಪಿಲ್ಲ. ಸಾಹಿತ್ಯ ಪ್ರೇರಣೆ, ಪ್ರೋತ್ಸಾಹಗಳನ್ನು ನೀಡುವದರಲ್ಲಿಯೂ ಹಿಂದೆ ಬಿದ್ದಿಲ್ಲ. ತಮಿಳು, ತೆಲಗು, ಮಲೆಯಾಳ, ತುಳು, ಕೊಡಗುಗಳೊಡನೆಯ ಅದರ ಸಂಬಂಧ ಹೊಕ್ಕಳ ಬಳಕೆಯದಾದರೆ ಕೊಂಕಣಿ ಮರಾಠಿ ಉರ್ದುಗಳದು ಹೊಕ್ಕು-ಬಳಕೆಯದು. ಮೊದಲನೆಯದು ರಕ್ತ ಸಂಬಂಧ, ಎರಡನೆಯದು ಸ್ನೇಹ ಸಂಬಂಧ.

ಭಾಷಾ ಬಾಂಧವ್ಯದ ಉಚ್ಚ ಪರಿಣತಿಯೇ ಸಾಹಿತ್ಯ ಬಾಂಧವ್ಯ. ಈ ದಿಸೆಯಲ್ಲಿ ದ್ರಾವಿಡದ ಮೂಲ ಪ್ರಾಚೀನ ಸಂಬಂಧವುಳ್ಳ ತಮಿಳು, ತೆಲುಗುಗಳ ಕೊಡು-ಕೊಳೆಗಳು ಮೂಲಭೂತವೂ ವ್ಯಾಪಕವೂ ಆಗಿವೆ. ಅವು ಎಂದೂ ಒಂದೇ ದಿಕ್ಕಿನ ರಹದಾರಿ (one way traffic) ಗಳಾಗಿದ್ದಿಲ್ಲ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನೆನೆಯಬಹುದು. ತಮಿಳು ಛಂದಸ್ಸಿನ ಈರಶೈ, ಮಾವಶೈ, ನಾಲಶೈಗಳಲ್ಲಿ ಕನ್ನಡ ಛಂದಸ್ಸಿನ ಬ್ರಹ್ಮ, ವಿಷ್ಣು, ರುದ್ರಗಣಗಳ ಹೆಜ್ಜೆಯನ್ನು ಬಿ. ಎಂ. ಶ್ರೀಯವರು ಗುರುತಿಸಿದ್ದಾರೆ. ತಮಿಳು ಛಂದೋಗ್ರಂಥ 'ಯಾಪ್ಪರುಂಗಲಕ್ಕಾರಿಹೈ' ಮೇಲೆ ಕನ್ನಡ ಲಕ್ಷಣ ಗ್ರಂಥವಾದ 'ಗುಣಗಾಂಕಿಯಂ' ದ ಪ್ರಭಾವವಿದೆಯೆಂದು ತರ್ಕಿಸಲಾಗಿದೆ. ಹದಿನೈದನೆಯ ಶತಮಾನದ ಚಾಮರಸನ 'ಪ್ರಭುಲಿಂಗ ಲೀಲೆ' ತಮಿಳೂ ಸೇರಿದಂತೆ ಅನೇಕ ಭಾಷೆಗಳಲ್ಲಿ ಅನುವಾದ ಪಡೆದಿದೆ. ನಿಜಗುಣ ಶಿವಯೋಗಿಗಳ ವಿವೇಕ-ಚಿಂತಾಮಣಿಯ ಪರಿಚ್ಛೇದವೊಂದನ್ನು ೧೭ನೇ ಶತಮಾನದ ಶಿವಪ್ರಕಾಶ ಸ್ವಾಮಿ ತಮಿಳಿಗೆ ಭಾಷಾಂತರಿಸಿದ್ದಾನೆ.

ಇದಕ್ಕೆ ಪ್ರತಿಯಾಗಿ ತಮಿಳಿನ ಸಂಘ ಸಾಹಿತ್ಯ ಮತ್ತು ನಾಯನಾರರ ಭಕ್ತಿ ಸಾಹಿತ್ಯ ಕನ್ನಡದ ವಚನ ಸಾಹಿತ್ಯದ ಮೇಲೆ ಆದ್ಭುತ ಪರಿಣಾಮ ಬೀರಿದೆ: ತಿರುಜ್ಞಾನ ಸಂಬಂಧಿಯರ ತಮಿಳು ಕಾವ್ಯದ ಆಧಾರದ ಮೇಲೆ ಗುಬ್ಬಿ ಮಲ್ಲಣ್ಣಾರ್ಯನ 'ಭಾವ ಚಿಂತಾರತ್ನ', ಷಡಕ್ಷರದೇವನ 'ರಾಜಶೇಖರವಿಳಾಸ' ರಚಿತವಾಗಿವೆ. ಹರಿಹರನ ರಗಳೆಗಳಿಗೆ ಮೂಲಸ್ಫೂರ್ತಿಯಾದ ೬೩ ಪುರಾತನರ ಜೀವಿತ ಕಥಾ ವಿವರಗಳಿಗೆ ಆತ ಶೇಕ್ಕಿರಾರ್ ಎಂಬ ತಮಿಳ ಕವಿಯ 'ಪೆರಿಯ ಪುರಾಣ'ಕ್ಕೆ ಋಣಿಯಾಗಿರಬೇಕು.

ಹಾಗೆಯೇ ತೆಲುಗಿನ ವಿಚಾರದಲ್ಲಿ ಕನ್ನಡದ ಆದಿಕವಿ ಪಂಪನ ಪ್ರಭಾವ ತೆಲುಗಿನ ಆದಿಕವಿ ನನ್ನಯನ ಮೇಲೆ ಆಗಿರುವದು ಕಂಡುಬರುತ್ತದೆ. ಆ ಭಾರತ ರಚನೆಯಲ್ಲಿ ನನ್ನಯನಿಗೆ ಸಹಾಯ ಮಾಡಿದವನು ಕನ್ನಡಿಗ ನಾರಾಯಣ ಭಟ್ಟ. ನಾಗವರ್ಮನ 'ಛಂದೋಂಬುಧಿ'ಯ ಪ್ರಭಾವ ತೆಲುಗಿನ ಭೀಮ ಕವಿಯ 'ಕವಿಜನಾಶ್ರಯಮು' ಎಂಬುದರ ಮೇಲೆ ಬಿದ್ದಿದೆಯೆಂದು ಕಂಡುಬರುತ್ತದೆ. ತೆಲುಗಿನ ಕೇತನನ 'ಆಂಧ್ರಭಾಷಾ ಭೂಷಣ' ಎಂಬ ವ್ಯಾಕರಣ ಗ್ರಂಥಕ್ಕೂ ಕನ್ನಡ ಎರಡನೇ ನಾಗವರ್ಮನ 'ಕರ್ನಾಟಕಭಾಷಾಭೂಷಣ'ಕ್ಕೂ ತುಂಬಾ ಹೋಲಿಕೆಯಿದೆಯಂತೆ. ಕನ್ನಡದಲ್ಲಿ 'ವಚನಸಾಹಿತ್ಯಯುಗ' ತೆರೆದಂತೆ ತೆಲುಗಿನಲ್ಲಿಯೂ ದೇಸಿಗೆ ಮನ್ನಣೆ ಕೊಟ್ಟ 'ಶಿವ ಕವಿಯುಗ' ವನ್ನು ಹೇಳಲಾಗುತ್ತದೆ. ಪಾಲ್ಕುರಿಕೆ–ಸೋಮನಾಥನಂತ ಕನ್ನಡ ತೆಲುಗು ಉಭಯಕವಿ, ಚಾಮರಸನ 'ಪ್ರಭುಲಿಂಗಲೀಲೆ' ಪಿಡಪುರ್ತಿ ಸೋಮನಾಥನಿಂದ ತೆಲುಗಿನಲ್ಲಿಯೂ ಅನುವಾದ ಪಡೆದಿದೆ. ಇದಕ್ಕೆ ಪ್ರತಿಯಾಗಿ ಕನ್ನಡದ ಭೀಮಕವಿಯ 'ಬಸವಪುರಾಣ'ಕ್ಕೆ ತೆಲುಗು ಮೂಲವಾಗಿರುವದನ್ನು ನೆನೆಯಬಹುದು.

ಆಧುನಿಕ ಕಾಲದಲ್ಲಿಯೂ ಕನ್ನಡ ತಮಿಳು–ತೆಲುಗು ಸಾಹಿತ್ಯಗಳ ಕೊಡುಕೊಳೆ ನಡೆದೇ ಇದೆ.

ಇನ್ನು ತುಳು, ಕೊಂಕಣಿಗಳಿಗೆ ಲಿಪಿ, ಸಾಹಿತ್ಯಳಿಲ್ಲದ್ದಕ್ಕೆ ರಾಜಾಶ್ರಯವಿಲ್ಲದ್ದೆ ಕಾರಣ ಎಂಬುವ ಅಭಿಪ್ರಾಯಗಳಿದ್ದವು. ಆದರೆ ಇತ್ತೀಚೆ ಆ ಭಾಷೆಗಳ ಅಭಿವೃದ್ಧಿ ಸಮಿತಿಗಳು ಸ್ಥಾಪಿತವಾಗಿ ಹುಲುಸಾದ ಸಾಹಿತ್ಯ ನಿರ್ಮಾಣದಲ್ಲಿ ನಿರತವಾಗಿವೆ. ಕೊಡವವೂ ಈ ದಿಸೆಯಲ್ಲಿ ತಲೆ ಕೊಡಹಿ ಎದ್ದಿದೆ. ತುಳುವು ಈಗಾಗಲೇ 'ಪಂಚ ದ್ರಾವಿಡ'ಗಳಲ್ಲಿ ಒಂದು ಪ್ರತ್ಯೇಕ ಭಾಷೆಯಾಗಿ ಪರಿಗಣಿತವಾಗಿದ್ದರೆ, ಕೊಂಕಣಿಯು ಕೂಡಾ ಸಾಹಿತ್ಯ ಅಕಾಡಮಿಯಿಂದ ಮನ್ನಿಸಲ್ಪಟ್ಟಿದೆ.

ಯಾವ ಕಾಲಕ್ಕೂ ಭಾಷಾ ಪ್ರಪಂಚದಲ್ಲಿ ವಿಷೋಧ್ಯಾನವನ್ನು ಬಿತ್ತಿ ಬೆಳೆಯುವ ಸರಸಾಟ ನಿಲ್ಲಬೇಕು.

ಇಲ್ಲಿ ಹಿರಿಯರ ಎರಡು ಸೂಕ್ತಿಗಳನ್ನು ಎತ್ತಿಹೇಳುವದು ಅವಶ್ಯ ಹಾಗೂ ಮುಖ್ಯವೆನಿಸುತ್ತಿದೆ :

ಭಾಷಾಬಾಂಧ್ಯವ್ಯಕ್ಕೆ : ಕವಲೊಡೆದೂ ಕಲೆಯಬಹುದು
ಭಿನ್ನವಿದ್ದೂ ಬೆರೆಯಬಹುದು

– ಇದು ಕವಿ ವಿನಾಯಕೋಕ್ತಿ

ಸಾಹಿತ್ಯಬಾಂಧವ್ಯಕ್ಕೆ : "ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗ
ರಯ್ಯವುಂಚಿದಿಯೆನೆ ತೆಲುಗ
ಅಯ್ಯಯ್ಯ ಎಂಚ ಪೋಲರ್ಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣ"

– ಇದು ರತ್ನಾಕರವರ್ಣಿಯ ಆಶಯ

ಈ ಎರಡೂ ಉಕ್ತಿಗಳ ತಿರುಳನ್ನು ತಿಳಿಯುವದೇ ಭಾಷಾ ಬಾಂಧವ್ಯಕ್ಕೆ ತಳಹದಿ ಹಾಕಿದಂತೆ.

●

* ಅಖಿಲಭಾರತ ೫೫ ನೆಯ ಕನ್ನಡ ಸಾಹಿತ್ಯಸಮ್ಮೇಲನದ ಅಂಗವಾಗಿ ಜರುಗಿದ 'ಭಾಷಾಬಾಂಧವ್ಯ ಗೋಷ್ಠಿ'ಯ ಅಧ್ಯಕ್ಷೀಯ ಭಾಷಣದ ಸಾರ.

"ದಾರಿ ಯಾವುದಯ್ಯಾ ವೈಕುಂಠಕೆ" ನಾಟಕ : ಒಂದು ವಿಶ್ಲೇಷಣೆ

ಶಾಂತಿನಾಥ ದಿಬ್ಬದ

ಮೊದಲು ಶ್ರೀರಂಗರ 'ರಂಗಭಾರತ' ಎಂಬ ನಾಟಕ ಸಂಕಲನದಲ್ಲಿದ್ದು ಇತ್ತೀಚೆಗೆ ಅಂದರೆ ೧೯೮೨ ರಲ್ಲಿ ಹುಬ್ಬಳ್ಳಿಯ ಸಾಹಿತ್ಯ ಭಾಂಡಾರದವರಿಂದ ಸ್ವತಂತ್ರ ಕೃತಿಯಾಗಿ ಮೊದಲ ಬಾರಿ ಮುದ್ರಣಗೊಂಡಿರುವ 'ದಾರಿ ಯಾವುದಯ್ಯಾ ವೈಕುಂಠಕೆ' ಎಂಬ ನಾಟಕದ ಬಗೆಗಿನ ನನ್ನ ಅನಿಸಿಕೆಗಳನ್ನು ಓದುಗರಲ್ಲಿ ಹಂಚಿಕೊಳ್ಳುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಶ್ರೀರಂಗರ ನಾಟಕಗಳಲ್ಲಿಯೇ ಇದು ನನ್ನನ್ನು ವಿಶೇಷವಾಗಿ ಆಕರ್ಷಿಸಿದೆಯೆಂದೂ, ಆ ಆಕರ್ಷಣೆಯ ಕಾರಣದಿಂದಾಗಿಯೇ ನಾನಿಲ್ಲಿ ನನ್ನ ಅನಿಸಿಕೆಗಳನ್ನೂ ಹೊರಹಾಕಿದ್ದೇನೆಂದು ಬೇರೆ ಹೇಳಬೇಕಾಗಿಲ್ಲ.

ಗಾತ್ರದಲ್ಲಿ ಕೇವಲ ೫೭ ಪುಟಗಳೇ ಆಗಿದ್ದರೂ "ಕಿರಿದರೊಳ್ ಪಿರಿದರ್ಥಮಂ ಪೇಳ್ವ" ಒಂದು ಮಹೋನ್ನತ ನಿದರ್ಶನವಾಗಿದೆ ಈ ನಾಟಕ. ಸಾಮಾಜಿಕ ಕಳಕಳಿಯೇ ಈ ನಾಟಕದ ಮೂಲಾಧಾರವಾಗಿದೆ. ಸಮಾಜ ಜೀವಿಯಾದ ಒಬ್ಬ ಸಾಹಿತಿ ಅಥವಾ ನಾಟಕಕಾರ ಸಮಾಜಕ್ಕೆ ಸಂಬಂಧಿಸಿದಂತೆ ತನ್ನ ಅನಿಸಿಕೆ–ಅನುಭವಗಳನ್ನು ಅಂಜದೆ–ಅಳುಕದೆ ನಿರ್ಭೀತನಾಗಿ, ನಿರರ್ಗಳವಾಗಿ ನಿರೂಪಿಸಿದ್ದಾನೆ ಇಲ್ಲಿ. ಅತಿ ಆಕರ್ಷಕವೂ ಆದರೆ ಅಷ್ಟೇ ಜಟಿಲವೂ ಆದ ಜೀವಂತ ಸಮಸ್ಯೆಯೊಂದನ್ನು ತನ್ನ ವಿಶ್ಲೇಷಣೆಗೆ ಕವಿ ಅಳವಡಿಸಿಕೊಂಡುದನ್ನು ಹಾಗೂ ಅದನ್ನು ಯಶಸ್ವಿಯಾಗಿ ವಿಶ್ಲೇಷಿಸಿದುದನ್ನು ನೋಡಿದಾಗ ಕವಿಯ ವಿಚಾರಶೀಲತೆಯ ವ್ಯಾಪ್ತಿಯ ಅರಿವು ನಮಗಾಗುವುದು. ಇಂದಿನ ಸಮಾಜ ಪ್ರಗತಿ ಸಾಧಿಸಿದೆಯೆಂಬುದೂ, ಆ ಪ್ರಗತಿಗೆ ವಿಜ್ಞಾನವೇ ಕಾರಣವೆಂಬುದೂ ಮನೆ-ಮನೆಯ ಮಾತಾಗಿದೆ ತಾನೆ ? ಇದೇ ಮಾತನ್ನು ನಾಟಕಕಾರ ತನ್ನ ನಾಟಕೀಯ ಕಕ್ಷೆಗೆ ತೂರಿಸಿಕೊಂಡು ವೈಚಾರಿಕತೆಯ ಒಪ್ಪವಿಟ್ಟು ಪರಿವರ್ತಿತ ರೂಪದಲ್ಲಿ ಹೊರಹಾಕಿದ್ದಾನೆ. 'ಪ್ರಗತಿ'ಗೆ ಸಂಬಂಧಿಸಿದಂತೆ ಕವಿಮನ ತನ್ನ ವೈಯಕ್ತಿಕ ವಿಚಾರಗಳನ್ನು ಮಿಡಿದಿದೆಯಾದರೂ ಆ ಮಿಡಿತ ಸಮಾನಧೋರಣೆಯ ಅನೇಕ ಜನರ ಪ್ರತಿನಿಧಿಯಾಗಿದೆ.

ತನ್ನ ವಿಚಾರಗಳನ್ನು ವ್ಯಕ್ತಪಡಿಸುವಲ್ಲಿಯೂ ಕವಿ ಹೊಸದೊಂದು ತಂತ್ರವನ್ನೇ ಬಳಸಿದ್ದಾನೆ. ಹೇಳಬೇಕಾದುದನ್ನು ತಾನೇ ನೇರವಾಗಿ ಹೇಳದೆ ಬೇರೆ

ಬೇರೆ ಪಾತ್ರಗಳ ಮೂಲಕ ಪರ್ಯಾಯವಾಗಿ ಹೇಳಿಸಿದ್ದಾನೆ. ಈ ಬೇರೆ ಬೇರೆ ಪಾತ್ರಗಳಿಗೆ ಸಂಬಂಧಿಸಿದಂತೆ ಚಿಕ್ಕ ಚಿಕ್ಕ ಉಪನಾಟಕಗಳನ್ನು ಸೃಷ್ಟಿಸಿದ್ದಾನೆ. ಹೀಗೆ ನೋಡಿದಾಗ ಈ ಎಲ್ಲ ಪಾತ್ರಗಳೂ ಕವಿಮನದ ಅನೇಕ ಮುಖಗಳ ಪ್ರತಿನಿಧಿಗಳಾಗಿವೆ ಯೆನ್ನಬಹುದು. ಈ ನಾಟಕದ ಇನ್ನೊಂದು ವೈಶಿಷ್ಟ್ಯವೆಂದರೆ ನಾಟಕಕಾರ ಮೊದಲು ತನ್ನ ಅನಿಸಿಕೆಗಳ ಕುರಿತು ತಂತಾನೇ ವಿಚಾರಿಸುತ್ತಾನೆ. ಅಲ್ಲಿ ಬೇರೆ ಬೇರೆ ಪಾತ್ರಗಳ ಮಧ್ಯೆ ಚರ್ಚೆಯನ್ನು ಆರಂಭಿಸುತ್ತಾನೆ. ಹಾಗೆ ಕವಿಮನದಲ್ಲಿ ಆರಂಭ ವಾದ ಚರ್ಚೆಯೇ ನಾಟಕ ರೂಪದಲ್ಲಿ ವೇದಿಕೆಯ ಮೇಲೆ ಮೂಡುತ್ತದೆ. ಈ ಸಮಯದಲ್ಲಿ ಸೂತ್ರಧಾರನಾದ ನಾಟಕಕಾರ ಅದೃಶ್ಯವಾಗಿರುತ್ತಾನೆ. ಅವುಗಳ ಚರ್ಚೆ ಮುಗಿದ ಮೇಲೆ "ಹೀಗೆ ಚಿತ್ರಿಸಿದರೆ ಹೇಗಾಗಬಹುದು" ? ಎಂದು ವಿಚಾ ರಕ್ಕೆ ತೊಡಗುವ ಸೂಚನೆ ಬರುತ್ತದೆ. ಹೀಗೆ ಅಪ್ರತ್ಯಕ್ಷನಾಗಿದ್ದರೂ ಪ್ರತ್ಯಕ್ಷನಾಗ ಬಲ್ಲವನಾಗಿದ್ದಾನೆ ಇಲ್ಲಿಯ ನಾಟಕಕಾರ ! ಇನ್ನು ಕೆಲವೊಮ್ಮೆ ಇಂಥ ಸಂದರ್ಭಗಳ ಬೆಳಕಿನಲ್ಲಿ ತನ್ನ ಅಭಿಪ್ರಾಯಗಳನ್ನು ಸ್ವತಃ ಹೊರಹಾಕುತ್ತಾನೆ. ಒಟ್ಟಿನಲ್ಲಿ ನಾಟ ಕದ ಕೇಂದ್ರವಿಚಾರ ಹಾಗೂ ಕವಿ ಅದನ್ನು ಬಿಂಬಿಸಿದ ಬಗೆಗಳು ಚಿತ್ತಾಕರ್ಷಕ ವಾಗಿವೆ.

ಹೊರನೋಟಕ್ಕೆ ಹಾಸ್ಯಮಯವಾಗಿ, ಲಘುವಾಗಿ ಕಂಡರೂ ತನ್ನ ಅಂತ ರಂಗದ ಆಳವನ್ನೆಲ್ಲ ಪ್ರತಿನಿಧಿಸುತ್ತದೆ ಪ್ರಸ್ತುತ ತಲೆಬರೆಹ. ಇಲ್ಲಿ ನಾಟಕಕಾರ 'ವೈಕುಂಠ' ಎಂಬ ಪದವನ್ನು ವೈವಿಧ್ಯಮಯತೆ ಹಾಗೂ ವಿಶೇಷಾರ್ಥದಲ್ಲಿ ಬಳಸಿ ದ್ದಾನೆ. ಸ್ವರ್ಗ, ಸುಖ, ಕೊನೆಯ ಗುರಿ, ಭವಿಷ್ಯ ಈ ಎಲ್ಲ ಅರ್ಥಗಳೂ ಅಲ್ಲಿ ಅಡಕವಾಗಿವೆ. ಈ ತಲೆಬರೆಹದಲ್ಲಿ ಹೊರಗೆ ಕಾಣುವುದು ಹಾಸ್ಯವಾದರೂ ಒಳಗಿರು ವುದು ವಿಡಂಬನೆ. ಈ ನಾಟಕದಲ್ಲಿ 'ದಾರಿ ಯಾವುದಯ್ಯಾ ವೈಕುಂಠಕೆ' ? ಎಂಬ ಪ್ರಶ್ನೆ ಕೊನೆಯ ವರೆಗೂ ಪ್ರಶ್ನೆಯಾಗಿಯೇ ಉಳಿದಿದೆ. ನಾಟಕದ ಕೊನೆಯ ಹಂತ ದಲ್ಲಿ ಸಾಮಾಜಿಕರ ಪ್ರತಿನಿಧಿಯಾದ ಪ್ರೇಕ್ಷಕ ವೈಕುಂಠಕ್ಕೆ ದಾರಿ ಕಂಡುಕೊಂಡಿದ್ದಾನೆ ಯಾದರೂ ಅದು ಸರ್ವಸಾಮಾನ್ಯವಾದ ಹಾಗೂ ಎಲ್ಲರಿಂದ ಒಪ್ಪಿತವಾದ ಒಂದೇ ದಾರಿ ಮಾತ್ರ ಆಗಿಲ್ಲ. ಅದು ತೀರ ವೈಯಕ್ತಿಕ. 'ನಮ್ಮ ನಮ್ಮ ದಾರಿ ನಮಗೆ' ಎಂಬುದೇ ಕೊನೆಯ ನಿರ್ಧಾರ ಅಥವಾ ಸತ್ಯ. ಈ ಸತ್ಯವನ್ನು ತಲುಪುವುದರ ಮೂಲಕ ಕೊನೆಗಾಣುವ ನಾಟಕದಲ್ಲಿ ಇದು ವರೆಗೆ ಕುತೂಹಲ ಕೆರಳಿಸಿದ ಪ್ರಶ್ನೆಯ ಕಗ್ಗಂಟು ಬಿಚ್ಚಿ ಕಗ್ಗತ್ತಲೆ ಮಾಯವಾಗಿ, ದಾರಿ ಸುಗಮವಾಗಿ ತಿಳಿಬೆಳಗು ಮೂಡಿ ದಂತೆ ಭಾಸವಾಗುತ್ತದೆ. ಒಟ್ಟಿನಲ್ಲಿ ಪ್ರಗಲ್ಭ ವೈಚಾರಿಕತೆಗೆ ಮಾದರಿಯಾದ ಈ ನಾಟಕ ತನ್ನ ತಲೆಬರೆಹದೊಂದಿಗೇ ಜನಮನವನ್ನು ಆಕರ್ಷಿಸಿ, ಸುತ್ತಿ ಸುಳಿಯುವ ತನ್ನ ಪ್ರಶ್ನೆಯ ಜಾಲದಲ್ಲಿ ಎಲ್ಲರನ್ನೂ ಸೆಳೆದುಕೊಂಡು ಬಿಡುತ್ತದೆ. ಹೀಗೆ ಸುಳಿಗೆ ಸಿಕ್ಕ ಓದುಗ ಕೊನೆಯ ವರೆಗೂ ನಾಟಕವನ್ನು ಓದಿಕೊಂಡು ಹೋಗದ ಹೊರತು ಗತ್ಯಂತರವಿಲ್ಲ; ಉತ್ತರವೂ ಇಲ್ಲ ! ಹೀಗೆ ಓದುಗರನ್ನು ಸೆರೆ ಹಿಡಿಯುವ,

ತನ್ನೊಂದಿಗೇ ಕರೆದುಕೊಂಡು ಹೋಗುವ ಈ ನಾಟಕದ ಸಿದ್ಧಿ ಅಪೂರ್ವವಾದುದು, ಅದಕ್ಕೆ ಉಚಿತವಾಗುವಂತೆ ತಲೆಬರೆಹವೂ ಅರ್ಥಪೂರ್ಣವಾದದ್ದು.

ಇತರ ನಾಟಕಗಳಿಗಿಂತ ತೀರ ಭಿನ್ನರೀತಿಯ ಪಾತ್ರವರ್ಗವನ್ನು ಹೊಂದಿದೆ ಈ ನಾಟಕ. ಸಾಮಾನ್ಯ ನಿಯಮದ ಪ್ರಕಾರ ವೇದಿಕೆಯ ಹೊರಗೇ ಉಳಿಯುವ ನಾಟಕಕಾರ, ವಿಮರ್ಶಕ ಹಾಗೂ ಪ್ರೇಕ್ಷಕ ಇವರೆಲ್ಲರೂ ಇಲ್ಲಿ ಜೀವಂತ ಪಾತ್ರಗಳಾಗಿ ವೇದಿಕೆಯನ್ನೇರಿವೆ. ಹೊರನೋಟಕ್ಕೆ ಇವುಗಳ ಮಧ್ಯೆ ವೈಚಾರಿಕ ವಿಭಿನ್ನತೆ ಯಿದ್ದರೂ— ಈ ಮೂರೂ ಪಾತ್ರಗಳು ಒಂದಕ್ಕೊಂದು ಪೂರಕವಾಗಿವೆ. ನಾಟಕ ಕಾರ ಪ್ರೇಕ್ಷಕ ಅಥವಾ ಸಾಮಾಜಿಕರನ್ನು ತನ್ನ ವಿಷಯವನ್ನಾಗಿರಿಸಿಕೊಂಡರೆ, ವಿಮ ರ್ಶಕ ಈ ನಾಟಕಕಾರನನ್ನೂ, ಅವನೊಂದಿಗೆ ಸಾಮಾಜಿಕನನ್ನೂ ಅಭ್ಯಸಿಸಿ ವಿಮರ್ಶೆಗೆ ತೊಡಗಿದ್ದಾನೆ ವಿಮರ್ಶಕ. ಇವರಿಬ್ಬರಿಗೂ ಮಧ್ಯಸ್ಥ ಅಥವಾ ಸಹಾಯಕನೆಂದರೆ ಪ್ರೇಕ್ಷಕ. ಈ ಮೂರೂ ಪ್ರಮುಖ ಪಾತ್ರಗಳನ್ನು ಕೆಳಗಿನಂತೆ ವಿಶ್ಲೇಷಿಸಬಹುದು.

ನಾಟಕದ ಆರಂಭದ ಹಂತದ ವೈಚಾರಿಕ ಸಂವಾದದಲ್ಲಿ ನೇರ ಸ್ಪರ್ಧಿಗಳೆಂದರೆ ನಾಟಕಕಾರ ಹಾಗೂ ವಿಮರ್ಶಕ. ಕೊನೆಕೊನೆಗೆ ಇವರಿಬ್ಬರ ಚರ್ಚೆಗೂ ವಸ್ತುವಾದ ಪ್ರೇಕ್ಷಕನೂ ಚರ್ಚೆಯಲ್ಲಿ ಭಾಗಿಯಾಗಿ ತನ್ನ ಬಗೆಗೆ ಇವರಲ್ಲಿರುವ ಅಭಿಪ್ರಾಯ ಗಳನ್ನು ಅಳೆದು ನೋಡಿ ಕೊನೆಗೆ ತನ್ನ ನಿಲುವನ್ನು ಸೂಚಿಸಿದ್ದಾನೆ.

ಇಲ್ಲಿ ಬರುವ ನಾಟಕಕಾರ ಮನುಷ್ಯನ ಸಹಜ ಪ್ರವೃತ್ತಿಗಳ ಪ್ರತೀಕ. ಈತ ನದು ಸೃಜನಾತ್ಮಕ ಪ್ರತಿಭೆ. ಇಂದಿನ ಮಾನವ ಪ್ರಗತಿ ಸಾಧಿಸಿದ್ದಾನೆ ಎಂಬುದರ ಕುರಿತು ಇವನ ಧೋರಣೆ ವಿಚಿತ್ರವಾಗಿದೆ. ಸಂಪ್ರದಾಯಪ್ರಿಯನಾದ ಈತ ಹಳೆ ಯದೇ ಮೇಲೆನ್ನುವವ. "ಪ್ರಗತಿ ಆಗಿಲ್ಲ. ಆದಷ್ಟಕ್ಕೂ ಸರಿಯಾದ ಅರ್ಥವಿಲ್ಲ" ಇದು ಇವನ ವಾದ. ಭೌತಿಕವಾಗಿ ರಷ್ಯಾ, ಅಮೇರಿಕಾಗಳಿಗೆ ಹಾಗೂ ಬೌದ್ಧಿಕವಾಗಿ ತನ್ನ ವಿಚಾರಗಳಿಗೆ ಪ್ರತಿನಿಧಿಗಳನ್ನಾಗಿಸಿ ನಾಟಕಕಾರ ಎರಡು ಅಸ್ತ್ರಗಳ ಪಾತ್ರಗಳನ್ನು ಸೃಷ್ಟಿಸಿ, ತನ್ನ ವಾದವನ್ನು ಚಮತ್ಕೃತಿಯಿಂದ ಬಿಂಬಿಸಿದ್ದಾನೆ. ಬುದ್ಧಿಗೇಡಿ ಗಳಾದ ಅಸ್ತ್ರಗಳು, ಬುದ್ಧಿವಂತನಾದ ಮನುಷ್ಯನಿಗಿಂತ ಮೇಲೆಂಬುದು ಈ ಸಂದರ್ಭ ದಲ್ಲಿ ಬಿಂಬಿತವಾದ ವಿಚಾರ. ಪ್ರಗತಿಯ ಹೆಸರಿನಲ್ಲಿ ಜನ ಇಂದು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆಂಬುದು ನಾಟಕಕಾರನ ಆರೋಪ. "ಕೇವಲ ತೋರಿಕೆಯ ಜ್ಞಾನದಿಂದ ಮುಗ್ಧರನ್ನು ಮೋಸಗೊಳಿಸುವ ಧೂರ್ತರ ತಂಡ". "ಭಟ್ಟಂಗಿಗಳು" ಇವು ನಾಟಕಕಾರನಿಂದ ವಿಮರ್ಶಕರಿಗೆ ದೊರೆತ ಬಿರುದುಬಾವಲಿಗಳು! ಕೇವಲ ಬಹಿರಂಗದ ಬಣ್ಣಕ್ಕೆ ಮರುಳಾಗದ ಈತನ ಪ್ರಕಾರ ಪ್ರಗತಿಯೆಂದರೆ "ಒಳಗಿನ ಶಾಂತಿ". ಹಳತು-ಹೊಸತು ಎರಡನ್ನೂ ಹೋಲಿಸಿ ನೋಡಿದ ನಾಟಕಕಾರ ಕೊನೆಗೆ ತನ್ನ ನಿರ್ಧಾರವನ್ನು ಈ ರೀತಿ ತಿಳಿಸುತ್ತಾನೆ. "ಹಿಂದಿನವರು ಅನಾಗರಿಕ ಮನುಷ್ಯರಾಗಿದ್ದರು. ಇಂದಿನವರು ನಾಗರಿಕ ರಾಕ್ಷಸರಾಗಿದ್ದಾರೆ". ನಿಸರ್ಗದ

ಆಜ್ಞೆಯನ್ನು ನಾವು ಪಾಲಿಸಬೇಕಾದದ್ದು ಅನಿವಾರ್ಯ. ಅದರೊಂದಿಗೆ ಸೆಣಸಾಟ ಸಲ್ಲದು. ಸಾವು ಬಂದಾಗ ಸ್ವೀಕರಿಸಬೇಕು. ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನು ವವರು ಈ ಸಾವನ್ನು ಗೆಲ್ಲಬಲ್ಲಿರಾ ? ಎಂಬುದು ನಾಟಕಕಾರನ ಸವಾಲು ! ಇಂದಿ ನವರ ವ್ಯಾಪಾರೀ ಮನೋಭಾವಕ್ಕಾಗಿ ನಾಟಕಕಾರ ಬೇಸತ್ತಿದ್ದಾನೆ. "ಮಂಗಳ ಲೋಕದಲ್ಲಿ ಮಾರ್ವಾಡಿ ಆಗಬೇಕು. ಚಂದ್ರಲೋಕದಲ್ಲಿ ಚಹದ ಅಂಗಡಿ ತೆರೆಯ ಬೇಕು. ಅದಕ್ಕಾಗಿ ಸ್ಪರ್ಧೆ" ಎಂದು ಬಹಳ ಮಾರ್ಮಿಕವಾಗಿ ಮೂದಲಿಸಿದ್ದಾನೆ ನಾಟಕಕಾರ. ಬೆಳೆದು ನಿಂತ ಅಸಂಖ್ಯ ಜನರ, ಇನ್ನೂ ಬೆಳೆದು ನಿಂತಿರುವ ಅಸಂಖ್ಯ ಬೇಡಿಕೆಗಳಿಂದಾಗಿ ಇಂದು ಸುಖ ಸಾಧ್ಯವಾಗುತ್ತಿಲ್ಲ; ಅಶಾಂತಿ ತಾಂಡವವಾಡುತ್ತಿದೆ. ಇದು ನಾಟಕಕಾರನ ವಿಶ್ಲೇಷಣೆಯ ಕ್ರಮ. "ಜನ ಹೆಚ್ಚು, ಆಶೆ ಹೆಚ್ಚು, ಸುಖ ಕಡಿಮೆ, ಶಾಂತಿ ಇಲ್ಲ" ಅಲ್ಲದೆ "ಇಂದಿನವರದು ಅಗತ್ಯವಿಲ್ಲದ್ದರ ಆಶೆ ! ಅದಕ್ಕಾಗಿ ಶಾಂತಿ ಅಶಕ್ಯ" ಎನ್ನುತ್ತಾನೆ.

ಹೀಗೆ ಹೆಚ್ಚು ಮಟ್ಟಿಗೆ ಭಾವನಾಪ್ರಧಾನವಾದ ಅಥವಾ ಹೃದಯ ಸಂಬಂಧಿ ಯಾದ ಪರಿಶುದ್ಧಿಗಾಗಿ ಹಂಬಲಿಸುವ ನಾಟಕಕಾರ ಪುರಾಣ-ಮಾನವಪ್ರಿಯ. ಈ ದೃಷ್ಟಿಯಿಂದ ನೋಡಿದಾಗ "ಇಂದಿನ ಜನ ಮಂಗಗಳಿದ್ದಂತೆ. ಅವರ ಬಾಲ ಮಾತ್ರ ಕಳಚಿದೆ; ಮಂಗ ಬುದ್ಧಿ ಇನ್ನೂ ಮಾಯವಾಗಿಲ್ಲ" ಎಂದು ನಾಟಕಕಾರ ನೇರವಾಗಿ ವಿಡಂಬಿಸುತ್ತಾನೆ. ಅದೇನೇ ಆದರೂ ನಾಟಕಕಾರನ ವಿಚಾರವೈಖರಿ ಯುನ್ನೂ, ವಿಶ್ಲೇಷಣೆಯ ಪರಿಣತಿಯುನ್ನೂ ಮೆಚ್ಚಬಹುದೇ ವಿನಃ ಆತನ ಅಭಿಪ್ರಾಯ ವನ್ನು ಸಂಪೂರ್ಣವಾಗಿ ಸಮರ್ಥಿಸಲಾಗದು. ಏಕೆಂದರೆ ಅವನು ಪೂರ್ವಗ್ರಹ ಪೀಡಿತ ವಿಚಾರವಾದಿ. ಆತನದು ಭಾವನಾಪ್ರಧಾನವಾದ ಜೀವನ. ಹೊಸದರಲ್ಲಿ ಹುರುಳೇ ಇಲ್ಲವೆನ್ನುವ ಆತನ ಅಭಿಪ್ರಾಯ ಏಕಪಕ್ಷೀಯವೆನ್ನಿಸುತ್ತದೆ. ಹೀಗೆ ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದಾಗ ನಾಟಕಾರನಲ್ಲಿಯೂ ಅನೇಕ ಕೊರತೆ ಗಳಿದ್ದುದು ಕಂಡುಬರುತ್ತದೆ. ಈ ಕೊರತೆ ಹಾಗೂ ತನ್ನಲ್ಲಿಯೇ ಹುದುಗಿದ ಸಂದೇಹಗಳ ದೆಸೆಯಿಂದಾಗಿ ಆತ ವೈಕುಂಠಕ್ಕೆ ದಾರಿ ಗುರುತಿಸುವಲ್ಲಿ ವಿಫಲನಾಗಿ ದ್ದಾನೆ. ಅಂತೆಯೇ ಆತ ತನ್ನ ಅತಿ ದೂರದ ವೈಚಾರಿಕ ಹಾಗೂ ತಾರ್ಕಿಕ ಪ್ರಯಾಣದ ತರುವಾಯವೂ ಕೂಡ "ಮನುಷ್ಯನಿಗೆ ಬೇಕಾದದ್ದು ವೈಭವದ ವೈಕುಂಠ ..ದಾರಿ ಯಾವುದಯ್ಯಾ ವೈಕುಂಠಕೆ ? ಹಿಂದಿನವರ ಸರಳಬುದ್ಧಿಯ ಅಜ್ಞಾನವೋ ? ಇಂದಿನವರ ತೊಡಕಿನ ಅತಿಜ್ಞಾನವೋ ?" ಎಂಬ ಪ್ರಶ್ನೆಗಳನ್ನೇ ಎದುರಿಸಬೇಕಾಗುತ್ತದೆ. ಇಷ್ಟೆಲ್ಲ ವಾದವಿವಾದಗಳ, ವಿಚಾರಮಂಥನಗಳ ತರು ವಾಯುವೂ ಆತ ಉತ್ತರಕ್ಕಾಗಿ ತಡಕಾಡಬೇಕಾಗುತ್ತದೆ. ಅಷ್ಟರಲ್ಲಿ ತಾನೇ ಸೃಷ್ಟಿ ಸಿದ ಅಸ್ತ್ರಗಳಲ್ಲಿ ಒಂದು ತನ್ನನ್ನೇ ಬಲಿ ತೆಗೆದುಕೊಳ್ಳುತ್ತದೆ. ಹೀಗೆ ಸಾವು ಸುನಿಶ್ಚಿತ ವೆಂಬ ಶಾಶ್ವತ ಸತ್ಯದೊಂದಿಗೆ ಹಾಗೂ ವ್ಯಕ್ತಿ ಬುದ್ಧಿವಂತನಾಗಿದ್ದುದರ ಫಲವಾಗಿ ಅಲ್ಲದೆ ತಾನು ಮಾಡಿದ ತಪ್ಪಿನ ಫಲವಾಗಿ. ನಿಸರ್ಗವನ್ನು ಗೆಲ್ಲುವುದು ಒತ್ತಟ್ಟಿ

ಗಿರಲಿ ತನ್ನ ಸೃಷ್ಟಿಗೆ ತಾನೇ ಬಲಿಯಾಗಬೇಕಾಗುತ್ತದೆಯೆಂಬ ಸೂಚನೆಯೊಂದಿಗೆ ನಾಟಕಕಾರನ ಪಾತ್ರ ಅರ್ಥಪೂರ್ಣವಾಗಿ ಕೊನೆಗೊಳ್ಳುತ್ತದೆ. ಒಟ್ಟಿನಲ್ಲಿ ವಿಧ್ವಂಸಕ ವಾದ, ಉಪದ್ರವಿಯಾದ ವೈಜ್ಞಾನಿಕ ಯುಗದ ಅತಿಜ್ಞಾನಕ್ಕಿಂತ ನಿರುಪದ್ರವಿಯಾದ ಪುರಾಣಯುಗದ ಅಜ್ಞಾನವೇ ಒಳ್ಳೆಯದು ಎಂಬ ವಿಚಾರಯೋಗ್ಯವಾದ ವಾದ ನಾಟಕಕಾರನದಾಗಿದೆ.

ಇನ್ನು ಈ ಚರ್ಚೆಯಲ್ಲಿ ನಾಟಕಕಾರನಿಗೆ ನೇರಸ್ಪರ್ಧಿಯಾದ ಪಾತ್ರವೆಂದರೆ ವಿಮರ್ಶಕನದು. ನಾಟಕಕಾರನಿಗೆ ಯೋಗ್ಯ ಪ್ರತಿಸ್ಪರ್ಧಿ ಎನ್ನುವಂತೆ ಈತನದೂ ಚುರುಕಾದ ಬುದ್ಧಿಯೇ ಸರಿ. ಸಮಯೋಚಿತ ಹಾಗೂ ಸಮರ್ಥವಾದ ವಾದಸರ ಣಿಯ ಮೂಲಕ ಈತ ನಾಟಕಕಾರನನ್ನೂ ಒಮ್ಮೊಮ್ಮೆ ಬೆರಗುಗೊಳಿಸಬಲ್ಲವನಾಗಿ ದ್ದಾನೆ. ಈತ ಬುದ್ಧಿಯ ಸಿದ್ಧಾಂತಿಗಳ ಪ್ರತೀಕ. ಇವನದು ಯೋಜನಾತ್ಮಕ ಪ್ರತಿಭೆ. ಇವನ ದೃಷ್ಟಿಯಲ್ಲಿ ವಿಜ್ಞಾನವೇ ದೇವರು. ಪ್ರಗತಿ ಅಂದರೆ ಹೊರಗಿನ ಸುಖ.

ನವಮನ್ವಂತರದ ನಾಗರಿಕನಾದ ಈತ ಹೊಸದನ್ನು ಮೆಚ್ಚುವವ. ಹಳೆಯ ದನ್ನು ಯೋಗ್ಯವಾಗಿ ಪರಿಶೀಲಿಸಿ, ವಿಶ್ಲೇಷಿಸಿ ಅದರ ಗುಣದೋಷಗಳನ್ನು ಗುರು ತಿಸುವಾತ. ಕವಿ ಹಾಗೂ ಪ್ರೇಕ್ಷಕ ಇವರಿಬ್ಬರನ್ನೂ ಅರ್ಥೈಸಿಕೊಳ್ಳುವ ಶಕ್ತಿ ಇವನಿ ಗಿದೆ. ನಾಟಕಕಾರ ಅಧೋಗತಿಯ ಅಧ್ವರ್ಯುವಾದರೆ ಈತ ಪ್ರಗತಿಯ ಹಿಂಬಾಲಕ. ಈ ನಾಟಕದಲ್ಲಿ ನಾಟಕಕಾರನಿಗೆ ಪ್ರತಿವಾದಿಯಾಗಿ ಈತ ವ್ಯಕ್ತಪಡಿಸಿದ ವಿಚಾರ ಗಳನ್ನು ಸಂಗ್ರಹಿಸುವ ಮೂಲಕ ಈತನ ಪಾತ್ರವನ್ನು ಹೀಗೆ ನಿರೂಪಿಸಬಹುದು.

ಇವನ ಪ್ರಕಾರ "ಒಳಗಿನ ಶಾಂತಿ ಅನ್ನೋದಕ್ಕೆ ಅರ್ಥ ಇಲ್ಲ. ಹೊರಗಿನ ಸುಖ ಅನ್ನೋದನ್ನ ಪ್ರತ್ಯಕ್ಷ ಅನುಭವಿಸಬಹುದು." ಕೇವಲ ಕಲ್ಪನೆಯ ಬೆನ್ನು ಹತ್ತಿದ ವಿಚಾರವಾದಿಯಾದ, ವಸ್ತುನಿಷ್ಠನಾದ, ಪ್ರಗತಿಶೀಲನಾದ ಈತನಲ್ಲಿ ಭಾವ ನಾತ್ಮಕತೆ, ಉದ್ವೇಗಗಳಿಗೆ ಎಳ್ಳಸಿತೂ ಎಡೆಯಿಲ್ಲ. ಇಂದು ಬೆಳೆದಿದ್ದೇವೆ, ಮುಂದೆ ಇನ್ನೂ ಬೆಳೆಯಬಲ್ಲೆವೆಂಬ ಆಶಾವಾದಿ ಈ ವಿಮರ್ಶಕ. "ಶಬ್ದಗಳ ಅಬ್ಬರದಿಂದ ಶ್ರೋತೃಗಳನ್ನು ವಂಚಿಸುವುದು ಈ ಲೇಖಕರ ಮುಖ್ಯ ಕಲೆ. ಅದರಿಂದ ನಿಮ್ಮನ್ನು ಉಳಿಸೋದು ವಿಮರ್ಶಕರ ಕೆಲಸ "ಎನ್ನುತ್ತಾನೆ ಈತ. "ದಾರಿ ಯಾವುದಯ್ಯಾ ವೈಕುಂಠಕೆ" ಎಂಬ ಪ್ರಶ್ನೆ ಜೀವಿಸುವ ಯೋಗ್ಯತೆಯಿಲ್ಲದವರು ಕೇಳುವ ಪ್ರಶ್ನೆ, ಆತ್ಮಹತ್ಯೆಗೆ ಸಿದ್ಧರಾದವರು ಕೇಳುವ ಪ್ರಶ್ನೆ" ! ಎಂದು ಬಹಿರಂಗವಾಗಿ ಮೂದಲಿ ಸುವಷ್ಟು ಧೈರ್ಯಶಾಲಿ ಈತ. ನೈಸರ್ಗಿಕ ವಿಧಿಗಳಿಗೆ ಬಾಗಿ ಶರಣಾಗತಿಯನ್ನು ಸೂಚಿಸದೆ ಅದರ ವಿಧಿಗಳನ್ನು ಮುರಿದು ಮೀರಿ ನಿಲ್ಲುವ ಛಲ–ಪ್ರಯತ್ನ ಈತನದು. ನಾಟಕಕಾರನಂತೆ ಈತನೂ ಹಳತು–ಹೊಸತನ್ನು ಹೋಲಿಸಿ ನೋಡಿದ್ದಾನೆ. ಇವನ ಪ್ರಕಾರ "ಹಳೆಯ ಕಾಲದವರ ಬದುಕು ಪಶುಗಳ ರೀತಿಯದು. ಸ್ತ್ರೀಯರಿಗೆ ಅಂದು ಸಮಾನ ಸ್ಥಾನ, ಸ್ವಾತಂತ್ರ್ಯಗಳಿರಲಿಲ್ಲ."

ಹೀಗೆ ನಾಟಕಕಾರ ಸೂಚಿಸುವಂತೆ ಕೇವಲ ಬಹಿರಂಗದ ಸುಖಕ್ಕಾಗಿ ಹಂಬಲಿಸುವ, ಅಂತರಂಗದ ಪರಿಶುದ್ಧಿಯಿಂದ ದೂರವಾಗಿರುವ ಹಿಂಸಾಪ್ರವೃತ್ತಿಯನ್ನು ಹೊಂದಿದ ಈ ವಿಮರ್ಶಕನ ದೃಷ್ಟಿಯೂ ದೋಷಪೂರ್ಣವಾದುದೇ, ಹೊರನೋಟಕ್ಕೆ ಈತ ನಾಟಕಕಾರನೊಂದಿಗೆ ಹೋರಾಡಿ ಸಂದರ್ಭೋಚಿತವಾದ ಉತ್ತರಗಳನ್ನು ಕೊಟ್ಟಿದ್ದಾನೆಂಬುದು ನಿಜ; ಆದರೆ ಆ ಪ್ರಶ್ನೆಗಳಿಗೆ ಈತ ಆತ್ಮಸಾಕ್ಷಿಯಾಗಿ ಉತ್ತರಿಸಬಲ್ಲನೇ ? ಎಂಬ ಪ್ರಶ್ನೆಯೊಂದಿಗೆ ಇವನ ವ್ಯಕ್ತಿತ್ವವನ್ನು ಅಳೆಯಬೇಕಾಗುತ್ತದೆ.

ಅಂತೂ ವೈಕುಂಠಕ್ಕೆ ದಾರಿ ಹುಡುಕುವ ಬಗೆ ಹೇಗೆ ? ಆ ಪ್ರಶ್ನೆಗೆ ಉತ್ತರ ನೀಡಬಲ್ಲ ಏಕೈಕ ವ್ಯಕ್ತಿಯೆಂದರೆ ಸರ್ವತಂತ್ರ ಸ್ವತಂತ್ರನಾದ ಹಾಗೂ ಅಷ್ಟೇ ಮಹತ್ವದ ಪಾತ್ರವಾದ ಪ್ರೇಕ್ಷಕ ಮಹಾಶಯ ಮಾತ್ರ. ನಾಟಕಕಾರ ಹಾಗೂ ವಿಮರ್ಶಕ ಇವರಿಬ್ಬರನ್ನೂ ಬಹುಹೊತ್ತಿನ ವರೆಗೆ ಕೇಳಿ–ನೋಡಿ, ಇವರಿಬ್ಬರ ಲೋಪ-ದೋಷಗಳನ್ನು ಗುರುತಿಸಿದ ಈ ಪ್ರೇಕ್ಷಕ ವೈಕುಂಠದ ದಾರಿಗೆ ಸಂಬಂಧಿಸಿದಂತೆ ತನ್ನ ನಿರ್ಧಾರಕ್ಕೆ ಬಂದಿದ್ದಾನೆ. ಈತನ ಈ ನಿರ್ಧಾರದ ಪರಿಯನ್ನರಿಯುವುದರ ಮೂಲಕ ಇವನ ಪಾತ್ರವನ್ನು ಹೀಗೆ ಚಿತ್ರಿಸಲಾಗಿದೆ.

ಮೊದಮೊದಲು ಮೂಕನಂತಿದ್ದ ಪ್ರೇಕ್ಷಕ ನಾಟಕಕಾರ, ವಿಮರ್ಶಕ ಇವರಿಬ್ಬರನ್ನೂ ಅರ್ಥಮಾಡಿಕೊಂಡ. ಅವರಿಬ್ಬರ ವಾದ-ವಿವಾದಗಳನ್ನು, ಹೇಳಿಕೆಗಳನ್ನು ತೂಗಿ ನೋಡಿದ. ಇಬ್ಬರ ದಾರಿಗಳೂ ಬೇರೆ ಬೇರೆ ಎಂಬುದನ್ನು ಖಚಿತಪಡಿಸಿಕೊಂಡ, ಇದಕ್ಕೆ ಮೊದಲು 'ಅಪ್ರಬುದ್ಧನಾದ ಈತ ವೈಚಾರಿಕ ಸೆಳವಿಗೆ ಸಿಕ್ಕು ಒಮ್ಮೆ ನಾಟಕಕಾರನನ್ನೂ, ಇನ್ನೊಮ್ಮೆ ವಿಮರ್ಶಕನನ್ನೂ ಬೆಂಬಲಿಸುತ್ತಿದ್ದ. ಆದರೆ ಕೊನೆಗೆ "ನಮ್ಮ ನಮ್ಮ ದಾರಿ ನಮಗೆ" ಎಂಬ ವಾಸ್ತವಿಕ ನಿರ್ಧಾರಕ್ಕೆ ಬಂದ.

ಒಂದು ಅರ್ಥದಲ್ಲಿ ಅವರಿಬ್ಬರ ಚರ್ಚೆಗೂ ಕಾರಣನಾದ ಈತ ಅವರಿಬ್ಬರಿಗಿಂತ ಪ್ರಮುಖನೇ ಸರಿ. ಈತನೇ ನಾಟಕದ ಕೇಂದ್ರಬಿಂದು. ಈತ, ಈತನ ಬದುಕು, ಬದುಕಿಗೆ ಸಂಬಂಧಿಸಿದ ಅನೇಕ ವಿಚಾರಗಳು ಈ ನಾಟಕದ ವಸ್ತು. ಬರಬರುತ್ತ ಪ್ರಬುದ್ಧನಾದ ಪ್ರೇಕ್ಷಕನ ಸ್ವಂತದ ಅನುಭವ ಹಾಗೂ ವಿಶ್ಲೇಷಣೆ ಈ ಕೆಳಗಿನಂತಿದೆ : "ದೊಡ್ಡವರ ಸಲುವಾಗಿ ದರಿದ್ರರ ಆಹುತಿ: ಅನೇಕರ ಸುಖಕ್ಕೆ ಒಬ್ಬನ ಆಹುತಿ. ಮನುಷ್ಯ ಒಬ್ಬನ ಸೃಷ್ಟಿಯಲ್ಲಿ ಮಾತ್ರ, ಮನುಷ್ಯ ಸುಖಕ್ಕಾಗಿ ಮಿಕ್ಕ ಪ್ರಾಣಿಗಳ ಆಹುತಿ; ತನ್ನ ಸುಖಕ್ಕೆ ಇನ್ನೊಬ್ಬರ ಆಹುತಿ. ಪ್ರಾಚೀನ ಕಾಲದಿಂದಲೂ ಇದೇ ! ಆಗ ಅದಕ್ಕೆ 'ಯಜ್ಞ' ಅಂದರು. ಈಗ ಇದಕ್ಕೆ 'ವಿಜ್ಞಾನ', 'ಸಂಶೋಧನೆ' ಅಂತಾರೆ. ಇಬ್ಬರದೂ ಒಂದೇ ಮಂತ್ರ..... ಮಂತ್ರ ಒಂದೇ, ಶಾಸ್ತ್ರ ಒಂದೇ, ಶಸ್ತ್ರ ಮಾತ್ರ ಬದಲಾಗಿದೆ."

ಇವರಿಬ್ಬರೂ ಇತರರ (ನಮ್ಮ) ದುಃಖ ನೋಡಿ ನಲಿಯುತ್ತಿದ್ದಾರೆ. ಇಬ್ಬರೂ ಯಜ್ಞದ ಪುರೋಹಿತರು. ನಾವು ಮಾತ್ರ ಬಲಿಪಶುಗಳು. ಹಿಂದಿನ ಪುರೋಹಿತನ

ವೇಷ ಇಂದು ಬದಲಾಗಿದೆ. ಕೈಯಲ್ಲಿಯ ಅಸ್ತ್ರ ಚೂಪಾಗಿದೆ. ಇದು ಇವರಿಗೆ ಪ್ರಗತಿ ಆಗಿದೆ. ಹೀಗೆ ತನ್ನ ಹಾಗೂ ತನ್ನವರ ಬದುಕಿಗೆ ಸಂಬಂಧಿಸಿದ ಅನೇಕ ಘಟನೆಗಳನ್ನು, ವಿಷಯುಗಳನ್ನು ಈ ಪ್ರೇಕ್ಷಕ ಬಹಳ ಕೂಲಂಕಷವಾಗಿ ಹಾಗೂ ಮಾನವೀಯ ಮೌಲ್ಯಗಳ ಬೆಳಕಿನಲ್ಲಿ ಪರಿಶೀಲಿಸುತ್ತಾನೆ. ಸಂಸ್ಕೃತಿಯ ಪ್ರಭುವೆನ್ನಿಸಿದ, ಬುದ್ಧಿಯ ಭಾಂಡಾರದ ಒಡೆಯನೆನ್ನಿಸಿದ ಮಾನವ ಸಮಾಜದಲ್ಲೇ ಇಷ್ಟೊಂದು ಹಿಂಸೆ, ಅನ್ಯಾಯ, ಅತ್ಯಾಚಾರ, ಅಧಃಪತನಗಳಿರುವುದನ್ನು ಕಂಡು ಪ್ರೇಕ್ಷಕ ರೋಸಿ ಹೋಗಿದ್ದಾನೆ. ಹೀಗೆ ಪ್ರತಿಯೊಂದು ಹಂತದಲ್ಲೂ ಈ ಪ್ರೇಕ್ಷಕ ಇಂದಿನ ಸಾಮಾಜಿಕರ ಜೀವಂತ ಪ್ರತಿನಿಧಿಯಾಗಿ ಮೆರೆದಿದ್ದಾನೆ. ಅಂತೆಯೇ ಆತ ದೋಷಪೂರ್ಣ ದೃಷ್ಟಿಕೋನಗಳನ್ನು ಹೊಂದಿದ ಈ ಇಬ್ಬರೂ ಬುದ್ಧಿಜೀವಿಗಳನ್ನು ನಿರ್ಭಿಡೆಯಿಂದ ಧಿಕ್ಕರಿಸಿದ್ದಾನೆ. ಸಮಯ ಬಂದಾಗ ಇವರಿಬ್ಬರನ್ನೂ ವೈಚಾರಿಕ ಚಿಕಿತ್ಸೆಗೊಳಗು ಮಾಡುತ್ತಾ, ಒಳ್ಳೆಯ ಅಂಶಗಳನ್ನು ಗ್ರಹಿಸುತ್ತ ಬೆಳೆದ ಈ ಪ್ರೇಕ್ಷಕ ಕೊನೆಯದಾಗಿ ತನ್ನವರಿಗೊಂದು ಅರ್ಥಪೂರ್ಣವಾದ ಕಿವಿಮಾತನ್ನು ಹೇಳುವ ಮೂಲಕ ತನ್ನ ಬುದ್ಧಿಬಲವನ್ನು, ಸ್ವಾವಲಂಬಿತನವನ್ನು ಪ್ರದರ್ಶಿಸಿದ್ದಾನೆ : "ಇವರಿಬ್ಬರ ವಾದಗಳ ಬೆಳಕಿನಲ್ಲಿ ನಾವು ನಮ್ಮ ಸಿದ್ಧಾಂತಕ್ಕೆ ಬರಬೇಕು. ಈತ ತೋರಿಸಿದುದರ ಸಾರವೇನು ? ಈತ ಹೇಳಿದುದರ ಅರ್ಥವೇನು ? ಅದರಿಂದ ನಿಮಗೆ ಕಂಡದ್ದು-ತಿಳಿದದ್ದು ಏನು ? ನನಗೆ ತಿಳಿದಂತೆ "ಹಿಂದೆ ಯಾವುದೂ ಒಳ್ಳೇದಿದ್ದಿಲ್ಲ ಅಂತ ವಿಮರ್ಶಕ, ಮುಂದೆ ಯಾವುದೂ ಒಳ್ಳೇದಾಗೋ ಲಕ್ಷಣ ಇಲ್ಲ ಅಂತ ನಾಟಕಕಾರ, ಅಂತೂ ಇಂದಿನವರಿಗೆ ಕಣ್ಣಿಗೆ ಕಾಣಲಾರದ್ದು ಯಾವುದೂ ಒಳ್ಳೇದಲ್ಲ ಅಂತ ಇಬ್ಬರೂ ಹೇಳಿದರು." ಎಂದು ತಿಳಿಸಿದ ಪ್ರೇಕ್ಷಕ ಮುಂದುವರೆದು ಮತ್ತೆ ಹೇಳಿದ್ದಾನೆ : "ಕೊನೆ ಎಲ್ಲಿ ಅಂತ ಒಬ್ಬ ಕೇಳಿದ. ಕೊನೆ ಇಲ್ಲ ಅಂತ ಇನ್ನೊಬ್ಬ ಕೂಗಿದ. ಅದೇ ಕೊನೆಯನ್ನು ಕಣ್ಣಾರೆ ನೋಡೋ ಭಾಗ್ಯ ಇಬ್ಬರಿಗೂ ಇರಲಿಲ್ಲವೇನೋ ! ಆಗಿ ಹೋದದ್ದನ್ನು ಊಹಿಸಿ ಅದೇ ಒಳ್ಳೇದು ಅಂತ ಒಬ್ಬ, ಇನ್ನು ಮುಂದೆ ಆಗಲಿರೋದೇ ಒಳ್ಳೇದು ಅಂತ ಇನ್ನೊಬ್ಬ. ಇಬ್ಬರೂ ವರ್ತಮಾನ ಕಾಲದಲ್ಲಿ ಮಾತ್ರ ಕೊನೆಯವರೆಗೂ ಸಮಾಧಾನದಿಂದಿರಲಿಲ್ಲ. ಇಲ್ಲದ್ದು ಇತ್ತು ಅಂತ ವಿಚಾರ, ಬರೋದು ಬೇಕು ಅಂತ ವಾದ......ಎರಡೂ ದಾರಿ ಹಿಡಿದವರು ಹೋದರು...... ವೈಕುಂಠಕೆ......ದಣಿದು ಮಲಗಲಿಕ್ಕೆ. ವಿಚಾರ ಇಲ್ಲ......ವಾದಾನೂ ಬ್ಯಾಡ ಅನ್ನೋ ನಾವು ಹೊರಟಿವಿ ಮನೆಗೆ......ತಣಿದು ಮಲಗಲಿಕ್ಕೆ. ಇಷ್ಟೇ ಅಂತರ... ...ಅವರು ಏಳೋದಿಲ್ಲ .....ನಾವು ಏಳ್ತೀವಿ— ಆದ್ದರಿಂದ ವಿವೇಕ ಬುದ್ಧಿಯ ಆ ದೇವನಿಗೆ ವಂದಿಸಿ ಹೊರಡೋಣ ದಾರಿ ಯಾವುದಯ್ಯಾ ಎನ್ನುತ್ತ ಅಲ್ಲ, ದಾರಿ ನಮ್ಮದಯ್ಯಾ ಎನ್ನುತ್ತಾ" ಎಂಬ ವಿವೇಕಪೂರ್ಣ ಮಾತಿನೊಂದಿಗೆ ನಾಟಕಕಾರನ ಪಾತ್ರ ಹಾಗೂ ನಾಟಕ ಎರಡೂ ಕೊನೆಗೊಳ್ಳುತ್ತವೆ.

ಹೀಗೆ ಇಲ್ಲಿಯ ವರೆಗೆ ಅನಿರ್ಣಿತವಾದ ಒಂದು ವಿಷಯ ಈಗ ಈ ಪ್ರೇಕ್ಷಕನಿಂದ ನಿರ್ಣಿತವಾಗುತ್ತದೆ. ಹಳೆಯದು–ಹೊಸದು, ಧರ್ಮ – ವಿಜ್ಞಾನ ಎರಡನ್ನೂ ಉಚಿತ ವಾಗಿ ಸ್ವೀಕರಿಸುವ ಸಮಾನ ಮನೋಭಾವದ ವ್ಯಕ್ತಿಯಾಗಿ. ವೈಚಾರಿಕ ಸುವರ್ಣ ಮಾಧ್ಯಮವೊಂದನ್ನು ಸೂಚಿಸಿದ ಪ್ರೇಕ್ಷಕ, ನಾಟಕಕಾರ ಹಾಗೂ ವಿಮರ್ಶಕ ಇವ ರಿಬ್ಬರ ಮಧ್ಯದ ವೈಚಾರಿಕ ಸಂವಹನಕ್ಕೆ ಒಂದು ಸೇತುವೆಯಾಗಿದ್ದಾನೆಯೆಂಬುದು ನಿಸ್ಸಂಶಯ. ವೈಕುಂಠಕ್ಕೆ ನಮ್ಮ ನಮ್ಮ ದಾರಿಗಳೇ ಸುಗಮ ಹಾಗೂ ಅನಿವಾರ್ಯ ಎಂಬ ಹೊಸ ಸಿದ್ಧಾಂತವೊಂದರ ಪ್ರವಾದಿಯಾಗುತ್ತಾನೆ ಈ ಪ್ರೇಕ್ಷಕ.

ಇನ್ನು ಈ ನಾಟಕದಲ್ಲಿ ಸೃಷ್ಟಿಯಾದ ಉಪನಾಟಕ ಹಾಗೂ ಉಪಪಾತ್ರಗಳ ಬಗ್ಗೆ ಸಂಗ್ರಹರೂಪದಲ್ಲಿ ಹೀಗೆ ಹೇಳಬಹುದಾಗಿದೆ. ಒಟ್ಟಿಗೆ ಐದು ಉಪನಾಟಕ ಗಳು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಎಂಟು ಉಪ ಪಾತ್ರಗಳು ಇಲ್ಲಿ ಸೃಷ್ಟಿ ಗೊಂಡಿವೆ. ಇವೆಲ್ಲವೂ ಪ್ರಮುಖ ನಾಟಕದ ಹಾಗೂ ನಾಟಕಕಾರನ ವೈಚಾರಿಕ ಪ್ರತಿನಿಧಿಗಳೆಂಬುದನ್ನು ಗಮನದಲ್ಲಿಡಬೇಕು. ಒಂದೊಂದು ಉಪನಾಟಕದಲ್ಲಿ ಒಂದೊಂದು ವಿಚಾರದ ಮೇಲೆ ಬೆಳಕು ಚೆಲ್ಲಿದ್ದಾನೆ ನಾಟಕಕಾರ. ಈ ಹಿಂದೆ ಸೂಚಿಸಿ ದಂತೆ ನೇರವಾಗಿ ತಾನೇ ಹೇಳಬೇಕಾದುದನ್ನು ಈ ಪಾತ್ರಗಳಿಗೆ ಒಪ್ಪಿಸಿ ತಾನು ವಿಶ್ರಾಂತಿ ಹೊಂದುತ್ತಾನೆ. ಮೊದಲನೆಯದಾಗಿ ಅಸ್ತ್ರಗಳ ಸನ್ನಿವೇಶ, ಎರಡನೆಯ ದಾಗಿ ಕಾಡಮನುಷ್ಯ–ಆಧುನಿಕ ಡಾಕ್ಟರನ ಸನ್ನಿವೇಶ, ಮೂರನೆಯದಾಗಿ ಮಂತ್ರಿ–ರಾಜಕೀಯ ಮುಂದಾಳುವಿನ ಸನ್ನಿವೇಶ, ನಾಲ್ಕನೆಯದಾಗಿ ಕಾಡಮನುಷ್ಯ–ಆಧು ನಿಕ ಯುವತಿಯ ಸನ್ನಿವೇಶ, ಐದನೆಯದಾಗಿ ಹಾಗೂ ಕೊನೆಯದಾಗಿ ಮತ್ತೆ ಅದೇ ಅಸ್ತ್ರಗಳ ಸನ್ನಿವೇಶ ಹೀಗೆ ಒಂದರ ಮೇಲೊಂದರಂತೆ, ಆದರೆ ಅಷ್ಟೇ ಪರಿಣಾಮ ಕಾರಿಯಾಗಿ ಬಿಂಬಿತವಾಗಿವೆ ಈ ಸನ್ನಿವೇಶಗಳು.

ಬುದ್ಧಿಯ ಪ್ರಭುವಾದ ಮನುಷ್ಯನಿಂದ ನಿರ್ಮಿತವಾದ ಅಸ್ತ್ರಗಳು ಕೊನೆಗೆ ಅವನಿಗಿಂತ ತಾವೇ ಮಿಗಿಲೆಂಬುದನ್ನು ಸಾರಿ, ಜೊತೆ–ಜೊತೆಗೆ ಮಹಾದೇಶಗಳೆರಡರ ಮಧ್ಯೆ ತಲೆದೋರಿದ ದ್ವೇಷಾಸೂಯೆಗಳನ್ನೂ. ಅದರಿಂದೊದಗುವ ಹಿಂಸೆ–ಹತ್ಯಾ ಕಾಂಡಗಳನ್ನೂ ಸೂಚಿಸಿ; ಕೊನೆಗೆ ತಮ್ಮ ತಪ್ಪಿನ ಅರಿವಾಗಿ. ತಮ್ಮ ಪ್ರಭುವಿನ ಸ್ವಾರ್ಥದ ಬಗ್ಗೆ ತಿಳಿದು ಅವನನ್ನೇ ಬಲಿ ತೆಗೆದುಕೊಳ್ಳುವ ಮನೋಜ್ಞ ಸನ್ನಿವೇಶ ನಾಟಕಕ್ಕೆ ವಿಶೇಷ ಕಳೆ ತಂದಿದೆ. ಆರಂಭದಲ್ಲಿ ಪ್ರವೇಶಿಸಿ ತಮ್ಮ ಉದ್ದೇಶಗಳನ್ನು ತಿಳಿಸಿ ಮರೆಯಾದ ಅಸ್ತ್ರಗಳು, ನಾಟಕ ಮುಂದುವರೆದಂತೆಲ್ಲ ತಮ್ಮ ಪ್ರಭುವಿನ ನೀತಿಯನ್ನು ಅರ್ಥೈಸಿಕೊಂಡವೆಂಬ ಸೂಚನೆ ಇಲ್ಲಿ ಅಡಗಿದೆ. ಆತನ ದೋಷ ಪೂರ್ಣ ನೀತಿಯ ಅರಿವಾದೊಡನೆಯೇ ಅಸ್ತ್ರಗಳು ಮತ್ತೆ ಪ್ರವೇಶಿಸಿ ವಾಸ್ತವಿಕವಾಗಿ ನಾಟಕಕಾರ ಹಾಗೂ ವಿಮರ್ಶಕರಾಗಿದ್ದರೂ, ಸಾಂಕೇತಿಕವಾಗಿ ತಮ್ಮ ಪ್ರಭುಗಳನ್ನೇ ಬಲಿ ತೆಗೆದುಕೊಂಡು ಬಿಡುತ್ತವೆ. ಅಸ್ತ್ರಗಳು ನಿರ್ಜೀವವಾಗಿದ್ದರೂ ಅವು ಇಲ್ಲಿ ಮಾತಾಡಿವೆ. ಮನುಷ್ಯರಿಗೇ ಬುದ್ಧಿ ಕಲಿಸಿವೆ. ದಾರಿ ತೋರಿಸಿವೆ.

ನಿಸರ್ಗನಿಯಮಗಳನ್ನು ಒಪ್ಪಿ, ಸಾವು ಬಂದಾಗ ಸ್ವೀಕರಿಸಬೇಕೆಂದು ವಾದಿಸುವ ಕಾಡಮನುಷ್ಯ ಹಾಗೂ ನಿಸರ್ಗವನ್ನು ಗೆಲ್ಲಬೇಕು, ಸಾಯುವವರನ್ನು ಬದುಕಿಸಬೇಕೆಂದು ವಾದಿಸುವ ಆಧುನಿಕ ಡಾಕ್ಟರನ ಪಾತ್ರಗಳನ್ನೊಳಗೊಂಡ ಎರಡನೆಯ ಸನ್ನಿವೇಶವೂ ಅಷ್ಟೇ ಆಕರ್ಷಕವಾಗಿದೆ. ಈ ಹಿನ್ನೆಲೆಯಲ್ಲಿ ಹಳೆಯಕಾಲದ ಸಹಜ ಸ್ಥಿತಿ, ಹೊಸಕಾಲದ ವೈಜ್ಞಾನಿಕ ಪ್ರಗತಿ ಇವುಗಳ ಸೂಕ್ಷ್ಮ ಪರಿಚಯ ಒದಗಿ ಬರುತ್ತದೆ. ಕಾಡಮನುಷ್ಯ ಅಜ್ಞಾನದ ಅಥವಾ ಹಳೆಯದರ ಸಂಕೇತವಾದರೆ ಆಧುನಿಕ ಡಾಕ್ಟರ್ ವಿಜ್ಞಾನದ ಅಥವಾ ಹೊಸದರ ಸಂಕೇತವಾಗಿದ್ದಾನೆ. ನಿರುಪಯುಕ್ತ ವ್ಯಕ್ತಿಗಳನ್ನು ಸಾಯಬಿಡಬೇಕೆಂಬ ವಿಚಾರ ಕಾಡಮನುಷ್ಯನದಾದರೆ, ಅವರನ್ನು ಬದುಕಿಸಬೇಕೆಂಬ ವಾದ ಡಾಕ್ಟರನದಾಗಿದೆ. ಒಟ್ಟಿನಲ್ಲಿ ಇಬ್ಬರದೂ ತಪ್ಪೇ! ಆತ ಕೊಂದು ತಪ್ಪು ಮಾಡಿದರೆ ಈತ ಬದುಕಿಸಿ ತಪ್ಪು ಮಾಡುತ್ತಾನೆ. ಏಕೆಂದರೆ ಹಾಗೆ ಬದುಕಿದ ಸ್ವತಃ ಅವರಿಗಾಗಲಿ, ಅವರಿಂದ ಸಮಾಜಕ್ಕಾಗಲಿ ಸುಖ ಖಂಡಿತವಾಗಿಯೂ ಇಲ್ಲ. ಎಲ್ಲರೂ ದುಡಿಯಬೇಕು, ತಿನ್ನಬೇಕು ಎಂಬ ಅಭಿಪ್ರಾಯ ಹಳೆಯದು. ತರುಣರು ದುಡಿಯಬೇಕು, ವೃದ್ಧರು ವಿಶ್ರಾಂತಿ ಪಡೆಯಬೇಕು ಎಂಬ ಅಭಿಪ್ರಾಯ ಹೊಸದು. ಹೀಗೆ ನಾಟಕಕಾರ ಹೋಲಿಕೆ ನೀಡುತ್ತಾ, ಪ್ರಗತಿಗೆ ಸಂಬಂಧಿಸಿದ ತನ್ನ ವಿಚಾರಕ್ಕೆ ಪೂರಕವಾಗಿ ಈ ಸನ್ನಿವೇಶವನ್ನು ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾನೆ.

ರಾಜ ಹಾಗೂ ರಾಜಕೀಯ ಮುಂದಾಳುವಿನಿಂದೊಡಗೂಡಿದ ಮೂರನೆಯ ಸನ್ನಿವೇಶವಂತೂ ಇನ್ನೂ ಹೆಚ್ಚಿನ ವಾಸ್ತವಿಕತೆ ಹಾಗೂ ವಿಡಂಬನೆಗಳಿಂದ ವಿಜೃಂಭಿಸಿದೆ. ಇಲ್ಲಿಯ ರಾಜ ಹಳೆಯ ರಾಮರಾಜ್ಯದ ಪ್ರತೀಕನಾದರೆ ರಾಜಕೀಯ ಮುಂದಾಳು ಇಂದಿನ ಅರಾಜಕತೆಯ ಪ್ರತಿಬಿಂಬವಾಗಿದ್ದಾನೆ. ಅಂದಿನ ರಾಜ ಪ್ರಜರಿಗಾಗಿ ಇದ್ದರೆ, ಇಂದಿನ ಪ್ರಜೆಗಳು ರಾಜರಿಗಾಗಿ ಇದ್ದಾರೆ, ಎಂಬ ತಿರುವು ಮುರುವಿನ ವಾಸ್ತವಿಕತೆಯನ್ನು ಕವಿ ಮಾರ್ಮಿಕವಾಗಿ ಬಿಂಬಿಸಿದ್ದಾನೆ. ಪ್ರಜಾಕೋಟಿಯ ಕಲ್ಯಾಣ ಅಂದಿನ ರಾಜರ ಗುರಿಯಾಗಿತ್ತು. ವೈಯಕ್ತಿಕ ಸುಖೋಪಭೋಗಗಳು ಅಧಿಕಾರದ ದುರುಪಯೋಗಗಳು ಇಂದಿನ ಮುಂದಾಳುವಿನ ಗುರಿಯಾಗಿವೆಯೆಂಬುದು ನಾಟಕಕಾರನ ಆರೋಪ. ಹೀಗೆ ಕಣ್ಣಿಟ್ಟ ರಂಗದಲ್ಲೆಲ್ಲ ಅನ್ಯಾಯ–ಅರಾಜಕತೆಗಳೇ ಕಿಕ್ಕಿರಿದು ತುಂಬಿದ ಈ ನಿಮ್ಮ ಸಮಾಜದಲ್ಲಿ ಪ್ರಗತಿಯೆಂಬುದಿದೆಯೇ ? ಎಂಬ ಅಪ್ರತ್ಯಕ್ಷ ಪ್ರಶ್ನೆ ಇಂಥ ಪ್ರತಿಯೊಂದೂ ಸನ್ನಿವೇಶಗಳ ಹಿಂದೆಯೂ ಅಡಗಿ ಅಣಕಿಸಿರುವುದನ್ನು ಬುದ್ಧಿಜೀವಿಗಳು ಗುರುತಿಸಬಹುದಾಗಿದೆ. ಸಂವೇದನಾಶೀಲರು ಅನುಭವಿಸಬಹುದಾಗಿದೆ ! ಹಳೆಯ ರಾಜ ಪ್ರಜೆಗಳಿಗಾಗಿ ಯುದ್ಧದಲ್ಲಿ ತನ್ನ ಪ್ರಾಣ ನೀಗಲೂ ಸಿದ್ಧ ! ಅಂಥ ಪರಿಸ್ಥಿತಿ ಬಂದರೆ ಇಂದಿನ ನಾಯಕರ ದೃಷ್ಟಿಯಲ್ಲಿ ಪ್ರಜೆಗಳ ಹಕ್ಕುಗಳೆಲ್ಲ ಸಿಹಿದ್ದು ! ಒಟ್ಟಿನಲ್ಲಿ ತಕ್ಷಣ ತುರ್ತು ಪರಿಸ್ಥಿತಿಗೆ ಇವರು ಪ್ರಸಿದ್ಧ ! ಈ ಧಾಟಿಯ ಮೊನಚು ಮಾತುಗಳು ನಾಟಕದ

ತುಂಬ ಅಲ್ಲಲ್ಲಿ ಕಂಡು ಬಂದಿರುವುದರಿಂದ ವಿಡಂಬನೆಯೇ ನಾಟಕದ ಜೀವಾಳವೆನ್ನಿಸುತ್ತದೆ. ಈ ಇಬ್ಬರ ಮಧ್ಯದ ಸಂವಾದವನ್ನು ಇನ್ನೂ ವೈವಿಧ್ಯಮಯವಾಗಿ ನಿರೂಪಿಸುವ ಸಾಧ್ಯತೆಯಿದೆಯಾದರೂ ವಿಸ್ತಾರಭಯದಿಂದ ಕೇವಲ ಪ್ರಾತಿನಿಧಿಕ ವಿಷಯಗಳನ್ನು ಮಾತ್ರ ಎತ್ತಿಕೊಂಡು ಮಿಕ್ಕವುಗಳನ್ನು ಮೊಟಕುಗೊಳಿಸಲಾಗಿದೆ.

ಇಂದಿನ ಸ್ತ್ರೀಸಮಾಜದ ಸ್ವೇಚ್ಛಾಮನೋಭಾವವನ್ನು ಬಿಂಬಿಸುವ ಯುವತಿ, ಅಂದಿನ ಪುರುಷ ಸಮಾಜದ ಭೋಗಪ್ರಿಯತೆಯನ್ನು ಬಿಂಬಿಸುವ ಕಾಡಮನುಷ್ಯನ ಪಾತ್ರಗಳನ್ನು ಹೊಂದಿದ ಮತ್ತೊಂದು ಸನ್ನಿವೇಶ ವಿಶೇಷವಾಗಿ ಹಳೆಯ–ಹೊಸದರ ಹೋಲಿಕೆಯಾಗಿ ಒಡಮೂಡಿದೆ. ಸ್ವತಂತ್ರವಾಗಿ ಸ್ತ್ರೀಸಮಾಜ, ಪುರುಷಸಮಾಜಗಳನ್ನು ಚಿತ್ರಿಸಲು ಈ ಪಾತ್ರಗಳು ಹುಟ್ಟಿವೆಯಾದರೂ ಒಂದರೊಂದಿಗೆ ಇನ್ನೊಂದು ಸಮಾಜದ ಚಿತ್ರಣವೂ ಲಭಿಸಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಅಂದು ಒಬ್ಬ ವ್ಯಕ್ತಿ ಅನೇಕ ಸ್ತ್ರೀಯರನ್ನು ಹೊಂದಿದ್ದರೆ ಇಂದು ಒಬ್ಬ ಸ್ತ್ರೀ ಅನೇಕ ಪುರುಷರನ್ನು ಹೊಂದಬಯಸುತ್ತಾಳೆ. ಒಟ್ಟಿನಲ್ಲಿ ಎರಡೂ ಹಾಸ್ಯಾಸ್ಪದ ವಿಷಯಗಳೇ ! ಅಂದಿನ ಸ್ತ್ರೀಯರಿಗೆ ಸ್ವಾತಂತ್ರ್ಯವಿರಲಿಲ್ಲ ಇಂದಿನವರಿಗೆ ಸ್ವಾತಂತ್ರ್ಯ ಅಷ್ಟೇ ಏಕೆ ? ಸ್ವೇಚ್ಛೆಯೂ ಇದೆಯೆಂಬುದು ಇಲ್ಲಿಯ ವಿಶೇಷಾಂಶವಾಗಿದೆ. ಅಂದಿನ ಸ್ತ್ರೀಯರನ್ನು ಪುರುಷರು ಆಳುತ್ತಿದ್ದರೆ ಇಂದಿನ ಸ್ತ್ರೀಯರು ಪುರುಷರಿಗೇ ಬುದ್ಧಿ ಕಲಿಸಬಲ್ಲವರಾಗಿದ್ದಾರೆ. ಇದಲ್ಲದೆ ಲೈಂಗಿಕ ಹವ್ಯಾಸ, ಮಕ್ಕಳು ಬೇಕು-ಬೇಡ, ಅದರಲ್ಲೂ ಗಂಡು ಹೆಣ್ಣು ಸಂತಾನ ಈ ಎಲ್ಲ ವಿಚಾರಗಳೂ ಇಲ್ಲಿ ಚರ್ಚಿತವಾಗುತ್ತವೆ.

"ಒಟ್ಟಿನಲ್ಲಿ ಪ್ರಗತಿಯೆಂಬುದಿಲ್ಲ. ಏಕೆಂದರೆ ಅಂದೂ ಮದುವೆ ಇಲ್ಲ. ಇಂದೂ ಇಲ್ಲ, ಅಂದು ಒಬ್ಬ ಗಂಡಸಿಗೆ ಅನೇಕ ಹೆಂಗಸರು ಭೋಗದ ವಸ್ತು, ಇನ್ನು ಮುಂದೆ ಒಬ್ಬ ಹೆಂಗಸಿಗೆ ಅನೇಕ ಗಂಡಸರು ! ಅಂದು ಹುಟ್ಟಿದ ಹೆಣ್ಣುಮಕ್ಕಳನ್ನಷ್ಟೇ ಕೊಲ್ಲುತ್ತಿದ್ದರು, ಇಂದು ಹೊಟ್ಟೆಯೊಳಗಿನ ಹೆಣ್ಣು–ಗಂಡು ಎರಡರದೂ ಘಾತ. ಒಳ್ಳೇ ಪ್ರಗತಿ" ಎಂಬ ತಿರಸ್ಕಾರಭಾವದ ಪ್ರೇಕ್ಷಕನ ಮಾತಿನೊಂದಿಗೆ ಈ ಸನ್ನಿವೇಶ ಮುಗಿಯುತ್ತದೆ.

ಈ ಎಲ್ಲ ದೃಶ್ಯಗಳನ್ನು ತೆರೆಯ ಮರೆಯಲ್ಲಿ ಕುಳಿತು ನೋಡಿದವೋ ಎಂಬಂತೆ ಮೊದಲು ಬಂದು ಹೋದ ಅಸ್ತ್ರಗಳೇ ಕೊನೆಗೆ ಮತ್ತೆ ವೇದಿಕೆಗೆ ಬಂದು ನಾಟಕಕಾರ ಹಾಗೂ ವಿಮರ್ಶಕರನ್ನು ಸಂಹರಿಸುವ ಮಹತ್ವದ ಸನ್ನಿವೇಶ. ನಾಟಕಕ್ಕೊಂದು ನಿರ್ಣಾಯಕತೆಯನ್ನೊದಗಿಸಿಕೊಡುತ್ತದೆ. ಒಂದರ್ಥದಲ್ಲಿ ಈ ಅಸ್ತ್ರಗಳು ಪ್ರೇಕ್ಷಕನ ವಿಚಾರಕ್ಕೆ ಸಂವಾದಿಗಳಾದಂತೆ ಭಾಸವಾಗುತ್ತದೆ. ಏಕೆಂದರೆ ಅಲ್ಲಿ ಒಡೆಯರಿಂದ ದಬ್ಬಾಳಿಕೆ–ಶೋಷಣೆ–ಗುಲಾಮಗಿರಿಗೆ ಗುರಿಯಾದವು ಸ್ವತಃ ಅಸ್ತ್ರಗಳಾದರೆ ಇಲ್ಲಿ ಹಳೆಯ–ಹೊಸ ಯುಗಗಳೆರಡರಲ್ಲಿಯೂ ತುಳಿತಕ್ಕೆ ಸಿಕ್ಕು ಬಲಿಪಶುಗಳಾಗಿ ನೊಂದವರು ಪ್ರೇಕ್ಷಕರು ಅಥವಾ ಸಾಮಾಜಿಕರು. ನಾಟಕಕಾರ ಮತ್ತು ವಿಮರ್ಶಕರ

ಧೋರಣೆಗಳಿಂದ ಪ್ರೇಕ್ಷಕನೂ ಬೇಸರ ಹೊಂದಿದ್ದಾನೆ; ಅಸ್ತ್ರಗಳೂ ಬೇಸರ ಹೊಂದಿವೆ.

ದುರ್ಬುದ್ಧಿ, ದರ್ಪ, ಮಾತ್ಸರ್ಯಗಳಿಂದ ಕೂಡಿದ ಮನುಷ್ಯನ ಕೈಯ ಕೈದುಗಳಾಗಿ ನಾವೇಕೆ ಪಾಪಕ್ಕೆ ಬಲಿಯಾಗಬೇಕು ? ಎಂಬ ನಿರ್ಧಾರಕ್ಕೆ ಬಂದ ಅಸ್ತ್ರಗಳು ತಂತಮ್ಮ ಸೃಷ್ಟಿಕರ್ತನನ್ನು ಮುಗಿಸುವಲ್ಲಿಯೂ ಒಂದು ಸಂಕೇತಾರ್ಥ ಅಡಗಿರುವುದನ್ನು ಗುರುತಿಸಬಹುದು. ತಮ್ಮಲ್ಲಿಯ ವಿರಸ-ವಿಷಮತೆ ನಶಿಸಿ ದೇಶದೇಶಗಳ ಮಧ್ಯೆ ಸರಸ ಸಾಮರಸ್ಯಗಳು ನೆಲೆಸಲಿ. ನಮ್ಮಿಂದಾಗಿ ಈ ವ್ಯಕ್ತಿಗಳೂ ಇಂಥ ಪಾಠ ಕಲಿಯಲಿ ಎಂಬ ಮನೋಭಾವ ಅಸ್ತ್ರಗಳಿಂದ ಪ್ರಕಟವಾದುದನ್ನು ಮೇಲಿನ ಮಾತಿಗೆ ಉದಾಹರಣೆಯಾಗಿ ನೀಡಬಹುದು.

ಹೀಗೆ ಈ ನಾಲ್ಕೈದು ಉಪನಾಟಕಗಳ ಮೂಲಕ ನಾಟಕ ಅಲ್ಲಲ್ಲಿ ವೈಚಾರಿಕ ತಿರುವುಗಳನ್ನೂ, ಪುಷ್ಟಿಯನ್ನೂ ಪಡೆದಿದೆಯೆಂಬುದರಲ್ಲಿ ಸಂದೇಹವಿಲ್ಲ. ಪ್ರಗತಿಗೆ ಸಂಬಂಧಿಸಿದ ವಿಚಾರ ನಾಟಕದ ಸ್ಥಾಯೀಭಾವವಾದರೆ ಹಾಗೂ ನಾಟಕಕಾರ, ವಿಮರ್ಶಕ ಪ್ರೇಕ್ಷಕರ ಪಾತ್ರಗಳು ನಾಟಕದ ಸ್ಥಾಯೀಪಾತ್ರಗಳಾದರೆ, ಈ ಎಲ್ಲ ಉಪನಾಟಕಗಳೂ, ಉಪಪಾತ್ರಗಳೂ ಮೇಲಿನ ಸ್ಥಾಯಿಗೆ ಪೂರಕವಾದ ಸಂಚಾರೀ ಭಾವ ಹಾಗೂ ಸಂಚಾರೀಪಾತ್ರಗಳಾಗಿವೆ.

ನಾಟಕಕ್ಕೊಂದು ವಿಶೇಷ ಸ್ಥಾನ ಕಲ್ಪಿಸಿದ ಭಾಷೆ, ವಸ್ತು, ಸಂವಾದ, ವಿವೇಚನಾಕ್ರಮ, ಪಾತ್ರಪೋಷಣೆ, ರಂಗಸಜ್ಜಿಕೆ, ತಂತ್ರ, ಶೈಲಿ, ಪ್ರಯೋಗ ಇತ್ಯಾದಿಗಳ ಬಗ್ಗೆ ಹೇಳಬೇಕಾದುದೂ ಅತ್ಯವಶ್ಯಕ.

ಇಲ್ಲಿಯ ಭಾಷೆ ಗ್ರಂಥಸ್ಥವಾದರೂ ಜಟಿಲವಾಗಿಲ್ಲ. ರಸಗ್ರಹಣಕ್ಕೆ ತೊಂದರೆ ದಾಯಕ ಎಂಬಂತೇನೂ ಇಲ್ಲ. ಇಡೀ ಸಮಾಜವನ್ನೇ ಪ್ರತಿಬಿಂಬಿಸುವ ನಾಟಕದ ವಸ್ತುವಂತೂ ಅತಿ ಗಂಭೀರವಾದುದು. ಹಾಗೆ ನೋಡಿದರೆ ಅದು ಹೆಚ್ಚು ಜನಾಕರ್ಷಕವಲ್ಲದಿದ್ದರೂ ಮನಾಕರ್ಷಕವಾದುದಾಗಿದೆ. ಪಾತ್ರದಿಂದ-ಪಾತ್ರಕ್ಕೆ, ವಿಚಾರದಿಂದ ವಿಚಾರಕ್ಕೆ, ಸನ್ನಿವೇಶದಿಂದ ಸನ್ನಿವೇಶಕ್ಕೆ ನೆಗೆಯುವ ನಾಟಕಕಾರರ ವಿವೇಚನಾಕೌಶಲವಂತೂ ಅದ್ವಿತೀಯವಾದುದು. ಇಲ್ಲಿಯ ಪಾತ್ರಪೋಷಣೆ ಹಾಗೂ ಸಂವಾದದ ವೈಖರಿಯ ಹಿಂದೆ ಅಸಾಧಾರಣ ಪಾಂಡಿತ್ಯ ಅಡಗಿದೆ. ವಿಚಾರ ಮೊದಲೇ ಭಾರ ! ಅದನ್ನು ಪ್ರಮುಖವಾದ ಮೂರೇ ಮೂರು ಪಾತ್ರಗಳು ಹೊತ್ತು ನೀಗಿಸುವುದು ಇನ್ನೂ ಭಾರ ! ಈ ದೃಷ್ಟಿಯಿಂದ ಲೇಖಕರು ಮಧ್ಯದಲ್ಲಿ ಸೂಕ್ತವಾದ ಪ್ರಾತಿನಿಧಿಕ ಪಾತ್ರಗಳನ್ನೂ ಹೆಣೆದುಕೊಂಡಿದ್ದಾರೆ. ಅವು ವೇದಿಕೆಯ ಮೇಲೆ ಕಾಣುವುದು ಅತ್ಯಲ್ಪಕಾಲವಾದರೂ, ಪ್ರೇಕ್ಷಕರ ಮನೋವೇದಿಕೆಯ ಮೇಲೆ ಮಾತ್ರ ಬಹುಕಾಲ ಬದುಕಬಲ್ಲಂಥವಾಗಿವೆ. ಅವುಗಳ ಆಯುಷ್ಯ ಅಲ್ಪವಾದರೂ ಅಸ್ತಿತ್ವ ಮಾತ್ರ ಅನಲ್ಪ ! ಇಲ್ಲಿಯ ರಂಗಸಜ್ಜಿಕೆಯಂತೂ ತೀರ ಸರಳ ಹಾಗೂ ನಿರಾಡಂಬರ.

ಯಾವ ಹೆಚ್ಚಿನ ಪರಿಕರಗಳೂ ಇಲ್ಲಿ ಬೇಕಾಗಿಯೇ ಇಲ್ಲ. ಇದ್ದ ಕನಿಷ್ಠ ಪರಿಕರಗಳನ್ನು ಸಂದರ್ಭೋಚಿತವಾಗಿ, ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಪ್ರತಿಭೆ ಪ್ರಯೋಗಿಸುವವರಲ್ಲಿರಬೇಕು. ಈ ಎಲ್ಲ ವಿಷಯಗಳಿಂದೊಡಗೂಡಿದಂತೆಯೇ ಈ ನಾಟಕದ ತಂತ್ರನಾವೀನ್ಯತೆಯನ್ನು ನಿಚ್ಚಳವಾಗಿ ಗುರುತಿಸಬಹುದು. ಲೇಖಕರ ಶೈಲಿ ವಿಷಯಕ್ಕೆ ತಕ್ಕಂತೆ ಗಾಂಭೀರ್ಯದಿಂದೊಡಗೂಡಿದೆ. ಹೊರನೋಟಕ್ಕೆ ಎಲ್ಲವೂ ವಾಚ್ಯವಾಗಿ ಕಂಡರೂ ಪ್ರತಿಯೊಂದರಲ್ಲೂ ಧ್ವನಿಯಿದೆ, ವ್ಯಂಗ್ಯವಿದೆ. ಓದಿ ಊಹಿಸುವುದಕ್ಕಿಂತ ಹೆಚ್ಚಿನದನ್ನು ನೋಡಿ ತಿಳಿದುಕೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಇದನ್ನು ದೃಶ್ಯಕ್ಕೆ ಅಳವಡಿಸಿದಾಗ ಇದರ ಪ್ರಭಾವಪರಿಣಾಮ ಇನ್ನೂ ಹೆಚ್ಚಾಗುವುದೆಂಬುದು ನನ್ನ ಅನಿಸಿಕೆಯಾಗಿದೆ.

ಕೊನೆಯದಾಗಿ ಈ ನಾಟಕದ ಬಗ್ಗೆ ಇಡಿಯಾಗಿ ಕೆಳಗಿನ ಕೆಲವು ಮಾತುಗಳನ್ನು ಹೇಳಿ ಈ ಲೇಖನವನ್ನು ಮುಗಿಸಬಯಸುತ್ತೇನೆ : ಇದು ಸಾಮಾನ್ಯರ ಆಡುಂಬೊಲವಲ್ಲ. ಒಮ್ಮೊಮ್ಮೆ ಬುದ್ಧಿಜೀವಿಗಳದೇ ಇಲ್ಲಿ ಬಲಪರೀಕ್ಷೆ ನಡೆಯುತ್ತದೆ ಅಂದಾಗ ಸಾಮಾನ್ಯರ ಪಾಡೇನು ? ಇಲ್ಲಿ ಸಾಮಾನ್ಯ ತರಗತಿಯ ರಂಜನೆಯಿಲ್ಲ ಬದಲಾಗಿ ಉನ್ನತ ಮಟ್ಟದ ಚಿಂತನೆಯಿದೆ, ಜೊತೆಗೆ ಅಲ್ಲಲ್ಲಿ ನವುರಾದ ಹಾಸ್ಯವೂ ಅಡಗಿದೆ. ವಿಚಾರ–ವಿಡಂಬನೆ ಸ್ವಾತ್ಮಶೋಧನೆಗಳು ನಾಟಕದ ಜೀವಾಳಗಳಾಗಿವೆ. ಇಲ್ಲಿಯ ವಿಷಯದ ಬಗ್ಗೆ ಹೇಳುವುದಾದರೆ ಅದು ಸಮುದ್ರಸಮಾನ. ಅದರ ಅರ್ಥಗ್ರಹಣಕ್ಕಾಗಿ ಓದುಗ ಶ್ರಮಿಸಬೇಕಾಗುತ್ತದೆ. ತನ್ನ ತರ್ಕಶಕ್ತಿಯ ಗಡಿಯಾಚೆ ಹೋದ ಓದುಗ ಒಮ್ಮೊಮ್ಮೆ ಗೊಂದಲದಲ್ಲಿ ಬೀಳುವುದೂ ಉಂಟು !

ಒಟ್ಟಿಗೆ ನಾಟಕಮಾಧ್ಯಮಕ್ಕೆ ಭಾರವಾಗುವಷ್ಟು ವೈಚಾರಿಕತೆ ಇಲ್ಲಿ ನೆಲೆಸಿದೆ. ಅಂತೆಯೇ ಇತರ ನಾಟಕ ಪ್ರಪಂಚಕ್ಕೆ ಹೋಲಿಸಿ ನೋಡಿದಾಗ ಇದು "ಹಿಂಡನಗಲಿದ ಗಜ", "ಕಬ್ಬಿಣದ ಕಡಲೆ" ಎನ್ನಬಹುದು. ವೈಚಾರಿಕ ನಾಟಕಗಳಿಗೆ ಮಾತ್ರ ಸರ್ವೋನ್ನತ ಮಾದರಿ ಇದಾಗಿದೆ. ಇಲ್ಲಿಯ ಪಾತ್ರಗಳು ಮೌನ ತಳೆದರೆ ಚಿಂತನ, ಮಾತೆತ್ತಿದರೆ ಮಂಥನ ! ಹೀಗೆ ಇದೊಂದು ಚರ್ಚಾಕೂಟವೋ, ವಿಚಾರಸಂಕಿರಣವೋ ಎಂದೂ ಒಮ್ಮೊಮ್ಮೆ ಸಂದೇಹ ಮೂಡುತ್ತದೆ. "ವಿಚಾರವೇ ನಾಟಕವಾಗಿದೆ" ಯೆನ್ನುವ ಲೇಖಕರ ಸ್ವಂತದ ಮಾತನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. "ಇದುವರೆಗಿನ ನನ್ನ ನಾಟಕಗಳಲ್ಲಿ ವಿಚಾರಗಳನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತಿದ್ದೆ ಎಂದು ನನ್ನನ್ನು ಅಲ್ಲಲ್ಲಿ ದೂಷಿಸುವ ಗೆಳೆಯರ ಉತ್ಸಾಹ ಈ ನಾಟಕದಿಂದ ಹೆಚ್ಚುವ ಸಂಭವವಿದೆ. ಯಾಕೆಂದರೆ ಇಲ್ಲಿ ವಿಚಾರವನ್ನೇ ನಾಟಕವಾಗಿಸಿ ದೂಷಣೆಗೆ ಇನ್ನಷ್ಟು ಅರ್ಹನಾಗಿದ್ದೇನೆ. ಇದನ್ನು ಮೀರಿಯೂ ನನ್ನ ಬೆನ್ನನ್ನು ಯಾರಾದರೂ ತಟ್ಟಿದರೆ ಅವರಿಗೆ ನಾನು ಕೃತಜ್ಞ." ಹೀಗೆ ಇಲ್ಲಿ ಸೇರಿದ ವೈಚಾರಿಕತೆ ಆಕಸ್ಮಾತ್ತಾದುದಲ್ಲ ಬದಲಾಗಿ ಉದ್ದೇಶಿತವಾದುದು. ಅಂತೆಯೇ ವಿಚಾರಶೀಲರನ್ನು ಕವಿ ಆತ್ಮೀಯವಾಗಿ ಆಹ್ವಾನಿಸುತ್ತಿದ್ದಾನೆ ಅರ್ಥಗ್ರಹಣದ ಕುಸ್ತಿಗಾಗಿ ಹಾಗೂ ಅದರಲ್ಲಿ ಗೆದ್ದರೆ ತಕ್ಷಣ

ರಸಪಾಕದ ಭೋಜನಕ್ಕಾಗಿ ! ಸಾಮಾನ್ಯಮತಿಗಳ ದೃಷ್ಟಿಯಿಂದ ನೋಡುವುದಾದರೆ ಮಾತ್ರ ಈ ನಾಟಕ 'ನಿಲುಕದ ಹಣ್ಣು' ! ವಿಚಾರದ ಈ ಭದ್ರಕೋಟೆಯನ್ನು ಭೇದಿಸುವುದು ಅಂಥವರಿಂದ ಅಸಾಧ್ಯವೇ ಸರಿ ! ಏಕೆಂದರೆ ಒಂದಕ್ಕೆ ಹತ್ತಾಗಿ, ಹತ್ತಕ್ಕೆ ನೂರಾಗಿ ಒಟ್ಟಿನಲ್ಲಿ ರಕ್ತಬೀಜಾಸುರನ ರೀತಿಯಲ್ಲಿ ಹಬ್ಬಿ ಹರಿಯುವ ದೈತ್ಯ ಶಕ್ತಿಯ ವಿಚಾರದ ವಿಚಿತ್ರ ವ್ಯವಹಾರ ಇಲ್ಲಿದೆ. "ಪೃಥ್ವೀ ವಿಪುಲ, ಕಾಲ ನಿರವಧಿ", "ಬಾಲ ಮಾತ್ರ ಕಳಚಿದೆ ಮಂಗಬುದ್ಧಿ ಮಾಯವಾಗಿಲ್ಲ", "ಮಂತ್ರ ಒಂದೇ ಶಾಸ್ತ್ರ ಒಂದೇ, ಶಸ್ತ್ರ ಮಾತ್ರ ಬದಲಾಗಿದೆ", "ಒಳಗಿನ ಶಾಂತಿ ಅನ್ನೋದಕ್ಕೆ ಅರ್ಥ ಇಲ್ಲ. ಹೊರಗಿನ ಸುಖ ಅನ್ನೋದನ್ನ ಪತ್ಯಕ್ಷ ಅನುಭವಿಸಬಹುದು" ಇತ್ಯಾದಿ ಇನ್ನು ಅನೇಕ ಉಕ್ತಿಗಳನ್ನೂ ಮೇಲಿನ ಮಾತಿಗೆ ಉದಾಹರಣೆಗಳನ್ನಾಗಿ ನೀಡ ಬಹುದು.

ಒಟ್ಟಿನಲ್ಲಿ ಜ್ವಲಂತ ಹಾಗೂ ಜೀವಂತ ವಿಚಾರವೊಂದನ್ನು ಮಂಥನಕ್ಕೆ ಗುರಿ ಮಾಡಿ ಅದರಲ್ಲೂ ನಾಟಕ ಮಾಧ್ಯಮದಲ್ಲಿ ಅಳವಡಿಸಿ, ಎಲ್ಲಿಯೂ ವೈಪರೀತ್ಯಕ್ಕೆ ಎಡೆ ನೀಡದೆ, ಉಚಿತ ನಿರ್ಧಾರಕ್ಕೆ ಬರುವ ಲೇಖಕ ಪ್ರತಿಭೆ ಅಸಾಮಾನ್ಯವಾದು ದೆಂದೂ, ಈ ಅಸಾಮಾನ್ಯ ಪ್ರತಿಭೆಯ ಫಲಸ್ವರೂಪವಾದ 'ದಾರಿ ಯಾವುದಯ್ಯಾ ವೈಕುಂಠಕೆ' ನಾಟಕ, ತಾನು ಯಶಸ್ವಿಯಾಗಿರುವ ಮೂಲಕ ಇತರ ವೈಚಾರಿಕ ನಾಟಕಗಳಿಗೂ ದಾರಿಯನ್ನು ತೋರಬಲ್ಲುದಾಗಿದೆಯೆಂದೂ ಧೈರ್ಯದಿಂದ ಹೇಳ ಬಹುದು.

●

ಅನುಭವ ಮಂಟಪ

ಜಿ. ಎಸ್. ಸಿದ್ಧಲಿಂಗಯ್ಯ

ಅನುಭವ ಮಂಟಪ ಆಗುವುದು ಯಾವಾಗ ?
ಮಾತು ಬೆಳಕಾದಾಗ ? ಬೆಳಕು ಮಾತಾದಾಗ ?
ಭೂಮಿ ಆಕಾಶಗಳ ಅಂತರ ಅಳಿದು ದಿಗಂತಗಳು
ಹತ್ತಿರ ಹತ್ತಿರ ಬಂದು ಮುಖಾಮುಖಿಯಾಗಿ
ಅಕ್ಕನ ಬತ್ತಲೆ ಅಣ್ಣನ ಪ್ರಾಮಾಣಿಕತೆ
ಅಲ್ಲಮತ್ವಗಳು ದಿವ್ಯಗಳ ಹಾದು ಗೆದ್ದಾಗ,
ಒಂದು ಕೈಯಲ್ಲಿ ರಾಟಿ ಮತ್ತೊಂದರಲ್ಲಾಕಾಶ
ಗೊಂದಲಗೊಳ್ಳದೆಯೆ ಬದುಕಿ ಮೋಹಮದ
ಮಾತ್ಸರ್ಯಗಳು ಎಲ್ಲ ಬದುಕಿನ ದ್ರವ್ಯಕ್ಕೆ ಕರಗಿ
ಪಂಚಭೂತಗಳು ಸೋತು ಗೆಳೆಯರೆ ಆಗಿ
ಭೂಮಿಯಲ್ಲೊಂದು ಮತ್ತೆ ಆಕಾಶದಲ್ಲೊಂದು
ಕಾಲೂರಿನಿಂತು ಸೌದೆ ಒಡೆಯುವ ನುಲಿಯ
ಹೊಸೆಯುವ ಮಡಿಯ ಮಾಡುವ ಅಕ್ಕಿ ಆಯುವ
ನುಡಿವ ಎಲ್ಲರಂಗೈಗಳಲ್ಲೂ ಬಯಲು !

ಅಡಿಯ ಬುಡದಲ್ಲಿ

ದೇವೇಂದ್ರಕುಮಾರ ಹಕಾರಿ

ಬೆಟ್ಟ, ಕಾಡು ಹೊಳೆ ಹಳ್ಳ
ಹಳ್ಳಿ, ನಗರ ದಾರಿ–ಹೀಗೆ
ಅಲೆಮಾರಿ ನಾನು, ಎಷ್ಟೋ ವರ್ಷಗಳಿಂದ:
ನಿನ್ನನ್ನು ನಾನು ಹುಡುಕಿದೆನೊ
ಅಥವ, ಹುಡುಕಿದೆಯೋ ನೀ ನನ್ನ,
ಒಗಟಾಗುತಿದೆ ಎಲ್ಲ ದಿನದಿಂದ ದಿನಕೆ !
ಇಲ್ಲಿ, ಎಲ್ಲಿ ಬೇಕೆಂದರಲ್ಲಿ
ಬೆಳಗು, ಗರಿಗೆದರಿದರೂನು
ಸಂಜೆ ಚಿಕ್ಕೆಜಾಲವಹರಡಿ
ಚಂದ್ರ ನಗೆ ಉಕ್ಕಿಸಿದರೂನು,
ಎಲ್ಲ ಒಟ್ಟೊಟ್ಟಾಗಿ ಮತ್ತೆ ಕತ್ತಲಕೂಪ
ದಲ್ಲಿ ಧುಮ್ಮಿಕ್ಕಿ ಧೀಂಕಿಡುವ ಹಿಕ್ಮತ್ತು!
ತುತ್ತುತುತ್ತಿಗೆ ಕತ್ತಿವರಸೆ ನೆತ್ತರ ಪರಿಸೆ
ಎಲ್ಲಿ ಕಾಲಿಟ್ಟರೂ ಹುಡದಿಗೀಡಾಗಿ
ಕೆರಳಿ ನರಳುವ ಬೀದಿ–
ಆದರೂ ಕೇಳು ಹೆಜ್ಜೆ ಕುಂತಿಲ್ಲ;
ಮತ್ತೆ ದಿನದಿನ ಹಗಲ ಬೆನ್ನೇರಿ
ಕುದುರೆಗಳ ಕೆನೆತ ನಿಂತಿಲ್ಲ
ರಾತ್ರಿ ನರ ನರ ಸೀಳಿ ಒಡಲಾಳದಿಂದ
ಸಿಂಹಗಳ ನೆಗೆತ–ಮೊರೆತ ಕಂತಿಲ್ಲ
ತಲೆಯು ತಪ್ಪೇಲಿಯುಲಿ
ಗುಳ್ಳೆ ಮೂಡುತ್ತವೆ,
ಮೂಡಿದಂತೆಯೆ ಕನಸನೆಯ್ದು ಒಡೆಯುತ್ತವೆ;
ಆದರೂ ಆ ನಿನ್ನ,
ನಿನ್ನ ಆಳಕ್ಕಿಳಿವ, ಅಥವ

ನಿನ್ನನೇ ನನ್ನೊಳಕ್ಕೆಳೆದುಕೊಳ್ಳುವ
ಹುಂಬ ಹಂಬಲವು ಕಳಚಿಲ್ಲ
ಹೇಳಲೇನು ?
ನನಗೆ ನಿನ್ನನು ಕುರಿತು ಆ……
ಅಂಥದೇನೂ ಇರಲೆ ಇಲ್ಲ–
ಆದರೂ ಬೆಂಬತ್ತಿ ಬಂದೆ
ನೀ ಬಿಡಲಿಲ್ಲ.
ನಿನ್ನ ನೆನಪಿನ ಮುದ್ದು ಕುಡಿದ
ಮತ್ತಿನಲಿ ಜೋಲಿಹೊಡೆಯುತ್ತ
ಹೆಜ್ಜೆ ಇಡುವಾಗ, ಏನೋ ತುಳಿಯುತ್ತೇನೆ;
ಅರೆ ! ಇದೇನೆಂದು ಬಾಗಿ ನೋಡುತ್ತೇನೆ:
ಅಡಿಯು ಬುಡದಲ್ಲಿ ಬಿರಿದ ಬದುಕು!

ಲೆಕ್ಕ

ಬಿ. ಎ. ಸನದಿ

ಬೆಳಗೆದ್ದು
ಆ ऽ ऽ ऽ
ಕಳಿಸಿ
ಇಷ್ಟಗಲ ಹಗಲ ಅನುಭವ
ಗಳಿಗೆ
ಕದದೆರೆದು ನಿಂದಾಗ
ಕೈಗೆ ದೊರೆತುದನೆಲ್ಲ
ತಿಂದದ್ದು ತೇಗಿದ್ದು
ಅವಸರವಸರದಲ್ಲಿ
ಗಬಗಬಾ ನುಂಗಿದ್ದು
ಹೊಟ್ಟೆ ಕೆಡಿಸಿದ್ದು
ಕಂಡು ಕನಕರಿಸುವ್ರೊಲು
ಇರುಳ ಹೊರಸಿನ ಮೇಲೆ
'ಚಂದ್ರಾವಾ ನಕ್ಕ'
ಹಗಲು ಹಾಕಿದ
ಪುಣ್ಯ ಪಾಪದ
ಲೆಕ್ಕ
ರಾತ್ರಿ
ಕನಸಿನೊಳಗಾವುದೋ
ಕ್ಷಣದಲ್ಲಿ
ಚೊಕ್ಕ !

ಸಂಪಿಗೆ ಮೊಗ್ಗು

ಅನುವಾದ : ಎಸ್. ಪಿ. ಪಾಟೀಲ

ಮರಾಠಿ ಮೂಲ : ಡಿ. ಡಿ. ಮಗದುಮ

ಬೆಳಗಿನ ಹಳದಿ ಎಳೆ ಬಿಸಿಲನು ಕುಡಿದು
ಮೈಮರೆತ
ಹಳದಿ ಸಂಪಿಗೆ !

ನಿನ್ನಲಿ ಅಭಿಜಾತ ಕಲೆಯನು
ಉತ್ಫುಲ್ಲಗೊಳಿಸುವ
ಉತ್ಕಟಗೊಳಿಸುವ
ಸೌಂದರ್ಯ ನೋಡುತಿದೆ
ಮತ್ತೆ
ಪಾಪ, ಹುಚ್ಚಾಗಿ ಹೋಗುತಿದೆ!
ತನ್ನನೇ ಮರೆತು
ಅಪರಿಚಿತ ಗುಂಗಿನಲಿ
ಮುಕ್ತಹಸ್ತದಿಂದ
ನಿನ್ನ ಮೇಲೆ ಎರಚಿ ಬಿಡುತಿದೆ
ತನ್ನದೇ ರಂಗ–ರೂಪ–ಗಂಧಗಳನು

ಆ ಅದೆಲ್ಲ
ರಸಿಕತೆಯಿಂದ ಮೈಮನಗಳಲಿ ಕಾಪಾಡಿಕೊಂಡು
ಅರ್ಪಿಸಿದೆ ನನಗೆ
ಅಂದಿನಿಂದ.........
ಮನದ ಹೂದೋಟದಲಿ ಅರಳಿದ
ಅದೊಂದು ನಗುವ ಸಂಪಿಗೆ ಮೊಗ್ಗನು
ಕಾಪಾಡುತ್ತಿರುವೆ
ಜೀವಕೋಶದಲಿ.

●

ಕೆಸರು–ನೊಸರು

ಶಾಮಸುಂದರ ಕೋಚಿ

ಸುತ್ತ ಮುತ್ತ
ಕತ್ತಿನವರೆಗೂ ತುಂಬಿ
ಉಸುರುಗಟ್ಟಿಸುವ
ಈ......ಹಾಳು ಕೆಸರಿನಲ್ಲಿ,
ಇನ್ನೂವರೆಗೂ
ಸಿಂಬಳದ ನೊಣದಂತೆ
ಸಿಕ್ಕು ಒದ್ದಾಡುತ್ತಿದ್ದೇನೆ
ಅರೆ ಸತ್ತವನಾಗಿ !
ಕೈ ಕಾಲು ಝಾಡಿಸಿ
ಕೊಡವಿ ಎದ್ದು ನಿಲ್ಲಬೇಕೆಂದು
ಯತ್ನಿಸಿದಾಗಲೆಲ್ಲ,
ಅಡಿ ಆಳಕ್ಕೆ......
ಕುಸಿದ ಅನುಭವ !
ಇನ್ನೇನು...ಕುಸಿದಾಯಿತು
ಎನ್ನುವಾಗ......,
ಮತ್ತೆ...ಎಲ್ಲಿಲ್ಲದ ಜಿಗುಟುತನ !
ಕೈ ಕಾಲು ಬಡಿಯುತ್ತೇನೆ
ಬಾಯಿ ಬಿಡುತ್ತೇನೆ
ಕೊನೆಗೆ...ಮೈಯನ್ನೆಲ್ಲ
ಪರಚಿಕೊಂಡಾದರೂ
ಎದ್ದು ನಿಲ್ಲುತ್ತೇನೆ !
ಆದರೆ...? !
ನಾ...ಬಂದು ನಿಂತದ್ದು
ಮತ್ತೂ...ಕೆಸರಲ್ಲೆ !!
ಅದೂ ಕೆಸರು

ಇದೂ ಕೆಸರು
ಎನ್ನುವ ಅನುಭವ
ವಾಗುವ ಹೊತ್ತಿಗೆ,
ಹೊಟ್ಟೆಯ ಸಿಟ್ಟು
ರಟ್ಟೆಯ ಶಕ್ತಿ
ಎರಡೂ ಇಂಗಿಹೋಗಿ
ಕೆಸರನ್ನೆ......
ಮೊಸರೆಂದು ತಿಳಿದು
ನಿ...ಟ್ಟು...ಸಿ...ರು...
ಬಿಡುತ್ತೇನೆ !

ಕ್ರೈಸ್ತೋಪಾಸನೆ ಮತ್ತು ಸಂಸ್ಕಾರಗಳು

(ಜಾನಪದ ವೈಜ್ಞಾನಿಕ ಭಾಷ್ಯ)

ವಿಲ್ಯಂ ಮಾಡ್ತ

ಪ್ರತಿಯೊಬ್ಬನ ಮೂಲ ಹಾಗೂ ಗುರಿ ತಾನೇ ಅಲ್ಲವೆಂಬುದು ಮಾನವನ ಸಮಷ್ಟ್ಯನುಭವ (shared experience). ಆತನ ಅಸ್ತಿತ್ವ (existence) ಪರಾವಲಂಬಿಯಾಗಿರುವುದೇ ಅದಕ್ಕೆ ಕಾರಣ. ಪರಾವಲಂಬಿ ಅಸ್ತಿತ್ವ*(ens-ab-alio)*ದ ಆಧಾರ/ಸ್ಥಲ (source and goal) ಸ್ವಾವಲಂಬಿ ಅಸ್ತಿತ್ವ *(Ens-a-Se)*. ಈ ಪರಮ ಸ್ಥಲ(the ultimate Ground)ವನ್ನು (Madtha 1976 : 36) ಜೀವಾತ್ಮ(body-soul-complex)ನಾಗಿರುವ ಮಾನವ, ಪರಮಾತ್ಮ(God)ನೆಂದು ಅಥವಾ / ಮತ್ತು ಇತರ ಹೆಸರುಗಳಿಂದ ಕರೆದಿದ್ದಾನೆ. ಈ ಜೀವಾತ್ಮ–ಪರಮಾತ್ಮರೊಳಗೆ ಸಂಬಂಧ ಕಲ್ಪಿಸಿಕೊಳ್ಳುವ ಮಾನವಕಲ್ಪಿತ ಸಾಧನವೇ ಉಪಾಸನೆ (worship). ಭಿನ್ನ ಭಿನ್ನ ಜನಸಂಸ್ಕೃತಿಗಳನ್ನವಲಂಬಿಸಿ ಬೇರೆ ಬೇರೆ ಉಪಾಸನಾ ಕ್ರಮಗಳೂ (rituals) ಸಂಸ್ಕಾರಗಳೂ (sacraments) ವಿವಿಧ ಮತಾಚರಣೆಗಳಲ್ಲಿ ಕಂಡುಬರುತ್ತವೆ.

ಪ್ರಸ್ತುತದಲ್ಲಿ ಕ್ರೈಸ್ತೋಪಾಸನೆಯ ಹಾಗೂ ಸಂಸ್ಕಾರಗಳ ಮೂಲಭೂತ ಅರ್ಥ(radical meaning)ವನ್ನು ಹುಡುಕಿ ಕಾಲಾನುಗತಿಯಲ್ಲಿ ಅವು ಪಡೆದ ಕವಚವನ್ನು ಬಿಚ್ಚಿ ಅವುಗಳ ನಿಜಾರ್ಥ(authentic meaning)ವನ್ನು ತೋರಿಕೊಡುವ ಪ್ರಯತ್ನ ಸ್ವಲ್ಪದರಲ್ಲಿ ಮಾಡಲಾಗಿದೆ.

ಕ್ರೈಸ್ತೋಪಾಸನೆ :

ಕಾಲಚಿನ್ಹೆ(signs of the times)ಗಳಿಗನುಗುಣವಾಗಿ ಉಪಾಸನೆ ಸಂಸ್ಕಾರಗಳ ಭಾಷ್ಯ (hermeneutics) ನಡೆಯಬೇಕಾದುದು ಎಂದಿನಂತೆ ಇಂದೂ ತೀರ ಅವಶ್ಯಕ. ಈ ಹಿನ್ನೆಲೆಯಲ್ಲಿ ಹಿಂದಿನ ಪಾರಿಭಾಷಿಕ ಪದಗಳಿಗೆ ಹೊಸ ಅರ್ಥವನ್ನು ಕೊಡುವ ಅನಿವಾರ್ಯ ಪ್ರಸಂಗವೂ ಬರಬಹುದು ಅಥವಾ ಹೊಸ ಅನುಭಾವಗಳನ್ನು ತಿಳಿಸಲು ಹೊಸ ಪದಗಳ ನಿರ್ಮಾಣವೂ ಬೇಕಾಗಬಹುದು. ಅದೇನೇ ಇದ್ದರೂ ಒಂದು ತಾತ್ವಿಕ ಹಿನ್ನೆಲೆಯಲ್ಲಿ ಈ ಕಾರ್ಯ ಜರಗಬೇಕು.

'ಕ್ರೈಸ್ತ'ದ ತಾತ್ವಿಕ ಹಿನ್ನೆಲೆ : ಮಾನವ, ಹುಟ್ಟಿನಿಂದ ಕ್ರೈಸ್ತನಲ್ಲ. ಆತ ಕೇವಲ ಮಾನವನಾಗಿ ವಿಕಾಸಹೊಂದಬಲ್ಲ ಪ್ರಾಣಿ. ಶಿಶುವಾಗಿ ಹುಟ್ಟಿದಾತ ತಕ್ಕುದಾದ ನಿರ್ಣಯಗಳನ್ನು ಮಾಡಿ ಸಮಾಜದ ನೆಲೆಯಲ್ಲಿ ಮುಂದೆ ಸಾಗಿದಾಗ ಹೆಚ್ಚೆಚ್ಚು ಮಾನವೀಕರಣ(humanised)ಗೊಳ್ಳುತ್ತಾನೆ. ಈ ನಿರಂತರ ಪ್ರಕ್ರಿಯೆಗೆ 'ಕ್ರೈಸ್ತ'ನಾಗುವುದು ಎಂಬುದು ಕ್ರೈಸ್ತ ಪರಿಭಾಷೆ :

> ಕ್ರೈಸ್ತನಾಗುವುದೆಂದರೆ ಒಂದು ವಿಶಿಷ್ಟ ಧರ್ಮಾವಲಂಬಿಯಾಗುವುದೆಂದರ್ಥವಲ್ಲ ... ..ಮಾನವನಾಗುವುದೆಂಬುದೇ ಅದರ ಅರ್ಥ.

(Bonhoeffer, 198 ; Cf. *etiam* Robinson 24–5).

ಮೇಲಿನ ತಾತ್ವಿಕ ಹಿನ್ನೆಲೆಯನ್ನು ಗಮನಿಸಿದಾಗ 'ಕ್ರೈಸ್ತ'ವೆಂದರೆ ಅದೊಂದು ಜೀವನದ ರೀತಿ (*modus vivendi* / life-style (Ac 9.2b) ಯೇ ಹೊರತು ಶುಷ್ಕ ವಿಧಿಕರ್ಮಗಳಿಗೆ ಅಂಟಿಕೊಂಡಿರುವ ಸಂಘಟನೆ (institution) ಅಲ್ಲವೆಂಬುದು ಮನವರಿಕೆಯಾಗದಿರಲಾರದು (Küng, 1978).

'ಕ್ರೈಸ್ತ'ದ ಐತಿಹಾಸಿಕ ಹಿನ್ನೆಲೆ : ಐತಿಹಾಸಿಕವಾಗಿ ಕ್ರಿಸ್ತ<*Christos* (Gk.) 'ಸ್ವಾಮಿ / **Lord** ಎಂಬುದು ಪಾಲೆಸ್ತಿನ್ ದೇಶದ ನಸರೇತ ಹಳ್ಳಿಯ ಬಡಗಿ ಕುಮಾರನಾದ ಯೇಸು (: *Yēshuā*(Heb)[೧] ವಿನ ಬಿರುದು. ಸುಮಾರು 1986 ವರ್ಷಗಳ ಹಿಂದೆ ಹುಟ್ಟಿದ[೨] ಈತನ ಜೀವನ ರೀತಿಯೇ ಉಪಾಸನೆಯಾಗಿತ್ತು.

ಹುಟ್ಟಿನಿಂದ ಯೇಸು 'ಅ–ಬ್ರಾಹ್ಮಣ' (non-priest), ಆತನ ಜಾತಿಯಿಂದ ಯಾರೂ ಪುರೋಹಿತನಾಗುವಂತಿರಲಿಲ್ಲ :

> ಯೇಸು ಒಬ್ಬ ಗೃಹಸ್ಥ (lay-man) ನಾಗಿದ್ದ. ಆತ ಹುಟ್ಟಿದ್ದು ಪೌರೋಹಿತ್ಯದ ಲೆವಿ ಕುಲದಲ್ಲಿಯಲ್ಲ; ಆತ ಯೂದ ಕುಲದವನು. ಆತನ

೧. ಯೇಸು ಐತಿಹಾಸಿಕ ವ್ಯಕ್ತಿಯೆಂಬುದನ್ನು ಖಚಿತಗೊಳಿಸಲು ಕೆಳಗಿನ ಆಧಾರಗಳು ಸಹಾಯಕವಾಗಿವೆ :

ಅ) ಅಕ್ರೈಸ್ತ / ರೋಂ – ಐತಿಹಾಸಿಕ ಮೂಲಗಳು :

1. Tacitus, *Annals*, 15.4
2. Suctonius, *Claudius*, 25.4
3. Pliny (the younger), *Epistola*, 10.96
4. Josephus, Antiquities, 20.200

ಆ) ಕ್ರೈಸ್ತ ಮೂಲ :

ಹೊಸ ಒಡಂಬಡಿಕೆ (NT) : ಇಂದಿನ ಬೈಬಲ್ ತಜ್ಞರ ಅಭಿಪ್ರಾಯದಂತೆ ಹೊಸ ಒಡಂಬಡಿಕೆಯನ್ನು ಐತಿಹಾಸಿಕ ಆಧಾರವೆನ್ನುವುದಕ್ಕಿಂತ ಹೆಚ್ಚಾಗಿ ಅನುಭಾವಿಕ ಪ್ರಮಾಣ (testimony of belief)ವೆಂದು ತಿಳಿದುಕೊಳ್ಳುವುದೇ ಲೇಸು (Rahner, 730).

೨. ಯೇಸುವಿನ [illegible] ಸು. ಕ್ರಿ. ಪೂ. 7–6 (?) Jones, 466

ಕಾರ್ಯಕ್ಷೇತ್ರ... ಗುಡಿಯಲ್ಲ, ಸಮಾಜ. ಆತ ಯಜ್ಞತರ್ಪಣಾದಿಗಳನ್ನು ಅರ್ಪಿಸುವುದರ ಬದಲು ಶೋಷಿತರ ಕಡೆಗೆ ಹೋಗಿ ಶೋಷಣೆ ಮಾಡುವವರನ್ನು ಖಂಡಿಸಿ ಶೋಷಿತರಿಗೆ ಅಭಯವನ್ನು ಕೊಟ್ಟ... ಹೀಗೆ ಪುರೋಹಿತರು ಧಾರ್ಮಿಕ ಸಂಕೇತಗಳ ಮೂಲಕ ಬಯಸಿದ ದೇವರ ಪ್ರೀತಿವಾತ್ಸಲ್ಯ ಹಾಗೂ ಮಾನವ ಐಕ್ಯತೆಗಳನ್ನು ಯೇಸು ಗೃಹಸ್ಥನಾಗಿದ್ದುಕೊಂಡೇ, ಲೌಕಿಕದಲ್ಲಿ ಕಣ್ಣುಕುಕ್ಕುವಂತೆ ನಿಜಮಾಡಿಕೊಟ್ಟ (Sobrino, 304).

ಯೇಸು ಉತ್ತಮೋತ್ತಮ ಕುಲದವನಲ್ಲದಿದ್ದರೂ, ವೃತ್ತಿಯಿಂದ ಬಹುಶಃ ನೇಗಿಲು ಮಾಡುವ ಕಾಯಕದವನಾಗಿದ್ದರೂ (Fernandes, 20–21), ತನ್ನ ಸುತ್ತಮುತ್ತಲಿನ ಸಮಾಜವನ್ನು ತೀಕ್ಷ್ಣವಾಗಿ ಗಮನಿಸುತ್ತಿದ್ದ. ಆತನಿಗಿಂತ ಪೂರ್ವದಲ್ಲಿ ಎಷ್ಟೋ ಕ್ರಾಂತಿಕಾರರು– ಪ್ರವಾದಿಗಳು (Prophets) viz: 1 S 15.22 Is 1.11ff, Ho 6.6, Am 5.21 ff, Ml 1.6 ff) — ಹುಟ್ಟಿದರೂ ಯೇಸುವಿನ ಸಮಾಜ ಇನ್ನೂ ಕಿವುಡಾಗಿತ್ತು; ಅದಕ್ಕೆ ತನ್ನ ಕನಸುಗಳನ್ನು ತಿಳಿಸಲು ಬಾಯಿ ಇಲ್ಲದಾಗಿತ್ತು; ಸ್ವಂತ ಕಾಲ ಮೇಲೆ ನಡೆಯಲು ಅದು ಹೆಳವಾಗಿತ್ತು ! ಇಂತಹ ದುಃಸ್ಥಿತಿಗೆ ಮೂಲಕಾರಣವೆಂದರೆ ಯೆಹೂದಿ ಸಮಾಜ ಆಗಲೇ ಒಂದು ಶೋಷಿತ (exploited) ವರ್ಗವಾಗಿತ್ತು !! ತನ್ನ ಸ್ಥಲದ ಅರಿವು ಅದಕ್ಕೆ ಸ್ವಯಂಪ್ರೇರಿತವಾಗಿರಲಿಲ್ಲ; ಕಾರಣ, ತನ್ನ ಮಹಾಶಕ್ತಿಯನ್ನೇ ಕಳೆದುಕೊಂಡು ಧಾರ್ಮಿಕ ರಾಜಕೀಯಾದಿ ಬವಣೆಗಳಿಂದ ಕುಷ್ಠರೋಗಿಯಂತೆ ಅದು ಬಳಲುತ್ತಿತ್ತು !!

ಅದೇ ಸ್ಥಿತಿಯಲ್ಲಿಯ ಈ ಧಾರ್ಮಿಕ ಸಮಾಜ(Chosen people of God)ದಲ್ಲಿ ಹುಟ್ಟಿ ಬೆಳೆದ ತೀಕ್ಷ್ಣಮತಿ ಯೇಸುವಿಗೆ ಈ ಹೀನಾವಸ್ಥೆಯ ಕಾರಣ ಮಾನವನನ್ನು ಮಾನವಪಾತಳಿಯಿಂದ ವಿಮುಖಗೊಳಿಸುವ (alienating) ಧರ್ಮವೆಂದೇ ಸ್ಪಷ್ಟವಾಯಿತು. ಧರ್ಮದ ಹಿನ್ನೆಲೆಯಲ್ಲಿರುವ ಪುರೋಹಿತರ ಕೈವಾಡದ ಅರಿವೂ ಆತನಿಗಾಯಿತು. ಆದುದರಿಂದ, ತನ್ನ ಸ್ವಂತ ಮನೆಬಳಗವನ್ನು ಲೆಕ್ಕಿಸದೆ ಹಳ್ಳಿಹಳ್ಳಿಗಳನ್ನು ಅಲೆದಾಡಿ, ಪಟ್ಟಣಗಳನ್ನು ಸುತ್ತಾಡಿ ರಾಮ–ರಾಜ್ಯ (God's Kingdom/Reign)ನಿಮ್ಮಲ್ಲಿಯೇ ಇದೆ (cf Jr 31.33; 1 Co 3, 16-17, 6.19). ಅದರ ಸ್ಪಷ್ಟರೂಪ ಸಮಾಜದಲ್ಲಿ ಕಾಣಬೇಕಾದರೆ, ಹೊಸ ಸಮಾಜ ರೂಪಿತಗೊಳ್ಳಬೇಕಾದರೆ, ಮಾನವ ಪರಿವರ್ತನೆ *(Metanoia)* ಹೊಂದಬೇಕು. (Jn 12.25-26, 15. 12-14). ಇಂದೇ ಅದಕ್ಕೆ ಸೂಕ್ತ ಸಮಯ *(Kairos)* ಎಂದು ಕೂಗಾಡಿದ (Mk 7.8, 15)[೩] ಕಿವಿಯಿದ್ದವರು ಕೇಳಿದರು; ಆದರೆ, ಕೆಲವರು ಮಾತ್ರ ಅತನನ್ನು ಹಿಂಬಾಲಿ

೩. ಇಂತಹ ಸಂದೇಶವನ್ನು ಕ್ರಿ. ಪೂ. ೬ ಶತಮಾನಗಳ ಹಿಂದೆಯೇ ಭಾರತದಲ್ಲಿ ಬುದ್ಧ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಸಿದರು. ಬಡವರು, ಗುಲಾಮರು, ಶೋಷಿತರು, ದಲಿತರು— ಹೀಗೆ ಬಾಯಿ ಇಲ್ಲದವರು (the voiceless) ಹೆಚ್ಚೆಚ್ಚು ಈ ಹೊಸಗಾಳಿಯ ಪ್ರಭಾವಕ್ಕೊಳಗಾಗಿ ಕುಲಜಾತಿವರ್ಗ ಸೂತಕವಿಲ್ಲದ ವಿಶ್ವ ಭ್ರಾತೃತ್ವ (Koinonia)— ಹೊಸ ಸಮಾಜವನ್ನು ರೂಪಿಸಿದರು. ಅನ್ಯರು Pagans) ಇವರನ್ನು 'ಕ್ರಿಸ್ತಿಯಾನೊಸ್'/' ಕ್ರೈಸ್ತರು (Ac 11 26, 26.29)ಎಂದು ಮೂದಲಿಸಿದರು (ಸು. ಕ್ರಿ. ಶ. 35–55)! ಇವರು ಮೂದಲಿಸಿದಂತೆ ಗ್ರೀಕ್ (Ac 6.1-6, 11. 19-25), ರೋಂ (Ac 28.16-31) ಚಕ್ರಾಧಿಪತ್ಯಗಳು ಕ್ರೈಸ್ತಾಂತರಗೊಂಡವು (1.8, Rm 10. 18, Col 1.23).

ಕ್ರೈಸ್ತಗಾಳಿ ರಭಸವಾಗಿ ಬೀಸಿದಂತೆ ಅದು ಸ್ವತಃ ಮಾಲಿನ್ಯಗೊಂಡದ್ದು ಅತಿ ಪ್ರಮುಖವಾದ ಹಾಗೂ ದುರದೃಷ್ಟಕರವಾದ ಐತಿಹಾಸಿಕ ಸಂಗತಿ ! ಮೆಲ್ಲ ಮೆಲ್ಲನೆ ಕ್ರೈಸ್ತನಿಷ್ಠೆ (christian faith) ಕ್ರೈಸ್ತ ಧರ್ಮವಾಗಿ ಸಂಘಟಿತಗೊಂಡು (Sobrino, 348) ಗ್ರೀಕ್, ರೋಂ ಧರ್ಮಗಳನ್ನು ಕೆಡಹಿ ಸಾರ್ವಭೌಮ ಧರ್ಮವಾಗಿ ತನ್ನ ಚಕ್ರಾಧಿಪತ್ಯ (imperialism)ವನ್ನು ನಡೆಯಿಸಿತು. ತತ್ಪರಿಣಾಮವಾಗಿ ಐತಿಹಾಸಿಕ ಬಂಡುಕೋರ ಯೇಸು (Jesus the Rebel) ಪೌರಾಣಿಕ ಕ್ರಿಸ್ತ (Mythical Christ)ನಾಗಿ ಪೂಜಿತನಾದುದರಿಂದ ಯೇಶ್ವಾಂದೋಲನವನ್ನು ಸಮಗ್ರ ಸಾಮಾಜಿಕ ಕ್ರಾಂತಿಯನ್ನಾಗಿ ಮುಂದುವರೆಯಿಸಲು ಕಾಲಾಂತರದಲ್ಲಿ ಇನ್ನೊಬ್ಬ ಯೆಹೂದಿ ಪ್ರವಾದಿ (Cf Hannelly), ಕಾರ್ಲ್ ಮಾರ್ಕ್ಸ್, ಹುಟ್ಟಬೇಕಾಯಿತು.

ಕ್ರೈಸ್ತೋಪಾಸನೆಯ ತಾತ್ವಿಕ ನೆಲೆ : ಕ್ರೈಸ್ತೋಪಾಸನೆ ತನ್ನ ಮೂಲಾರ್ಥವನ್ನು ಪಡೆದಾಗ ಮಾತ್ರ ಅದಕ್ಕೆ ಪ್ರಾಮಾಣ್ಯತೆ (authenticity) ಬರುತ್ತದೆ. ಯೇಸುವಿನ ಭಾವ ಪೂಜೆ(Worship in spirit and truth Jn. 4.21–24, 14.20–23)ಯೇ ನಿಜ ಕ್ರೈಸ್ತೋಪಾಸನೆಯಾದುದರಿಂದ ಇಂದಿನ ಕ್ರೈಸ್ತೋಪಾಸನೆ ಅರ್ಥ ಪಡೆದುಕೊಳ್ಳಬೇಕಾದರೆ ಅದು ಯೇಸುವಿನಲ್ಲಿಗೆ ಹೋಗಬೇಕು (Heb. 12.2–3) : Go back to the roots.

ಯೇಸುವಿನ ಪ್ರಜ್ಞಾಪಾತಳಿ(conscious level)ಯನ್ನು ಗಮನಿಸಿದಾಗ ಆತನಲ್ಲಿ ನಾವು ದ್ವೈತವನ್ನು ಕಾಣಲಾರೆವು. ಪ್ರತಿಯೊಬ್ಬ ಮಾನವನ ಪ್ರಜ್ಞಾಪಾತಳಿಯಲ್ಲಿ ನಾವು ಎರಡು ಸ್ತರಗಳನ್ನು ಗಮನಿಸುತ್ತೇವೆ : ಒಂದು. ಅಂತಃಸ್ತರ (depth dimension): ಇನ್ನೊಂದು ಬಹಿಃಸ್ತರ (surface dimension). ಸ್ವಪ್ರಜ್ಞೆ (Self consciousness) ಆತನ ಬಹಿಃಸ್ತರವಾದರೆ ಅದರ ಸ್ಥಲಪ್ರಾಯವಾದ ಬ್ರಹ್ಮಪ್ರಜ್ಞೆ(Self consciousness)ಯೇ ಆತನ ಅಂತಃಸ್ತರ(Kappen 1977 : 135). ಮಾನವ ಪ್ರಜ್ಞೆಯ ಈ ದ್ವಿಪಾತಳಿಗಳ ಸಾಮರಸ್ಯ (advaitic/integral union) ಆಗಬೇಕಾದದು ಆತನ 'ಇಲ್ಲಿ'ಯ ಜೀವನ ಶೈಲಿಯಲ್ಲಿ (1Jn. 3.17–

18). ಈ ಸಾಮ್ಯರಸ್ಯದಲ್ಲಿಯೇ ಮಾನವನ ವಿಕಾಸ ಹಾಗೂ ಪರಿಪೂರ್ಣತೆ (Rahner, 510).

ಮಾನವ ಜೀವನ ಕೇವಲ ಇರುವಿಕೆ (being *in* the world) ಅಲ್ಲ, ಅದು ಸಮಾಜಕ್ಕೋಸ್ಕರ (being *for* the world) ಕೂಡಿಕೊಂಡಿರುವಿಕೆ (being *with* the world).[೪]

ಕ್ರೈಸ್ತೋಪಾಸನೆಯ ಆದರ್ಶ : ಯೇಸು.

ಮಾನವ ಪ್ರಜ್ಞಾಪಾತಳಿಗಳ ಸಾಮರಸ್ಯಕ್ಕೆ ಯೇಸುವಿನ ಜೀವನವೇ ಆದರ್ಶ ವೆಂಬ ನಂಬಿಕೆಯೇ ಕ್ರೈಸ್ತ ಸತ್ಸಂಘ(christian fellowship)ದ ನಿರ್ಮಾಣಕ್ಕೆ ಮೂಲ ಕಾರಣ *(raison d'être)* ಹಾಗೂ ಅದರ ಬೆಳವಣಿಗೆಗೆ ಮೂಲ ಪ್ರಚೋದನೆ *(elán)*.

ಅನುಭಾವ (depth-experience)— ಅಂತಃಸ್ತರದ ಅನುಭವ[೫]— ಸರ್ವ ಧರ್ಮಗಳಿಗೆ ಅಡಿಪಾಯವಾಗಿ ನಿಲ್ಲುತ್ತದೆ. ಈ ಅಂತಃಸ್ತರ ಯೇಸುವಿಗೆ ತಂದೆ (*Abba*/Father) (Mk. 14.36) ಆಗಿ ಅನುಭಾವದಲ್ಲಿ ಕಂಡಿತು; ತಾನು ಅದರ ಬಹಿಃಸ್ತರವೆಂದು— ಮಗನೆಂದು— ಅನುಭಾವವಾಯಿತು (Jn. 14.9); ಆದರೂ ಅವರೀರ್ವರ ಸಂಬಂಧ ದ್ವೈತ (dual/separate) ಆಗಿರದೆ ಅದ್ವೈತವಾಗಿ(non-dual)ಯೇ ಯೇಸುವಿನ ಅನುಭಾವಕ್ಕೆ ಬಂತು(Jn. 10.30, 14.20, 17.21)[೬]

ಯೇಸುವಿನ ಈ ಅದ್ವೈತಾನುಭಾವ[೭]ವೇ ಯೇಶ್ವಾಂದೋಲನದ ಭದ್ರಬುನಾದಿ. ಈ ಮೂಲಾನುಭಾವ (core-experience) ವನ್ನು ಒಪ್ಪಿಕೊಂಡರೆ, ದೇವರನ್ನು

---

೪. Madtha, 1977 : 310 *etiam* f. n. 5.
Essentially human *esse* / existence is *co-esse* / co-existence. Hence the maxim : *Aut duo* aut nemo / Either two or none.

೫. ಅಂತಃಸ್ತರದ ಅನುಭವ(self-transcendence)ವನ್ನು ಕಾರ್ಲ್‌ಮಾರ್ಕ್ಸ್ ಕೂಡಾ ಒಪ್ಪಿಕೊಳ್ಳುತ್ತಾನೆಯುಷ್ಟೆಯಲ್ಲದೆ ಮಾನವನಿಗೂ ಮಾನವೇತರ ಪ್ರಾಣಿಗೂ ಇರುವ ಅಂತರಕ್ಕೆ ಈ ಪ್ರಜ್ಞಾಪಾತಳಿಯೇ ಕಾರಣವೆನ್ನುತ್ತಾನೆ (Kappen 1977 (b) : 62–63). ಇದು ಹೌದಾದರೆ ಮಾರ್ಕ್ಸ್‌ವಾದ(Marxism)ವನ್ನು ಭೌತವಾದ (materialism)ವೆಂದು ಕರೆಯುವುದಕ್ಕಿಂತ ಮಾನವತಾವಾದ (humanism) ಎಂದು ಕರೆಯುವುದು ಸೂಕ್ತ.

೬. ಇದನ್ನೇ ವೇದಾಂತದ ಪರಿಭಾಷೆಯಲ್ಲಿ "ಅಹಂ ಬ್ರಹ್ಮಾಸ್ಮಿ" 'my-Self is Brahman' ಎಂದು ಕರೆಯಬಹುದು.

೭. ಇಲ್ಲಿ 'ಅದ್ವೈತ/ತಾದಾತ್ಮ್ಯತೆ' ಎಂಬುದು ಭಕ್ತನ ಅನುಭಾವಿಕ 'ಪ್ರಜ್ಞಾಸ್ಥಿತಿ' (Conscious reality) ಯನ್ನು ಸೂಚಿಸುತ್ತದೆ ವಿನಹ 'ವಸ್ತುಸ್ಥಿತಿ' (Ontic reality)ಯನ್ನಲ್ಲ. ಜೀವಾತ್ಮ ಪರಮಾತ್ಮನಲ್ಲಿ ಪರವಶನಾಗುತ್ತಾನೆ, ತಾದಾತ್ಮ್ಯಗೊಳ್ಳುತ್ತಾನೆ ಅರ್ಥಾತ್ ತನ್ನ 'ಅಹಂ' ಪ್ರಜ್ಞೆಯನ್ನು ಕಳೆದುಕೊಂಡು 'ಬ್ರಹ್ಮ ಪ್ರಜ್ಞೆ' ಯಲ್ಲಿ ಐಕ್ಯನಾಗುತ್ತಾನೆ. ಕಾರಣ, ಇಲ್ಲಿ ತಾನಿದಿರೆಂಬ ಪ್ರಜ್ಞೆ ಶೂನ್ಯಗೊಳ್ಳುತ್ತದೆಯೇ ವಿನಹ ತಾನಿದಿರುಗಳ ಅಸ್ತಿತ್ವವಲ್ಲ.

ಹುಡುಕಿ ದೇವಸ್ಥಾನಕ್ಕೆ ಹೋಗಬೇಕಾಗಿಲ್ಲ (Jn 4. 21–24 Cf. Is 1. 10–17); ಯಾಕೆಂದರೆ, ದೇವ-ಸ್ಥಾನ ಮಾನವನಲ್ಲಿಯೇ ಇದೆ (lCo 6.19,3.16-17)

ದೇವರು ಸಮಾಜವನ್ನು ಬಿಟ್ಟು ಇಲ್ಲ. ಆತ ಸಮಾಜದ ಅಂತಃಸ್ಸ್ವರನಾಗಿ ಹಲವರ ಒಕ್ಕೂಟವನ್ನು ಸಾಧಿಸುತ್ತಾನೆ (Kappen. 1977 (a) : 135).

'ಸ್ಥಲ'ವನ್ನರಿತು ಮಾಡಿದ ಮಾನವಸೇವೆ (service of man) ಯೇ ಮೂಲತಃ ದೇವೋಪಾಸನೆ (service of God) :

> ಮಾನವರನ್ನು ಪ್ರೀತಿಸುವಲ್ಲಿ ದೇವರನ್ನು ಪ್ರೀತಿಸುತ್ತೇವೆ...ಯೇಸುವಿನಲ್ಲಿ ಮಾನವೀಯತೆ (humanism) ಮತ್ತು ಧರ್ಮ (religion) ಗಳ ಬಗೆಗೆ ದ್ವೈತಭಾವವಿರಲಿಲ್ಲ.

(ಅದೇ, 123-4, Lk 10. 29–37, Mt 25. 31–46, Ga 5–14, 1 Jn 4.7–8, Cf. Is 58. 6–7, 66. 1–2).

ವಸ್ತುಸ್ಥಿತಿ ಹೀಗಿರುವುದರಿಂದಲೇ ಯೇಸು, ಸೋಲೋಮನನು ಜೆರುಸಲೇಂ ನಗರದಲ್ಲಿ ಭವ್ಯವಾಗಿ ಕಟ್ಟಿಸಿದ ದೇವಸ್ಥಾನಕ್ಕೆ ಬೆರಳು ಮಾಡಿ 'ಈ ದೇವಸ್ಥಾನವನ್ನು ಕೆಡವಿರಿ' (Jn 2.19 *etiam* Mk 13.2, Mt 26.61s, Ac 6.14); ಯಾಕೆಂದರೆ, ಇಷ್ಟರಲ್ಲಿಯೇ(: 'ಮೂರು ದಿನಗಳಲ್ಲಿ')ಅದನ್ನು—ಹೊಸ ದೇವಸ್ಥಾನವನ್ನು : ಹೊಸ ಸಮಾಜ (New society) ವನ್ನು—ಸ್ಥಾಪಿಸುವೆನು' (Jn 2.19 Mt 26. 61s, 16.18g, Mk 14.58)[೧೦]-ಎಂದು ಹೇಳಿ ಆತ ತನ್ನ ಶಿಷ್ಯಂದಿರಿಗೆ ನವ ಸಮಾಜ (Ac 2.42-47; 4. 34-37)ದ ನಿರ್ಮಾಣಕ್ಕೆ ಕರೆಯುನ್ನಿತ್ತ. ಈ ಹಿನ್ನೆಲೆಯನ್ನು ಗಮನದಲ್ಲಿಟ್ಟಾಗ ಕ್ರೈಸ್ತಾವಲೋಕನದಲ್ಲಿ ದಾಸೋಹ *(diakonia)*ವೇ ಪೂಜೆ (Küng, 251-3)ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸ್ವತಃ

ಅನುಭಾವಿಕ ಪ್ರಜ್ಞಾಸ್ಥಿತಿಯ ಸಂದರ್ಭ(mystical context)ದ ಮಾತುಗಳನ್ನು ವಸ್ತುಸ್ಥಿತಿಯ ಸಂದರ್ಭ(Metaphysical context)ದಲ್ಲಿ ಬಳಸುವದರಿಂದ ಅನಾವಶ್ಯಕವಾಗಿ ಜಟಿಲ ತೊಂದರೆಗಳು ಉದ್ಭವಿಸುತ್ತವೆ (Madtha, 1976 : 40)

೮. Cf *etiam* Edwards, 67 & 77

೯. Cf. Kloosterman, 81; Moran 115 & 151; Kappen, 1977 (b) : 54; Gutiérrez, 194

೧೦. ಮಾನವೀಯತೆ, ಜವಾಬ್ದಾರಿತನ, ಪರಸ್ಪರ ಹಂಚಿಕೊಳ್ಳುವಿಕೆಗಳಿಂದಾಗಿ ವ್ಯಷ್ಟಿಪ್ರಜ್ಞೆಯು ಸ್ಥಲವಾಗಿರುವ ಸಮಷ್ಟಿಪ್ರಜ್ಞೆಯ ಅರಿವು ಮೂಡಿದಾಗ ಹೊಸ ಹಾಗೂ ಭದ್ರ ಸಮಾಜ ನಿರ್ಮಾಣವಾಗುತ್ತದೆ. (Kappen, 1970 : 60)

ಯೇಸುವಿನ ಜೀವನದಲ್ಲಿ ಈ ಮಾತು ನೂರಕ್ಕೆ ನೂರು ಸತ್ಯವಾಗಿತ್ತು (Mt 9. 13 f, Lk 17-20-21; Kung, 254)[೧೧]

ಯೇಸು ಪುರೋಹಿತ ಕುಲದಲ್ಲಿ ಹುಟ್ಟಲೂ ಇಲ್ಲ, ಆ ಕಸಬನ್ನು ಆಶಿಸಲೂ ಇಲ್ಲ (Kung, 174, 178-9); (Kappen (a) : 131) ಎಂಬ ಕಾರಣದಿಂದ ಆತ ಪುರೋಹಿತರನ್ನು ದ್ವೇಷಿಸಲಿಲ್ಲ: ಆದರ ಬದಲಾಗಿ ಆತ ಇನ್ನೂ ಮುಂದುವರೆದು ಪೌರೋಹಿತ್ಯಕ್ಕೆಯೇ ಕೊಡಲಿ ಪೆಟ್ಟನ್ನು ಹಾಕಿದ. ಅನ್ಯವಸ್ತುವನ್ನು ಅ/ಹಿಂಸಾತ್ಮಕವಾಗಿ ಬಲಿಯಾಗಿ ಕೊಟ್ಟು ಪೌರೋಹಿತ್ಯವನ್ನು (ritual celebration)ನಡೆಯಿಸುವ ಬದಲು ತನ್ನನ್ನೇ ಪರರ ವಿಮೋಚನೆ(liberation/salvation)ಗಾಗಿ ಸವೆಯಿಸಿ (ಬಲಿಯನ್ನಾಗಿ) ಅರ್ಪಿಸಿದನಲ್ಲದೆ(Lk 17, 32-33, Jn 12.24-25.Heb 9.12) ಭೋಜನದ ವೇಳೆಯಲ್ಲಿ ಸಾಂಕೇತಿಕವಾಗಿ ತನ್ನ ಜೊತೆಗಿದ್ದ ಶಿಷ್ಯಂದಿರಿಗೆ ರೊಟ್ಟಿಯನ್ನು ಹಂಚಿಕೊಟ್ಟು[೧೨] ದಾಸೋಹದಲ್ಲಿ (Mt 20.25-28) ಸರ್ವಾರ್ಪಣಭಾವದ ಸ್ಥಾನವನ್ನು ನಿದರ್ಶನವಾಗಿ ತೋರಿಸಿ ಈ ಭಾವಪೂಜೆಯನ್ನು (ಹಿಂದಿನ ಗುಡಿಪೂಜೆಯ ಬದಲಾಗಿ) ಮುಂದುವರೆಯಿಸಬೇಕೆಂದು ಅಪ್ಪಣೆಯನ್ನು ಕೊಡಿಸಿದ (Mt 26. 26-29, Mk 14. 22-25, Lk 22. 15-20 & Jn 4. 23).

---

೧೧. ತನ್ನ ನೆರೆಹೊರೆಯುವರನ್ನು ಪ್ರೀತಿಸುವುದೂ ದೇವರನ್ನು ಪ್ರೀತಿಸುವುದೂ ಆತನಿಗೆ [ಯೇಸುವಿಗೆ] ಒಂದೇಯಾಗಿತ್ತು.

(Kappen 1977 (b) ; 54) cf. *etiam* Rahner, 1841; Robinson, 90 and Sobrino 387f. ಫ್ಯೂರ್‌ಬಾಕ (Furbach)ನ "ಮಾನವ ದೇವ ಮಾನವನೇ" ಎಂಬ ವಾಕ್ಯದ ಮಥಿತಾರ್ಥ 'ದಾಸೋಹವೇ ಪೂಜೆ' ಎಂದು ನನ್ನ ಅಭಿಪ್ರಾಯ.

೧೨. ಯೇಸು ಆಗಾಗ ಪರಜಾತಿಯವರೊಡನೆ, ಕೆಳವರ್ಗದ ಜನರೊಡನೆ, ಸಹಪಂಕ್ತಿಭೋಜನ (Commensual fellowship) ಮಾಡುತ್ತಿದ್ದ (Mk 2.15–17ff). ಇದು ಪುರೋಹಿತರನ್ನು ಕೆರಳಿಸುತ್ತಿತ್ತು (Mt 11.19). ಗುಡಿ–ಪೂಜೆಗಿಂತ ಇಂತಹ ಭೋಜನಗಳಿಗೆ ಆತ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದ (Mk 13.2, 6.30–44, 8.1–10, 2.18–20, Küng, 382). ಉತ್ತಮರಂತ್ಯರೆಂಬ ಬೇಧಭಾವನೆಗೆ ವಿಶೇಷ ಪ್ರಾಶಸ್ತ್ಯವನ್ನೀಯುತ್ತಿದ್ದ ಪುರೋಹಿತ ವರ್ಗ ಯೇಸುವಿನ ಈ ಸಮತಾದೃಷ್ಟಿಯನ್ನು ಸಹಿಸಲಾರದಾದರು.

ಊಟದ ಸಮಯದಲ್ಲಿ ಊಟವನ್ನು ಸಾಂಕೇತಿಕವಾಗಿ ಹಂಚಿಕೊಡುವ ಒಂದು ಪದ್ಧತಿ ಯೇಸುವಿನ ಪೂರ್ವದಲ್ಲಿಯೇ ಯೆಹೂದಿಯರಲ್ಲಿತ್ತು. ಆದುದರಿಂದ ಆತ ಅದನ್ನು ಆರಂಭಿಸಿದವನಲ್ಲ (Küng, 273); ಆದರೆ ಯೇಸು ಅದನ್ನು ತನ್ನ ಜೀವನಶೈಲಿಯ ಸಂಕೇತವನ್ನಾಗಿ ತನ್ನ ಶಿಷ್ಯಂದಿರಿಗೆ ಕೊಟ್ಟುದುದರಿಂದ ಅದಕ್ಕೊಂದು ಹೊಸ ಅರ್ಥ (trans–signification) ಬಂದೊದಗಿತು. ಆದರೆ ಈ ಭೋಜನವೇ ಉಪಾಸನಾಕ್ರಮವಾಗಬೇಕೆಂಬುದು ಯೇಸುವಿನ ಆಶಯಿರಲಿಲ್ಲ: ಅದರ ಆಶಯವನ್ನು ಜೀವನ ಪಾತಳಿಗಿಳಿಸಬೇಕೆಂಬುದು ಮಾತ್ರ ಆತನ ಹೆಬ್ಬಯಕೆಯಾಗಿತ್ತು. (ಅದೇ.323; Kappen 1977 (a) : 103, Leon–Duffour, 147).

ಈ ಕ್ರೈಸ್ತ ಪೌರೋಹಿತ್ಯ (Christian priesthood) ಭಾವಪೂಜೆ (Jn 4.23-24)ಗೆ ಸಂಬಂಧಿಸಿದುದೇ ವಿನಹ ಕರ್ಮಕಾಂಡಕ್ಕೆ ಅಂಟಿಕೊಂಡಿದ್ದ ಪೂಜಾರಿಯತ್ವವಲ್ಲ (Rm 12.1–21).[೧೩] ಪ್ರಸ್ತುತದಲ್ಲಿ ಬುದ್ಧನ ಮನೋಧರ್ಮಕ್ಕೂ ಯೇಸುವಿನ ಮನೋಧರ್ಮಕ್ಕೂ ಹೆಚ್ಚು ಸಾಮಿಪ್ಯವಿರುವುದನ್ನು ಗಮನಿಸಬಹುದು (Kappen 1980 : 225).

ಯೇಸುವಿನ ಈ ಹೊಸ ಧೋರಣೆ ಹಾಗೂ ಕ್ರಮ ಸಾಂಪ್ರದಾಯಿಕ ಧರ್ಮಕ್ಕೆ—ಕರ್ಮಗಳಿಗೆ— ಅಂಟಿಕೊಂಡಿದ್ದ ಯೆಹೂದಿ ಸಮಾಜದಲ್ಲಿ (Walker, 3) ಒಂದು ದೊಡ್ಡ ಕ್ರಾಂತಿಯೆಂದರೆ ಅತಿಶಯೋಕ್ತಿಯಾಗಲಾರದು. ಯೇಸು ಪಥದಲ್ಲಿ ನಡೆದವರಿಗೆ ಗುಡಿಗಳೇ ಇಲ್ಲವೆಂದ ಮೇಲೆ ಪೂಜಾರಿಗಳ ಮಾತಂತೂ ಬಹುದೂರ ! (Ac 17.24–31). ಅವರು ತಮ್ಮ ಭೋಜನ ಸಮಯದಲ್ಲಿ ಯೇಸು ಕಲಿಸಿಕೊಟ್ಟ ಭಾವ–ಪೂಜೆಯು ಸ್ಮರಣೆ (memorial) ಆಗಿ 'ರೊಟ್ಟಿಯನ್ನು ಹಂಚಿಕೊಂಡು ಊಟ ಮಾಡುತ್ತಿದ್ದರು' (Ac 2.42ff). ಹೀಗೆ ತಮ್ಮ ಸರ್ವಸ್ವವನ್ನೇ ಪರರಿಗಾಗಿ ಹಂಚಬೇಕು, ಸವೆಯಿಸಿಕೊಳ್ಳಬೇಕೆಂಬ ಯೇಸುವಿನ ಬೋಧನೆಯನ್ನು ತಮ್ಮಲ್ಲಿ ಹಾಗೂ ಇತರರಲ್ಲಿ ಸ್ಥಿರೀಕರಿಸಿಕೊಳ್ಳುತ್ತಿದ್ದರು. (1 co 11·24).

ಅಂದಿನಂತೆ ಇಂದಿಗೂ ಸ್ವಾರ್ಪಣದಿಂದ ಮಾತ್ರ (Rm 12.1, Ep 5.1-2, 1 P 2.5) ನಾವು ನಿಜ ಕ್ರಿಸ್ತನನ್ನು (: 'flesh & blood' of Jcsus) 'ಸ್ವೀಕರಿಸಿ' ಕ್ರಿಸ್ತೈಕ್ಯ ಭಾವದಿಂದ ಜೀವಿಸುವುದು ಸಾಧ್ಯ. ಇಂತಹ ಸರ್ವಾರ್ಪಣ ಭಾವ ಪರಮುಖಿಯಾದಾಗ–ದಾಸೋಹವಾದಾಗ– ಅದು ಭಾವಪೂಜೆ / ಉಪಾಸನೆಯೆನಿಸಿಕೊಳ್ಳುತ್ತದೆ (Jn 13.33–5, 17.19 n, o)

ನಿಜ ಕ್ರೈಸ್ತೋಪಾಸನೆ : ಯೇಸುವಿನ ಉಪಾಸನಾ ಜೀವನವನ್ನು ಸ್ಮರಿಸುವುದೇ ಕ್ರೈಸ್ತ ಧರ್ಮ ಸಭೆ *(Ecclesia)*[೧೪]ಯಲ್ಲಿ ಉಪಾಸನೆ (liturgy cf. Kung 121, 126, 174). ಆದರೆ ಈ ಸ್ಮರಣೆ ಅರ್ಥಪೂರ್ಣವಾಗಿರಬೇಕಾದರೆ ಅದು

---

೧೩. Jesus of Nazareth ......does not call [for].... *inconsequential adoration* or even to mystical union. Nor of course does he call for literal imitation. But he does call for *practical, personal desci-pleship* (Küng, 545)

N. B. : The *emphasis* is not in the original.

೧೪. *Ecclesia* (< ekkaleo (Gk) 'ನಾನು ಕರೆಯುತ್ತೇನೆ' ಎಂಬ ಪದ ಹಿಬ್ರೂವಿನ *chala/Synagōge* ಎಂಬ ಪದಗಳಿಗೆ ಸಂವಾದಿಯಾಗಿ ಭಾಷಾಂತರಗೊಂಡಿದೆ. ಕ್ರೈಸ್ತ ಧರ್ಮಸಭೆ ಇಂದು ವಾಸ್ತವಿಕವಾಗಿ ಅನೇಕ ಧರ್ಮಸಭೆಗಳಾಗಿರುವುದು ಕಹಿ ಸತ್ಯ ! ಈ ಸತ್ಸಂಘ (I Co 1.2, Rm 1.7)ದ ಪರಮ ಗುರಿ ರಾಮರಾಜ್ಯ / ನ್ಯಾಯಬದ್ಧ ಸಮಾಜದ ಸ್ಥಾಪನೆ. ಅದಕ್ಕೆ ಸಾಮಾಜಿಕ, ಭೌಗೋಲಿಕ ರಾಜಕೀಯಾದಿ ಇತಿಮಿತಿ ಗಡಿಮೇರೆಗಳಿಲ್ಲ ಅದೊಂದು ಆಧ್ಯಾತ್ಮಿಕ, ಅನುಭಾವಿಕ ಕ್ಷೇತ್ರವೆಂದು ವಿವರಿಸಬಹುದು.

ಕ್ರಿಯಾತ್ಮಕವಾಗಿರಬೇಕು, ಕೇವಲ ಒಂದೆಡೆ ಸೇರಿಕೊಂಡು "ರೊಟ್ಟಿಯನ್ನು ಹಂಚಿ" ತಿಂದರೆ ಅದೊಂದು ಐತಿಹಾಸಿಕ ಸ್ಮಾರಕ ಚಿಹ್ನೆ (memorial *sign*) ಆಗಬಹುದೇ ಹೊರತು ಜೀವಂತ ಸಂಕೇತ (living *symbol*) / ಸಂಸ್ಕಾರ (sacrament) ಆಗಲಾರದು. ಕಾರಣ ಯೇಸುವಿನ ಭಾವ ಪೂಜೆಯನ್ನು[೧೫] (McKenzie, 132) ಸಂಕೇತಿಸುವ ನಮ್ಮ ತ್ಯಾಗಮಯ (self-sacrificing) ಜೀವನವೇ (Ga 2. 19-20) ನಿಜ ಕ್ರೈಸ್ತೋಪಾಸನೆ (Küng, 125).

ಗುಡಿ ಪೂಜೆ (temple worship) ಧರ್ಮದ ಅವಿಭಾಜ್ಯಾಂಗ. ಆದರೆ, ಯೇಶ್ವಾಂದೋಲನ (Jesuan movement) ಪ್ರತ್ಯೇಕ ಧರ್ಮವಲ್ಲ; ಯೇಸು ಧರ್ಮ ಸ್ಥಾಪಕನೂ ಅಲ್ಲ (Mt 5. 17f, Rm 3.31; Küng, 212); ಆತ ಓರ್ವ ಬಂಡಾಯಕೋರ (Rebel) / ಕ್ರಾಂತಿಕಾರಿ ವ್ಯಕ್ತಿ (Revolutionary); ಹಿಬ್ರೂ ಧರ್ಮವನ್ನೇ ಅಡಿ ಮೇಲು ಮಾಡಿದ ಪ್ರಚಂಡ ಶಕ್ತಿ (Mt 21.31, Lk 10. 30-37, 15.4-7, 11-32, 18.10-14). ಆದರೆ ಯೇಸುವಿನ ತರುವಾಯ ಕ್ಷಿಪ್ರದಲ್ಲಿಯೇ-ಕ್ರಿಸ್ತಶಕೆಯ ಮೊದಲನೆಯ ಶತಮಾನದೊಳಗೆಯೇ— ಈ ಯೇಶ್ವಾಂದೋಲನ ಹತ್ತರೊಟ್ಟಿಗೆ ಹನ್ನೊಂದಾದ ಧರ್ಮವಾಗಿ ಸ್ಥಿತ್ಯಂತರಗೊಂಡು (Sobrino, 384), ಹಿಂದಿನ ಹಾಗೂ ಸುತ್ತುಮುತ್ತಲಿನ ಧರ್ಮಗಳಿಂದ ಗುಡಿ-ಪೂಜಾರಿ ವ್ಯವಸ್ಥೆಯನ್ನು ಪಡೆದುಕೊಂಡು (Ac 15. 3-35) ತನ್ನತನವನ್ನೇ ಕಳೆದುಕೊಂಡಿತ್ತಲ್ಲದೆ ಕಾಲಕ್ರಮೇಣ ನಿಷ್ಠಾವಂತರ ಅಪನಂಬಿಕೆಗೂ ಗುರಿಯಾಗ ಬೇಕಾಯಿತು :

"ಪ್ರತ್ಯಕ್ಷ ಕ್ರೈಸ್ತ ಧರ್ಮಸಭೆ (Visible church)ಯ"ಮೇಲೆ ನನಗೆ ನಂಬಿಕೆಯೇ ಇಲ್ಲ...... ಇದರಿಂದ ವಿಮುಕ್ತನಾಗಿ ಇದಕ್ಕೆ ಸೀಮಿತನಾಗಿರದ ಸ್ವಾಮಿಯನ್ನು ಕಾಣಲು ನಾನು ಸಾವನ್ನಪ್ಪಿಕೊಳ್ಳಲೂ ಸಿದ್ಧನಾಗಿದ್ದೇನೆ"-

ಎಂದು ಯೇಸು ಸಭೆಯ ಧರ್ಮಗುರುಗಳಾದ ತೆಯೊರ್ದ್ ದೆ ಶಾರ್ದೆಂ ಹೇಳಿದ ಮಾತನ್ನು ಇಲ್ಲಿ ನೆನಪಿಸಬೇಕು (Speaight, 140).

ಗುಡಿಪೂಜೆಯ ಅಗ್ರಸ್ಥಾನವನ್ನು ಉಗ್ರವಾಗಿ ಕಿತ್ತೊಗೆದು ಅದರ ಸ್ಥಾನದಲ್ಲಿ ಭಾವಪೂಜೆಯನ್ನು ತಂದಿರಿಸಿದ (Jn 4.24, 14. 23, 2 Co 3.18, 5.16), 'ದೇವರನ್ನು ಹುಡುಕಿ ಹೊರಗೆ ಹೋಗಬೇಕಾಗಿಲ್ಲ. ಆತ ನಿಮ್ಮೊಳಗೆಯೇ ಇದ್ದಾನೆ' ಎಂದು ಘೋಷಿಸಿ ಬಂಡಾಯವೆಬ್ಬಿಸಿದ ಯೇಸುವನ್ನೇ ಭದ್ರವಾಗಿ ಗುಡಿಯೊಳಗಿಟ್ಟು ನೀನೇ ದೇವರೆಂದು ಅನೇಕ ಸಂಪ್ರದಾಯಗಳಿಂದಲೂ ಎರವಲು ಪಡೆದ ಪೂಜಾ ವಿಧಿಕರ್ಮಗಳಿಂದಲೂ ಭಕ್ತರು ಕಾಲಾಂತರದಲ್ಲಿ ಪೂಜಿಸಲಾರಂಭಿಸಿದರು. ಹೀಗೆ

೧೫. Cf. Father James T Burtchaell in *Commonweal*, Sept 4, 1970, P. 440.

'ಮಾನವ ಸೇವೆ' ದಾಸೋಹದಲ್ಲಿ ನಿರತರಾಗಬೇಕಾದವರು 'ದೇವರ ಸೇವೆ'ಗಾಗಿ ಗರ್ಭಗುಡಿಗೆ ತಮ್ಮನ್ನು ಸೀಮಿತಗೊಳಿಸಿದರು. ಸ್ವತ್ಯಾಗದ ಭಾವಪೂಜೆ (Mk 10.43–5, Lk 10.25–37)ಯು ಬದಲು ಗುಡಿಪೂಜೆ/ಬಲಿದಾನಗಳು ಯೇಸು ಸ್ಮರಣೆಯಾಗಿ ನಡೆದವು (Sobrino, 372, 384)! ಪೂಜಾರಿಗಳು ಗುಡಿಪೂಜೆಯನ್ನು ಮುಕ್ತಿಸಾಧನೆಯ ರಾಜಮಾರ್ಗವೆಂದು ಬೋಧಿಸಿ ವಾಸ್ತವಿಕವಾಗಿ ತಮ್ಮ ಆರ್ಥಿಕ ಸಂಪಾದನೆಯ ಹೆದ್ದಾರಿಯನ್ನಾಗಿ ರೂಪಾಂತರಿಸಿ ಸ್ವತಃ ವೈಗಳ್ರಾಗಿ ಬಿಟ್ಟರು. ಹೀಗೆ ಯಾವ ಸ್ಥಗಿತ ಧಾರ್ಮಿಕ ವ್ಯವಸ್ಥೆಯ ವಿರುದ್ಧ ಯೇಸು ಹೋರಾಡಿ ತನ್ನ ಜೀವನವನ್ನೇ ತೆತ್ತಬೇಕಾಯಿತೋ ಅದೇ ವ್ಯವಸ್ಥೆ ಬೇರೊಂದು ರೂಪದಲ್ಲಿ ಆತನ ಹೆಸರಿನಲ್ಲಿಯೇ ಭದ್ರವಾಗಿ ಸ್ಥಾಪಿತಗೊಂಡಿತು! ಯೇಸುವಿನ 'ದಾಸೋಹ' ಭಾವದಿಂದ (Mk 10.45) ಉದ್ಭವಿಸಿದ ಸತ್ಸಂಘ *(Koinonia)* ಗುಡಿಪೂಜೆಯಿಂದಾಗಿ ಪುರೋಹಿತ ('Church-brahmins') ಮತ್ತು ಪರಿಶಿಷ್ಟ ('Church-paraiahs) ಎಂದು ಎರಡು ವರ್ಗಗಳಾಗಿ ವಿಭಜಿತಗೊಂಡು (kung, 385–87, Madtha 1979 : 310) ಅಧಿಕಾರ ಪುರೋಹಿತರ ಕೈಯನ್ನು ಸೇರಿದರೆ ಸೇವೆ ಪರಿಶಿಷ್ಟರ: ಸಾಮಾನ್ಯ ಕ್ರೈಸ್ತರ (laity) ಸೊತ್ತಾಯಿತು.

ಇಂದಿನ ಪರಿಸ್ಥಿತಿಗೆ ಪ್ರಸ್ತುತ (relevant) ಆಗಿ ಕ್ರೈಸ್ತೋಪಾಸನೆಯನ್ನು ಕುರಿತು ಹೇಳಬೇಕಾದರೆ ಅದು ಗುಡಿ ಪೂಜಾರಿಗಳಿಗೆ ಸೀಮಿತವಾಗಿ ಅಥವಾ/ಮತ್ತು ಕೇಂದ್ರೀಕೃತವಾಗಿ ಉಳಿಯದೆ ನ್ಯಾಯಬದ್ಧ ಸಮಾಜ— ರಾಮರಾಜ್ಯ (God's reign)–ವನ್ನು ನಿರ್ಮಿಸಲು ಹೆಣಗಾಡುವ ಸರ್ವರಿಗೂ— ಹಿಂದು, ಮುಸಲ್ಮಾನ, ಮಾರ್ಕ್ಸ್‌ವಾದಿ ಹಾಗೂ ಇತರರನ್ನೊಳಗೊಂಡು— ಮುಕ್ತವಾಗಿರುವ (Jn 17. 21-23) ಕಾರ್ಯೋನ್ಮುಖ ವೇದಿಕೆ (table-fellowship)ಆಗಿ ರೂಪಾಂತರಗೊಳ್ಳಬೇಕು. ಆಗ ಮಾತ್ರ ಅಂದಿನ ಯೇಸುವನ್ನು ನಾವು ಇಂದಿಗೂ ಕಣ್ಣಾರೆ ಕಾಣುವಂತಾಗುವುದು (real presence). ಮಾನವನ 'ಸ್ಥಲ' ವನ್ನು ಸಮಾಜದಲ್ಲಿ ಕಾಣದೆ ಗುಡಿಗಳಲ್ಲಿ, ಪೂಜಾವೇದಿಕೆಯ ಮೇಲೆ ಕಾಣುವ ಪ್ರಯತ್ನ ಮಾತ್ರ ಯೇಸುವಿನ ಸಂದೇಶದ ಹಾಗೂ ಕ್ರೈಸ್ತೋಪಾಸನೆಯ ಆಭಾಸವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ (Sobrino, 384).

ಕ್ರೈಸ್ತ ಸಂಸ್ಕಾರಗಳು :

ಕ್ರೈಸ್ತಾವಲೋಕನದಲ್ಲಿ ಸ್ಥಲವನ್ನರಿತು ದಾಸೋಹಂ ಭಾವದಿಂದ ಜೀವಿಸಿದ ಕಾಯಕಮಯ ಜೀವನವೇ ನಿಜೋಪಾಸನೆಯೆಂಬುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಈ ಉಪಾಸನಾ ಜೀವನ ಹುಟ್ಟುವಾಗಲೇ ಯಾರಿಗೂ ಉಪಲಬ್ಧವಿರುವುದಿಲ್ಲ. ಅದನ್ನು ನಾವು ಆಜೀವಪರ್ಯಂತ ಸಾಧಿಸಿಕೊಳ್ಳಬೇಕಾಗಿದೆ. ಈ ಸಾಧನಾಪಥದಲ್ಲಿ ನಮ್ಮ ಪ್ರಜ್ಞಾಪಾತಳಿಗಳ ಸಾಮರಸ್ಯವನು ಕಂಡನುಭವಿಸಿ ಪರರಿಗೆ ಉಣ

ಸುವ ಪ್ರಯತ್ನ/ಸಂದರ್ಭಗಳೇ ಸಂಸ್ಕಾರಗಳು. ನಮ್ಮ ಜೀವನದ ಸಂದರ್ಭಗಳನ್ನು ಬಳಸಿಕೊಂಡು ವ್ಯಕ್ತಿಸಾಮರಸ್ಯತೆಯನ್ನು ಸಾಧಿಸಿಕೊಳ್ಳಲು ಯೇಸುವಿನ ಆದರ್ಶ ಜೀವನ ನಮಗೆ ಇದ್ದೇ ಇದೆ. ಈ ಸಾಧನೆಗೆ ಅನುಕೂಲವಾಗುವಂತೆ ವ್ಯಕ್ತಿಯು ದೈನಂದಿನ ಜೀವನದ ಕೆಲವು ವಿಷಯುಗಳನ್ನು/ರೀತಿಗಳನ್ನು (ನೀರು, ಎಣ್ಣೆ, ಊಟ, ಕ್ಷಮಾಪಣೆ, ಸಮರ್ಪಿತ ಜೀವನ, ಪರೋಪಕಾರಿ ಜೀವನ, ಸೇವಾಭಾವ) ಸಾಂಕೇತಿಕವಾಗಿ ಬಳಸಿಕೊಂಡು ವ್ಯಕ್ತಿಯ ಪ್ರಜ್ಞಾಪಾತಳಿಗಳ ಸಾಮರಸ್ಯತೆಯನ್ನು ಸಾಧಿಸಿಕೊಳ್ಳಲು ಕ್ರೈಸ್ತ ಧರ್ಮಸಭೆ ಬೋಧಿಸುತ್ತದೆ. ವ್ಯಕ್ತಿಯು ಬೆಳವಣಿಗೆಯ ವಿವಿಧ ಹಂತಗಳಲ್ಲಿ ಪ್ರಾಮಾಣಿಕವಾಗಿ ಅವುಗಳನ್ನು ಆಚರಿಸಿದರೆ ಮಾತ್ರ ಸಂಸ್ಕಾರಗಳು ಉಪಯುಕ್ತವೆಂದು ಬೇರೆ ಹೇಳಬೇಕಾಗಿಲ್ಲ (Rahner 487).

ಜ್ಞಾನದೀಕ್ಷೆ (Baptism), ದೃಢೀಕರಣ (confirmation), ಕ್ರಿಸ್ತಪ್ರಸಾದ (Eucharist), ಪಶ್ಚಾತ್ತಾಪ (Reconciliation) ವಿವಾಹ (Matrimony), ಗುರುದೀಕ್ಷೆ (Holy Orders) ಮತ್ತು ಅಭ್ಯಂಜನ (The Anointing of the Sick) ಎಂಬ ಸಪ್ತ ಸಂಸ್ಕಾರಗಳನ್ನು ಕಥೋಲಿಕ ಕ್ರೈಸ್ತ ಧರ್ಮಸಭೆ ಸಂ. ಕ್ರಿ. ಶ. ಹತ್ತನೆಯ ಶತಮಾನದಿಂದ ಆಚರಿಸುತ್ತಾ ಬಂದಿದೆ (McKenzie, 175).

೧. ಜ್ಞಾನದೀಕ್ಷೆ (Baptism < *baptein / baptizein* (Gk). 'ಮುಳುಗು/ಮುಳುಗಿಸು (ತೊಳೆ)'

ಕ್ರೈಸ್ತ ಧರ್ಮಸಭೆಯಲ್ಲಿ ಪ್ರಥಮ ಧಾರ್ಮಿಕ ವಿಧಿಯೆಂದರೆ ಜ್ಞಾನದೀಕ್ಷೆ. ಯೇಶ್ವಾಂದೋಲನದಲ್ಲಿ ಸಮರ್ಪಣಾ ಭಾವದಿಂದ ಪಾಲುದಾರನಾಗಲು ಅರ್ಥಾತ್ ಮಾನವನ ಸಮಗ್ರ ವಿಮೋಚನಾ ಕಾರ್ಯದಲ್ಲಿ ಸಂಪೂರ್ಣವಾಗಿ ಕ್ರಿಯಾಶೀಲನಾಗಲು ಜ್ಞಾನದೀಕ್ಷೆ ಆಮಂತ್ರಣ(invitation)ವೂ ಹೌದು, ದೀಕ್ಷೆ(initiation)ಯೂ ಹೌದು. ಈ ದೀಕ್ಷೆಯಿಂದಾಗಿ ಅಭ್ಯರ್ಥಿ ತನ್ನ ಸ್ವಾಭಾವಿಕ ಅಹಂಕೇಂದ್ರೀಯ ಜೀವನಕ್ಕೆ (self-centredness) ಸತ್ತು (Mt 10.39, Mk 8.35, Lk 9.24, Jn. 12.23–25) ಪರಕೇಂದ್ರೀಯ ಜೀವನದಲ್ಲಿ (other - centredness) ತೊಡಗಬೇಕಾಗುತ್ತದೆಯಾದುದರಿಂದ (Rm. 6.11–14, Ep. 3.16–19, Ph. 3.10–12), ಇದು ಆತನಿಗೆ ಎರಡನೆಯ ಹುಟ್ಟು. ಹೀಗೆ ಜ್ಞಾನದೀಕ್ಷೆಯಿಂದ ಮಾನವ ದ್ವಿಜನಾಗುತ್ತಾನೆ. ಸ್ವಪ್ರಜ್ಞಾಪಾತಳಿಯ ಸ್ಥಲ ಬ್ರಹ್ಮಪ್ರಜ್ಞೆಯೆಂಬ ಜ್ಞಾನ ಈ ವಿಧಿಯ ಆಶಯ. ಈ ದೀಕ್ಷೆಯನ್ನು ಪಡೆದ ಮಾನವ–ಕ್ರೈಸ್ತ–ಪ್ರಜ್ಞಾಪಾತಳಿಗಳ ಸಾಮರಸ್ಯಕ್ಕೊಸ್ಕರ ಸಮಾಜಮುಖಿಯಾಗದೆ ನಿರ್ವಾಹವಿಲ್ಲ. ಯಾಕೆಂದರೆ, ಸಮಾಜ ಜೀವಿಗೆ ಇಹದಲ್ಲಿ ಕಾಣುವ ಸಮಾಜವೇ ಅಪ್ರತ್ಯಕ್ಷ ಸ್ಥಲದ ಪ್ರಾತ್ಯಕ್ಷಿಕೆ. ಹೀಗೆ ಸ್ವಭಾವತಃ ಅಹಂಕೇಂದ್ರೀಯ ಮಾನವನನ್ನು ಬ್ರಹ್ಮಪ್ರಜ್ಞೆಯ ಮೂಲಕ ಪರಕೇಂದ್ರೀಯನನ್ನಾಗಿ ಮಾಡುವ ಅವಕಾಶ ಜ್ಞಾನದೀಕ್ಷೆ ಕಲ್ಪಿಸುತ್ತದೆ. ಕಾರಣ, ಈ ವಿಧಿ ಮಾನವನ ವಿಕಾಸದಲ್ಲಿ ಆಗಬೇಕಾದ ಮೂಲಭೂತ ಪರಿವರ್ತನೆ

(radical change/*teshubah* (Heb.)ಯ ಸಂಕೇತ (Mt 9.13, Lk 5. 32, 24-47, Ac. 3.19-20, Rahner, 74).[೧೬]

ಆಂತರಿಕ ಪರಿವರ್ತನೆ (Conversion)ಯ ಅಗತ್ಯತೆಯನ್ನು ಯೇಸು ಪದೇ ಪದೇ ಹೇಳಿದರೂ(Jn 3.5) ತಾನು ಸ್ವತಃ ಜ್ಞಾನದೀಕ್ಷೆಯನ್ನು ದೀಕ್ಷಾ ವಿಧಿಯನ್ನಾಗಿ (Initiation rite) ಯಾರಿಗೂ ಕೊಟ್ಟಂತಿಲ್ಲ. ವಸ್ತುಸ್ಥಿತಿ ಹೀಗಿದ್ದರೂ ಆತನ ಶಿಷ್ಯಂದಿರಿಂದ ಹಿಡಿದು (Jn 4. 1–3) ಇವತ್ತಿನವರೆಗೂ ಈ ಸಂಪ್ರದಾಯ ಕ್ರೈಸ್ತ ಧರ್ಮಸಭೆಯಲ್ಲಿ ಆಳವಾಗಿ ಬೇರೂರಿ ನಿಂತಿದೆ. ಬಹುಷಃ ಹಿಂದಿನ ಸಂಪ್ರದಾಯದ (Ex 40.12, Lev 8.6, 13.6, 14. 4–9, 16.4, 24, Ezk 36.24-28) ಹಾಗೂ ಅನ್ಯ (Pagan) ಧರ್ಮಗಳ ಪ್ರಭಾವವೇ ಈ ವಿಧಿಗೆ ಕಾರಣವಾಗಿರಬಹುದು. ಸ್ವಪ್ರಜ್ಞೆ ಬ್ರಹ್ಮಪ್ರಜ್ಞೆಯಲ್ಲಿ ಮುಳುಗಿ ಏಳಬೇಕಾದುದೇ ಪ್ರಸ್ತುತ ಸಂಸ್ಕಾರದ ಪ್ರಧಾನಾಶಯ. ಯೇಸುವಿನ ಆದರ್ಶವನ್ನೊಪ್ಪಿಕೊಂಡು ದಾಸೋಹಂ ಭಾವನೆಯಿಂದ ಪರಮುಖಿಯಾಗಿ ಬಾಳಲು ಪ್ರತಿಜ್ಞೆಮಾಡಿಕೊಂಡು ಯೇಶ್ವಾಂದೋಲನಕ್ಕೆ ದೀಕ್ಷಾಬದ್ಧನಾಗುವುದೇ ಜ್ಞಾನದೀಕ್ಷೆಯ ಉದ್ದೇಶ.

೨. **ದೃಢೀಕರಣ :** ಯೇಶ್ವಾಂದೋಲನ ಮುಂದುವರೆಯಿಸಲು ದೀಕ್ಷಾಬದ್ಧನಾಗುವೆನೆಂದು ಸ್ವೀಕರಿಸಿದ ಪ್ರತಿಜ್ಞೆಯನ್ನು ದೃಢೀಕರಿಸುವ (Mt 5. 20-48) ಸಂಸ್ಕಾರವನ್ನು ದೃಢೀಕರಣ (confirmation) ಎಂದು ಕರೆಯುತ್ತಾರೆ. ದೃಢೀಕರಣಗೊಂಡ ವ್ಯಕ್ತಿ ಯೇಸುವಿಗೆ ಸಾಕ್ಷಿ (witness)ಯಾಗಿ (Lk 24.48, Jn 3.11) ಬಾಳಬೇಕು; ಅರ್ಥಾತ್ ಯೇಸು ಬಾಳಿ ತೋರಿದ ವಿಮೋಚನೆಯ ನುವಾರ್ತೆ (liberating good news)ಯನ್ನು ಪ್ರಕಟಿಸು (announcing)ವುದರ (Rm 6, Ep 2. 1–10, 1 Tm 1. 15–16) ಜೊತೆಗೆ ಸಧ್ಯದ ಶೋಷಿತ ಪರಿಸ್ಥಿತಿ (*status quo*)ಯನ್ನು ಖಂಡಿಸಿ (denouncing) ಬಾಯಿಯಿಲ್ಲದವರ ಬಾಯಿಯಾಗಿ ಹೋರಾಡಬೇಕು. ಇದಕ್ಕೆ ಧೈರ್ಯಸ್ಥೈರ್ಯಗಳು ಬೇಕು; ಸುಜ್ಞಾನ ದೃಢೀಕರಣಗೊಳ್ಳಬೇಕೆಂಬ ಎಚ್ಚರಿಕೆಯನ್ನು ಸುಜ್ಞಾನಿಗೆ ಕೊಡುವುದೇ ಈ ಸಂಸ್ಕಾರದ ಆಶಯ.

---

16. ಪರಿವರ್ತನೆ (*metanoia/metanoiein* ಎಂಬ ಪದ Mt ನಲ್ಲಿ 7 ಸಲ, Mk ನಲ್ಲಿ 3 ಸಲ, Lk ನಲ್ಲಿ 14 ಸಲ. Ac ನಲ್ಲಿ 11 ಸಲ, ಪೌಲನಲ್ಲಿ 5 ಸಲ ಬಂದರೆ Jn ನಲ್ಲಿ ಅದು ಕಂಡುಬರುವುದೇ ಇಲ್ಲ: ಪರಿವರ್ತನೆಗೆ ಸಮೀಪವಾಗಿರುವ ಶ್ರದ್ಧೆ (Faith : *Pistis/pisteuein* (Gk) ಎಂಬ ಪದ Mt ನಲ್ಲಿ 19 ಸಲ, Mk ನಲ್ಲಿ 19 ಸಲ, Lk ನಲ್ಲಿ 20 ಸಲ, Ac ನಲ್ಲಿ 52 ಸಲ, ಪೌಲನಲ್ಲಿ 196 ಸಲ ಮತ್ತು Jn ನಲ್ಲಿ 108 ಸಲ ಬಳಕೆಯಾಗಿದೆ (Vellanickal, 59).

ಟ್ರೆಂಟ್ ವಿಶ್ವಸಭೆಯ ಪ್ರಕಾರ ಪರಿವರ್ತನೆ/ಶ್ರದ್ಧೆ automatic/*ex opere operato* ಆಗಿ ಉಂಟಾಗುತ್ತದೆ. (D 857–70)

ದುರ್ದೈವವಶಾತ್ ಜ್ಞಾನಸ್ನಾನವನ್ನು ಹಸುಳೆಯರಿಗೆ ಕೊಡುವಂತೆ ದೃಢೀಕರಣವನ್ನು ಕಥೊಲಿಕ್ ಧರ್ಮಸಭೆಯಲ್ಲಿ ಬಾಲಕ ಬಾಲಕಿಯರಿಗೆ ಕೊಡುವುದರಿಂದ ಈ ಸಂಸ್ಕಾರಗಳು ಕೇವಲ ಭಾನಾಮತಿಯಾಗುವ ಸಂಭವವೇ ಹೆಚ್ಚು (Walker, 94). ಕಾರಣ, ಈ ಸಂಸ್ಕಾರಗಳ ಫಲ ಸಾಮಾಜಿಕ ಜೀವನದಲ್ಲಿ ಕಾಣಸಿಗುವುದು ವಿರಳವೇ ಸರಿ.

೩. **ದಿವ್ಯ ಪ್ರಸಾದ :** ಯೇಶ್ವಾಂದೋಲನ ಯಶಸ್ವಿ ಯಾಗಬೇಕಾದರೆ ಆ ವಿಷಯದಲ್ಲಿ ದೀಕ್ಷಾಬದ್ಧರಾಗಿ ಧೈರ್ಯಸ್ಥೈರ್ಯದಿಂದ ಮುಂದುವರೆದರೆ ಸಾಲದು: ಆಂದೋಲನವೆಂಬುದು ಸಾಂಘಿಕ ಕ್ರಿಯೆಯಾಗಿ ರೂಪಾಂತರಗೊಳ್ಳಬೇಕು.

ಸತ್ಸಂಘದಲ್ಲಿ ಅಹಂಕಾರಕ್ಕೆ ಸ್ಥಾನವಿರಕೂಡದು. ಮೂಲಭೂತವಾದ ಅಹಂಕಾರದ ನಿರ್ನಾಮವನ್ನು ಸಂಕೇತಿಸಲು ರೊಟ್ಟಿಯನ್ನು ಚೂರುಮಾಡಿ ಎಲ್ಲರಿಗೆ ಹಂಚು (breaking the bread for the many) ಸಂಸ್ಕಾರವೇ ದಿವ್ಯ ಪ್ರಸಾದ.

ಈ ಸಂಸ್ಕಾರದ ಅಂಗವಾದ ಸಹಪಙ್ತಿಭೋಜನ (Commensual fellowship) ಕೂಡಿಬಾಳುವುದೇ ಕ್ರೈಸ್ತ ಜೀವನದ ಗುರಿಯೆಂಬುದನ್ನು ಸಾಬೀತು ಗೊಳಿಸುತ್ತದೆ :

> ಪರಚಿಂತೆಯಿಲ್ಲದೆ... ಅಥವಾ ಆಂತರಿಕ ಬದಲಾವಣೆಗೆ ಎಡೆಕೊಡದೆ ಕ್ರೈಸ್ತಾಂದೋಲನದಲ್ಲಿ ಭಾಗವಹಿಸಲು ಸಿದ್ಧರಾಗಿರದೆ ಕ್ರೈಸ್ತಪ್ರಸಾದ ಸ್ವೀಕರಿಸಿದರೆ ಅದೊಂದು ಮಹಾಮೋಸ (fraud) ವೆಂದು ತಿಳಿದುಕೊಳ್ಳಬೇಕು (Walker, 96).

ದಿವ್ಯಪ್ರಸಾದ ಭೋಜನ ನಿಜವಾಗಿಯೂ ವಿಶ್ವಭ್ರಾತೃತ್ವ (*Koinonia*) ಕ್ಕೆ (Jn 13. 35, Ac 2. 42 ec. 1 Jn 1. 3) ಕರೆಯಾಗಿದೆ. ಈ ವಿಶ್ವ ಕುಟುಂಬದಲ್ಲಿ ಎಲ್ಲ 'ರೊಟ್ಟಿ' ಅರ್ಥಾತ್ ಸಕಲೈಶ್ವರ್ಯ ಲಭ್ಯತೆಗಳೆಲ್ಲವೂ ಸಮನಾಗಿ ಹಂಚಿಹೋಗಿ ಎಲ್ಲರೂ ಸಂತುಷ್ಟರಾಗಿ ಬಾಳಬೇಕು (Ac 2. 42–7) ಎಂಬ ಧೋರಣೆಯನ್ನು ಮನದಟ್ಟಾಗುವಂತೆ ಮಾಡುವುದೇ ಈ ಸಂಸ್ಕಾರದ ಧ್ಯೇಯ [೧೭].

ಈ ಹಂಚೋಣ ಭಾವ (sharing experience) ವನ್ನು ತಮ್ಮದನ್ನಾಗಿ ಮಾಡಲು ಯೇಸು ತನ್ನ ಶಿಷ್ಯಂದಿರಿಗೆ ಅಪ್ಪಣೆಯನ್ನು ಕೊಟ್ಟಿದ್ದ. ಆದರೆ ಅದನ್ನು ಧಾರ್ಮಿಕ ಸಂಸ್ಕಾರವನ್ನಾಗಿ ಆತ ಸ್ಥಾಪಿದನೆ ? ಅಲ್ಲದೆ, ತನ್ಮೂಲಕ ತಾನು ಶಾಶ್ವತ ವಾಗಿ ಬಾಳಿಕೊಂಡಿರಲು ಅಪೇಕ್ಷಿಸಿದನೆ ? ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿವೆ

---

17. The Euchrlist as Sacrifice–a ritual killing of Jesus–was unknown fo the NT (McKenzie, 183).

(Leon-Dufour 448). ನಿರಂತರವಾಗಿ ನಡೆಯಬೇಕಾದ (1 Co 2. 26) ವರ್ಗರಹಿತ ಸಮಾಜ (classless society)ದ ನಿರ್ಮಾಣವೇ 'ಅಂತಿಮ ಭೋಜನ' (Last supper)ದ ಸ್ಥಾಯಿಭಾವ.

೪. **ಪಶ್ಚಾತ್ತಾಪ :** ಯೇಶ್ವಾಂದೋಲನಕ್ಕೆ ದೀಕ್ಷಾಬದ್ಧನಾಗಿ ಯೇಸು-ಜೀವನಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿ ಬಾಳುವುದು ಸುಲಭ ಸಾಧ್ಯವಲ್ಲ. ಈ ಪಥದಲ್ಲಿ ಬಿದ್ದು ಎದ್ದು ಸಾಗಬೇಕಾಗುತ್ತದೆ. ಭ್ರಾತೃತ್ವದ ತಳಹದಿಯ ಮೇಲಿನ ಸಮಾಜದಲ್ಲಿ 'ದಾಸೋಹಂ' ಭಾವದಿಂದ ಸೇವೆಗೈಯುವುದರಲ್ಲಿ ತಪ್ಪಿದಾಗ ಭ್ರಾತೃತ್ವದಲ್ಲಿ ಒಡಕುಂಟಾಗುತ್ತದೆ, ಸ್ನೇಹಭಂಗವುಂಟಾಗುತ್ತದೆ.

ಉಂಟಾದ ಒಡಕನ್ನು ಸರಿಪಡಿಸಬೇಕಾದರೆ ಮನಸ್ತಾಪವನ್ನು ಪರಿಹರಿಸಿ ಸ್ನೇಹಭಾವ ಪುನಃ ಅಂಕುರಿಸಿ ಬೆಳೆಯುವಂತೆ ಮಾಡಬೇಕೆಂಬುದರ ಸಂಕೇತವೇ ಪಶ್ಚಾತ್ತಾಪ ಸಂಸ್ಕಾರ (Walker 98) ಬಹಿಃಸ್ತರದಲ್ಲಿ ಸ್ವ ಹಾಗೂ ಪರರಲ್ಲಿ ಸಾಮರಸ್ಯ ಉಂಟಾದಾಗ ಅಂತಃಸ್ತರದೊಡನೆಯೂ ಸಾಮರಸ್ಯ ಉಂಟಾಗಿದೆಂಬುದು ಖಚಿತ.

ಪಶ್ಚಾತ್ತಾಪವಿಲ್ಲದ ಪಾಪಸಂಕೀರ್ತನೆ (going to confession) ಈ ಸಂಸ್ಕಾರದ ಅವಹೇಳನೆ ಅಂತೆಯೇ ಅದರ ಭಾನಮತೀಕರಣ.

೫. **ವಿವಾಹ :** ಸುಂದರವಾದ ವಿಶ್ವಭ್ರಾತೃತ್ವದ ಕಲ್ಪನೆಯನ್ನು ಮೂರ್ತ ಸ್ವರೂಪಕ್ಕಿಳಿಸುವುದು ಸುಲಭದ ಕೆಲಸವಲ್ಲ. ನಿರ್ದಿಷ್ಟ ಅವಧಿಯೊಳಗೆ ಅದನ್ನುಂಟು ಮಾಡುವುದು ಆಗದ ಕೆಲಸ. ಇದು ನಿರಂತರವಾಗಿ ನಡೆಯಬೇಕಾದ ಕೆಲಸ. ಇಲ್ಲಿ ಬೇಕಾಗುವ ಪರಸ್ಪರ ಸಹಕಾರ ಸೌಹಾರ್ದತೆಗಳು ಏಕಪ್ರಮಾಣದಲ್ಲಿ ಎಲ್ಲರಿಂದಲೂ ಎಲ್ಲ ಸಂದರ್ಭಗಳಲ್ಲೂ ಎಲ್ಲ ಕಾಲದಲ್ಲೂ ಸಿಗುವುದು ಕಠಿಣ.

ಸಮಾಜದ ಪ್ರಪ್ರಥಮ ಘಟಕವಾದ ಕುಟುಂಬಗಳಲ್ಲಿ ಮೇಲಿನ ಗುಣಗಳು ಸಾಕಷ್ಟು ಪ್ರಮಾಣದಲ್ಲಿ ಮೊಳಿತು ಬೆಳೆದು ಹಬ್ಬಿದರೆ ಸಮಾಜದಲ್ಲಿ ಭ್ರಾತೃತ್ವ ಸಾಧ್ಯಗೊಳ್ಳುವುದು ತಕ್ಕಮಟ್ಟಿಗೆ ಸುಲಭವಾಗಬಹುದು. ಕೌಟುಂಬಿಕ ಜೀವನದಲ್ಲಿ ಮಾನವನಿಗೆ ವಿಕಾಸಗೊಳ್ಳಲು ಬೇಕಾದ ಪರಿಸರ ಸಿಗುವುದು ಸುಲಭ. ಸತಿಪತಿ ಭಾವದಿಂದ ಸಮರಸವಾದ ಬಾಳನ್ನು ಜೀವಿಸುವುದು ಅಷ್ಟೊಂದು ಕಠಿಣವಲ್ಲ. ಅಲ್ಲಿಯ ಪ್ರೀತಿ, ಪ್ರೇಮ, ವಾತ್ಸಲ್ಯಾದಿ ಭಾವನೆಗಳಿಂದ ಮಾನವ ಪ್ರಾಣಿಯ ಮಾನವೀಕರಣ (humanization) ಸುಲಭಸಾಧ್ಯ. ಕಾರಣ ವೈವಾಹಿಕ ಜೀವನದಲ್ಲಿ ಸ್ವತ್ಯಾಗಮಯ ಪ್ರೇಮ ಚಿಗುರಿ ಬಲಿಯಬೇಕೆಂಬ ಆಶಯವನ್ನು ವಿವಾಹ ಸಂಕೇತಿಸುತ್ತದೆ.

ಸ್ವತ್ಯಾಗಮಯ ಪ್ರೇಮ ವಿವಾಹದಲ್ಲಿ ಮುಖ್ಯವೇ ಹೊರತು ದಂಪತಿಗಳ ಜಾತಿ ಮತ ಅಂತಸ್ತುಗಳಲ್ಲವೆಂಬುದನ್ನು ಇಲ್ಲಿ ಪ್ರತ್ಯೇಕ ಹೇಳಬೇಕಾಗಿಲ್ಲ.

೬. **ಗುರುದೀಕ್ಷೆ :** ವಿವಾಹ ಸಂಸ್ಕಾರ ಸಮಾಜದಲ್ಲಿರಬೇಕಾದ ಸಾಮರಸ್ಯದ ಸಂಕೇತವಾದರೆ ಗುರುದೀಕ್ಷೆ ಅಲ್ಲಿರಬೇಕಾದ ದಾಸೋಹಂಭಾವದ ಸಂಕೇತ.

ನ್ಯಾಯಬದ್ಧ ಸಮಾಜದ ರಚನೆಯಲ್ಲಿ ಸಾಮರಸ್ಯತೆಯಂತೆ ದಾಸೋಹಂ ಭಾವವೂ ಅತಿ ಪ್ರಮುಖವಾದುದು. ಸೇವಾಭಾವವಿಲ್ಲದೆ ಭ್ರಾತೃತ್ವ ಬಹಳ ಕಾಲ ಉಳಿಯದು. ಯಾವುದೇ ಭ್ರಾತೃತ್ವ ಸ್ವರೂಪದ ಸಮಾಜದಲ್ಲಿ, ಸರ್ವಾಧಿಕಾರಕ್ಕೆ ಸ್ಥಾನವಿಲ್ಲ. ಅಲ್ಲಿ ಪ್ರೀತಿ, ಸೇವೆ, ತ್ಯಾಗ-ಸಹಕಾರಗಳೇ ಪ್ರಮುಖವಾದವುಗಳು. ಅಧಿಕಾರದ ದರ್ಪಕ್ಕೆ ಅಥವಾ ದರ್ಪದ ಆಡಳಿತಕ್ಕೆ 'ಹೊಸ ಸಮಾಜ'ದಲ್ಲಿ ಎಡೆಯೇ ಇಲ್ಲವಾದುದರಿಂದ ಮೂಲ ಸತ್ಸಂಘದಲ್ಲಿ ದಾಸೋಹಂ ಭಾವಕ್ಕೆ ಪ್ರಾಧಾನ್ಯತೆ ಇದ್ದುದು ಕಂಡು ಬರುತ್ತದೆ. ಕಾರಣ, ಗುರುದೀಕ್ಷೆ ಸೇವಾದೀಕ್ಷೆಯೇ ವಿನಹ ಆಡಳಿತ ಅಧಿಕಾರವಲ್ಲ, ಗುಡಿಸೇವೆಯಲ್ಲ. ಮಾನವ ಸೇವೆ(*diakonia*)ಯೇ ದೇವಸೇವೆ (*leiturgia*) ಎಂಬುದರ ಸಂಕೇತವಾಗಿ ಕ್ರೈಸ್ತಾವಲೋಕನದಲ್ಲಿ ಗುರುದೀಕ್ಷೆಯ ಸ್ಥಾನಮಾನ.

೭. **ರೋಗಿ – ಅಭ್ಯಂಗ :** ದುಃಖ(suffering)ವೆಂಬುದು ಇಹದಲ್ಲಿ ಮಾನವ ಜೀವನದ ಅವಿಭಾಜ್ಯಾಂಗ. ನೋವು ಅನುಭವಿಸುವಾತ ಹೆರವರಿಂದ ದಯೆ ಅನುಕಂಪೆ-ಅನುಭೂತಿಗಳ ಸ್ಪಂದನವನ್ನು ಅಂತೆಯೇ ಸಾಮಿಪ್ಯತೆಯನ್ನು ಆಶಿಸುವುದು ಸ್ವಾಭಾವಿಕ. ದುಃಖದ ಸನ್ನಿವೇಶದಲ್ಲಿ ಭ್ರಾತೃತ್ವತೆಯನ್ನು ಅತಿ ಆಳವಾಗಿ ಮಾನವ ಆಶಿಸುತ್ತಾನೆಂಬುದರ ನೆನಪನ್ನುಂಟುಮಾಡುವ ಕಾರ್ಯ ಈ ಅಭ್ಯಂಗ ಸಂಸ್ಕಾರ ಮಾಡುತ್ತಿದೆ. ಕ್ರೈಸ್ತಜೀವನಶೈಲಿಯ ಗುಣಪರೀಕ್ಷೆ ನಡೆಯುವುದು ರೋಗಿಗಳ, ನೋವಿನಲ್ಲಿರುವವರ, ನಿರ್ಗತಿಕರ, ಅನಾಥರ, ದೀನದಲಿತರ ಸೇವೆಯಲ್ಲೆಂಬ ಸೇವೆ ಸತ್ಯವನ್ನು ಪ್ರಸ್ತುತ ಸಂಸ್ಕಾರ ಸಾರಿಹೇಳುತ್ತದೆ.

ಸಮಾರೋಪ :

ಮೇಲಿನ ವಿವರಣೆಯನ್ನು ಗಮನಿಸಿದಾಗ ಸಂಸ್ಕಾರಗಳು ಭಾನಾಮತಿ (magical / *hocus pocus*)[೧೮] ಕ್ರಿಯೆಗಳಲ್ಲ[೧೯]: ಅವು ನಿಜವಾಗಿಯೂ ಧಾರ್ಮಿಕ ಸಂಕೇತಗಳು (sacraments) ಎಂಬುದು ಸ್ಪಷ್ಟವಾಗದಿರಲಾರದು.

---

೧೮. Hocus-pocus (*Hoc est porcus* 'ಇದು ಹಂದಿ') ಎಂಬುದು *Hoc est corpus* 'ಇದು ನನ್ನ ಶರೀರ' ಎಂಬ ಕ್ರೈಸ್ತ ಪೂಜಾವಿಧಿಯಲ್ಲಿ ಬಳಸುವ ಪವಿತ್ರ ವಾಕ್ಯದ ವಿಡಂಬನಾ ರೂಪ! ಪೂಜಾವಿಧಿಯಲ್ಲಿ ಪುರೋಹಿತ ಈ ವಾಕ್ಯವನ್ನು ಉಚ್ಚರಿಸಿದಾಗ ಅಲ್ಲಿರುವ ರೊಟ್ಟಿ ಯೇಸುಕ್ರಿಸ್ತನಾಗಿ ರೂಪಾಂತರಗೊಳ್ಳುತ್ತದೆ. (substantial change) ಎಂಬುದು ಕ್ರೈಸ್ತ ಸಾಂಪ್ರದಾಯಿಕ ನಂಬಿಕೆಯೇ ಈ ವಿಡಂಬನೆಗೆ ಕಾರಣ (Montefiore, 46.)

೧೯. ಎಷ್ಟೋ ಸಲ ಕ್ರೈಸ್ತ ಪುರೋಹಿತರು, ಸಂಸ್ಕಾರಗಳು ಭಾನಾಮತಿ ಕ್ರೀಯೆಗಳೆಂದು ಸ್ಪಷ್ಟಗೊಳಿಸುವ ರೀತಿಯಲ್ಲಿ ಅವುಗಳ ಬಾಹ್ಯ ವಿಷಯಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು,

ಸಂಸ್ಕಾರಗಳು ದೇವಾನುಗ್ರಹವನ್ನಾಗಲಿ ಪವಿತ್ರಾತ್ಮನನ್ನಾಗಲಿ ಒಲಿಸುವ ಸಾಧನಗಳಲ್ಲ; ಯಾಕೆಂದರೆ, ಅವುಗಳ ಆಚರಣೆಯಿಂದ ಯಾರಿಗೂ ಲಭಿಸದಂತಹ ಉನ್ನತಮಟ್ಟದ ಜೀವಶಕ್ತಿಯಾಗಲಿ ಆಧ್ಯಾತ್ಮಿಕ ಪ್ರಯೋಜನವಾಗಲಿ ಯಾರಿಗೂ ದೊರಕಲಾರದು (Walker 88)[೨೦].

ಹೀಗೆ ಸಂಸ್ಕಾರಗಳು ಮಾನವ ಚಟುವಟಿಕೆಗಳೇ. ಅವುಗಳ ಮೂಲಕ ನಮ್ಮ ಅಂತಃಸ್ತರದ ಅರಿವು ನಮ್ಮಲ್ಲಿ ಮೂಡುವಂತೆ ಕ್ರೈಸ್ತಸಭೆ ಅವುಗಳನ್ನು ಆಚರಿಸುತ್ತದೆ. ತನ್ಮೂಲಕ ನಮ್ಮ ಪ್ರಜ್ಞಾಪಾತಳಿಗಳ ಸಾಮರಸ್ಯವನ್ನು ಪಡೆದು ಸಮರಸ ಜೀವನ ಸಾಗಿಸುವುದೇ ಅಲ್ಲಿಯ ಆಶಯ (Gray 130–40)

ವ್ಯಷ್ಟಿ ನೆಲೆಯಲ್ಲಿ ಪ್ರಜ್ಞಾಪಾತಳಿಗಳ ಸಾಮರಸ್ಯ, ಸಮಷ್ಟಿಯಲ್ಲಿ ಸ್ವ–ಪರ ಸಾಮರಸ್ಯ ಸಾಧಿಸಿಕೊಂಡು ಬಾಳುವುದೇ ಮಾನವ ಬದುಕು/ಮಾನವ ಧರ್ಮ. ದೇವರು ಮಾನವನ ಸ್ಥಲವಾಗಿರುವಾಗ ಆತನ ಸೇವೆಗಾಗಿ ಗುಡಿ ಪೂಜೆ ಮಾಡಬೇಕಾಗಿಲ್ಲ. ಮಾನವನೇ ದೇವ–ಸ್ಥಾನ (*Locus Dei*) ಆಗಿರುವಾಗ ಮಾನವ ಸೇವೆಯೇ ದೇವ ಸೇವೆ/ಕ್ರೈಸ್ತೋಪಾಸನೆ. ಈ ಮಾನವ ಸೇವೆಯು/ದಾಸೋಹದ ವಿವಿಧ ರೀತಿಗಳನ್ನು ಸೂಚಿಸುವ ಸಂಕೇತಗಳೇ ಸಂಸ್ಕಾರಗಳು.

ಸಂಸ್ಕಾರಗಳನ್ನು ವ್ಯಕ್ತಿವಿಕಾಸದ ವಿವಿಧ ಹಂತಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಿದರೆ ಅವು ಕ್ರೈಸ್ತ ಜೀವನದಲ್ಲಿ ಮಾರ್ಗದರ್ಶಿಗಳಾಗುವ ಸಂಭವವಿದೆ (Rahner 87), ಆದರೆ ಅದರ ಬದಲಾಗಿ ಅವನ್ನು ಶುಷ್ಕ ಮತಾಚರಣೆಗಾಗಿ (*ex opere operato ritualia*) ವ್ಯಕ್ತಿಯ ವಯಸ್ಸು, ಪರಿಸರ, ಸಂಸ್ಕೃತಿಗಳ ಗೊಡವೆ ಇಲ್ಲದೆಯೇ ಆಚರಿಸಿದರೆ ಅವು ಧಾರ್ಮಿಕ ಶೋಷಣೆಯ ಸಾಧನಗಳಾಗಿ ಸಮಾಜದಲ್ಲಿ ಉಳಿದುಕೊಂಡು ಅದನ್ನು ಸಂಪ್ರದಾಯಬದ್ಧ ಜಡ ಸಮಾಜವನ್ನಾಗಿ ಅಧೋಗತಿಗಿಳಿಸಬಹುದು.

ಯೇಸುವಿನ ಸಂದೇಶಕ್ಕೆ ವಿರೋಧವಾಗಿ ನಡೆದಿದ್ದಾರಲ್ಲದೆ ಬುದ್ಧಿಜೀವಿಗಳ ವಿರೋಧವನ್ನೂ ಕಟ್ಟಿಕೊಂಡಿದ್ದಾರೆಂಬುದು ಇಂದು ಸರ್ವವಿದಿತ. (Abhishiktananda 1970 : 1–2).

೨೦. ಸಂಸ್ಕಾರಗಳು ಕಾರ್ಯಕಾರಣ ಸಂಬಂಧವುಳ್ಳವುಗಳೆಂಬ ಯಾವುದೇ ಅಭಿಪ್ರಾಯ ಅವು ಭಾನಾಮತಿಯೆಂಬುದನ್ನು ಪುಷ್ಟೀಕರಿಸುತ್ತವೆ... ಅವು *ex opere operato* ದೇವಾನುಗ್ರಹದ ಕಾರಣಗಳೆಂಬುದು ಸರ್ವಥಾ ತಪ್ಪು... (Hillman, 104–5).

ಸಂಸ್ಕಾರಗಳ ಕ್ರಿಯೆ *ex opere operato* ಸ್ವಭಾವದ್ದು ಎಂದು ಕಥೋಲಿಕ ಸಂಪ್ರದಾಯ ನಂಬುತ್ತದೆ. (H. Denzlnger (33rd ed. 1965) : 1608, 3544ff. Dz ಬಗೆಗೆ ನೋಡಿ : Madtha 1980 : 175 f. n. 1.

“ಧ್ವನಿ”

(ವಿಮರ್ಶೆ)

ಜಿ. ಎಂ. ಹೆಗಡೆ

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ೧೩ ಜನ ಸ್ನಾತಕೋತ್ತರ ವಿದ್ಯಾರ್ಥಿ, ವಿದ್ಯಾರ್ಥಿನಿಯರ ೨೩ ಕವಿತೆಗಳು ಹಾಗೂ ನಾಲ್ಕು ಬಿಡಿಗವನಗಳು 'ಧ್ವನಿ' ಕವಿತೆಯ ಸಂಕಲನದಲ್ಲಿವೆ. ಧಾರವಾಡದ ಯುವಕವಿಗಳ ಈ ಪದ್ಯಗಳು ಸಮಕಾಲೀನ ಜೀವನದ ಧ್ವನಿಯನ್ನು ಪ್ರಕಟಿಸುತ್ತವೆ. ಬದಲಾಗುತ್ತಿರುವ ಕನ್ನಡ ಕಾವ್ಯದ ಸ್ಥಿತಿಗತಿಗಳ ಕಡೆಗೆ ಅರಿವಿರುವ ಈ ಯುವಕವಿಗಳೆಲ್ಲ 'ತಾರೆ, ಚಂದ್ರ ಮತ್ತು ಗುಲಾಬಿಗಳೇ, ನಿಮ್ಮ ಬದುಕಿನ ಉಸಾಬರಿ ಬೇಡವಿನ್ನು' ಎಂಬ ಧೋರಣೆಯನ್ನಿಟ್ಟುಕೊಂಡಿದ್ದಾರೆ. ಸಮಕಾಲೀನ ಬದುಕಿನ ಬಗೆಗೆ ಕಾಳಜಿಯಿಲ್ಲದೆ ಹಸಿಹಸಿಯಾದ ಭಾವನೆಗಳನ್ನು ತೀರ ವಾಚ್ಯವಾಗಿ ಬರೆಯುವವರೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಇಲ್ಲಿಯ ಯುವಕವಿಗಳು ತಮ್ಮ ಕಾವ್ಯಸತ್ವದಿಂದ ಕಾವ್ಯಾಸಕ್ತರಿಗೆಲ್ಲ ಭರವಸೆಯನ್ನುಂಟು ಮಾಡಿದ್ದಾರೆ. ಇಲ್ಲಿ ಬಂದ ಕವಿಗಳು ಸಮಾಜದ ಬೇರೆ ಬೇರೆ ವರ್ಗಗಳಿಂದ ಬಂದವರಾಗಿದ್ದರೂ ಅವರಲ್ಲಿರುವ ಸಾಮಾಜಿಕ ಕಾಳಜಿ ಮೆಚ್ಚುಕೆಯನ್ನುಂಟು ಮಾಡುತ್ತದೆ. 'ನನ್ನ ಮದಿವ್ಯಾಗ ನನ್ನ ಲಗ್ನಾನ ಆಗಿಲ್ಲ' (ಸಿದ್ಧನಗೌಡ ಪಾಟೀಲ) ಎಂಬ ಕವಿತೆಯಲ್ಲಿ ಮದುವೆಯಂಥ ಸಾಂಸ್ಕೃತಿಕ ಸಂಬಂಧದ ಸುತ್ತ ಇರುವ ವಿಷವೃತ್ತದ ಚಿತ್ರ ವಸ್ತುನಿಷ್ಠವಾಗಿ ಮೂಡಿ ಬಂದಿದೆ. 'ಸಿಡಿಯುದಾಗಿದ್ದಾರೆ' (ಪ್ರಭುದೇವ ಹಾದಿಮನಿ), 'ಜೋಡಾಗ್ತಾವ' (ಯಲ್ಲಣ್ಣ ಮಾದರ) ಕವಿತೆಗಳು ದಲಿತರ ಬಗೆಗಿರುವ ಕಾಳಜಿಯಿಂದ ಪ್ರತಿಭಟನೆಯ ರೂಪದಲ್ಲಿ ಮೂಡಿ ಬಂದ ಕವಿತೆಗಳು. ನಿಸದಿಗಲ್ಲು (ಅಂಬುಜಾಕ್ಷಿ ಬಿಜ್ಜಳ) ಕೊಡೆ, ಸಾಗೈತೊ ಇವರ ತಲೆಮಾರೊ (ರಾಜೇಂದ್ರ ಅಣ್ಣಾನವರ) ಗಳು ನಮ್ಮ ಜನತೆಯ ಬಾಳಿನಲ್ಲಿ ಕಂಡುಬರುವ ಬಡತನ ದಾರಿದ್ರ್ಯ, ಮತ್ತು ಕೌರ್ಯವನ್ನು ಅರ್ಥವತ್ತಾಗಿ ನಿವೇದಿಸುತ್ತವೆ. ಯುವಕವಿಗಳಲ್ಲಿ ಕಂಡುಬರುವ ಸಹಜವಾದ ತುಡಿತ ಕಾಮ-ಪ್ರೇಮಗಳ ಬಗೆಗಿನ ಕವಿತೆಗಳಲ್ಲಿ ಅಭಿವ್ಯಕ್ತಿ ಪಡೆದಿದ್ದರೆ, ಅದು ಸಹಜ. 'ಪ್ರೀತಿ ಎಂದರೇನು ?' (ಮಲ್ಲಿಕಾ ಘಂಟಿ) 'ಕಾಮಪ್ರೇಮ' (ಅಂಬುಜಾಕ್ಷಿ) 'ಒಲವಿನಾಸೆ' (ನೀಲಗಿರಿ ತಳವಾರ),–ಮೊದಲಾದವು ಇದಕ್ಕೆ ನಿದರ್ಶನ. 'ಯಾರ ಕೈಗೂ ಸಿಗದಂತೆ ಎಚ್ಚರಾಗಿರು' (ಜಯಲಕ್ಷ್ಮಿ ಹೆಗಡೆ) ಎಂಬ ಪ್ರಾಮಾಣಿಕ ಎಚ್ಚರದ ಧ್ವನಿಯೂ

ಇಲ್ಲಿ ಇದೆ. 'ಹೇಗೆ ಹೇಳಲಿ' ಕವಿತೆಯಲ್ಲಿ ಶಾಂತಿ ಹೆಗಡೆಯವರು ವೈಯಕ್ತಿಕ ಅನುಭವದ ನೆಲೆಯಲ್ಲಿ ಹುಡುಕಾಟ ನಡೆಸಿರುವದು ಕಂಡುಬರುತ್ತದೆ. ಜಾನಪದ ಗತ್ತನ್ನು ಬಳಸಿಕೊಂಡ 'ಗಂಡಹೆಂಡರ ಸರಸ' (ಪಾರ್ಶ್ವನಾಥ ಕೆಂಪಣ್ಣವರ), ಒಂದು ಪ್ರಯತ್ನವಾಗಿದೆ. ಬಿಡಿಗವಿತೆಗಳಲ್ಲಿ ವ್ಯಂಗ್ಯ, ವಿಡಂಬನೆ, ವ್ಯೊನಚು ವಿಶೇಷವಾಗಿ ಕಂಡು ಬರುತ್ತದೆ 'ಧ್ವನಿ'ಯ ಕವಿತೆಗಳ ವಸ್ತುವಿನಲ್ಲಿ ಕಂಡು ಬರುವ ನೂತನತೆ ಪ್ರತಿಮೆ, ಸಂಕೇತಗಳ ಬಳಕೆಯಲ್ಲಿ, ಭಾಷಾಪ್ರಯೋಗದಲ್ಲಿಯೂ ಕಾಣಿಸುತ್ತದೆ. ಒಟ್ಟಿನಲ್ಲಿ ಈ ಯುವಕವಿಗಳೆಲ್ಲ ಸಮಾಜದಲ್ಲಿ ಕಂಡುಬರುವ ಅನ್ಯಾಯ, ಆಕ್ರೋಶ, ಕ್ರೌರ್ಯವನ್ನೆಲ್ಲ ಕಾವ್ಯದ ಮಾಧ್ಯಮದ ಮೂಲಕ ಪ್ರಕಟಿಸುವ ಪ್ರಯತ್ನದಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ವಿದ್ಯಾರ್ಥಿಗಳಲ್ಲಿ ಕಾವ್ಯದ ಬಗೆಗೆ ಸಂವೇದನೆಯನ್ನು ಉಂಟುಮಾಡುವ ಒಂದು ಪ್ರಯತ್ನವಾಗಿ ಧ್ವನಿ ಸಂಗ್ರಹ ಸ್ವಾಗತಾರ್ಹವಾದದ್ದು. ಕರ್ನಾಟಕ ಸಂಘದ ಅಧ್ಯಕ್ಷರೂ, ಸಂಕಲನದ ಸಂಪಾದಕರೂ ಆದ ಪ್ರೊ. ಎಸ್. ಪಿ. ಪಾಟೀಲರು ಅಭಿನಂದನಾರ್ಹರಾಗಿದ್ದಾರೆ. ಯುವಕವಿಗಳ 'ಧ್ವನಿ' ಸುಂದರ ಮುದ್ರಣ, ವಿನ್ಯಾಸ ಗಳಿಂದ ಕಾವ್ಯಾಸಕ್ತರ ಆದರಕ್ಕೆ ಪಾತ್ರವಾಗುತ್ತದೆ.

●

"A Comparative Study of Sharana and Dāsa Literature

"ಎ ಕಂಪ್ಯಾರೇಟಿವ್ ಸ್ಟಡಿ ಆಫ್ ಶರಣ ಆ್ಯಂಡ ದಾಸ ಲಿಟರೇಚರ್"

ಲೇಖಕರು : **ಡಾ. ಪಿ. ಎಸ್. ಶ್ರೀನಿವಾಸ,** ಎಂ. ಎ., ಪಿಎಚ್. ಡಿ.

ಬಿ. ಸಿ. ಜವಳಿ

ಈ ಕೃತಿ. ಲೇಖಕರು ಪಿಎಚ್. ಡಿ. ಪದವಿಗೆ ಸಲ್ಲಿಸಿದ ಪ್ರಬಂಧ. ಕನ್ನಡದ ಪ್ರಸಿದ್ಧ ವಿದ್ವಾಂಸರಾಗಿದ್ದ ಪ್ರೊ. ಎಂ. ಮರಿಯಪ್ಪ ಭಟ್ಟ ಅವರ ಮಾರ್ಗದರ್ಶನದಲ್ಲಿ ಬರೆದುದು. ಡೆಮಿ ೧/೮ ಆಕಾರದಲ್ಲಿ ಎರಡುನೂರಾ ಐದು ಪುಟಗಳನ್ನೊಳಗೊಂಡ ಕೃತಿ. ಪ್ರಬಂಧಕ್ಕೆ ೧೬೮ ಪುಟ; ಮುನ್ನುಡಿ, ಪ್ರಸ್ತಾವನೆ, ಪರಿಚಯಾತ್ಮಕ ವಿವರಗಳಿಗೆ ೧೦ ಪುಟ; ಅನುಬಂಧಗಳಿಗೆ ೨೫ ಪುಟ; ಶುದ್ಧಾಶುದ್ಧಿ ನಿರೂಪಣೆಗೆ ೨ ಪುಟ;– ಹೀಗೆ ವಿನಿಯೋಗಿಸಲಾಗಿದೆ. ಮದ್ರಾಸ ವಿಶ್ವವಿದ್ಯಾಲಯವು ೧೯೮೧ ರಲ್ಲಿ ಈ ಕೃತಿಯನ್ನು ಪ್ರಕಟಿಸಿ ಸ್ತುತ್ಯಕೆಲಸ ಮಾಡಿದೆ. ಈಗ, ಮದ್ರಾಸ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಕೆ. ಕುಶಾಲಪ್ಪಗೌಡರು ಈ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಈ ಕೃತಿ ಇಂಗ್ಲೀಷ್ ಭಾಷೆಯಲ್ಲಿರುವುದೊಂದು ವಿಶೇಷ. ಕನ್ನಡದ ಎರಡು ಮುಖ್ಯ ಸಾಹಿತ್ಯ ಪ್ರವಾಹಗಳ ಬಗೆಗೆ. ಇಂಗ್ಲೀಷಿನಲ್ಲಿ ಪ್ರಬಂಧವನ್ನು ಏಕೆ ರಚಿಸಬೇಕಿತ್ತೆಂದು ಯಾರಾದರೂ ಕೇಳಬಹುದು. ಇಂಗ್ಲೀಷಿನಲ್ಲಿ ಬರೆದುದರಿಂದ ಯಾವ ಕೊರತೆಯೂ ಆಗದು. ಇಂದು. ಕನ್ನಡ ಕಾವ್ಯ, ಕನ್ನಡ ಕವಿಗಳ ಬಗೆಗೆ ಕನ್ನಡಕ್ಕಿಂತ ಇಂಗ್ಲೀಷಿನಲ್ಲಿ ಬರೆದರೆ, ನಮ್ಮ ಕವಿಗಳ ವಿಷಯವನ್ನು ಕರ್ನಾಟಕದ ಹೊರಗೆ, ಭಾರತದ ಹೊರಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಕನ್ನಡಿಗರ ಮಕ್ಕಳೆಷ್ಟೋ ಇಂದು ಕರ್ನಾಟಕದ ಹೊರಗೆ ಮತ್ತು ಭಾರತದ ಹೊರಗೆ ವಾಸಿಸುತ್ತಾರೆ. ಅಂತಹರಿಗೆ ಕನ್ನಡ ಭಾಷೆಯ ಜ್ಞಾನವಿಲ್ಲದಿದ್ದರೂ ಕನ್ನಡ ಸಾಹಿತ್ಯದ ಬಗೆಗಾದರೂ ತಿಳಿದುಕೊಳ್ಳಲು ಅವಕಾಶ ಸಿಗುತ್ತದೆ. ಅಲ್ಲದೆ ಕನ್ನಡ ಸಾಹಿತ್ಯದ ಬೆಲೆಯನ್ನು ಜಾಗತಿಕ ಸಾಹಿತ್ಯದೊಂದಿಗೆ ಹೋಲಿಸುವ ಕಾಲ ಇದಾಗಿದೆ. ಕನ್ನಡ ಸಾಹಿತ್ಯವು ಜಾಗತಿಕ ಸಾಹಿತ್ಯಕ್ಕೆ ಯಾವ ಕೊಡುಗೆ ನೀಡಿದೆ ಎಂದು ತಿಳಿಸಬೇಕಾದರೆ ನಾವು ಅಂತರ್ರಾಷ್ಟ್ರೀಯ ಖ್ಯಾತಿವೆತ್ತ ಇಂಗ್ಲೀಷ ಭಾಷೆಯಲ್ಲಿಯೇ ಇನ್ನೂ ಗ್ರಂಥ ರಚಿಸುವುದು ಅತ್ಯವಶ್ಯ. ಇಂತಹ ಶ್ರೇಷ್ಠ ಕಾರ್ಯವನ್ನು ಮಾಡಿದ ಲೇಖಕ ಡಾ. ಶ್ರೀನಿವಾಸ ಅವರನ್ನು ಅಭಿವಂದಿಸಲೇಬೇಕು.

ವಿಶ್ವಸಾಹಿತ್ಯಕ್ಕೆ- ವಚನಸಾಹಿತ್ಯ, ದಾಸಸಾಹಿತ್ಯ ನೀಡಿದ ಕಾಣಿಕೆ ಅಲ್ಪವಲ್ಲ. ಕರ್ನಾಟಕದ ಸಾಂಸ್ಕೃತಿಕ-ಸಾಹಿತ್ಯಿಕ ವಿಕಾಸಕ್ಕೆ, ಭಕ್ತಿಪಂಥದ ಬೆಳವಣಿಗೆಗೆ,— ಈ ಎರಡೂ ಸಾಹಿತ್ಯಗಳು ಗಣನೀಯ ಕಾಣ್ಕೆ ಕೊಟ್ಟಿವೆ ಅದನ್ನು ತಿಳಿಸುವುದೇ ಈ ಪ್ರಬಂಧದ ಉದ್ದೇಶ ಶಿವಶರಣರು, ಸಾಮಾನ್ಯರ ಉದ್ಧಾರಕ್ಕೆ ಬರೆದುದೇ ವಚನಸಾಹಿತ್ಯ, ಶರಣ ಸಾಹಿತ್ಯ ಎಂದಾಗ, ಈ ಪ್ರಬಂಧದಲ್ಲಿ ಕೇವಲ ವಚನಕಾರರನ್ನು ಮಾತ್ರ ತೆಗೆದುಕೊಳ್ಳಲಾಗಿದೆ. ಹರಿಹರ, ಚಾಮರಸರಂತಹ ಕವಿಗಳು, ನಿಜಗುಣ ಶಿವಯೋಗಿ, ಸಪ್ಪಣ್ಣಾರ್ಯರಂತಹರು ಶರಣರೇ ಆಗಿದ್ದರೂ, ಮೊದಲು, ಅನುಭಾವಿಗಳಾಗಿ ಹೊಸ ತಿರುವನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟವರೆಂದರೆ ವಚನಕಾರರೇ ಎಂಬುದರಿಂದ, ಇಲ್ಲಿ ವಚನಕಾರರ ವಚನಗಳನ್ನು ಮಾತ್ರ ಅಧ್ಯಯನಕ್ಕೆ ಎತ್ತಿಕೊಂಡಿದ್ದಾರೆ. ವಚನಕಾರರಿಗಿಂತ ಹಿಂದಿನವರು ಕನ್ನಡದಲ್ಲಿ ಬರೆದುದು ಭಾಷೆಯ ಕ್ಲಿಷ್ಟತೆಯಿಂದಾಗಿ, ಬಹು ಜನರಿಗೆ ಇಂದಿಗೂ ಅರ್ಥವಾಗುವುದಿಲ್ಲ. ಅವರ ಪಾಲಿಗೆ ಆ ಸಾಹಿತ್ಯ ಮೆಲಲಾರದ ಕಲ್ಲಕಡಲೆ, ಇದನ್ನರಿತ ವಚನಕಾರರು, ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ, ಅವುಗಳಲ್ಲಿ ಬದುಕಿನ ಮೌಲ್ಯಗಳನ್ನು ತಿಳಿಸಿ, ಸಾಮಾನ್ಯನ ಬಾಳು, ಓದಿದಾಗ ಸುಖಮಯವಾಗಲಿ ಎಂದು ಹಾರೈಸಿದ್ದಾರೆ. ಜನತೆಯಲ್ಲಿ ನಿರಾಶೆಯನ್ನು ಹೋಗಲಾಡಿಸಿ, ಆಶಾಜ್ಯೋತಿಯನ್ನು ಹೊತ್ತಿಸಿದ್ದಾರೆ. ಸಮಾಜ ಸುಧಾರಣೆ, ಧಾರ್ಮಿಕ ಸುಧಾರಣೆಗೆ ವಚನ ಸಾಹಿತ್ಯವು ಅಂದು ಶರಣರಿಗೆ ಒಂದು ಉಪಯುಕ್ತ ಮಾಧ್ಯಮವಾಯಿತು. ತಮ್ಮ ಸಾಹಿತ್ಯದಲ್ಲಿ ಧರ್ಮದ ತಿರುಳನ್ನು ತಿಳಿಯುವಂತೆ, ಸುಂದರವಾಗಿ ತಿಳಿಸಿದ್ದಾರೆ. ಸಮಾಜದಲ್ಲಿ ಸಮಾನತೆ, ನಡೆ-ನುಡಿಗಳ ಶುದ್ಧಿ ಇರಬೇಕೆಂಬುದನ್ನು ಪ್ರತಿಪಾದಿಸಿದ್ದಾರೆ. ದೈವಭಕ್ತಿಯ ಹಿನ್ನೆಲೆಯಲ್ಲಿ ವರ್ಣ, ಕುಲ, ಜಾತಿ, ವೃತ್ತಿಗಳನ್ನಾಧರಿಸಿ, 'ಮೇಲು ಕೀಳು ಎಂದು ಪರಿಗಣಿಸುತ್ತಿದ್ದ ವರ್ಗೀಕರಣವನ್ನು ನಿರಾಕರಿಸಿ, ಗುಣಕ್ಕೆ ಪ್ರಾಶಸ್ತ್ಯವಿತ್ತಿದ್ದಾರೆ. ಪಾಮರರಲ್ಲಿ, ಬಡವರಲ್ಲಿ ಸಾಹಿತ್ಯದ ಮೂಲಕ ಆಶಾಭಾವನೆಯನ್ನು ಕುದುರಿಸಿ, ಅಭ್ಯುದಯದ ಮಾರ್ಗವನ್ನು ಸೂಚಿಸಿದ್ದಾರೆ. ದಾಸ ಸಾಹಿತ್ಯದಲ್ಲಿಯೂ ಗ್ರಂಥಕರ್ತರು ಇಂತಹವೇ ಮೌಲ್ಯಗಳನ್ನು ಬೋಧಿಸಿದುದನ್ನು ಕಂಡುಕೊಂಡು ತೌಲನಿಕವಾಗಿ ಅಭ್ಯಾಸಿಸಿ, ವಿವರಿಸಿದ್ದಾರೆ—

ಈ ಕೃತಿಯಲ್ಲಿ, ಈ ಎರಡೂ ಕ್ರಾಂತಿಕಾರಕ ಸಾಹಿತ್ಯರೂಪಗಳ ಎಲ್ಲಂದದ ಸ್ವರೂಪವನ್ನು ಕೊಡಲು ಲೇಖಕರು ಯತ್ನಿಸಿದ್ದಾರೆ. ಎರಡು ಪುಟದ ಚಿಕ್ಕ ಪರಿಚಯದೊಂದಿಗೆ, ಹನ್ನೆರಡು ಅಧ್ಯಾಯಗಳಲ್ಲಿ, ಈ ಸಾಹಿತ್ಯರೂಪಗಳ ಬೆಲೆ ನಿರ್ಣಯಿಸಿದ್ದಾರೆ. ವೈದಿಕಧರ್ಮ, ಅದರ ಬೆಳವಣಿಗೆ: ಶೈವವೈಷ್ಣವ ಪಂಥಗಳ ಅಭಿವೃದ್ಧಿ: ಭಕ್ತಿಮಾರ್ಗ ಹಾಗೂ ಕಾಲಕಾಲಕ್ಕಾದ ಅದರ ವಿಕಾಸ: ಭಕ್ತಿಮಾರ್ಗ ಹಾಗೂ ಶಿವಶರಣರು: ಭಕ್ತಿಮಾರ್ಗ ಹಾಗೂ ಹರಿದಾಸರು: ಶರಣ ಮತ್ತು ದಾಸರು ಹೇಳಿದ ಬದುಕಿನ ಪರಮೋಚ್ಚ ಆದರ್ಶಗಳು ಮತ್ತು ಈ ಇಬ್ಬರು ಬೋಧಿಸಿದ ಮೌಲ್ಯಗಳ

ಸಾಮ್ಯ ವೈಷಮ್ಯಗಳು (ಎರಡು ಅಧ್ಯಾಯ): ಸಮಾಜದ ಬಗೆಗೆ ಶರಣರ ದೃಷ್ಟಿ: ಸಮಾಜದ ಬಗೆಗೆ ಹರಿದಾಸರ ದೃಷ್ಟಿ; ಸಾಹಿತ್ಯಪ್ರಕಾರವಾಗಿ ವಚನಸಾಹಿತ್ಯ: ಮತ್ತು ಸಾಹಿತ್ಯದ ದೃಷ್ಟಿಯಿಂದ ವಚನಸಾಹಿತ್ಯ ಮತ್ತು ಕೀರ್ತನೆಗಳ ಮೌಲ್ಯ ಮಾಪನ-ಹೀಗೆ ಹನ್ನೆರಡು ಅಧ್ಯಾಯಗಳಲ್ಲಿ ಈ ಎರಡೂ ಸಾಹಿತ್ಯಗಳ ವಿಶ್ಲೇಷಣ ಮಾಡಿ ಬೆಲೆ ಕಟ್ಟಿದ್ದಾರೆ.

ವಿಷಯಕ್ಕೆ ನೇರವಾಗಿ ಪ್ರವೇಶಿಸುವ ಮುನ್ನ, ವೈದಿಕಧರ್ಮದ ಬೆಳವಣಿಗೆ, ಶೈವವೈಷ್ಣವ ಪಂಥಗಳು ಈ ನಾಡಿಗೆ ಮಾಡಿದ ಮಹೋಪಕಾರ, ಭಕ್ತಿಮಾರ್ಗದ ಬೆಳವಣಿಗೆ-ಇವುಗಳ ಬಗೆಗೆ ವಿವರಿಸಿರುವುದು ಸೂಕ್ತವೇ. ಭಕ್ತಿಪಂಥದವರು ಯಾವಾಗಲೂ ಸುಧಾರಣೆಯತ್ತ ಗಮನಹರಿಸಿದುದನ್ನು ಎತ್ತಿ ತೋರಿಸುತ್ತ, ಶರಣರು ಹಾಗೂ ದಾಸರ ಗುರಿಯು, ನಾಯನ್ಮಾರರು ಮತ್ತು ಆಳ್ವಾರರ ಹಾಗೆ ದೈವ ಸಾಕ್ಷಾತ್ಕಾರ ಸಮಾಜ ಸುಧಾರಣೆಯತ್ತ ಸಾಗಿತ್ತೆಂಬುದನ್ನು ಹೇಳಿದ್ದಾರೆ. ಅವರ ಸಾಹಿತ್ಯವು ಸರಳ ಭಾಷೆಯಲ್ಲಿದ್ದುದು ಮಾತ್ರವಲ್ಲ ಸಂಗೀತಮಯವಾಗಿದ್ದರಿಂದ ಜನಸಾಮಾನ್ಯರಿಗೆ ಹಾಡಿನ ಮೂಲಕ ಪ್ರಿಯವೂ ಆಗಿದ್ದಿತು. ಭಕ್ತಿಯು ದಕ್ಷಿಣ ದಲ್ಲಿಯೇ ಜನಿಸಿದೆ. ಕನ್ನಡನಾಡಿಗಿಂತ ಪೂರ್ವದಲ್ಲಿ ತಮಿಳು ನಾಡಿನಲ್ಲಿದ್ದ ಶೈವ ನಾಯನಾರರೂ ಮತ್ತು ವೈಷ್ಣವ ಆಳ್ವಾರರೂ ಆ ಭಾಷೆಯಲ್ಲಿ ರಚಿಸಿದ ಹಾಡು ಗಳನ್ನು ಶಿವ, ವಿಷ್ಣು-ಇವರ ಭಕ್ತಿಯ ಪ್ರಾರ್ಥನೆಗಳನ್ನು ಹಾಡುತ್ತಿದ್ದುದೇ ನಮ್ಮ ಕರ್ನಾಟಕ ಸಂಗೀತದ ಮುಖ್ಯವಿಷಯವೂ ಆಗಿದೆ. ಆ ಭಕ್ತಿಯ ಹಾಡುಗಳ ಮೂಲಕ ಸಾಹಿತ್ಯ ಸಂಗೀತ ಈ ಎರಡೂ ಜನಸಾಮಾನ್ಯರಲ್ಲಿ ಪ್ರಚಾರಕ್ಕೆ ಬಂದಿದ್ದುದು ಸತ್ಯವೇ. ಈ ಅನುಭಾವಿಗಳ ಮಾತುಗಳು ವೇದಕಾಲದ ಋಷಿಯರ ಮಾತುಗಳಂತೆಯೇ ಇದ್ದವು. ವೇದಗಳಲ್ಲಿ ಇಂದ್ರಪ್ರಾಬಲ್ಯ, ಯಜ್ಞಯಾಗ ವಿವರ ಗಳಿದ್ದರೆ ಉಪನಿಷತ್ತುಗಳಲ್ಲಿ ಬ್ರಹ್ಮಜಿಜ್ಞಾಸೆ, ಇಂದ್ರಿಯ ನಿಗ್ರಹ, ಅದ್ವೈತಬೋಧೆ ಕಂಡು ಬರುತ್ತವೆ. ವ್ಯಕ್ತಿಯಲ್ಲಿಯ ಆತ್ಮ ಮತ್ತು ಬಾಹ್ಯ ಜಗತ್ತಿನ ಶಕ್ತಿಯಾಗಿರುವ ಬ್ರಹ್ಮ, ಈ ಎರಡರ ಸಂಬಂಧವೇ 'ತತ್ವಮಸಿ'ಯೆಂದೂ ವಿವರಿಸಲಾಗಿದೆ. ಅದೇ ಆಗಮಗಳಲ್ಲಿ ಧಾರ್ಮಿಕ ಸಾಧನೆಗೆ ಮಹತ್ವವಿತ್ತಿದ್ದಾರೆ. ಭಕ್ತಿ, ಶಿವ, ಶಕ್ತಿ, ವಿಷ್ಣು ಇವುಗಳ ವಿವರಗಳನ್ನು ನೀಡುತ್ತ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಗಳನ್ನು ವಿವರಿಸಿದ್ದಾರೆ. ಹಿಂದೂ ಧರ್ಮದಲ್ಲಿ, ಉನ್ನತ ಆಧ್ಯಾತ್ಮಿಕ ಮೌಲ್ಯಗಳ ಚಿಂತನೆ ಇದ್ದು, ಜಾತಿಭೇದಗಳಿಂದ ಕೆಲಬಾರಿ ಜಗಳಗಳುಂಟಾಗುತ್ತಿರಬೇಕು. ಕಾಲ ಕ್ರಮೇಣ ಮೂಢನಂಬಿಗೆಗಳು ಒಣ ಆಡಂಬರದ ಆಚರಣೆ, ಹಿಂದುಗಳಲ್ಲಿದ್ದ ಕೀಳು ಜಗಳಗಳು-ಹಿಂದುಗಳ ಘನತೆಯನ್ನು ಕಡಿಮೆ ಮಾಡಿವೆ. ಆದುದರಿಂದ ಸಮಾಜ ದಲ್ಲಿ ಅಸಮಾನತೆ, ಅಸಮಾಧಾನ ತಲೆದೋರಿದವು. ಆಗ ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು ಹಿಂದೂ ಧರ್ಮಸುಧಾರಣೆಯತ್ತ ಗಮನ ಹರಿಸಿದರು. ಈ ಹಿನ್ನೆಲೆಯಲ್ಲಿಯೇ ಶರಣರು ಅವತರಿಸಿ, ಸರಳ ಭಾಷೆ

ಯಲ್ಲಿ ಉನ್ನತ ವಿಚಾರಗಳನ್ನು ತಿಳಿಹೇಳಿದರು. ಶರಣ ಮತ್ತು ದಾಸಮಾರ್ಗಗಳು ಭಿನ್ನಭಿನ್ನವಾಗಿದ್ದೂ ಅವುಗಳಲ್ಲಿ- ಮುಖ್ಯಾಂಶಗಳಲ್ಲಿ ಏಕತೆ ಇದೆಯೆಂಬುದನ್ನು ಗ್ರಂಥಕರ್ತರು ಎತ್ತಿ ತೋರಿಸಿದ್ದಾರೆ. ಶರಣರು ಶಿವೋಪಾಸನೆ, ಶಿವಾಧಿಕ್ಯವನ್ನು ಸಾರಿದ್ದರೆ. ಹರಿದಾಸರು ವಿಷ್ಣು ಉಪಾಸನೆ, ವಿಷ್ಣು ಆಧಿಕ್ಯ ಸಾರಿದ್ದಾರೆ. ಈ ಪಂಥಗಳು, ತಾತ್ವಿಕ ಅನುಸರಣೆಯಲ್ಲಿ ವ್ಯತ್ಯಾಸ ಹೊಂದಿದ್ದರೂ ದೈವಸಾಕ್ಷಾತ್ಕಾರ ಗುರಿಯು ಒಂದೇ ಉದ್ದೇಶಪೂರ್ಣವಾಗಿವೆ. ಶರಣರು ವೈದಿಕ ಮಾರ್ಗ ಅನುಸರಿಸಲಿಲ್ಲ; ದಾಸರು ಅನುಸರಿಸಿದರು. ಶರಣರು ಅನೇಕ ಆಚರಣಾವಿಧಿಗಳನ್ನು ತೊರೆದಿದ್ದರೆ ಹರಿದಾಸರು ಆಚರಣೆಗಳಲ್ಲಿದ್ದ ದೋಷಗಳನ್ನು ತೆಗೆದುಹಾಕಲು ಬೋಧಿಸಿದರು. ಶರಣರು ೧೨ನೆಯ ಶತಮಾನದಲ್ಲಿ ಕಾಣಿಸಿಕೊಂಡರೆ ಹರಿದಾಸರು ೧೪-೧೫ನೆಯ ಶತಮಾನಗಳಲ್ಲಿ ಕಾಣಿಸಿಕೊಂಡರು. ಎರಡೂ ಪಂಥಗಳು ಭಕ್ತಿಮಾರ್ಗದವು. ದೋಷಪೂರ್ಣ ಆಚರಣೆಗಳನ್ನು ಎರಡೂ ಪಂಥಗಳು ಖಂಡಿಸಿವೆ. ಹರಿದಾಸರು ದ್ವೈತತತ್ವ ಪ್ರತಿಪಾದಕರಾಗಿದ್ದರೆ ಶಿವಶರಣರು ಅದ್ವೈತದ ಅನುಯಾಯಿಗಳಾಗಿದ್ದಾರೆಂದು ಗ್ರಂಥಕರ್ತರು ತಿಳಿಸಿದ್ದಾರೆ (ಪುಟ ix). ಶಿವಶರಣರು ಕೇವಲ ಅದ್ವೈತವನ್ನು ಅನುಸರಿಸದೆ ಆರಂಭದ ಅವಸ್ಥೆಗಳಲ್ಲಿ ದ್ವೈತವನ್ನೂ ಕೊನೆಯ ಅವಸ್ಥೆಗಳಲ್ಲಿ ಅದ್ವೈತವನ್ನೂ ಅನುಸರಿಸುವುದರಿಂದ, ಅವರದು 'ದ್ವೈತಾದ್ವೈತ' ಎಂದು ಕರೆಯುವುದು ಯುಕ್ತ. ನದಿಯು ಸಮುದ್ರವನ್ನು ಸೇರಿದಂತೆ, ಸಮುದ್ರದಲ್ಲಿ ಸೇರಿದಾಗ ನಮಗೆ ಅಲ್ಲಿ ವ್ಯಕ್ತಿಯ ವೈಯಕ್ತಿಕತೆ ಅಳಿದಂತೆ ಗೋಚರಿಸುತ್ತದೆ. ದಾಸಪಂಥದವರು ಜಾತಿವ್ಯವಸ್ಥೆಯನ್ನು ಕಿತ್ತು ಹಾಕಲಿಲ್ಲ. ಆದರೆ ಅನುಭವ ಮಂಟಪದಲ್ಲಿದ್ದ ಹಲವಾರು ಶರಣರು ಜಾತಿಯಿಂದ ಕೆಳಗಿನ ಜಾತಿಗಳಲ್ಲಿ ಜನನ ಹೊಂದಿದ್ದರೂ ಭಕ್ತಿ-ಖ್ಯಾತಿಗಳಿಂದ ದೊಡ್ಡ ಶಿವಶರಣರೆನಿಸಿ ಪೂಜ್ಯರಾಗಿದ್ದಾರೆ. ಶರಣರು ಷಟ್‌ಸ್ಥಲಗಳಲ್ಲಿ ಸಾಧನೆಯನ್ನು ವಿವರಿಸಿದರೆ ದಾಸರು ಭಕ್ತಿಯ ಐದು ಅವಸ್ಥೆಗಳನ್ನು ಹೇಳಿದ್ದಾರೆ. (ಪುಟ ೫೩). ಕೊನೆಯ ಗತಿಯೇ ಶರಣಾಗತಿ. ಶರಣರ ಕಾಲವು ರಾಜಕೀಯ ವಿಪ್ಲವಗಳಿಂದ ಕೂಡಿದ್ದರೆ ಹರಿದಾಸರ ಕಾಲವು ರಾಜಕೀಯದಲ್ಲಿ ನಿಶ್ಚಿತತೆಯನ್ನು ಹೊಂದಿತ್ತು. ಶರಣರು ಬ್ರಾಹ್ಮಣರ ಅನೇಕ ಆಚರಣೆಗಳನ್ನು ಕಟುವಾಗಿ ಟೀಕಿಸಿದ್ದಾರೆ, ದಾಸರು ಹಾಗೆ ಮಾಡಿಲ್ಲ. ಕನಕದಾಸರು ಮಾತ್ರ ಕೆಲಮಟ್ಟಿಗೆ ಅವರ ಡಂಭಾಚಾರಗಳನ್ನು ಖಂಡಿಸಿದ್ದಾರೆ. ಎರಡೂ ಪಂಥದವರು ದೇವರ ಅಂಕಿತದಲ್ಲಿಯೇ ಸಾಹಿತ್ಯರಚಿಸಿದುದು ಗಮನಿಸಬೇಕಾದ ಅಂಶ. ಶರಣರು ತೀರ್ಥಕ್ಷೇತ್ರಗಳಿಗೆ ಅಷ್ಟು ಮಹತ್ವನೀಡಲಿಲ್ಲ. ಆದರೆ ದಾಸರು ಹಾಗೆ ಮಾಡಲಿಲ್ಲ. ಹೀಗೆ ಹಲವು ಅಂಶಗಳಲ್ಲಿ ಈ ಎರಡೂ ಪಂಥಗಳು ಭಿನ್ನಾಂಶಗಳನ್ನು ಹೊಂದಿದ್ದರೂ ವಿನಯ, ನೀತಿಪಾಲನೆ, ಡಂಭಾಚಾರ ಖಂಡನೆ, ದೈವದ ಮೇಲಿನ ಮಧುರಪ್ರೇಮ, ಅನುಭಾವ- ಈ ಎಲ್ಲ ಅಂಶಗಳ ಮೂಲಕ ಎರಡೂ ಪಂಥಗಳು ಒಂದೇರೀತಿ ನಡೆದು ಬಂದುದೂ ಗೋಚರಿಸುತ್ತದೆ ಇಂದ್ರಿಯ ಭೋಗದಲ್ಲಿ ಅತ್ಯಾಸಕ್ತಿ ನಿರಾಕರಣೆ,

ಸಮಸ್ತರ ಹಿತಚಿಂತನೆ, ಸರಳ ಜೀವನ, ಶುದ್ಧ ಆಚಾರ, ಆಧ್ಯಾತ್ಮಿಕ ಬದುಕಿನ ಆಸೆ, ಉದ್ಯೋಗಮಾಡಿಕೊಂಡೂ ಸಮಾಜಹಿತಮಾಡುವುದು ಶರಣರ ಆಸೆಗಳಾಗಿದ್ದವು.

ಈ ಎರಡೂ ಸಾಹಿತ್ಯ ಸಂಶೋಧನೆಯಲ್ಲಿ ಇರುವ ಮುಖ್ಯ ಸಮಸ್ಯೆಗಳೆಂದರೆ : ವಚನಕಾರ ಕಾಲ ಮತ್ತು ಮೂಲವಚನಕಾರನ ವಚನವಾವುದು ಎಂಬಿವು ಮತ್ತು ದಾಸರಿಗೆ ಸಂಬಂಧಿಸಿದಂತೆ ಹೇಳುವುದಾದರೆ : 'ದಾಸ ಸಾಹಿತ್ಯವು ಅಲಿಖಿತವಾಗಿಯೇ ನಡೆದುಕೊಂಡು ಬಹುಕಾಲ ಬಾಳಿದುದರಿಂದ' ಅನೇಕ ಕೀರ್ತನ, ಹಾಡು, ಸುಳಾದಿಗಳು ಜನರ ಬಾಯಲ್ಲಿವೆ. ಅಂಕಿತ ಬದಲಾದರೆ ಶಿವಶರಣರ ಹಲವು ಹಾಡುಗಳು ದಾಸರ ಕೀರ್ತನಗಳಾಗುವುದು ಸಾಧ್ಯವಿದೆ. ಆದುದರಿಂದ ಡಾ. ವ. ಆ. ದಿವಾಣಜಿ ಅವರು ಬರೆದ 'ಪ್ರಸಾದಯೋಗ' ಎನ್ನುವ ಪುರಂದರ ದಾಸರ ಬದುಕು ಮತ್ತು ಸಾಹಿತ್ಯವನ್ನು ಕುರಿತ ಪ್ರಬಂಧದಲ್ಲಿ, ಒಂದು ಅಧ್ಯಾಯವೇ ಪುರಂದರ ದಾಸರ ಕೀರ್ತನೆಗಳ ಕರ್ತೃತ್ವವನ್ನೇ ಕುರಿತಾದುದು ಗಮನಾರ್ಹ. ಹೀಗಾಗಿ ದಾಸರ ಹಾಡುಗಳ ಕರ್ತೃತ್ವದ ಸಮಸ್ಯೆ ಸಂಶೋಧಕರಿಗೆ ಮುಂದೆ ಬಂದು ನಿಲ್ಲುತ್ತದೆ. ಇಲ್ಲಿ ಗ್ರಂಥಕರ್ತರು ಇಂತಹ ಯಾವ ಚರ್ಚೆಗೂ ಹೋಗದೆ ಬಹುಜನರಿಗೆ ಒಪ್ಪಿತವಾಗಬಲ್ಲ-ವಿದ್ವಾಂಸರು ಪ್ರಕಟಿಸಿದ ವಚನಗ್ರಂಥ, ದಾಸರ ಕೃತಿಗಳನ್ನು ಸ್ವೀಕರಿಸಿದ್ದಾರೆ. ಒಬ್ಬನೇ ಸಂಶೋಧಕ ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿಕೊಂಡೇ ಮುಂದುವರಿಯುವುದಾದರೆ ಒಬ್ಬ ಸಂಶೋಧಕ ಇಡೀ ಆಯುಷ್ಯ ಪರಿಯಂತ ಅದನ್ನೇ ಮಾಡಬೇಕಾದೀತು. ಅಂತಹ ಭಯ ಈ ಎರಡೂ ಕ್ಷೇತ್ರಗಳಲ್ಲಿ ಸಂಶೋಧನ ಮಾಡುವವರಿಗಿದೆ. ಇಂತಹ ಪ್ರಸಂಗಗಳಲ್ಲಿ ಸಂಶೋಧಕರು ಭಾವುಕರಾಗದಿರುವುದು ಒಳಿತು. ದೇವರ ದಾಸಿಮಯ್ಯನ ವಚನಗಳನ್ನು ಶ್ರೀಮಾನ್ ಎಚ್. ದೇವೀರಪ್ಪನವರು 'ಜೇಡರ ದಾಸಿಮಯ್ಯನ ವಚನ' ಎಂದು ಕರೆದಿದ್ದಾರೆ. ಅವನ ಕಾಲವನ್ನೂ ಹನ್ನೆರಡನೆಯ ಶತಮಾನ ಎಂದೂ ಕರೆದಿದ್ದಾರೆ. ಬಸವಪೂರ್ವಯುಗದ ಬಗೆಗೂ ವಚನಸಾಹಿತ್ಯಾಭ್ಯಾಸಿಗಳಲ್ಲಿ ಚರ್ಚೆ ನಡೆದಿದೆ. ಆದರೆ ಪ್ರಸ್ತುತ ಲೇಖಕರು ಹಿಂದೆ ಪ್ರಕಟಿಸಿದ ಡಾ. ಹಳಕಟ್ಟಿಯವರ 'ದೇವರ ದಾಸಿಮಯ್ಯನ ವಚನಗಳು'– ಪುಸ್ತಕವನ್ನೇ ಬಳಸಿದ್ದಾರೆ (ಪುಟ ೧೬೯). ಸಂಶೋಧಕರು ಇಲ್ಲಿಯವರೆಗೂ ಪ್ರಕಟವಾದ– ಮತ್ತು ತೀರ ಇತ್ತೀಚೆಗೆ ಪ್ರಕಟವಾದ ಕೃತಿಗಳನ್ನೂ ನೋಡಬೇಕು. ಕೃತಿ ಮುದ್ರಣವಾಗುವವರೆಗೂ ನೋಡಿ, ಬದಲಾವಣೆ (ಅಭಿಪ್ರಾಯ) ಮಾಡುವುದು ಅನಿವಾರ್ಯವಾದರೆ, ಅಡಿ ಟಿಪ್ಪಣಿಗಳಲ್ಲಿ ಸೂಚಿಸುವುದು ವಿಹಿತ.

ವಚನಕಾರರಲ್ಲಿ, ಲೇಖಕರು, ದಾಸಿಮಯ್ಯ, ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ, ಅಕ್ಕಮಹಾದೇವಿ ಇವರನ್ನು ಪ್ರಾತಿನಿಧಿಕವಾಗಿ ಆಯ್ದುಕೊಂಡು ವಿವೇಚಿಸಿದ್ದಾರೆ. ಬಸವಣ್ಣನಲ್ಲಿ ಭಕ್ತಿ, ಶಿವಶರಣಾಗತಿ, ಪ್ರಾಮಾಣಿಕತೆ, ವಿನಯ, ನಿರಾಡಂಬರತ್ವ ಮೊದಲಾದ ಗುಣಗಳನ್ನು ಎತ್ತಿ ಹೇಳಿ, ಪೊಗಳ್ಕೆಗೆ ಮಾರುಹೋಗದ

ಅವರ ಮನೋಭಾವ, ಶ್ರದ್ಧೆ. ಸ್ವಾತಂತ್ರ್ಯ, ಸ್ವಾಭಿಮಾನ, ಔದಾರ್ಯ, ನಿಷ್ಕಪಟತ್ವ, ಕ್ಷುಲ್ಲಕ ದೇವತೆಗಳ ಖಂಡನೆ, ಅಹಿಂಸಾತತ್ವ ಪ್ರತಿಪಾದನೆ, ಕೆಳಗಿನವರ ಬಗೆಗೆ ತಾಳಿದ ಮನೋಧರ್ಮ ಮತ್ತು ನಿಷ್ಕಳಂಕ ಸೇವಾ ಭಾವನೆ– ಇವೇ ಮೌಲ್ಯಗಳನ್ನು ಎತ್ತಿ ತೋರಿಸಲಾಗಿದೆ. ಅಲ್ಲಮನಲ್ಲಿ ಆಧ್ಯಾತ್ಮಿಕ ಮೌಲ್ಯ. ಚಿಂತನಪರ ಬುದ್ಧಿಶಕ್ತಿ, ನಿರ್ವಾಯತ್ವ. ಸತ್ಯಶೋಧಕ ಪ್ರವೃತ್ತಿಗಳನ್ನು ಎತ್ತಿ ಹೇಳುತ್ತ 'He was a Fearless thinker; spoke with convictions'– ಎಂದು ಮೊದಲಾಗಿ (ಪುಟ ೮೨) ಹೇಳಿದ್ದಾರೆ. ಗುರುವನ್ನು Teacher ಎಂದೂ ಜಂಗಮನನ್ನು Priest ಎಂದೂ (ಪುಟ ೮೩) ಅನುವಾದ ಮಾಡಿದ್ದಾರೆ. ಚೆನ್ನಬಸವಣ್ಣನನ್ನು ಕುರಿತು ಬರೆಯುತ್ತ 'He was a Philosopher' ಎಂದೂ ಆತನನ್ನು ಸ್ವಯಂಭು ಜ್ಞಾನಿ, ಸಮ್ಯಜ್ಞಾನಿ, ಸುಜ್ಞಾನಿ, ಮಹಾಜ್ಞಾನಿ ಎಂದೂ ಕರೆದಿದ್ದಾರೆ. ಬಸವಣ್ಣನು ದೋಷವನ್ನು ಕಾಣದಿದ್ದಲ್ಲಿ, ಚೆನ್ನಬಸವಣ್ಣನು ದೋಷವನ್ನು ಕಾಣುವ ವೈಚಾರಿಕತೆ ಪಡೆದಿದ್ದನೆಂಬ ಮಾತನ್ನು ತಿಳಿಸಿದ್ದಾರೆ. ಚೆನ್ನಬಸವಣ್ಣನ ನಿರ್ಭೀತ ಪ್ರವೃತ್ತಿಗೆ ಇದು ಸಾಕ್ಷಿ. ಅವನು ಸಾಮಾಜಿಕ ಅಜ್ಞಾನವನ್ನು ಸಾಕಷ್ಟು ಖಂಡಿಸಿದ್ದಾನೆ. ಅನುಭವಮಂಟಪದ ಚುರುಕು ಕಾಯದರ್ಶಿಯಂತೆ ಕಾರ್ಯಮಾಡಿದ್ದಾನೆ. ಅಕ್ಕಮಹಾದೇವಿಯಲ್ಲಿ ಲೇಖಕರು ಮಧುರಭಕ್ತಿಯ ಭಾವವಿರುವುದನ್ನು ತೋರಿಸಿದ್ದಾರೆ. ವೀರವೈರಾಗಿಣಿಯಾದ ಅಕ್ಕಮಹಾದೇವಿ ದೇಹಭಾವಕ್ಕೆ ಹೇಸಿದವಳು; ಚೆನ್ನಮಲ್ಲಿಕಾರ್ಜುನನನ್ನು ವರಿಸಿದವಳು. ಅನುಭವ ಮಂಟಪದಲ್ಲಿ ಹಿರಿಯರಾದ ಶರಣರು ಆಕೆಯ ಘನತೆಯನ್ನು ಮೆಚ್ಚಿ ಕೊಂಡಾಡಿದುದು ಪುರುಷ–ಸ್ತ್ರೀ ಸಮಾನತೆಗೆ ಸಾಕ್ಷಿಯಾಗಿದೆ ಆಕೆ ನಿರ್ಭೀತ ಸ್ತ್ರೀ, ಮೇಲಾದ ಅನುಭಾವಿ; ಮೀರಾಬಾಯಿ ಇದ್ದ ಹಾಗೆ. ಈಕೆಯನ್ನು ಕುರಿತೇ ಕನ್ನಡದಲ್ಲಿ ಅಂಡಾಳ್–ಮೀರಾ ಮತ್ತು ಕಾರಿಕಾಲಮ್ಮೆಯರೊಡನೆ ಹೋಲಿಸಿದ ಪ್ರಬಂಧಗಳೂ ಹೊರಹೊಮ್ಮಿವೆ.

ದಾಸರನ್ನು ಕುರಿತು ಬರೆಯುತ್ತ ನರಹರಿ, ಶ್ರೀಪಾದರಾಯ. ವಿಜಯದಾಸ, ಗೋಪಾಲದಾಸ ಮೊದಲಾದವರ ಉಲ್ಲೇಖ ಮಾಡುತ್ತ, ಪ್ರಾತಿನಿಧಿಕವಾಗಿ ಪುರಂದರ ದಾಸರು, ಕನಕದಾಸರು ಇವರನ್ನು ಕುರಿತು ವಿಶೇಷವಾಗಿ ಬರೆದಿದ್ದಾರೆ. ಪುರಂದರ ದಾಸರು ಅವರ ಚರಿತ್ರೆ, ಕೀರ್ತನೆ, ಸುಳಾದಿಗಳ ರಚನೆ ಕುರಿತು ಬರೆಯುತ್ತ 'ದಾಸರೆಂದರೆ ಪುರಂದರ ದಾಸರು' ಎಂಬ ಮಾತನ್ನು ಉದಾಹರಿಸಿದ್ದಾರೆ. ಬಸವಣ್ಣನವರು 'ಕೂಡಲಸಂಗಮದೇವಾ' ಎಂಬ ಅಂಕಿತವಿಟ್ಟುಕೊಂಡು ಬರೆದಂತೆ 'ಪುರಂದರ ವಿಠಲ' ಎಂಬ ಅಂಕಿತದಲ್ಲಿ ಬರೆದಿದ್ದಾರೆ. ಪುರಂದರದಾಸರು ದೈವೀಜೀವನ, ದೈವ ಶರಣಾಗತಿ, ಹರಿಯ ಆಧಿಕ್ಯಗಳನ್ನು ತಿಳಿಸುತ್ತ ಬದುಕಿಗೆ ಉಪಯುಕ್ತವಾಗಬಲ್ಲ ಅನೇಕ ಮಾತುಗಳನ್ನು ಪುರಂದರದಾಸರ ಕೃತಿಗಳಿಂದ ಎತ್ತಿ ಹೇಳಿದ್ದಾರೆ ಭಕ್ತರ ಹಾಗೆ ಊರಿಂದೂರಿಗೆ ಹರಿಭಕ್ತಿಯ ಹಾಡುಗಳನ್ನು ಹಾಡುತ್ತ, ಭಕ್ತಿ ಪ್ರಸಾರ ಮಾಡುತ್ತ ಕರ್ನಾಟಕದಲ್ಲಿ ಸಂಚರಿಸಿದ್ದಾರೆ. ಕನಕದಾಸರ ಸಾಧನೆ, ಬೋಧನೆಗಳು

ದಾಸ ಸಾಹಿತ್ಯದಲ್ಲಿ ಬೆರಗುಗೊಳಿಸುವಂತಹವು. ಕುರುಬನಾದ ಅವನು ಬರೆದುದನ್ನು ನೋಡಿದರೆ ಅವನಿಗಿದ್ದ ದೈವೀಶಕ್ತಿಯು ಅರಿವು ನಮಗಾಗುತ್ತದೆ ಅನೇಕ ಶಿಷ್ಯರ ವಿರೋಧದ ಮಧ್ಯದಲ್ಲೂ ವ್ಯಾಸರಾಯರು ಕನಕದಾಸರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು. ಅವರು ಅನುಭಾವಿಗಳೂ, ಕವಿಗಳೂ ಆಗಿದ್ದು, ತಮ್ಮ ಕಾವ್ಯಗಳಲ್ಲಿ ಎಲ್ಲ ಅನುಭಾವಿಗಳೂ ಹೇಳುವ ವಿಶ್ವಸತ್ಯವನ್ನೇ ಹೇಳಿದ್ದಾರೆ (ಪುಟ ೧೦೨). ಕನಕದಾಸರು ತೊಂಬತ್ತು ವರುಷ ನಿಡಿದಾದ ಬಾಳು ಬಾಳಿದ್ದು, ಭಗವಂತನ ಅಸ್ತಿತ್ವವನ್ನು ಚೆನ್ನಾಗಿ ಮನಬಿಂಬಿಸುವಂತೆ ಕವಿತೆಗಳನ್ನು ಬರೆದಿದ್ದಾರೆ. ಅವರಲ್ಲಿ ಭಕ್ತಿ, ವೈರಾಗ್ಯ ಮುಖ್ಯವಾಗಿವೆ. ಜಾತಿಪದ್ಧತಿಯನ್ನು ಬಲವಾಗಿ, ಅವರು ಕೀರ್ತನೆಗಳಲ್ಲಿ ಖಂಡಿಸಿದ್ದಾರೆ.

ವಿಜಯದಾಸರು ಬಡತನದ ಅನುಭವದಿಂದಲೇ ವೈರಾಗ್ಯ ಪಡೆದವರು. ಕನಸಿನಲ್ಲಿ ಪುರಂದರದಾಸರನ್ನು ಕಂಡವರು. ಕೀರ್ತನೆ, ಸುಳಾದಿ ಬರೆದು ಮಾಧ್ವಮತ ತತ್ವ ಪ್ರಸಾರ ಮಾಡಿದರು. ದೇವರಲ್ಲಿ ಭಕ್ತಿ ಜ್ಞಾನ ವೈರಾಗ್ಯಗಳನ್ನು ಸಾಧಿಸುವಂತೆ ದಯೆಗೆಯ್ ಎಂದು ಹಾಡಿದ್ದಾರೆ; 'ದೇವರನು ಆದರದಿ ಸ್ಮರಿಸುತಿರು' ಎಂದು ಉಪದೇಶಗೆಯ್ದಿದ್ದಾರೆ. "All our actions should be dedicated to him"; "We could attain Vaikuntha here" (ಪುಟ ೧೦೬) ಎಂದಿರುವುದು ವಚನಕಾರರ ಭಾವವನ್ನೇ ಸೂಚಿಸುತ್ತದೆ. 'ಕೊಡುವವ, ಕೊಂಬುವವ ಶ್ರೀಹರಿ:. ಬಡಮನದ ಮನುಜನ ಬೇಡಿ ಫಲವೇನು ? ಗಾಣದೆತ್ತು ತಿರುಗಿದಂತೆ ಬಳಲಿದರೆ ಏನು ಫಲ ? —ಈ ಭಾವದ ಮಾತುಗಳನ್ನು ವಿಜಯದಾಸರು ತಮ್ಮ ಹಾಡುಗಳಲ್ಲಿ ಹೇಳಿದ್ದಾರೆ. ಹಲವಾರು ದಾಸರಿಗೆ ಈತನು ಗುರುವೂ ಆಗಿದ್ದಾನೆ. ಇವನ ತರುವಾಯದ ದಾಸರೆಂದರೆ ಜಗನ್ನಾಥ ದಾಸರು. ಶಾಸ್ತ್ರ ವೇದ ಪಾರಂಗತರು. ಕೀರ್ತನ, ಸುಳಾದಿ ರಚಿಸಿದ್ದಾರೆ. ಭಕ್ತಿ, ಮುಕ್ತಿ, ಅಪರೋಕ್ಷ ಜ್ಞಾನದ ಬಗೆಗೆ ಹೇಳಿದ್ದಾರೆ. 'ಈ ದಾಸರು ತಾವಿದ್ದಲ್ಲಿಯೇ ಸ್ವರ್ಗಸುಖಪಡೆದರಂತೆ'. ಹರಿಯ ಸ್ವರೂಪವೆಂದರೆ ಸತ್‌ಚಿತ್, ಆನಂದಗಳೇ. ಚೇತನಾಚೇತನಗಳು ಹರಿಯ ಪ್ರತಿರೂಪ. ಅವುಗಳನ್ನು ರಕ್ಷಿಸುವುದೇ' ಪೂಜೆಯೆಂದಿದ್ದಾರೆ (ಪುಟ ೧೦೮). ಉಂಡು ಉಣಿಸಿದ್ದೆಲ್ಲ ನಿನ್ನ ಯಜ್ಞ; ನಿನ್ನ ನಾಮವೇ ಅಮೃತ; ಸತಿಸುತರೆಲ್ಲ ಹರಿಯೇ ನಿನ್ನ ಸೇವಕರು, 'Entire nature is the material for His worship' ಎಂದು ತಿಳಿಸಿದ ಕೊನೆಯ ದಾಸರಿವರು (ಪುಟ ೧೦೮). ವಿಜಯದಾಸರ ಸಮಕಾಲೀನ ಸ್ತ್ರೀ, ಹೆಳವನಕಟ್ಟೆ ಗಿರಿಯಮ್ಮ. ಹಲವು ಪದ್ಯ ಬರೆದಿದ್ದಾಳೆ. ಅಕ್ಕಮಹಾದೇವಿಯಂತೆ ಭಕ್ತೆ. ಬಾಲಗೋಪಾಲನನ್ನು ಕುರಿತು ಕೀರ್ತನೆ ಬರೆದವಳು.

ಶರಣ ಹಾಗೂ ದಾಸರಿಬ್ಬರೂ ಧಾರ್ಮಿಕರಲ್ಲಿ ಅಂತಃಪ್ರಜ್ಞೆ, ಸ್ವವಿಮರ್ಶೆ ಉಂಟು ಮಾಡಿದರು. ಸ್ವಾರ್ಥದ ವಿರುದ್ಧ ಬೋಧಿಸಿ ಸರ್ವರ ಹಿತಕ್ಕಾಗಿ ಹೆಣಗಿದರು. ಸಾಮಾಜಿಕ–ಧಾರ್ಮಿಕ ಸುಧಾರಣೆ ಇಬ್ಬರದೂ ಆಗಿತ್ತು. ದುಡಿಮೆ–

ಪರಸೇವೆಗಳನ್ನೊಳಗೊಂಡು, ಆಧ್ಯಾತ್ಮಿಕವಾಗಿ ಮುಂದುವರಿದು ಮುಕ್ತಿಪಡೆಯ ಬೇಕೆಂಬುದು ಶರಣರ ಆಸೆ. ಸಮಾಜವು ಬೆಳೆದರೆ ಸರ್ವರ ಹಿತವಾಗುತ್ತದೆ. ವ್ಯಕ್ತಿ ತಾನೊಬ್ಬನು ಮಾತ್ರ ಬೆಳೆಯಬೇಕಿಲ್ಲ ಎಂಬ ವಿಶಾಲ ಪ್ರಜ್ಞೆ ಶರಣರದು. ಜಾತಿ, ಸತ್ಯ, ಧರ್ಮ–ಇವುಗಳ ಬಗೆಗೆ ಜನರಲ್ಲಿ ನೂತನವಿಚಾರ ಪ್ರಚುರಪಡಿಸಿದರು. 'God tests the sincerity of persons'; ನೈತಿಕವಿಕಾಸವೂ ದೇವತ್ವಕ್ಕೆ ದಾರಿ ಎಂದು ಶರಣರು ಸಾರಿದರು. ವೇಷದಿಂದ ಒಡಲ ಹೊರೆವುದು ಸೂಳೆಗಾರಿಕೆ ಎಂಬಂತಹ ಮೌಲಿಕ ಮಾತುಗಳನ್ನು ಶರಣರು ಆಡಿದ್ದಾರೆ: ಶಬ್ದಜಾಲವು ನಿಜ ಭಕ್ತಿಯ ಮುಂದೆ ನಿಲ್ಲದು. ಜಾತಿಯಿಂದಾಗಿ ವ್ಯಕ್ತಿ ದೊಡ್ಡವನಾಗಿ ಕಾಣಿಸಬೇಕಿಲ್ಲ. ದೈವಜ್ಞಾನಿಯೇ ಶರಣ. ಸಾಮಾಜಿಕವಾಗಿ ಅಸ್ಪೃಶ್ಯತೆಯನ್ನು ಖಂಡಿಸಿದವರು ಶರಣರು; "ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ, ಹೊಲೆ ಇಲ್ಲ" (ಪುಟ ೧೧೯); ವಿಶ್ವದ ಪ್ರಗತಿಗೆ ಪ್ರತಿಯೊಬ್ಬನೂ ನಿಷ್ಠೆಯಿಂದ ದುಡಿಯಬೇಕು; ಸಮಾಜದ ಅಭ್ಯುದಯ, ಸಂಪತ್ತು ವ್ಯಕ್ತಿಯದಾಗಿರದೆ ಸಮಾಜದ್ದು ಎಂಬ ನೂತನ ವಿಚಾರ ಗಳನ್ನು ಶರಣರು ತಿಳಿಸಿದರು. ಒಂದೆಡೆ ಲೇಖಕರು ಶರಣರ ಕಾಯಕವನ್ನು ಕುರಿತು ಹೀಗೆ ಬರೆದಿದ್ದಾರೆ: "Kayaka is the greatest contribution of Sharanas to philosophical thought" (ಪುಟ ೧೨೧) "It was equated with worship"

ವೈರಾಗ್ಯದ ಹೆಸರಿನಲ್ಲಿ ಭಿಕ್ಷೆ ಬೇಡುವುದು ಪಾಪ (ಪುಟ ೧೨೩) ಎಂದುದಲ್ಲದೆ ಕಾಯಕವು ಶಾರೀರಿಕ ಮತ್ತು ಮಾನಸಿಕ ಆರೋಗ್ಯಕ್ಕೆ ದಾರಿ ಎಂದಿದ್ದಾರೆ. "Married life is nobler to spiritual Progress" (ಪುಟ ೧೨೩) ಎಂದುದಲ್ಲದೆ, ಸ್ತ್ರೀಯರನ್ನು 'ಮಹಾದೇವಿ' ಎಂದು ಪರಿಗಣಿಸಿ ಅವರಿಗೆ ಎಲ್ಲ ರೀತಿಯ ಗೌರವಾದರ ತೋರಿಸಿದ್ದಾರೆ ಶರಣರು. ಇದರಿಂದಾಗ ಹಲವು ಶರಣೆಯರೂ ವಚನಕಾರ್ತಿ ಯರೂ, ಅನುಭಾವಿಗಳೂ ಆಗಿ ಕಂಗೊಳಿಸಿದರು. ಅವರಿಗೆ ಅಂಟಿದ ಎಲ್ಲ ಬಂಧನ ಗಳನ್ನು ಕಿತ್ತೆಸೆದರು. ಬಸವಣ್ಣನ ದಯೆ, ಅಹಿಂಸೆ, ಅಹಂಕಾರ ನಿರ್ಮೂಲನ, ದೈವಭಕ್ತಿ ಅನೇಕರನ್ನು ಆಕರ್ಷಿಸಿದವು. ಅದರಂತೆಯೇ ಹರಿದಾಸರ, ಡಂಭಾಚಾರ, ಖಂಡನೆ, ಮೂಢನಂಬಿಕೆ, ಮೋಸ, ದುರಾಸೆಗಳ ಖಂಡನೆ ಸಮಾಜದ ಉನ್ನತೀ ಕರಣಕ್ಕೆ ನೆರವಾದವು. ಲೇಖಕರು 'They followed the footsteps of the Sharanas' (ಪುಟ ೧೩೧) ಎಂದು ಹೇಳಿರುವುದರಿಂದ, ಶರಣರಿಂದ ಹೊಸ ಮೌಲ್ಯ ಪ್ರತಿಪಾದನೆ ಹರಿದಾಸರಲ್ಲಿ ಕಾಣುವುದಿಲ್ಲ. ಶರಣರ ಪ್ರಭಾವಕ್ಕೊಳಗಾಗಿ ದಾಸಪಂಥದವರೂ ಕನ್ನಡದಲ್ಲಿ–ತಿಳಿಗನ್ನಡದಲ್ಲಿ ಮಧ್ವಭಕ್ತಿಯನ್ನು ಪ್ರಸಾರಮಾಡಿ ದರು. 'ಚರ್ಮವ ತೊಳೆಯದೆ ಕರ್ಮವ ತೊಳೆ; ಬ್ರಹ್ಮಜ್ಞಾನಿಗೆ ಹೆಮ್ಮೆ ಬೇಡ; ಯಾಗವಮಾಡಿ ಸುಳ್ಳು ಬಿಡದಿದ್ದರೆ ದೇವರು ಒಲಿವನೇ ? ಉದರ ವೈರಾಗ್ಯವಿದು,' ಎಂಬಂತಹ ಮಾತುಗಳು ವಿಶೇಷವಾಗಿ ಬ್ರಾಹ್ಮಣರ ಆಚಾರಶುದ್ಧಿಗೇ ಸಂಬಂಧಿಸಿದ್ದರೆ,

'ಆತ್ಮಭಾವವರಿತಮೇಲೆ ಆವ ಕುಲವಾದರೇನು ? ದುರ್ಗುಣಗಳು ಹೋಲೆಯುಲ್ಲವೇ' ಎಂಬಂತಹ ಮಾತುಗಳು ಎಲ್ಲರಿಗೂ ಅನ್ವಯಿಸುತ್ತವೆ. ಶಿವಶರಣರಂತೆ ಅವರು ಕಾಯಕ ಮತ್ತು ಸ್ತ್ರೀ ಉದ್ಧಾರಕ್ಕೆ ಮಹತ್ವ ಕೊಡದಿದ್ದರೂ (ಪುಟ ೧೩೯) ಹರಿಭಕ್ತಿ ಪ್ರಸಾರಮಾಡಿದ್ದೇ ಕಾಯಕವೆಂದು ತಿಳಿದಿದ್ದಾರೆ. ದಾಸರು ಹೊನ್ನು ಹೆಣ್ಣು ಮಣ್ಣು ಬಂಧನಕಾರಿಯೆಂದು ಪರಿಗಣಿಸಿದ್ದಾರೆ. ಸ್ತ್ರೀ ವಿಧೇಯಳೂ ಪತಿವ್ರತೆಯೂ ಆಗಿರಬೇಕೆಂದರು (ಪುಟ ೧೪೦). ಆದರೆ ದಾಸರೂ, ಶಿವಶರಣರಂತೆ ಉತ್ತಮ ನಡತೆ. ಶುದ್ಧಜೀವನ, ಏಕದೇವೋಪಾಸನೆಗೆ ಬೆಲೆ ಇತ್ತಿದ್ದರು. ಸಮಾಜದ ಉದ್ಧಾರ ಕಾರ್ಯದ ವಿವರಣೆ ಮಾಡಿದನಂತರ ಲೇಖಕರು ಎರಡೂ ಪಂಥಗಳ ಸಾಹಿತ್ಯಿಕ ಮೌಲ್ಯಮಾಪನ ಮಾಡುತ್ತ 'Vachana is a unique gift; It is free from metrical rules' (ಪುಟ ೧೪೪) ಎಂದು ಹೇಳುತ್ತ ಅದು ಸರಳ, ಸಂಕ್ಷಿಪ್ತ, ಮಧುರ ಆತ್ಮೀಯವಾಗಿದ್ದೂ ಸಾಹಿತ್ಯಿಕ ಔನ್ನತ್ಯ ಪಡೆದಿದೆ. ಲಯಬದ್ಧ, ಕಾಂತಿಯುುತವಾದುದು. ಅನೇಕ ಕಡೆ ಧ್ವನಿಪೂರ್ಣ ವೇದ ಉಪನಿಷತ್ತು ಗೀತೆಗಳ ವಿಚಾರ ವಚನಗಳ ತಿಳಿಗನ್ನಡದಲ್ಲಿದ್ದು ಕನ್ನಡಕ್ಕೆ ಶಕ್ತಿ ತಂದಿವೆ (ಪುಟ ೧೪೭) ಎಂದು ಬರೆದುದು ನಿಜದ್ದು. ಅಲ್ಲಿಯ ಉಪಮೆ, ರೂಪಕಗಳು ಕಾವ್ಯಮಯವಾಗಿವೆ. ಗಾತ್ರದಲ್ಲಿ ಕಿರಿದಾಗಿಯೂ ಸತ್ವದಲ್ಲಿ ಹಿರಿದಾಗಿವೆ. ಸಾಮಾನ್ಯನಿಗೆ ಸಾಹಿತ್ಯವು ತಲುಪು ವಂತೆ ಮಾಡಿದವರು ಶರಣರು ಎಂದಿದ್ದಾರೆ ಲೇಖಕರು.

ಇನ್ನು ಹರಿದಾಸರ ಕೀರ್ತನೆ, ಸುಳಾದಿಗಳ ಬಗೆಗೆ ಬರೆಯುತ್ತಾ ಇಲ್ಲಿ ಸಂಗೀತ-ಸಾಹಿತ್ಯಗಳೆರಡೂ ಮಿಳಿತವಾಗಿವೆ; ದೈವ ಸಾಕ್ಷಾತ್ಕಾರಕ್ಕೆ, ಸರಳಗನ್ನಡದಲ್ಲಿ, ಅನೇಕ ರಾಗಗಳಲ್ಲಿ ರಚಿಸಿದ ಕೀರ್ತನೆ ಮತ್ತು ಉಗಾಭೋಗಗಳು ಬಹು ಸಹಾಯ ಕಾರಿಯಾಗಿವೆ. ಇವರೂ ಶರಣರಂತೆ ಅನುಭಾವಿಗಳಾಗಿ ಕಾವ್ಯ ರಚಿಸಿದ್ದಾರೆ; ಆದರೂ ಅವರಿಂದ ಶುದ್ಧಸಾಹಿತ್ಯ ಹೊರಹೊಮ್ಮಿದೆ. ಪುಟ ೧೫೫-೧೫೭ರಲ್ಲಿ ಅನೇಕ ಉದಾಹರಣೆ ಕೊಟ್ಟಿದ್ದಾರೆ.

ಅನೇಕ ಉದಾಹರಣೆಗಳ ಮೂಲಕ ದಾಸಸಾಹಿತ್ಯ ಮತ್ತು ವಚನಸಾಹಿತ್ಯಗಳ ಬೆಲೆ ಕಟ್ಟುತ್ತ "ಎರಡೂ ಸಾಹಿತ್ಯ ಸಮ" (ಪುಟ ೧೬೭) ಎಂಬ ನಿರ್ಣಯಕ್ಕೆ ತಲುಪಿದ್ದಾರೆ. "They have brought divinity and dignity to Kannada Language and musical charm to it"— ಎಂದೂ ತೀರ್ಮಾನಿ ಸಿದ್ದಾರೆ. ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ನಿರ್ಣಯಿಸುವಾಗ ನಾವು ಕಾಲದ ಗಣನೆ ತೆಗೆದುಕೊಂಡಾಗ ವಚನಕಾರರ ಕೊಡುಗೆ ಹೆಚ್ಚಿನಲೇಬೇಕಾಗುತ್ತದೆ. ಕರ್ನಾಟಕಕ್ಕೆ ಮೊತ್ತಮೊದಲು ತಿಳಿಗನ್ನಡದಲ್ಲಿ, ಆಧ್ಯಾತ್ಮವನ್ನು ಸಾಮಾನ್ಯನಿಗೆ ಒದಗಿಸಿದವರು. ಧಾರ್ಮಿಕ ಸಾಹಿತ್ಯ ಕ್ರಾಂತಿಯ ಮೂಲಕ ಹೊಸ ಸಮಾಜ ರೂಪಿಸಿದವರು. ಸ್ತ್ರೀ ಶೂದ್ರರ ಬಗೆಗೆ ಅತ್ಯುದಾರವಾಗಿ ನಡೆದು-ನುಡಿದು ತೋರಿ ದವರು. ಕನ್ನಡಕ್ಕೆ ಪುರಸ್ಕಾರ ನೀಡಿದವರು. ಹರಿದಾಸರು ಶರಣರು ಮಾಡಿದ

ಕಾರ್ಯವನ್ನು ಮೆಚ್ಚಿ ಒಪ್ಪಿ, ದ್ವೈತಮತವನ್ನು ಶರಣರು ಶಿವಮತವನ್ನು ಪ್ರಚಾರ ಮಾಡಿದಂತೇ ಮಾಡಿದವರು. ಕನ್ನಡದ ಉದ್ಧಾರ ಬಂದಾಗ, ಭಕ್ತಿಯ ಮೂಲಕ ಆತ್ಮ ಶುದ್ಧಿಯ ವಿಚಾರ ಬಂದಾಗ, ಶರಣರಂತೆಯೇ ಮುಂದೆ ಬಂದು, ಕನ್ನಡದ ಉದ್ಧಾರಮಾಡಿ ಕನ್ನಡಕ್ಕೆ ಕೀರ್ತಿ ತಂದಿದ್ದಾರೆ,

ವಚನ ಮತ್ತು ಕೀರ್ತನಾದಿಗಳನ್ನು ಇಂಗ್ಲೀಷಿಗೆ ಪರಿವರ್ತಿಸುವಾಗ ಗ್ರಂಥ ಕರ್ತರು ಯೋಗ್ಯವಾದ ಅನುವಾದಗಳನ್ನೇ ಕೈಕೊಂಡಿದ್ದಾರೆ. ಕೆಲವೆಡೆ ಸಮರ್ಪಕ ವೆಂದೆನಿಸಲಿಲ್ಲ. ಪುಟ ೧೨ ರಲ್ಲಿ "In the ṣaṭsthala spiritual path, Veera-shaivism refers to the eight āvaraṇas (obstacles)"— ಇಲ್ಲಿ ಆವರಣ ಎನ್ನುವುದನ್ನು 'obstacles' ಎಂದು ಮಾಡಿರುವುದು ಸಮಂಜಸವಲ್ಲ. ಅವರೇ ಮುಂದುವರಿದು "They specially aid spiritual process......" ಎಂದು ಬರೆದಿದ್ದಾರೆ. ಇಲ್ಲಿ 'obstacle' ಎನ್ನುವುದರ ಬದಲು 'aid' ಎಂದು ಅನು ವಾದಿಸುವುದೇ ಸರಿ. obstacle ಎಂದರೆ ಬೇರೆಯೇ ಅರ್ಥ ಬರುತ್ತದೆ. ಕೃತಿ, ಸಂಶೋಧನ ಪ್ರಬಂಧವಾದುದರಿಂದ ಕಾಗದ ಮತ್ತು ಮುದ್ರಣ ವಿನ್ಯಾಸ ಇನ್ನೂ ಚೆನ್ನಾಗಿದ್ದರೆ ಕೃತಿಗೆ ಅಂದವು ಅಧಿಕವಾಗುತ್ತಿತ್ತು.

ಇದೇ ವಿಷಯವನ್ನು ಕುರಿತು ಓದಲು ಸಾಮಗ್ರಿ ದೊರೆಯುತ್ತಿರೂ ಇಂಗ್ಲೀಷ ಭಾಷೆಯಲ್ಲಿ ತಂದುದು ಹೆಮ್ಮೆಯ ವಿಷಯವೇ. ಈ ಹಿಂದೆ ಕನ್ನಡದ ವಿಷಯ ವನ್ನು ಡಾ. ಎ. ಎನ್. ನರಸಿಂಹಯ್ಯ, ಡಾ. ಗಾಯಿಯವರು ಇಂಗ್ಲೀಷಿನಲ್ಲಿ ಪ್ರಬಂಧ ಬರೆದು ತಿಳಿಸಿದ್ದಾರೆ. ಡಾ. ಎಸ್. ಸಿ. ನಂದೀಮಠ ಬಹುಹಿಂದೆಯೇ (೧೯೪೦) ವೀರಶೈವವನ್ನು ಕುರಿತು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಅಲ್ಲಿಂದೀಚೆಗೆ ಇಂತಹ ಪ್ರಯತ್ನಗಳು ನಡೆದುದು ವಿರಳ. ಡಾ. ಶ್ರೀನಿವಾಸ ಅವರು ಪ್ರಯಾಸ ಪಟ್ಟು, ರಚಿಸಿದ ಈ ಪ್ರಬಂಧವು ಶಾಸ್ತ್ರೀಯ ವಿವೇಚನೆಯಿಂದೊಡಗೂಡಿ, ಸೂಕ್ತ ಉದಾಹರಣೆಗಳೊಂದಿಗೆ ವಿಸ್ತರಿಸಲ್ಪಟ್ಟಿದೆ. ಪ್ರಮಾಣಗಳಿಂದ ಪುಷ್ಟಗೊಂಡಿದೆ. ಅನುಬಂಧದಲ್ಲಿ, ಸಂದರ್ಭಗ್ರಂಥಗಳ ವಿವರ, ಮಹತ್ವದ ಪಟ್ಟಿ, ಮೂಲಕೃತಿಕಾರರ ಹೆಸರು, ಅಂಕಿತಗಳನ್ನೊಳಗೊಂಡು ಗ್ರಂಥಕ್ಕೆ ಪಡೆದ ಮಾಹಿತಿಯ ವಿವರಗಳಿವೆ. ಇವೆಲ್ಲ ಸಂಶೋಧನ ಕೃತಿಗೆ ಹೊರೆಯಲ್ಲ ಎಂಬುದನ್ನು ಬೇರೆ ಹೇಳಬೇಕಿಲ್ಲ. ಗ್ರಂಥ ಕರ್ತರು ಪರಿಶ್ರಮದಿಂದ ದುಡಿದು ಕರ್ನಾಟಕದ ಸಾಂಸ್ಕೃತಿಕ ಪ್ರಪಂಚಕ್ಕೆ ಮಹತ್ತರ ಸೇವೆಗೈದಿದ್ದಾರೆ. ನಿರ್ಣಯಗಳನ್ನು ಮಂಡಿಸುವಲ್ಲಿ ಅತ್ಯಭಿಮಾನ ತಾಳದಿರುವುದು ಮೆಚ್ಚಬೇಕಾದ ಅಂಶವೇ ಸರಿ.

ಈ ಸಂಚಿಕೆಯ ಲೇಖಕರು

೧. ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಎಂ. ಬಿ. ಕೊಟ್ರಶೆಟ್ಟಿ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಡಾ. ಬಿ. ವ್ಹಿ. ಮಲ್ಲಾಪುರ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಡಾ. ಬಿ. ಬಿ. ಹಿಂಗಮಿರೆ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಶ್ರೀ ಪಿ. ವ್ಹಿ. ಕುಲಕರ್ಣಿ
ಅಧ್ಯಾಪಕರು, ಮಧುರೈ ಕಾಮರಾಜ ವಿಶ್ವವಿದ್ಯಾಲಯ
ಮಧುರೈ–೬೨೫೦೦೨

೬. ಶ್ರೀ ವೀರೇಂದ್ರ ಸಿಂಪಿ
ಇಂಗ್ಲೀಷ ಅಧ್ಯಾಪಕರು
ಬಿ. ವ್ಹಿ. ಬಿ. ಕಾಲೇಜು, ಬೀದರ

೭. ಶ್ರೀ ಆರ್. ಪಿ. ಕುಲಕರ್ಣಿ
೨೮ ವಿಕ್ರಮಪುರ,
ಅಥಣಿ (ಜಿಲ್ಲಾ : ಬೆಳಗಾಂವ)

೮. ಶ್ರೀಮತಿ ವಿಜಯಶ್ರೀ ಸಬರದ
ಕನ್ನಡ ಅಧ್ಯಾಪಕಿ
ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ

೯. ಡಾ. ಹೆಚ್. ಎಂ. ಮಹೇಶ್ವರಯ್ಯ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಡಾ. ಬಿ. ಆರ್. ಹಿರೇಮಠ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಶ್ರೀ ಶಿ. ಕುಮಾರಸ್ವಾಮಿ
ಸಂಶೋಧಕರು, ಸ್ನಾತಕೋತ್ತರ ಕೇಂದ್ರ
ಬಿ. ಆರ್. ಪ್ರೊಜೆಕ್ಟ್, ಶಿವಮೊಗ್ಗ–೫೭೭ ೧೧೫

೧೨. ಶ್ರೀ ಎಂ. ಎ. ಜಯಚಂದ್ರ
‘ಶ್ರೀ ವಾಗೀಶ ಕೃಪ’
ಅಪ್ಪಾಜಿರಾವ ಕಂಪೌಂಡ
ಕೋಟೆ ರಸ್ತೆ, ಶಿವಮೊಗ್ಗ–೫೭೭ ೨೦೨

೧೩. ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಡಾ. ಕೆ. ಜಿ. ಶಾಸ್ತ್ರಿ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಡಾ. ಶಾಂತಿನಾಥ ದಿಬ್ಬದ
ಕನ್ನಡ ಅಧ್ಯಾಪಕರು.
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

೧೬. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
ಪ್ರಾಚಾರ್ಯರು, ಸರಕಾರಿ ಕಲಾ ಮಹಾವಿದ್ಯಾಲಯ
ಬೆಂಗಳೂರು ೫೬೦ ೦೦೧

೧೭. ಡಾ. ದೇವೇಂದ್ರಕುಮಾರ ಹಕಾರಿ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೮. ಶ್ರೀ ಬಿ. ಎ. ಸನದಿ
ಆಲ್ ಇಂಡಿಯಾ ರೇಡಿಯೊ
ಮುಂಬಯಿ–೧

೧೯. ಶ್ರೀ ಎಸ್. ಪಿ. ಪಾಟೀಲ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦. ಶ್ರೀ ಶಾಮಸುಂದರ ಕೋಚಿ
ಸಂಶೋಧನ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ – ಮೈಸೂರು ೫೭೦೦೦೬

೨೧. ಡಾ. ವಿಲ್ಯಂ ಮಾಡ್ತ
ರೀಡರ್, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೨. ಶ್ರೀ ಜಿ. ಎಂ. ಹೆಗಡೆ
ಕನ್ನಡ ಅಧ್ಯಾಪಕರು
ಕಿಟೆಲ್ ಮಹಾವಿದ್ಯಾಲಯ, ಧಾರವಾಡ

೨೩. ಡಾ. ಬಿ. ಸಿ. ಜವಳಿ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ರೂ. ೧೦೦-೦೦(ಒಂದು ನೂರು ರೂಪಾಯಿಗಳು) ಕಳಿಸಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ"ಯ ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩